ವೀರಶೈವ ಧರ್ಮ ಮತ್ತು ಸಂಸ್ಕೃತಿ

‘ವೀರಶೈವ ಧರ್ಮ ಮತ್ತು ಸಂಸ್ಕೃತಿ’

ಸಂಪಾದಕರು ಮತ್ತು ಪ್ರಕಾಶಕರು
ಆಸ್ಥಾನ ವಿದ್ವಾನ್, ಪಂಡಿತ ರತ್ನಂ, ಪದ್ಮಶ್ರೀ
ಬಿ. ಶಿವಮೂರ್ತಿ ಶಾಸ್ತ್ರಿಗಳು

೧೯೭೦

ಬೆಲೆ ರೂ

ಪ್ರಕಾಶಕರು :

ಶರಣಸಾಹಿತ್ಯ ಕಾರ್ಯಾಲಯ

೧೪೧, ರಂಗಸ್ವಾಮಿ ಗುಡಿಬೀದಿ,

ಬೆಂಗಳೂರು ೫೩.

ಪ್ರಥಮ ಮುದ್ರಣ ೧೦೦೦ ಪ್ರತಿಗಳು (೧೯೭೦)

ಮುದ್ರಕರು

ಸ್ವತಂತ್ರ ಕರ್ಣಾಟಕ ಮುದ್ರಣಾಲಯ

೧೪೧, ರಂಗಸ್ವಾಮಿ ಗುಡಿಬೀದಿ

ಬೆಂಗಳೂರು-೫೩

...ನ್ನಹ

...ಶೈವ ಧರ್ಮ ಮತ್ತು ಸಂಸ್ಕೃತಿ' ಕುರಿತಾದ ಈ ಗ್ರಂಥವನ್ನು, ಶರಣ ಸಾಹಿತ್ಯ ಗ್ರಂಥಮಾಲೆಯಲ್ಲಿ ಪ್ರಕಟಿಸುವ ಅವಕಾಶ ಪ್ರಾಪ್ತವಾದುದಕ್ಕೆ ನಮಗೆ ತುಂಬ ಸಮಾಧಾನವಾಗಿದೆ. ಈ ಗ್ರಂಥದಲ್ಲಿ ವೀರಶೈವ ಧರ್ಮ ಮತ್ತು ಸಂಸ್ಕೃತಿ, ವೀರಶೈವ ತೀರ್ಥ ಕ್ಷೇತ್ರಗಳು ಮೊದಲಾದುವುಗಳನ್ನು ಕುರಿತಾದ ಲೇಖನಗಳಿರುವುದಲ್ಲದೆ, ವೀರಶೈವ ಸಂಸ್ಕೃತಿ ಮತ್ತು ಇತಿಹಾಸವನ್ನು ನಿರೂಪಿಸುವ ಕೆಲವು ಶಿವಶರಣರ ಕಥೆಗಳೂ ಬಂದಿವೆ. ಇಷ್ಟಲಿಂಗ ಪೂಜಾವಿಧಾನ, ತನ್ಮೂಲಕವಾಗಿ ಪ್ರಾಣಲಿಂಗ-ಭಾವಲಿಂಗಗಳ ಅನುಸಂಧಾನ ಇವುಗಳನ್ನು ಕುರಿತಾದ ಒಂದು ವಿಚಾರಪೂರ್ಣ ಲೇಖನವೂ ಇದೆ. ಶ್ರೀಶೈಲ, ಬಾಗೆವಾಡಿ, ಕೂಡಲ ಸಂಗಮ, ಮಂಗಳವಾಡ ಮತ್ತು ಕಲ್ಯಾಣ ಮೊದಲಾದ ಕ್ಷೇತ್ರಗಳನ್ನು ಕುರಿತಾದ ಲೇಖನಗಳಿವೆ. ಗ್ರಂಥದ ಕಡೆಯಲ್ಲಿ ಕಠಿಣ ಶಬ್ದಗಳ ಅರ್ಥ ಕೋಶ ವಿದೆ. ಈ ಪುಟ್ಟ ಗ್ರಂಥವನ್ನು ಓದುವುದರಿಂದ ವೀರಶೈವ ಸಾಹಿತ್ಯ ಸಂಸ್ಕೃತಿಗಳ ಪರಿಚಯವನ್ನು ಸಂಗ್ರಹವಾಗಿ ಮಾಡಿಕೊಳ್ಳಲು ಓದುಗರಿಗೆ ಸಹಾಯವಾಗುತ್ತದೆ ಎಂಬುದು ನಮ್ಮ ನಂಬಿಕೆ. ಈ ಧಾರ್ಮಿಕ ಗ್ರಂಥವನ್ನು ವೀರಶೈವ ಧರ್ಮ ಮತ್ತು ಸಾಹಿತ್ಯಗಳ ಉನ್ನತಿಗಾಗಿ ತಮ್ಮ ಜೀವನವನ್ನು ಮೀಸಲು ಮಾಡಿದ್ದ ಧಾರವಾಡದ, ಮುರುಘಾಮಠಾಧ್ಯಕ್ಷರಾಗಿದ್ದ ಪರಮ ಪೂಜ್ಯ ಲಿಂಗೈಕ್ಯ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಸನ್ನಿಧಿಗೆ-ಅವರ ಉತ್ತರಾಧಿಕಾರಿಗಳಾಗಿರುವ ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳ ಅಪ್ಪಣೆಯನ್ನು ಪಡೆದು ಭಕ್ತಿಯಿಂದ ಸಮರ್ಪಿಸಲಾಗಿದೆ.

ಈಗಾಗಲೇ ಶರಣ ಸಾಹಿತ್ಯಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ 'ವೀರಶೈವ ಸಾಹಿತ್ಯ ಮತ್ತು ಇತಿಹಾಸ' ಎಂಬ ಮೂರು ಗ್ರಂಥಗಳಿಗೂ 'ವೀರಶೈವ ಮಹಾ ಪುರುಷರು'ಎಂಬ ಗ್ರಂಥಕ್ಕೂ, ಕ್ಷಿಪ್ರದಲ್ಲಿ ಬೆಳಕಿಗೆ ಬರಲಿರುವ "ವೀರಶೈವ ವಿಭೂತಿಗಳು" ಎಂಬ ಗ್ರಂಥಕ್ಕೂ ಇದು ಪೂರಕವಾಗಿದೆ ಎಂದು ತಿಳಿಯು

ಬಹುದು. [illegible]
“ವೀರಶೈವ ಧರ್ಮವು” ಎಂಬ [illegible]
ಗಮನಾರ್ಹವಾಗಿದೆ.

ಮೈಸೂರು ರಾಜ್ಯದ ನಿವೃತ್ತ ಎಕ್ಸೈಜ್ ಕಮಿಷನರೂ, ಚಿಕ್ಕಮ
ಳೂರಿನ ಕಾಫಿಪ್ಲಾಂಟರೂ ಮತ್ತು ಉದಾರದಾನಿಗಳೂ ಎನಿಸಿರುವ ಶ್ರೀ
ಎ. ಸಿ. ನಿರ್ವಾಣ ಗೌಡರು, ಕೈಲಾಸವಾಸಿಗಳಾದ ಅವರ ಧರ್ಮಪ
ಕೈ|| ಎನ್. ದೇವಮ್ಮನವರ ಪುಣ್ಯ ಸ್ಮರಣೆಯ ನೆನಪಿಗಾಗಿ ಈ ಗ್ರಂ
ಪ್ರಕಟನೆಗೆ ಉದಾರವಾಗಿ ಧನ ಸಹಾಯ ಮಾಡಿದ್ದಾರೆ. ಶರಣ ಸಾಹಿತ್ಯ
ಹಿರಿಯ ಅಭಿಮಾನಿಗಳಾದ ಅವರ ಈ ಉಪಕಾರವನ್ನು ನಾವು ಕೃತಜ್ಞ
ಯಿಂದ ಸ್ಮರಿಸುತ್ತೇವೆ.

ವಿಶಾಲ ಮೈಸೂರು ರಾಜ್ಯದ ಪ್ರಖ್ಯಾತ ವಿದ್ವಾಂಸರೂ, ಮೈಸೂರು ವಿಶ್ವವಿದ್ಯಾ
ನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರೂ, ಶರಣ ಸಾಹಿತ್ಯದ ಹಿರಿಯ
ಅಭಿಮಾನಿಗಳೂ ಆಗಿರುವ **ಡಾ|| ಡಿ. ಎಲ್. ನರಸಿಂಹಚಾರ್ಯರವರು**
ನಮ್ಮ ಕೋರಿಕೆಯಂತೆ ಈ ಪುಸ್ತಕಕ್ಕೆ ವಿಚಾರ ಪೂರ್ಣವಾದ ಪ್ರಾಸ್ತಾವನೆ
ಯನ್ನು ಬರೆದು ಕೊಟ್ಟು ಉಪಕಾರ ಮಾಡಿರುತ್ತಾರೆ. ಅವರ ಈ ಸ್ನೇಹ
ಪರತೆಯನ್ನು ನಾವು ಅಕ್ಕರೆಯಿಂದ ಸ್ಮರಿಸಿಕೊಳ್ಳುತ್ತೇವೆ.

೩೩ ವರ್ಷಗಳಿಂದ ಕನ್ನಡ ನಾಡುನುಡಿಗಳ ಹಿತದೃಷ್ಟಿಯಿಂದ ನಾವ
ನಡೆಸುತ್ತಿರುವ ಶರಣ ಸಾಹಿತ್ಯ ಮಾಸಿಕಕ್ಕೂ, ಪ್ರಕಟಿಸಿದ ಗ್ರಂಥಮಾಲೆಗೂ
ಉದಾರವಾಗಿ ನೆರವಾಗುತ್ತಿರುವ ಕನ್ನಡ ನಾಡಿನ ವಾಚಕ ಮಹಾ
ಯರು, ಈ ನಮ್ಮ ನೂತನ ಗ್ರಂಥವನ್ನು ಕೂಡ ಮಮತೆಯಿಂದ ಬರಮಾ
ಕೊಳ್ಳುವರೆಂದು ನಂಬುತ್ತೇವೆ.

|| ಸಿರಿಗನ್ನಡಂ ಗೆಲ್ಗೆ–ಬಾಳ್ಗೆ ||

ದಿ. ೩೦–೮–೧೯೭೦
ಬೆಂಗಳೂರು–೨೧

ಇಂತು
ಬಿ. ಶಿವಮೂರ್ತಿ ಶಾಸ್ತ್ರಿ
ಸಂಪಾದಕ



ಕೈ॥ ಎನ್. ದೇವಮ್ಮನವರು

ಜನನ ೧೯೧೨ ಶಿವೈಕ್ಯ ೧೯೭೦

ಆದರ್ಶ ಗೃಹಿಣಿ ಎಂಬ ಕೀರ್ತಿಯನ್ನು ಗಳಿಸಿದ್ದ ಇವರು, ಮೈಸೂರು ರಾಜ್ಯದ ನಿವೃತ್ತ ಎಕ್ಸೈಜ್ ಕಮಿಷನರ್ ಶ್ರೀ ಎ. ಸಿ. ನಿರ್ವಾಣಗೌಡರ ಧರ್ಮ ಪತ್ನಿ. ಇವರು ದೈವಭಕ್ತಿ ಸಂಪನ್ನರೂ, ಗುರು ಲಿಂಗ ಜಂಗಮ ಪ್ರೇಮಿಗಳೂ, ಉದಾರ ಚರಿತ್ರರೂ ಎನಿಸಿದ್ದರು. ಇವರಲ್ಲಿ ದಕ್ಷತೆ, ಪ್ರಾಮಾಣಿಕತೆ, ದಯಾ ಪರತೆ, ವಿನಯ ಶೀಲತೆ, ಬಂಧುಪ್ರೇಮ, ಅನುಕಂಪ ಮೊದಲಾದ ಸುದ್ಗುಣಗಳು ಮನೆಮಾಡಿಕೊಂಡಿದ್ದುವು. ಇವರು ನಾಡಿನ ಮಹಿಳೆಯರ ಉನ್ನತಿಗಾಗಿ ಬಹಳವಾಗಿ ಶ್ರಮಿಸಿದ್ದಾರೆ. ಬೆಂಗಳೂರು ಶಾರದಾ ಸ್ತ್ರೀ ಸಮಾಜದ ಅಧ್ಯಕ್ಷರಾಗಿಯೂ, ಮೈಸೂರು ದೇಶದ ಸ್ತ್ರೀ ಸಮ್ಮೇಳನದ ಸದಸ್ಯರಾಗಿಯೂ, ಚಿತ್ರದುರ್ಗದ ಅಕ್ಕ ಮಹಾದೇವಿ ಸೇವಾ ಸಮಾಜದ ಪ್ರಮುಖ ಸಂಸ್ಥಾಪಕರಾಗಿಯೂ, ಚಿತ್ರದುರ್ಗದ ಮಹಿಳಾ ಸಮಾಜದ ಅಧ್ಯಕ್ಷರಾಗಿಯೂ ಇದ್ದು, ಸ್ತ್ರೀ ಸಮಾಜದ ಉನ್ನತಿಗಾಗಿ ಹೇರಳವಾಗಿ ಶ್ರಮಿಸಿದ್ದಾರೆ. ಇವರು ದೇಶ ವಿದೇಶದಲ್ಲಿ ಸಂಚರಿಸಿ ಮಿಗಿಲಾದ ಲೋಕಾನುಭವವನ್ನು ಗಳಿಸಿದ್ದರು. ನಿರ್ಮಲ ಚಾರಿತ್ರ್ಯದಿಂದ ಕೂಡಿದ ಇವರ ಪವಿತ್ರಾತ್ಮನಿಗೆ ಪರಶಿವನಲ್ಲಿ ಶಾಂತಿಯನ್ನು ಕೋರಲಾಗಿದೆ. —ಸಂಪಾದಕ

ವಿಷಯ ಸೂಚಿಕೆ

ಸಮರ್ಪಣ

ಧಾರವಾಡ ಮುರುಘಾಮಠಾಧ್ಯಕ್ಷರೂ, ಕನ್ನಡ ಸಾಹಿತ್ಯ-ಸಂಸ್ಕೃತಿ
ಗಳ ಉದ್ಧಾರಕರೂ, ವೀರಶೈವ ಧರ್ಮ-ಸಂಸ್ಕೃತಿಗಳ ಅಭಿ
ವರ್ಧಕರೂ, ಕರ್ಣಾಟಕ ಏಕೀಕರಣದ ಪುರಸ್ಕರ್ತರೂ,
ವಿಶ್ವಧರ್ಮ ಸಮನ್ವಯಾಚಾರ್ಯರೂ, ತ್ರಿವಿಧ
ದಾಸೋಹ ಮೂರ್ತಿಗಳೂ, "ಶರಣಸಾಹಿತ್ಯ"ದ
ಸರ್ವಾಂಗೀಣ ಪ್ರಗತಿಗೆ ಕಾರಣಕರ್ತರೂ,
ಮಹಾನುಭಾವರೂ ಎನಿಸಿದ್ದ

ಲಿಂಗೈಕ್ಯ ಶಿವಯೋಗಿ ಮೃತ್ಯುಂಜಯ ಮಹಾಸ್ವಾಮಿಗಳ

ದಿವ್ಯಚರಣ ಸನ್ನಿಧಿಯಲ್ಲಿ

'ವೀರಶೈವ ಧರ್ಮ ಮತ್ತು ಸಂಸ್ಕೃತಿ'

ಎಂಬ ಈ ಗ್ರಂಥ ಕುಸುಮವನ್ನು ಭಕ್ತಿಕಾಣಿಕೆಯಾಗಿ ಸಮರ್ಪಿಸಿದೆ.

ದಿ॥ ೩೦-೮-೧೯೭೦
ಬೆಂಗಳೂರು- ೨೨

ಬಿ. ಶಿವಮೂರ್ತಿಶಾಸ್ತ್ರೀ
-ಸಂಪಾದಕ



ಧಾರವಾಡ ಮುರುಘಾಮಠಾಧ್ಯಕ್ಷರಾಗಿದ್ದ
ಲಿಂಗೈಕ್ಯ ಶಿವಯೋಗಿ ಮೃತ್ಯುಂಜಯ ಮಹಾಸ್ವಾಮಿಗಳು

ಜನನ ೧೮೮೮ ಲಿಂಗೈಕ್ಯ ೧೯೬೪

ಸ್ತ್ರ ಸಂಸ್ಕೃತಿ



ಗ್ರಂಥ ಕರ್ತೃ
ಆಸ್ಥಾನ ವಿದ್ವಾನ್, ಪಂಡಿತ ರತ್ನಂ, ಪದ್ಮಶ್ರೀ
ಬಿ. ಶಿವಮೂರ್ತಿ ಶಾಸ್ತ್ರಿಗಳು
ಸಂಪಾದಕರು : ' ಶರಣ ಸಾಹಿತ್ಯ '
ಬೆಂಗಳೂರು-೨೨

‘ವೀರಶೈವ ಧರ್ಮ ಮತ್ತು ಸಂಸ್ಕೃತಿ’

ವೀರಶೈವ ಧರ್ಮ

ಭಾರತೀಯ ದರ್ಶನಪ್ರಪಂಚದಲ್ಲಿ, ವೀರಶೈವ ಧರ್ಮವು ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ. ವೇದ ಮತ್ತು ಆಗಮಗಳ ಪ್ರಾಮಾಣ್ಯವನ್ನು ಅಂಗೀಕರಿಸಿ, ಮತಸಿದ್ಧಾಂತಗಳ ಪರಂಪರೆಗೆ ಅನುಗುಣವಾಗಿ, ಅನುಭವವನ್ನೂ ಮುಖ್ಯವೆಂಬು ಭಾವಿಸಿ, ದೇವರನ್ನೂ, ಮೋಕ್ಷವನ್ನೂ ಒಪ್ಪಿಕೊಂಡು, ಅದನ್ನು ಸಾಧಿಸುವ ಮಾರ್ಗದಲ್ಲಿ ತನ್ನ ವಿಶಿಷ್ಟನೀತಿಯನ್ನು ನಿರೂಪಿಸಿರುವುದು ಈ ಸಿದ್ಧಾಂತದ ಹಿರಿಯಗುಣವಾಗಿದೆ. ಭರತಖಂಡದಲ್ಲಿ ಅತಿ ಪ್ರಾಚೀನವೆನಿಸಿರುವ ಶೈವಧರ್ಮದ ಉತ್ಕ್ರಾಂತಿಯ ಫಲವಾಗಿ ವೀರಶೈವ ಮತವು ರೂಪುಗೊಂಡಿದೆ. ಶಿವಾಗಮಗಳು ಹೇಳುವ ಸಪ್ತಶೈವಗಳಲ್ಲಿ–ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಯೋಗಶೈವ, ವೀರಶೈವ–ಈ ವೀರಶೈವವು ಅಂತಿಮವಾಗಿದ್ದು ಸರ್ವೋತ್ಕೃಷ್ಟವೆನಿಸಿದೆ. ಶ್ರೀ ನಿಜಗುಣ ಶಿವಯೋಗಿಗಳು ರಚಿಸಿರುವ 'ವಿವೇಕ ಚಿಂತಾಮಣಿ' ಎಂಬ ವಸ್ತುಕೋಶದಲ್ಲಿ ವೀರಶೈವವನ್ನು ಕುರಿತು ಈ ರೀತಿ ಹೇಳಿದೆ.–"ಆ ಪರಮೇಶ್ವರ ನಿರ್ಮಿತವಾದ ಈ ಜಗತ್ತಿನಲ್ಲಿ, ವೀರಶೈವ, ಚರಮಶರೀರಿ, ಸರ್ವೋತ್ತಮ ವ್ರತಿ, ಅಪ್ರತಿಹತ ಶಿವವ್ರತನು, ಲೋಕಪಾವನನು ಎಂದು ಸಮಸ್ತ ಸಜ್ಜನರಿಂ ಕೊಂಡಾಡಲ್ಪಟ್ಟು, ಸಮಸ್ತ ಶೈವರೊಳಗೆ ವರಿಷ್ಠನಾಗಿ, ಇತರ ಶೈವರಂತೆ ಕ್ರಿಯಾಬಾಹುಳ್ಯದಿಂದ ಅಲ್ಪಫಲಮಂ ಪಡೆಯದೆ, ಅಲ್ಪಕ್ರಿಯೆಯಿಂದ–ಅನಂತಫಲಮಂ ಪಡೆವಾತನಾಗಿ, ಶಿವದೀಕ್ಷೆಯಿಂ ಮೇಲೆ, ಸ್ನಾನ, ಭೋಜನ, ನಿದ್ರಾ, ಜಾಗರಣ, ಮಲಮೂತ್ರವಿಸರ್ಜನ ಕಾಲಂಗಳಲ್ಲಿ ಅಶುಚಿಯ ಭಾವನೆಯಂ ತೊರೆದು, ಸದಾ ಲಿಂಗಾಂಗಾನುಬಂಧಿಯಾಗಿ, ತನ್ನಿಷ್ಟಲಿಂಗದಲ್ಲಿ, ಆವಾಹನ, ವಿಸರ್ಜನಂಗಳಂ ಮಾಡದಾತನಾಗಿ, ತ್ರಿಕಾಲ ಲಿಂಗಾರ್ಚನಾಸಕ್ತನಾಗಿ, ಲಿಂಗಲೋಪಂಗಳಲ್ಲಿ ಪ್ರಾಣತ್ಯಾಗವಲ್ಲದೆ ಬೇರೊಂದು ಪ್ರಾಯಶ್ಚಿತ್ತವಿಲ್ಲದಾತನಾಗಿ, ಗುರುನಿಂದೆ, ಶಿವನಿಂದೆ, ಶಿವಧರ್ಮನಿಂದೆ, ಶಿವಾಗಮ, ಶಿವಾಚಾರ, ಸಂಪ್ರದಾಯ ನಿಂದೆಗಳಂ ಸೈರಿ

ಸದೆ, ಶಿವಧರ್ಮಾಭಿವೃದ್ಧಿಗೋಸುಗ, ತನ್ನ ತನು, ಮನ, ಧನಂಗಳ ಸೂರೆಗೊಳ್ಳುವಾತನಾಗಿ, ಪಂಚಸೂತಕಂಗಳನು ಅಳಿದಾತನಾಗಿ, ಪಂಚಾಚಾರ ನಿಷ್ಠನಾಗಿ, ಶಿವಾತ್ಮರ್ಗೆ ಭೇದಭ್ರಾಂತಿ ತೊರೆದಾತನಾಗಿ, ಜೀವ ಲಿಂಗವಂ ಶಿವಲಿಂಗದೊಳೈಕ್ಯಗೊಳಿಸಿ ಮೆರೆವಾತನಾಗಿ, ಲಿಂಗಾಂಗಸಂಗ ಅದ್ವೈತ ಭಾವನೆಯಿಂ ಭಯವರ್ಜಿತನಾಗಿ, ವೀರಶೈವ ಧರ್ಮಗಳಿಂ ಕೃತ ಕೃತ್ಯನಾಗಿ, ಧೈರ್ಯಸಂಪನ್ನನಾಗಿ, ಜಗತ್ಪೂಜ್ಯನಪ್ಪಾತನೇ ವೀರಶೈವ ನಪ್ಪಂ" ಎಂದು ಹೇಳಿರುತ್ತಾರೆ. (ವಿವೇಕ ಚಿಂತಾಮಣಿ, ಪ್ರಕರಣ-೨)

ಈ ಮೇಲಿನ ನಿಜಗುಣರ ನಿರೂಪಣೆಯಲ್ಲಿ ವೀರಶೈವದ ಲಕ್ಷಣವನ್ನು ನಾವು ಸಂಗ್ರಹವಾಗಿ ಸುಲಭವಾಗಿ ಸುಸ್ಪಷ್ಟವಾಗಿ ತಿಳಿಯಬಹುದಾಗಿದೆ.

ವೀರಶೈವ ಮತವನ್ನು ಶಿವಾದ್ವೈತ, ಶಕ್ತಿವಿಶಿಷ್ಟಾದ್ವೈತ, ವಿಶೇಷಾದ್ವೈತ, ದ್ವೈತಾ ದ್ವೈತ, ಅತಿವರ್ಣಾಶ್ರಮ ಧರ್ಮ, ಲಿಂಗಾಯತ ಧರ್ಮ, ಷಟ್‌ಸ್ಥಲ ಧರ್ಮ ಎಂದು ಮೊದಲಾಗಿ ಕರೆಯುತ್ತಾರೆ. "ವೀರಶೈವ" ಎಂಬುದರ ಅರ್ಥವನ್ನು ಶಾಸ್ತ್ರಕಾರರು

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ |
ತಸ್ಮಾದೇತೇ ಮಹಾ ಭಾಗಾ ವೀರಶೈವಾ ಇತಿ ಸ್ಮೃತಾಃ ||
ವಿಶಬ್ದೇನೋಚ್ಯ ತೇ ವಿದ್ಯಾ ಶಿವಜೀವೈಕ್ಯ ಬೋಧಿನೀ |
ತಸ್ಯಾಂ ರಮಂತೇ ಯೇ ಶೈವಾಃ ವೀರಶೈವಾ ಸ್ತುತೇಮತಾಃ ||
ವೇದಾಂತಜನ್ಯಂ ಯದ್‌ಜ್ಞಾನಂ ವಿದ್ಯೇತಿ ಪರಿಕೀರ್ತಿತಾಃ |
ವಿದ್ಯಾಯಾಂ ರಮತೇ ತಸ್ಯಾಂ ವೀರ ಇತ್ಯಭಿಧೀಯತೇ ||
(ಸಿದ್ಧಾಂತ ಶಿಖಾಮಣಿ, ಪರಿಚ್ಛೇದ, ೫)

'ವೀ' ಎಂಬುದು ಶಿವ ಜೀವರ ಐಕ್ಯ ಬೋಧಕವಾದ ವಿದ್ಯೆಯನ್ನು ನಿರ್ದೇಶಿಸುವುದು, 'ರ' ಎಂಬುದು 'ರಮಿಸು' ಎಂಬರ್ಥ ವುಳ್ಳುದು, 'ಶೈವಾಃ' ಎಂಬುದು 'ಶಿವಭಕ್ತರು' ಎಂದು ತಿಳಿಸುವುದು. ಆದುದರಿಂದ 'ವೀರಶೈವ, ಎಂದರೆ 'ಶಿವಜೀವೈಕ್ಯ ವಿದ್ಯೆಯಲ್ಲಿ ಕೂಡಿರತಕ್ಕವರು' ಎಂದು ಅರ್ಥವಾಗುತ್ತದೆ. ವೀರಶೈವ ಮತದ ಪರವಾಗಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದಿರುವ ಶ್ರೀಪತಿ ಪಂಡಿತರು ತಮ್ಮ ಭಾಷ್ಯದ ಪ್ರಾರಂಭದಲ್ಲಿ

ಅಶೇಷೋಪನಿಷತ್ಸಾರ ವಿಶೇಷಾದ್ವೈತ ಮಂಡನಂ |
ಶಿವಜ್ಞಾನ ಪ್ರದಂ ಸೂತ್ರ ಭಾಷ್ಯಂ ಜಯತು ಸರ್ವದಾ ||
ಶ್ರುತ್ಯೈಕದೇಶ ಪ್ರಾಮಾಣ್ಯಂ ದ್ವೈತಾದ್ವೈತ ಮತಾದಿಷು |
ವೀರಶೈವೈಕ ಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ ||

(ಶ್ರೀಕರಭಾಷ್ಯ-ಪೀಠಿಕಾ ಪ್ರಕರಣಂ)

ವೀರಶೈವಮತಕ್ಕೆ, ದ್ವೈತಾದ್ವೈತ, ವಿಶೇಷಾದ್ವೈತ, ಶಿವಾದ್ವೈತ ಎಂಬ ಹೆಸರುಗಳನ್ನೂ ಹೇಳಿರುತ್ತಾರೆ. 'ಲಿಂಗಾಯತ' ಎಂಬುದು ವ್ಯಾವಹಾರಿಕ ನಾಮವಾಗಿ ಕಂಡರೂ, ಅದಕ್ಕೂ ಸಂಸ್ಕೃತದ ಅರ್ಥವನ್ನು ಇತ್ತೀಚಿನ ಪಂಡಿತರು ಸಾಹಸದಿಂದ ಹಚ್ಚಿದ್ದಾರೆ. 'ಲಿಂಗೇನ ಆಯತಃ' ಅಥವಾ 'ಲಿಂಗೇ ಆಯತಃ' ಎಂಬುದೇ ಆ ಅರ್ಥ. ಒಟ್ಟಿನಲ್ಲಿ ವೀರಶೈವ, ವಿಶೇಷಾದ್ವೈತ, ಶಕ್ತಿವಿಶಿಷ್ಟಾದ್ವೈತ, ದ್ವೈತಾದ್ವೈತ, ಲಿಂಗಾಯತ, ಲಿಂಗವಂತ ಎಂಬಿವು ಒಂದೇ ಮತವನ್ನು ನಿರ್ದೇಶಿಸುವ ಪರ್ಯಾಯ ನಾಮಗಳಾಗಿವೆ. 'ವೀರ' ಅಂದರೆ ಶ್ರೇಷ್ಠ, 'ಶೈವ' ಅಂದರೆ ಶಿವಭಕ್ತ ಎಂಬ ಅರ್ಥವು ಕೂಡ ಸುಪ್ರಸಿದ್ಧವಾಗಿದೆ.

ಗ್ರಂಥಪ್ರಾಮಾಣ್ಯ :- ವೀರಶೈವರು ವೇದ-ಆಗಮಗಳೆರಡನ್ನೂ ನಂಬುತ್ತಾರೆ. ಆದರೆ ಅಹಿಂಸಾವಾದಿಗಳಾದ ಇವರು ವೇದದ ಕರ್ಮಕಾಂಡವನ್ನು ನಂಬುವುದಿಲ್ಲ. ವೇದದ ಜ್ಞಾನಕಾಂಡ ಮತ್ತು ಕಾಮಿಕಾದಿ ವಾತುಲ ಪರ್ಯಂತವಾದ ಶಿವಾಗಮಗಳು, ಇವಕ್ಕೆ ಅನುಗುಣವಾದ ಶಿವಶರಣರ ವಚನಗಳು, ಆಗಮಾರ್ಥವನ್ನು ನಿರೂಪಿಸುವ ಶಿವಪುರಾಣಗಳು ಇವನ್ನು ಪ್ರಮಾಣವಾಗಿ ನಂಬುತ್ತಾರೆ. ವೀರಶೈವ ಮತ ಪ್ರತಿಪಾದನೆಗಾಗಿ ಕ್ರಿ. ಶ. ೮ ನೆಯ ಶತಕದಲ್ಲಿ ಗೋಕರ್ಣದಲ್ಲಿದ್ದ ಶ್ರೀ ನೀಲಕಂಠ ಶಿವಾಚಾರ್ಯನೂ, ಕ್ರಿ. ಶ. ೧೩ ನೆಯ ಶತಮಾನದಲ್ಲಿ ಆಂಧ್ರದೇಶದಲ್ಲಿದ್ದ ಶ್ರೀಪತಿ ಪಂಡಿತನೂ, ಬ್ರಹ್ಮಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ. ಅಲ್ಲದೆ ನಾರಾಯಣೋಪನಿಷತ್, ಕೇನೋಪನಿಷತ್, ಸಿದ್ಧಾಂತ ಶಿಖೋಪನಿಷತ್, ಈಶಾವಾಸ್ಯೋಪನಿಷತ್ ಮೊದಲಾವುಗಳಿಗೆ ವೀರಶೈವ ವಿದ್ವಾಂಸರು ಸ್ವಮತದ ಪರವಾಗಿ ಭಾಷ್ಯಗಳನ್ನು ಬರೆದಿದ್ದಾರೆ.

ಇದೇ ರೀತಿ ಭಗವದ್ಗೀತೆಗೆ ಕೂಡ ವೀರಶೈವ ಭಾಷ್ಯವನ್ನು ಈಗ ಬರೆಯ ಲಾಗಿದೆ. ವೀರಶೈವರು ವಿಶೇಷವಾಗಿ ಆಗಮ ಪ್ರಮಾಣ ಹಾಗೂ ಅನುಭವ ಪ್ರಮಾಣವನ್ನು ಅಂಗೀಕರಿಸಿರುವುದರಿಂದ ಇವರಿಗೆ ಪ್ರಸ್ಥಾನ ತ್ರಯ ಭಾಷ್ಯಗಳ ಅಗತ್ಯ ಕಾಣಲಿಲ್ಲನೆಂದು ಹೇಳಬಹುದು. ಆದರೂ ಕ್ರಿ. ಶ. ೧೫ ನೆಯ ಶತಮಾನದಲ್ಲಿದ್ದ ಆಚಾರ್ಯ ನಂದಿಕೇಶ್ವರನು 'ಲಿಂಗಧಾರಣ ಚಂದ್ರಿಕೆ'ಯಲ್ಲಿಯೂ, ೧೮ ನೆಯ ಶತಮಾನದಲ್ಲಿದ್ದ ಮರಿತೋಂಟದಾರ್ಯನು 'ವೀರಶೈವಾನಂದ ಚಂದ್ರಿಕೆ'ಯಲ್ಲಿಯೂ ವೀರ ಶೈವ ಮತವು ವೇದಾಗಮ ಸಮ್ಮತವೆಂದು ವಿದ್ವತ್‌ಪೂರ್ಣವಾಗಿ ಸಮರ್ಥಿಸಿದ್ದಾರೆ. ಪೂರ್ವಾಚಾರ್ಯರಿಂದ ನಿರೂಪಿತವಾಗಿರುವ, ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ, ಅನುಭವಸೂತ್ರ, ಶಿವಾದ್ವೈತ ಮಂಜರಿ, ಧರ್ಮ ಶಿರೋಮಣಿ, ವೀರಶೈವಾಚಾರ ಕೌಸ್ತುಭ, ಸೋಮನಾಥ ಭಾಷ್ಯ, ಕೈವಲ್ಯಸಾರ, ಶಿವ ರಹಸ್ಯ, ಪರಮ ರಹಸ್ಯ, ಶಿವಗೀತೆ, ಸ್ಕಾಂದ-ಲಿಂಗ ಪುರಾಣಗಳು' ಶಿವಧರ್ಮ ಪುರಾಣ, ಶ್ವೇತಾಶ್ವತರೋಪನಿಷತ್, ಶಿವಯೋಗ ಪ್ರದೀಪಿಕಾ, ವೇದಾಂತಸಾರ ವೀರಶೈವ ಚಿಂತಾಮಣಿ, ಶ್ರುತಿಸಾರಭಾಷ್ಯಂ, ಪಂಚ ಬ್ರಹ್ಮೋದಯ ಭಾಷ್ಯಂ, ದೀಕ್ಷಾಬೋಧೆ, ಭಕ್ತ್ಯಾಧಿಕ್ಯ, ಶಿವಾಧಿತ್ಯ, ಶೂನ್ಯಸಂಪಾದನೆ, ಗಣಭಾಷಿತ ರತ್ನಮಾಲಾ, ಲಿಂಗಲೀಲಾ ವಿಲಾಸ, ಶತಕತ್ರಯ, ಬಸವೇಶ್ವರ, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ, ಪ್ರಭುದೇವರು, ಅಕ್ಕಮಹಾದೇವಿ, ದೇವರ ದಾಸಿಮಯ್ಯ, ಸಿದ್ಧಲಿಂಗೇಶ್ವರಾದಿಗಳ ವಚನಗಳು ಮೊದಲಾದುವನ್ನು ವೀರಶೈವರು ಪ್ರಮಾಣಗ್ರಂಥ ಗಳನ್ನಾಗಿ ತಿಳಿಯುತ್ತಾರೆ. ವೀರಶೈವವು ಆಗಮ ಪ್ರಧಾನವಾದ ತಾಂತ್ರಿಕ ವೈದಿಕ ಮತ, ಅಪ್ರಾಕೃತ ಹಾಗೂ ಅತಿವರ್ಣಾಶ್ರಮ ಧರ್ಮವಾದುದರಿಂದ ಪ್ರಾಕೃತರಿಗೆ ಬೇಕಾದ ಪ್ರಸ್ಥಾನತ್ರಯಗಳ ಅಗತ್ಯ ಇವರಿಗೆ ತೋರಲಿಲ್ಲ ವೆಂಬುದನ್ನು ಈ ಮೊದಲು ಹೇಳಲಾಗಿದೆ.

ಶಿವದೀಕ್ಷೆ-ಲಿಂಗಧಾರಣ :

ವೀರಶೈವರ ಬಹು ಮುಖ್ಯವಾದ ಲಾಂಛನ ಇಷ್ಟಲಿಂಗಧಾರಣ, ಅಂಗದ ಮೇಲೆ ಲಿಂಗವಿಲ್ಲದವನು ಲಿಂಗವಂತನಾಗುವುದಿಲ್ಲ. ಆದರೆ ಲಿಂಗ

ಧರಿಸಿದವರೆಲ್ಲರೂ ವೀರಶೈವರೆನಿಸುವುದಿಲ್ಲ. A ಶಿವದೀಕ್ಷಾ ಸಂಸ್ಕಾರದಿಂದ ಶುದ್ಧನಾದವನೇ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ತತ್ತ್ವವನ್ನು ಆಚರಿಸುವವನೇ ವೀರಶೈವ ನೆನಿಸುತ್ತಾನೆ. B ಶಿವದೀಕ್ಷೆಯು ವೀರಶೈವರ ದಶಕರ್ಮಗಳಲ್ಲಿ ಬಹು ಮುಖ್ಯ ಸಂಸ್ಕಾರವಾಗಿದೆ.

ಬಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ ||
ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನುಶ್ಶುಚಿಃ |
ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ |
ಪುನಃ ಪುನಃ ಸಮುತ್ಪತ್ತಿಃ ತಲ್ಲಿಂಗಂ ಬ್ರಹ್ಮಶಾಶ್ವತಂ |
ಲಿಂಗಂತು ತ್ರಿವಿಧಂ, ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಂ |
ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇಧಾರ್ಯತೇತನೌ ||

(ಸಿದ್ಧಾಂತ ಶಿಖಾಮಣಿಃ, ಲಿಂಗಧಾರಣ ಸ್ಥಲ)

ಮೇಲಿನ ಶ್ಲೋಕಗಳಲ್ಲಿ ಇಷ್ಟಲಿಂಗವು ಪರಬ್ರಹ್ಮ ರೂಪವೆಂದೂ ಅದು ಉಪಾಸನೆಗಾಗಿ, ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳಲ್ಲಿ, ಇಷ್ಟ, ಪ್ರಾಣ, ಭಾವ ಲಿಂಗವೆನಿಸಿ ಪೂಜೆಗೊಳ್ಳುವುದೆಂದೂ ಹೇಳಲಾಗಿದೆ. ಇಂತಹ ಮನೋವಿಗ್ರಕ್ಕೆ ಯೋಗಸಿದ್ಧಿಗೆ ಇದು ಸಾಧನವೆನಿಸಿದೆ. ಲಿಂಗವು ಆದ್ಯಂತರಹಿತನಾದ ಸಚ್ಚಿದಾನಂದ ರೂಪಿಯಾದ ಪರಬ್ರಹ್ಮನ ಸಂಕೇತವಾಗಿದೆ. ಸಾಕಾರ, ನಿರಾಕಾರ ಈ ರೂಪಗಳ ಸಂಕೇತವೂ ಆಗಿದೆ. ಪರಬ್ರಹ್ಮರೂಪವಾದ ಇಷ್ಟ ಲಿಂಗವನ್ನು ಭಕ್ತನ ಅಂಗದಲ್ಲಿ ನೆಲೆಗೊಳಿಸಿ, ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳಲ್ಲಿ ಅಂದರೆ, ತ್ಯಾಗಾಂಗ, ಭೋಗಾಂಗ,

---

A ಕನ್ನಡನಾಡು, ಮತ್ತು ತಮಿಳುನಾಡಿಲ್ಲಿ ಲಿಂಗಧಾರಿಗಳಾದರೂ ಲಿಂಗವಂತರಲ್ಲದ ಹಲವು ಜನರಿದ್ದಾರೆ. ಅವರಲ್ಲಿ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಅನುಸಂಧಾನವಿಲ್ಲ, ಶಿವದೀಕ್ಷೆಯಿಲ್ಲ, ಆಹಾರ ವ್ಯವಹಾರಗಳಲ್ಲಿಯೂ ವ್ಯತ್ಯಾಸವಿದೆ. ಕೆಲವರು, ಲಿಂಗ, ಜನಿವಾರ ಎರಡೂ ಹಾಕಿದ್ದಾರೆ ಎಂಬುದು ಇಲ್ಲಿ ಗಮನಾರ್ಹ. (ಸಂ)

B. ವೀರಶೈವನಿಗೆ ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಎಂದು ಅನುಭವಿಗಳಿಂದ ಹೇಳಲಾಗಿದೆ. (ಸಂ)

ಯೋಗಾಂಗಗಳಲ್ಲಿ, ಇಷ್ಟ, ಪ್ರಾಣ, ಭಾವ ಲಿಂಗ ರೂಪದಿಂದ ಪೂಜಿ ಗೊಂಬಂತೆ ಮಾಡುವ ಸಂಸ್ಕಾರವೇ ಶಿವದೀಕ್ಷೆಯು. ಇದು ವೇಧಾ, ಮನು, ಕ್ರಿಯಾ ಎಂಬ ಮೂರು ವಿಧದಿಂದಿರುವುದು. ಜೀವನಲ್ಲಿರುವ, ಆಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳನ್ನು ಕಳೆದು, ಜೀವನನ್ನು ದೇವನನ್ನಾಗಿ ಮಾಡುವುದು. ಅಂದರೆ, ವೀರಶೈವ ಪರಿಭಾಷೆಯಲ್ಲಿ ಹೇಳ ಬೇಕೆಂದರೆ ಅಂಗನನ್ನು ಲಿಂಗನನ್ನಾಗಿ ಮಾಡುವುದಕ್ಕೆ ಶಿವದೀಕ್ಷೆಯು ಸಾಧನವೆನಿಸುವುದು

ದೀಯತೇಕರ್ಮಸಂಬಂಧಃ ಕ್ಷೀಯತೇಚ ಮಲತ್ರಯಂ ।
ದೀಯತೇಕ್ಷೀಯತೇ ಯೇನ ಸಾದೀಕ್ಷೇತಿ ನಿಗದ್ಯತೇ ॥

ಶಿವಾರ್ಚನಾದಿ ಕರ್ಮಗಳಿಗೆ ಅಧಿಕಾರವನ್ನು ಕೊಡುವುದು, ಮತ್ತು ಆಣವಾದಿ ಮಲಗಳನ್ನು ಕಳೆಯುತಕ್ಕುದು ಶಿವದೀಕ್ಷೆಯು

ಯಥಾ ಮೃಗಪತಿಂ ದೃಷ್ಟ್ವಾವಧಾಭೀತೋವನೇಗಜಃ ॥
ಅದೀಕ್ಷಿತೋರ್ಚಯಾಲ್ಲಿಂಗಾತ್ ತಥಾ ಭೀತೋ ಮಹೇಶ್ವರಃ ॥

–ದೀಕ್ಷಾಬೋಧೆ

ಅಡವಿಯಲ್ಲಿ ಸಿಂಹವನ್ನು ಕಂಡ ಆನೆಯು ಓಡಿಹೋಗುವಂತೆ ಶಿವದೀಕ್ಷಾರಹಿತನು ಮಾಡುವ ಪೂಜೆಯಲ್ಲಿ ಶಿವಚೈತನ್ಯವು ಇರುವುದಿಲ್ಲ ಎಂದು ಶಿವಾಗಮಗಳಲ್ಲಿ ಹೇಳಿದೆ. ಆದುದರಿಂದ ಶಿವದೀಕ್ಷೆಯು ವೀರ ಶೈವರಿಗೆ ಅತಿಮುಖ್ಯವೆನಿಸಿದೆ. ಶಿವದೀಕ್ಷೆಯಿಲ್ಲದವನಿಗೆ ಶಿವಪೂಜಾಧಿಕಾರ ವಿಲ್ಲ. ಅಂಥವನು ಮಾಡುವ ಪೂಜೆಯು ಫಲಪ್ರದವಲ್ಲ. ಈಗ ಲಿಂಗವಂತ ಸಮಾಜದಲ್ಲಿ ಶಿವದೀಕ್ಷೆಯು ಕಡ್ಡಾಯವಿಲ್ಲದಿರುವುದೇ ಎಲ್ಲ ಅನರ್ಥದ ಮೂಲ ವೆನಿಸಿದೆ. ಮತ ಸಂಸ್ಕಾರವು ಸಮಾಜದಲ್ಲಿ ಪರಂಪರಾಗತವಾಗಿ ಬರದಿರಲು ಕಾರಣವೆನಿಸಿದೆ.

ಲಿಂಗಧಾರಣವು ಅತಿ ಪ್ರಾಚೀನವಾದುದು :

ವೀರಶೈವ ಗ್ರಂಥಕಾರರು ಲಿಂಗಧಾರಣವು ಪ್ರಾಚೀನವೆಂದೂ, ವಿಷ್ಣು, ಬ್ರಹ್ಮಾದಿಗಳು ಕೂಡ ಲಿಂಗಧಾರಿಗಳೆಂದು ಹೇಳಿರುವರು. ಭಾರತದಲ್ಲಿ

ಪ್ರಖ್ಯಾತ ಕ್ಷೇತ್ರಗಳಾದ, ಅನಂತಶಯನದ ಪದ್ಮನಾಭ, ಪಂಡರಾಪುರದ ವಿಠ್ಠಲ, ಕೊಲ್ಲಾಪುರದ ಲಕ್ಷ್ಮೀದೇವಿ, ತುಳಜಾಪುರದ ಭವಾನಿ, ಕೊಲ್ಲೂರಿನ ಮೂಕಾಂಬಿಕೆ, ಬೆಂಗಳೂರು ಗವಿಪುರದ ವೀರಭದ್ರ ಸನ್ನಿಧಿಯಲ್ಲಿರುವ ಮಾರುತಿ ಮೊದಲಾದ ವಿಗ್ರಹಗಳ ತಲೆಯಲ್ಲಿ ಶಿವಲಿಂಗದ ಲಾಂಛನವಿರುವುದನ್ನು ನಾವು ಇಂದಿಗೂ ನೋಡಬಹುದು. ಪದ್ಮನಾಭನ ಹಸ್ತದಲ್ಲಿ ಶಿವಲಿಂಗಲಾಂಛನ ವಿರುತ್ತದೆ. ಮಿಕ್ಕ ವಿಗ್ರಹಗಳ ತಲೆಯಲ್ಲಿ ಶಿವಲಿಂಗವಿದೆ.

ಈ ಮಾತಿಗೆ ಪೋಷಕವಾಗಿ :

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ |
ಧಾರಯಂತಿ ಸದಾ ಲಿಂಗಂ ಉತ್ತಮಾಂಗೇ ವಿಶೇಷತಃ ||
ಲಕ್ಷ್ಮ್ಯಾದಿ ಶಕ್ತಯಸ್ಸರ್ವಾಃ ಶಿವಭಕ್ತಿ ವಿಭಾವಿತಾಃ |
ಧಾರಯಂತ್ಯಳಿಕಾಗ್ರೇಷು ಶಿವಲಿಂಗಮಹರ್ನಿಶಂ ||
ವೇದ ಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷುಚ |
ಲಿಂಗಧಾರಣ ಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ||

(ಸಿದ್ಧಾಂತ ಶಿಖಾಮಣಿಃ, ಪರಿಚ್ಛೇದ-೯)

ಬ್ರಹ್ಮ ವಿಷ್ಣು ಸುರೇಶಾದಿ ದೇವತಾಃ ಪರಯಾ ಮುದಾ |
ಧಾರಯಂತ್ಯಳಿಕಾಗ್ರೇಷು ಶಿವಲಿಂಗಂತು ಸುಂದರಂ ||

(ಪಂಡಿತಾರಾಧ್ಯ ಚರಿತಂ, ದೀಕ್ಷಾ ಪ್ರಕರಣಂ)

ಶ್ರೀ ನಂದೀಶ್ವರ ಭೃಂಗಿ ವೀರ ವೃಷಭಸ್ತಂದಾಸ್ತಥಾ ಶೈಲಜಾ |
ಸ್ಫೂರ್ಜದ್ದಾರುಕ ರೇಣುಕಾದಿ ಗಣಕಾಃ ಸಾನಂದ ಕುಂಭೋದ್ಭವಾ|
ಪೂರ್ಣಾನಂದ ಭೃಗೂಪಮನ್ಯು ಕಣಭೃಗ್ ಭ್ರಾಜದ್ದಧೀಚ್ಯಾದಯೋ |
ಜೀಯಾ ಸುಸ್ಫುಟ ವೀರಶೈವ ನಿಯುತಾಃ ಪ್ರಾಂಚಃಪರಂ ಪಂಡಿತಾಃ ||

(ಭಕ್ತಾಧಿಕ್ಯ ರತ್ನಾವಳಿಃ-೧)

ಈ ಮೇಲೆ ಕಂಡ ಪ್ರಮಾಣಗಳು ಲಿಂಗಧಾರಣವು ಅತಿ ಪ್ರಾಚೀನವೆಂಬುದಕ್ಕೆ ನಿದರ್ಶನವಾಗಿವೆ. ವಿಷ್ಣು, ಬ್ರಹ್ಮಾದಿ ದೇವತೆಗಳೂ, ದಧೀಚಿ,

ಭೃಗು, ಮೊದಲಾದ ಮಹರ್ಷಿಗಳೂ, ನಂದಿ, ವೃಷಭಾದಿ ಪ್ರಮಥರೂ ಪ್ರಾಚೀನಕಾಲದ ಲಿಂಗವಂತರೆಂದು ಮೇಲಿನ ಉಲ್ಲೇಖಗಳು ನಿರೂಪಿಸು ವುವು.

ಉಪನಯನವು ಬ್ರಾಹ್ಮಣಾದಿಗಳಿಗೆ ದ್ವಿಜತ್ವವನ್ನು ಕೊಡುವಂತೆ, ಶಿವ ದೀಕ್ಷೆಯು ವೀರಶೈವರಿಗೆ ಲಿಂಗಾರ್ಚನಾದಿ ಮೋಕ್ಷಾಧಿಕಾರವನ್ನು ಕೊಡುತ್ತ ದೆಂದು ಧರ್ಮಗ್ರಂಥಗಳಲ್ಲಿ ಹೇಳಲಾಗಿದೆ. A ವೇದವ್ಯಾಸನ ವೇದಾಂತ ಸೂತ್ರಗಳ ಮೇಲೆ, ವೀರಶೈವ ಮತಪರವಾಗಿ ಭಾಷ್ಯವನ್ನು ಬರೆದಿರುವ ಆಚಾರ್ಯ ಶ್ರೀಪತಿ ಪಂಡಿತನು

> ಬ್ರಹ್ಮವಿಷ್ಣ್ವಾದಿ ದೇವಾಂಶ್ಚ ಮುನಯೋ ಗೌತಮಾದಯಃ।
> ಧಾರಯಂತಿ ಸದಾ ಲಿಂಗಂ ಉತ್ತಮಾಂಗೇ ವಿಶೇಷತಃ ॥
> ಉರಸ್ಥಲೇ ಹರಿರ್ಲಿಂಗಂ ಧೃತ್ವಾಮೂರ್ಧ್ನಿ ಪಿತಾಮಹಃ।
> ಲಿಂಗಸ್ಥಂಮಾಂ ಸಮಾರಾಧ್ಯ ಸ್ವಂಸ್ವಂಪದಮವಾಪತುಃ ॥

(ಶ್ರೀಕರಭಾಷ್ಯ, ಪುಟ ೨೫, ಕಾಶೀನಾಥ ಗ್ರಂಥಮಾಲಾ, ಮೈಸೂರು) ಭಾಷ್ಯಕಾರನು ಉದಾಹರಿಸಿರುವ ಮೇಲಿನ ಶ್ಲೋಕಗಳು, ಕ್ರಮವಾಗಿ, ಲಿಂಗಪುರಾಣ, ಸ್ಕಾಂದಪುರಾಣಗಳಿಂದ ತೆಗೆದುಕೊಂಡವು ಎಂದು ಹೇಳ ಲಾಗಿದೆ. "ಬ್ರಹ್ಮಾದೀನಾಂ ಶಿವಲಿಂಗಾದಿಧಾರಣ ದರ್ಶನಾತ್ ಲೋಕೇ ಅನಂತಪದ್ಮನಾಭ ವಿಠಲೇಶ್ವರಾದಿ ಕ್ಷೇತ್ರೇಷು ನಾರಾಯಣ ಸ್ಯಾಪಿ ಪಾಣಿ ಶಿರೋದೇಶೇಷು ಪ್ರತ್ಯಕ್ಷ ಶಿವಲಿಂಗ ಧಾರಣ ದರ್ಶನಾಚ್ಚನ ಸಂದೇಹ ಕಲಂಕ ಪ್ರಸಂಗಃ" ಎಂದು ಅದೇ ಸನ್ನಿವೇಶದಲ್ಲಿ ಹೇಳಿರುತ್ತಾನೆ. ಶ್ರೀಪತಿ ಪಂಡಿತನು ಹೇಳಿರುವಂತೆ ತಿರುವಾಂಕೂರಿನ ಅನಂತ ಪದ್ಮನಾಭನ ಹಸ್ತದಲ್ಲಿ, ಪಂಢರಪುರದ ವಿಠ್ಠಲನ ತಲೆಯಲ್ಲಿರುವ ಶಿವಲಿಂಗ ಲಾಂಛನವನ್ನು ಈಗ್ಗೆಯೂ ನಾವು ನೋಡಬಹುದು. ಅದರಂತೆಯೇ ಕೊಲ್ಲಾಪುರದ ಲಕ್ಷ್ಮೀ, ತುಳಜಾಪುರದ ಭವಾನೀದೇವಿಯರ ತಲೆಯಲ್ಲಿಯೂ ಶಿವಲಿಂಗ

A ಜನ್ಮನಾ ಜಾಯತೇ ಶೂದ್ರಃ ಕರ್ಮಣಾದ್ವಿಜ ಉಚ್ಯತೇ_ಮಹಾಭಾರತ.

ಲಾಂಛನವಿರುವುದನ್ನು ನಾವು ಈ ಮೊದಲೇ ತಿಳಿಸಿದ್ದೇವೆ. ಹಾಗೂ ಅವನ್ನು ನಾವು ಕಣ್ಣಾರ ನೋಡಿದ್ದೇವೆ. ಇದು ಲಿಂಗಾಧಾರಣದ ಪ್ರಾಚೀನತೆಗೆ ಸುಸ್ಪಷ್ಟವಾದ ನಿದರ್ಶನ ವೆನಿಸಿದೆ.

ದಶ ಕರ್ಮಗಳು :- ವೈದಿಕ ಮತೀಯರಲ್ಲಿ ಷೋಡಶಕರ್ಮಗಳಿರುವಂತೆ ಆಗಮ ಪ್ರಧಾನರಾದ ವೀರಶೈವರಿಗೆ ದಶಸಂಸ್ಕಾರಗಳನ್ನು ಮಾತ್ರ ಹೇಳ ಲಾಗಿದೆ. ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ (ಲಿಂಗ ಧಾರಣ) ನಾಮಕರಣ, ಅನ್ನಪ್ರಾಶನ, ಉಪನಿಷಕ್ರಮಣ, ಚೌಲ, ಶಿವ ದೀಕ್ಷೆ, ವಿವಾಹ ಎಂಬಿವು ಆ ದಶಸಂಸ್ಕಾರಗಳು. ಇವುಗಳ ವಿವರವನ್ನು ತಿಳಿಸಲು, ವಿವಾಹವಿಧಿ, ದೀಕ್ಷಾವಿಧಿ ಮೊದಲಾದ ದಶಕರ್ಮವಿಧಿಗಳು ಪ್ರಾಚೀನರಿಂದ ನಿರೂಪಿತವಾಗಿವೆ. ಹಾಗೂ ಸಮಾಜದಲ್ಲಿ ಬಳಕೆಯಲ್ಲಿವೆ.

ವೀರಶೈವ ಸಿದ್ಧಾಂತ :

ವಿಶ್ವದ ಎಲ್ಲ ಸಿದ್ಧಾಂತಗಳೂ ಮುಖ್ಯವಾಗಿ, ದೇವರು, ಜೀವರು, ಪ್ರಕೃತಿ ಈ ಮೂರು ವಿಷಯಗಳನ್ನು ನಿರೂಪಿಸುತ್ತವೆ. ಈ ದೃಷ್ಟಿಯಿಂದ ವೀರಶೈವ ಸಿದ್ಧಾಂತವನ್ನೂ ನಾವು ಪರಿಶೀಲಿಸ ಬಹುದು.

ದೇವರು:-ವೀರಶೈವರಲ್ಲಿ 'ಏಕಂ ಸತ್ ವಿಪ್ರಾಬಹುಧಾ ವದಂತಿ' ಎಂಬ ವೇದವಾಕ್ಯದಂತೆ 'ದೇವರು ಒಬ್ಬನೇ.' ಆತನು ಲಿಂಗರೂಪನು, ಅವನನ್ನು ಶಿವನೆಂದೂ, ಶಕ್ತಿವಿಶಿಷ್ಟನೆಂದೂ ಕರೆದಿದ್ದಾರೆ. ಹೂ ಮತ್ತು ವಾಸನೆ, ವಾಕ್ ಮತ್ತು ಅರ್ಥ, ರತ್ನ ಮತ್ತು ಕಾಂತಿ ಗಳಂತೆ ಶಿವನು ಶಕ್ತಿವಿಶಿಷ್ಟನಾಗಿ ಅದ್ವೈತ ರೂಪನಾಗಿದ್ದಾನೆ. ಶ್ರೀ ಬಸವೇಶ್ವರನು "ಇಬ್ಬರು ಮೂವರು ದೇವ ರೆಂದು ಉಬ್ಬುಬ್ಬಿ ಮಾತನಾಡಬೇಡ. ದೇವನೊಬ್ಬನೇ ಕಾಣಿರೋ, ಇಬ್ಬ ರೆಂಬುದು ಪುಸಿ, ಕೂಡಲ ಸಂಗಮದೇವನೊಬ್ಬನಲ್ಲದಿಲ್ಲವೆಂದಿತ್ತು ವೇದ, 'ದೇವನೊಬ್ಬ ನಾಮ ಹಲವು' ಎಂದು ಹೇಳಿದ್ದಾನೆ. ವೀರಶೈವರು ಪೂಜಿಸುವ, ಇಷ್ಟ, ಪ್ರಾಣ, ಭಾವ ಲಿಂಗ ರೂಪವಾದ ಶಿವಲಿಂಗವು ಸಚ್ಚಿದಾನಂದ ರೂಪ ವಾದುದು. 'ಸಹಸ್ರಾಕ್ಷ ಸ್ಸಹಸ್ರಪಾತ್' ಎಂಬ ಶ್ರುತಿ ವಾಕ್ಯಗಳಿಗೆ ಅನುಗು ಣವಾದುದು. ದಿಕ್ಕಾಲಾದ್ಯಾ ನವನಚ್ಛಿನ್ನಾನಂತ ರೂಪವಾದುದು. ವಿಷ್ಣು,

ಬ್ರಹ್ಮ, ರುದ್ರರೆಂಬ ತ್ರಿಮೂರ್ತಿಗಳನ್ನೂ ಒಳಗೊಂಡುದು ಇತ್ಯಾ ಯಾಗಿ ಶಾಸ್ತ್ರಕಾರರೂ ವಚನಕಾರರೂ ಹೇಳಿರುತ್ತಾರೆ. ವಿಜ್ಞಾನಿಗಳು ವಿಶ್ವದ ಮೂಲ Matter and Energy ಎಂದು ಹೇಳುವುದನ್ನೇ ಶಿವಶರಣರು 'ಶಿವ ಮತ್ತು ಶಕ್ತಿ' ಎಂದು ಹೇಳಿರುತ್ತಾರೆ. ವೇದಾಂತಿ ಗಳು ಇದನ್ನು ಬ್ರಹ್ಮ ಮತ್ತು ಮಾಯೂ ಎನ್ನುತ್ತಾರೆ.

ಪರಮೇಶ್ವರನನ್ನು, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ರೂಪ ದಿಂದ ಲಿಂಗವಂತರು ಪೂಜಿಸುತ್ತಾರೆ. ಇಷ್ಟಲಿಂಗ ಮೂಲದಿಂದ ಪ್ರಾಣಲಿಂಗ –ಭಾವಲಿಂಗಗಳಪೂಜೆಯನ್ನು ನಡೆಸುತ್ತಾರೆ. ಆದರೆ ಮೂರ್ತಿಪೂಜೆಯನ್ನು ಲಿಂಗವಂತರು ಮಾಡುವುದಿಲ್ಲ. ಶಿವಯೋಗಿಗಳ ತಪೋಭೂಮಿಯಲ್ಲಿರುವ ಲಿಂಗದೇವರುಗಳನ್ನಲ್ಲದೆ ಮತ್ತುಳಿದ ತೀರ್ಥಕ್ಷೇತ್ರಗಳನ್ನು ವೀರಶೈವರು ಬಯು ಸುವುದಿಲ್ಲ. ಇಂತಹ ನಿಷ್ಠೆಯನ್ನು 'ವೀರವ್ರತ' ಎಂದು ಕರೆಯಲಾಗಿದೆ. ಶಿವ ಭಕ್ತನು ಸರ್ವೋತ್ತಮವಾದ ಶಿವರೂಪವಾದ ಲಿಂಗದಲ್ಲಿ ನಿಷ್ಠೆಯುಳ್ಳವನಾಗಿ 'ಶರಣಸತಿ ಲಿಂಗವೇ ಪತಿ' ಎಂಬ ರೀತಿಯಿಂದ ಅನುಸಂಧಾನ ಮಾಡಬೇಕು. (ಶತಕತ್ರಯ, ಶಿವಾಧವಶತಕ, ೮೦) ಇದನ್ನೇ 'ಶರಣಸತಿ ಲಿಂಗಪತಿ ನ್ಯಾಯ'ವೆನ್ನುತ್ತಾರೆ. ಒಟ್ಟಿನಲ್ಲಿ ಲಿಂಗವಂತರು ಏಕೇಶ್ವರವಾದಿಗಳು, ಆಸ್ತಿಕ್ಯ ಬುದ್ಧಿಯುಳ್ಳವರು. ಪರಬ್ರಹ್ಮರೂಪಿ ಶಿವಲಿಂಗದಲ್ಲಿ ನಿಷ್ಠೆಯುಳ್ಳವರು, ಹಾಗೂ ಆದಿ ಬ್ರಹ್ಮರೂಪಿ ಮಹಾಲಿಂಗದಲ್ಲಿ ನಿಕಟಬಾಂಧವ್ಯವುಳ್ಳವರು.

ಪ್ರಕೃತಿ:—ಪರಮೇಶ್ವರನಿಂದ ನಿರ್ಮಿತವಾದ ಈಜಗತ್ತು ಶಾಶ್ವತ ವೆಂದೂ, ವಿಶ್ವವು ಪರಿವರ್ತನಾತ್ಮಕವೆಂದೂ ವೀರಶೈವರು ನಂಬುತ್ತಾರೆ. ಅದ್ವೈತಿಗಳು ಜಗತ್ತು ಸುಳ್ಳೆಂದೂ ವಿಶಿಷ್ಟಾದ್ವೈತಿಗಳು ಮತ್ತು ದ್ವೈತಿಗಳು ಜಗತ್ತು ನಿಜವೆಂದೂ ವಾದಿಸಿದ್ದಾರೆ. ನಿರಾಶಾವಾದದ ಬೌದ್ಧಧರ್ಮದಲ್ಲಿ ಕೂಡ ಜಗತ್ತು ಸತ್ಯವೆಂದೇ ತಿಳಿಯಲಾಗಿದೆ. ಜೈನರು ಕೂಡ ಜಗತ್ತು ಸತ್ಯ ವೆನ್ನುತ್ತಾರೆ. ಸಂಸಾರವು ಸುಖಮಯವೆಂದೂ ಅದು ಜೀವನದ ಪ್ರಗತಿಗೆ ಸಾಧ ನವೆಂದೂ ಲಿಂಗವಂತರು ತಿಳಿಯುತ್ತಾರೆ. ಈ ಅರ್ಥದಲ್ಲಿ ಶ್ರೀ ಬಸವೇಶ್ವರನು ಹೇಳುವುದು ಗಮನಾರ್ಹ. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ

ಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ, ಕೂಡಲ ಸಂಗಮದೇವ (ಬಸವೇಶ್ವರ ವಚನ)

ಧರ್ಮ, ಅರ್ಥ, ಕಾಮ, ಮೋಕ್ಷ ಇವು ಚತುರ್ವಿಧ ಪುರುಷಾರ್ಥಗಳು. ಸಂಸಾರವನ್ನು ಕಡೆಗಣಿಸಿದರೆ, ಅರ್ಥ, ಕಾಮಗಳ ಸಿದ್ಧಿಯಾಗುವುದೆಂತು? ಸಂಸಾರಿಯು, ಗುರು, ಲಿಂಗ, ಜಂಗಮ ಈ ತ್ರಿವಿಧ ದಾಸೋಹದಲ್ಲಿ ನಿರತನಾಗಿ, ಇವೆಲ್ಲಕ್ಕೂ ಪರಶಿವನು ಕಾರಣನು, ನಿಜವಾಗಿಯೂ ಅವನೇ ಜಗತ್ತಿಗೆ ಯಜಮಾನನು, ಜೀವನಾದ ತಾನು ನಿಮಿತ್ತ ಮಾತ್ರನು ಎಂದು ತಿಳಿದು 'ಹೇರು ಹೊತ್ತ ಎತ್ತಿನಂತೆ' ಇದ್ದರೆ ಅವನಿಗೆ ದುಃಖಪ್ರಾಪ್ತಿಯಾಗದೆ ಇರುವುದಲ್ಲದೆ, ಸುಖಮಯವಾದ ಬಾಳು ನಡೆಯುತ್ತದೆ ಎಂದು ಶರಣರು ಹೇಳಿದ್ದಾರೆ. ಎಣ್ಣೆ ಮತ್ತು ಚಾಕು ನೆರವಿನಿಂದ ಹಲಸಿನಹಣ್ಣು ಬಿಚ್ಚುವಂತೆ, ವೈರಾಗ್ಯ ಮತ್ತು ವಿವೇಕಗಳ ಸಹಾಯದಿಂದ ಸಂಸಾರವನ್ನು ನಿರ್ವಹಿಸಬೇಕು. ಸಂಸಾರವೆಂಬ ಹಲಸಿನ ಹಣ್ಣಿನಲ್ಲಿರುವ ಅಹಂಕಾರವೆಂಬ ಮುಳ್ಳು, ಮಮಕಾರವೆಂಬ ಅಂಟು ಇವುಗಳ ಹಿಂಸೆಯನ್ನು ಪರಿಹರಿಸಿ ಕೊಳ್ಳಬೇಕು.

ನೀರಿನಲ್ಲಿ ಹಾಕಿದ ಸಕ್ಕರೆ ಕರಗಿ ಹೋಗುತ್ತದೆ ಅದರ ನಿಜರೂಪ ಅಳಿಯುತ್ತದೆ. ಆದರೆ ಸಕ್ಕರೆ-ದ್ರವರೂಪದಲ್ಲಿ-ಸಿಹಿಯ ಗುಣದಲ್ಲಿ,-ನೀರಿನಲ್ಲಿರುತ್ತದೆ. ಇದರಿಂದ ಸಕ್ಕರೆ ಇಲ್ಲದಂತಾಗುವುದಿಲ್ಲ. ವಿಜ್ಞಾನಿಗಳು ಮತ್ತೆ ಸಕ್ಕರೆ ಮತ್ತು ನೀರನ್ನು ಬೇರೆ ಮಾಡಲು ಸಾಧ್ಯವಿದೆ. ಹಾಗೆಯೇ ಪ್ರಕೃತಿಯು ಪರಿವರ್ತನಾತ್ಮಕವೇ ಹೊರತು ಅಸತ್ಯವಾದುದಲ್ಲ ಎಂಬುದು ವೀರಶೈವರ ನಂಬುಗೆ. ಇದಕ್ಕೆ ಉಪನಿಷತ್ತಿನ ಬೆಂಬಲವಿದೆ. ಉಪನಿಷತ್ತು 'ಸರ್ವಂಖಲ್ವಿದಂ ಬ್ರಹ್ಮ, ಅಣೋರಣೀಯಾನ್ ಮಹತೋಮಹೀಯಾನ್' ಎಂದೂ, ಸರ್ವಾಂತರ್ಯಾಮಿಯೆಂದೂ ಪರಬ್ರಹ್ಮನನ್ನು ಕುರಿತು ಹೇಳಿದೆ. ಆದುದರಿಂದ ಸತ್ಯರೂಪನಾದ ಬ್ರಹ್ಮನಿಂದ ಕೂಡಿದ ಜಗತ್ತು ಸತ್ಯಸ್ವರೂಪವೇ ಆಗ ಬೇಕಾಗುತ್ತದೆ.

ದೇಹವು ನಿರುಪಯೋಗವಲ್ಲ. 'ದೇವನನೊಲಿಸಬಂದ ಪ್ರಸಾದಕಾಯ'. ನಮ್ಮ ದೇಹವೇ ದೇವಾಲಯ, ಕೈಕಾಲುಗಳೇ ಕಂಭ ತೋರಣ

ಗಳು, ಹೃದಯವೇ ಗರ್ಭಗುಡಿ, ಶಿರವೇ ಗೋಪುರ, ಒಳಗಿರುವ ಆತ್ಮನೇ ಪರಮಾತ್ಮನು ಎಂದು ಬಸವೇಶ್ವನು ಹೇಳಿದ್ದಾನೆ. A ದೇಹದ ಸಹಾಯದಿಂದಲೇ, ಕರ್ಮ, ಜ್ಞಾನ, ಭಕ್ತಿಗಳನ್ನು ಆಚರಿಸಬೇಕು. ದೇಹವಿಲ್ಲದೆ ಭೌತಿಕ ಪ್ರಪಂಚದಲ್ಲಿ ಮಾನವನು ವ್ಯವಹರಿಸುವುದೆಂತು? ಆದುದರಿಂದ ದೇಹವು ಪವಿತ್ರವಾದುದು, ದೇವಾಲಯ ರೂಪವಾದುದು ಎಂಬುದು ವೀರಶೈವರ ಸಿದ್ಧಾಂತ. ಸಂಸಾರವು ಸುಖಮಯ, ಅಹಂಕಾರ, ಮಮಕಾರಗಳನ್ನಳಿದು ಶಿವಾರ್ಪಿತಬುದ್ಧಿಯಿಂದ ನಾವು ಸಂಸಾರ ನಿರ್ವಹಿಸಬೇಕು. ಕಾರಣರೂಪನಾದ ಪರಮೇಶ್ವರನ ಶಕ್ತಿರೂಪವಾದ ಪ್ರಪಂಚವನ್ನು ನಶ್ವರವೆನ್ನಬಾರದು. ಇದು ಜೀವನಿಗೆ ಪ್ರಯೋಗಶಾಲೆಯೆನ್ನಬೇಕು ಎಂದು ಶರಣರು ಹೇಳಿದ್ದಾರೆ. ಕಾರಣರೂಪನಾದ ಪರಮೇಶ್ವರನು ಸತ್ಯರೂಪನಾದರೆ, ಅವನ ಕಾರ್ಯರೂಪಿ ಪ್ರಪಂಚವು ಅಸತ್ಯವಾಗುವುದೆಂತು ? ಎಂದು ಶಿವಶರಣರು ತರ್ಕಿಸಿದ್ದಾರೆ.

'ಶರೀರ ಮಾದ್ಯಂಖಲು ಧರ್ಮ ಸಾಧನಂ,' ಎಂದು ಕಾಳಿದಾಸ ಮಹಾ ಕವಿಯೂ (ಕುಮಾರ ಸಂಭವಂ) your body is the living temple of god ಎಂದು ಒಬ್ಬ ಆಂಗ್ಲ ಕವಿಯೂ ಹೇಳಿರುವ ಮಾತು ಇಲ್ಲಿ ಸ್ಮರಣಾರ್ಹವಾಗಿದೆ.

ಜೀವರು:–'ಜೀವ' ಎಂದರೆ ಮಾನವನ ದೇಹವನ್ನು ವ್ಯಾಪಿಸಿರುವ ಶಿವ ಚೈತನ್ಯ. "ಅಹಂ ಬ್ರಹ್ಮಾಸ್ಮಿ, ಸರ್ವಂ ಖಲ್ವಿದಂ ಬಹ್ಮ, ಸೋಹಂ" ಇತ್ಯಾದಿ ಉಪನಿಷದ್ವಾಕ್ಯಗಳಂತೆ 'ನಾನೇ ಬ್ರಹ್ಮನು' ಎಂಬುದು ಅದ್ವೈತ. 'ಜೀವನು ದೇವನಿಗಿಂತ ಭಿನ್ನನು, ತರ ತಮ ಭಾವವುಳ್ಳವನು' ಎಂಬುದು ದ್ವೈತ. 'ಜೀವನು ದೇವರ ಒಂದು ಅಂಶ–ದಾಳಿಂಬೆ ಫಲದಲ್ಲಿ–ಬೀಜವು ಹಣ್ಣಿನ ಒಂದಂಶವಾಗಿರುವಂತೆ–ಜೀವನು ದೇವನ ಒಂದಂಶ' ಎಂಬುದು ವಿಶಿಷ್ಟಾದ್ವೈತ. ವೀರಶೈವವು, ಶಿವಾದ್ವೈತ, ದ್ವೈತಾ–ದ್ವೈತ ಎಂದು ಹೇಳಿರುವುದರಿಂದ ಸಾಧಕಾವಸ್ಥೆಯಲ್ಲಿ ಜೀವನು ದ್ವೈತಿಯಾಗಿ, ಷಟ್

A. ಇದರಿಂದಲೇ ಸತ್ತವರ ದೇಹವನ್ನು ಲಿಂಗವಂತರು ಸುಡುವುದಿಲ್ಲ (ಸಂ)

ಸ್ಥಳಗಳನ್ನು ಸಾಧಿಸಿ, ಕಡೆಗೆ ಸಿದ್ಧಾವಸ್ಥೆಯಲ್ಲಿ ಅದ್ವೈತಿಯಾಗಿ ಶಿಖಿಕರ್ಪೂರ ನ್ಯಾಯದಂತೆ ಶಿವನಲ್ಲಿ ಸೇರುವನೆಂಬುದು ವೀರಶೈವ ಸಿದ್ಧಾಂತ. ಇದ ರಿಂದ ಉಪನಿಷತ್ತಿನಲ್ಲಿರುವ ದ್ವೈತ ಹಾಗೂ ಅದ್ವೈತ ಮಂತ್ರಗಳ ಸಾರ್ಥಕ್ಯವೆಂದು ಶಿವಶರಣರು ತಿಳಿಯುತ್ತಾರೆ. ಕಾರಣ ಶ್ರೀಕರಭಾಷ್ಯದಲ್ಲಿ ಹೇಳುವಂತೆ ಸರ್ವಶ್ರುತಿ ಸಮನ್ವಯತ್ವವು ವೀರಶೈವಕ್ಕೆ ಲಭಿಸುತ್ತದೆ ಎಂಬುದು ಇಲ್ಲಿ ಸಮಾಧಾನದ ಸಂಗತಿ.

ಆಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳಿಂದ ಆವೃತ ನಾದ ಜೀವನು, ವೇಧಾ, ಕ್ರಿಯಾ, ಮನು ಎಂಬ ಶಿವದೀಕ್ಷೆಯಿಂದ ಅವನ್ನು ಕಳೆದುಕೊಂಡು, ತ್ರಿವಿಧಲಿಂಗ ಪೂಜೆಯಿಂದ ಕರ್ಮತ್ರಯಗಳನ್ನು (ಆಗಾಮಿ, ಸಂಚಿತ, ಪ್ರಾರಬ್ಧ) ಕಳೆದು ಕೊಂಡು ಮೋಕ್ಷವನ್ನು ಪಡೆಯುವನು. ವಿಶ್ವದ ಎಲ್ಲನದಿಗಳೂ ಸಮುದ್ರದಲ್ಲಿ ಲೀನವಾಗುವಂತೆ, ಸೂರ್ಯ ಕಿರಣಗಳು ಸಂಜೆ ಯಲ್ಲಿ ಸೂರ್ಯನಲ್ಲಿಯೇ ಅಡಗುವಂತೆ, ಕಡೆಗಾಲದಲ್ಲಿ ಎಲ್ಲ ಜೀವಿಗಳೂ ಪರಶಿವನಲ್ಲಿ ಲೀನವಾಗುತ್ತವೆ ಎಂಬುದು ಲಿಂಗವಂತರ ನಂಬುಗೆಯಾಗಿದೆ.

ಪುನರ್ಜನ್ಮವಿಲ್ಲ:–ತ್ರಿವಿಧದಾಸೋಹಿಗಳಾದ ಲಿಂಗವಂತರು, ಹಿಂದಿನ ಜನ್ಮವನ್ನು ನಂಬಿದರೂ ಪುನರ್ಜನ್ಮವನ್ನು ಒಪ್ಪುವುದಿಲ್ಲ. "ಏಕೇನ ಜನ್ಮನಾ ಮುಕ್ತಿಃ ವೀರಾಣಾಂತು ಮಹೇಶ್ವರೀ" ಎಂಬ ಶಿವಾ ಗಮವಾಕ್ಯದಂತೆ ಶಿವಪೂಜೆ ಮತ್ತು ಶಿವದೀಕ್ಷೆಗಳ ಪ್ರಭಾವದಿಂದ ಕರ್ಮರಹಿತರಾಗುವ ವೀರಶೈವರು ಮರಣವನ್ನು ಸ್ವಾಗತಿಸಿ ಗೌರವಿಸುವರು. "ಮರಣವೇ ಮಹಾ ನವಮಿ" ಎಂಬ ಬಸವೇಶ್ವರನ ವಚನದಲ್ಲಿ ಈ ಅರ್ಥವು ತುಂಬಿದೆ. ಇದು ವೀರಶೈವ ಸಿದ್ಧಾಂತದಂತೆ ನಡೆಯುವವರಿಗೆ ಮಾತ್ರ ಅನ್ವಯಿಸುತ್ತದೆ. ಮೃತರ ದೇಹವನ್ನು ಅಲಂಕರಿಸಿ ವಾದ್ಯವೈ ಭವದಿಂದ ರುದ್ರಭೂಮಿಗೆ ಕೊಂಡೊಯ್ಯುವುದು ಈ ಅರ್ಥದಲ್ಲಿಯೇ. ದೇಹ ವನ್ನು ಶಿವಾಲಯದಂತೆ ಪವಿತ್ರವೆಂದು ಭಾವಿಸಿ ಲಿಂಗವಂತರು ಮೃತರ ದೇಹವನ್ನು ಸುಡುವುದಿಲ್ಲ, ಸಮಾಧಿಮಾಡುವರೆಂಬುದು ಇಲ್ಲಿ ಗಮನಾರ್ಹ.

ವರ್ಣಾಶ್ರಮಗಳಿಲ್ಲ :– ವೀರಶೈವರಿಗೆ ನಾಲ್ಕುವರ್ಣಗಳಾಗಲಿ, ನಾಲ್ಕು ಆಶ್ರಮಗಳಾಗಲಿ ಇಲ್ಲ. ಶಿವದೀಕ್ಷೆಯಿಂದ, ಬ್ರಾಹ್ಮಣ, ಕ್ಷತ್ರಿಯ,

ವೈಶ್ಯ, ಶೂದ್ರ ಮುಂತಾದವರ ವರ್ಣಗಳಳಿದು ಹೋಗುತ್ತವೆ. ಲಿಂಗವಂತರು ಅಪ್ರಾಕೃತರಾಗುತ್ತಾರೆ; ಅಲ್ಲದೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಾ ಚರಣೆಗಳಿಗೆ ಅರ್ಹರಾಗಿ ಮೋಕ್ಷಾಧಿಕಾರಿಗಳಾಗುತ್ತಾರೆ.

ಶಿವಸಂಸ್ಕಾರಯುಕ್ತೇಷು ಜಾತಿಭೇದೋ ನವಿದ್ಯತೇ ।
ಕಾಷ್ಠೇಷು ವಹ್ನಿದಗ್ಧೇಷು ಯಥಾ ರೂಪಂ ನವಿದ್ಯತೇ ॥
ತಸ್ಮಾತ್ಸರ್ವಪ್ರಯತ್ನೇನ ಶಿವಸಂಸ್ಕಾರ ಸಂಯುತಃ ।
ಜಾತಿಭೇದಂ ನಕುರ್ವೀತ.......

(ಸಿದ್ಧಾಂತ ಶಿಖಾಮಣಿ, ಪೂ.ನಿ. ಸ್ಥಳ, ೪)

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।
ಇತೀಹ ಜನ್ಮನಾಶೂದ್ರೋದೀಕ್ಷಯಾ ಶಿವತಾಂ ವ್ರಜೇತ್ ॥
ಶಿವದೀಕ್ಷಾಭಿಜಾತಸ್ಯ ಪೂರ್ವಜಾತಿರ್ನವಿದ್ಯತೇ ।

(ಭಕ್ತಾಧಿಕ್ಯ ರತ್ನಾವಳಿ, ಪುಟ ೩೨)

ಈ ಮೇಲಿನ ಶಾಸ್ತ್ರಕಾರರ ಮಾತಿನಂತೆ, ಅಗ್ನಿಯಲ್ಲಿ ಸುಟ್ಟ ಕಟ್ಟಿಗೆಗೆ ಪೂರ್ವಜಾತಿ ಇಲ್ಲದಂತೆ, ಶಿವದೀಕ್ಷೆಯಿಂದ ಪುನೀತನಾದ ಜೀವನಿಗೆ ಪೂರ್ವಜಾತಿಯಿಲ್ಲ ಎಂಬುದು ಸಿದ್ಧಾಂತವಾಗುತ್ತದೆ. ಬಸವೇಶ್ವರರು 'ಪಟ್ಟವಕಟ್ಟಿದಬಳಿಕ ಗುಣವನರಸುವರೆ? "ವರ್ಣಾನಾಂ ಕಿಂ ಪ್ರಯೋಜನಂ" ಎಂಬ ವಚನಗಳಲ್ಲಿ ಈ ಅರ್ಥವನ್ನು ಸ್ಪಷ್ಟಪಡಿಸಿದ್ದಾರೆ. ವ್ಯಾಸ, ವಾಲ್ಮೀಕಿ, ವಸಿಷ್ಠ, ಸೂತ, ವಿಶ್ವಾಮಿತ್ರ ಮೊದಲಾದವರು ಅವರವರ ತಪಸ್ಸಿನಿಂದ, ಸತ್ಕರ್ಮದಿಂದ ಬ್ರಾಹ್ಮಣರ ಮೂಲಪುರುಷರಾದುದನ್ನು ಇಲ್ಲಿ ನಾವು ಗಮನಿಸಬಹುದು.

ಸ್ತ್ರೀ–ಪುರುಷರು ಸಮಾನರು:–ಭಾರತದಲ್ಲಿನ, ಜೈನ, ವೈದಿಕ ಮತಗಳಲ್ಲಿ ಸ್ತ್ರೀಯರಿಗೆ ಮೋಕ್ಷಾಧಿಕಾರವಿಲ್ಲ. ಆದರೆ ವೀರಶೈವರಲ್ಲಿ ಸ್ತ್ರೀ–ಪುರುಷರಿಬ್ಬರೂ ಮೋಕ್ಷಾಧಿಕಾರಿಗಳು. ಈ ಉಭಯರಿಗೂ ಲಿಂಗಧಾರಣ ಮತ್ತು ಶಿವದೀಕ್ಷೆಗಳುಂಟು. ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳಲ್ಲಿ

ತರ ತಮ ಭಾವವಿಲ್ಲ. ಉಪನಿಷತ್ಕಾಲದಲ್ಲಿ, ಬುದ್ಧದೇವನ ಕಾಲದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವಿತ್ತು. ಅನಂತರ ಪುರಾಣಯುಗದಲ್ಲಿ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದಾಯಿತು. "ಜಂತೂನಾಂ ನರಜನ್ಮ ದುರ್ಲಭಂ, -ಅತಃ ಪುಂಸ್ತ್ವಂ" ಎಂದು ಶ್ರೀ ಶಂಕರಾಚಾರ್ಯರು ವಿವೇಕಚೂಡಾ ಮಣಿಯಲ್ಲಿ ಹೇಳಿದ್ದಾರೆ. (ಶ್ಲೋಕ,೨) ಆಚಾರ್ಯರ ಅಂಬೋಣದಲ್ಲಿ ಸ್ತ್ರೀ-ಪುರುಷರ ತರ ತಮ ಭಾವಕ್ಕೆ ಇದು ಸಾಕ್ಷಿಯಾಗಿದೆ. ಆದರೆ ವೀರ ಶೈವಾಚಾರ್ಯರು ಸ್ತ್ರೀ-ಪುರುಷರಿಬ್ಬರೂ ಮನುಷ್ಯತ್ವದಲ್ಲಿ ಸಮಾನ ರೆಂದರಿತು ಅವರಿಗೆ ಸಮಾನಾಧಿಕಾರ ಕೊಟ್ಟಿದ್ದಾರೆ. ಬಸವೇಶ್ವರನಂತೆಯೇ ಅಕ್ಕಮಹಾದೇವಿಯು ಕೂಡ ಅನುಭವ ಮಂಟಪದಲ್ಲಿ ಸಮಾನ ಮನ್ನಣೆ ಪಡೆದುದನ್ನು ಇಲ್ಲಿ ನಾವು ಗಮನಿಸಬಹುದು. ವೀರಶೈವ ಧರ್ಮದ ಹೃದಯವೆನಿಸಿದ ಕಲ್ಯಾಣದ ಅನುಭವ ಮಂಟಪದಲ್ಲಿ (ಕ್ರಿ. ಶ. ೧೧೬೨-೧೧೬೭) ಅಲ್ಲಮ, ಸಂಗನಬಸವ, ಚೆನ್ನಬಸವ, ಮೋಳಿಗೆ ಮಾರಯ್ಯ, ಮಾಚಿದೇವ, ರುದ್ರಮುನಿ, ಸಿದ್ಧರಾಮ ಇವರಿಗೆ ಸರಿಸಮರಾಗಿ, ಅಕ್ಕನಾಗಮ್ಮ, ನೀಲಾಂಬಿಕೆ, ರೇಮವ್ವೆ, ಸತ್ಯಕ್ಕ, ಅಕ್ಕಮ್ಮ, ಲಿಂಗಮ್ಮ, ರಾಣಿ ಮಹಾದೇವಿ ಮೊದಲಾದ ಮಹಿಳೆಯರು ವಿರಾಜಮಾನರಾದುದನ್ನು ವಚನ ಶಾಸ್ತ್ರದಿಂದ ನಾವು ಅರಿಯುತ್ತೇವೆ. ಇದು ಸ್ತ್ರೀ-ಪುರುಷರ ಸಮಾನತೆಯ ಸುಸ್ಪಷ್ಟ ನಿದರ್ಶನವಾಗಿದೆ.

ಕರ್ಮ-ಜ್ಞಾನಗಳೆರಡೂ ಬೇಕು :

ವೈದಿಕರಲ್ಲಿ ಕರ್ಮದಿಂದಲೇ ಮೋಕ್ಷವೆಂದು ಪೂರ್ವಮೀಮಾಂಸಾಕಾರ ಜೈಮಿನಿಯೂ, ಜ್ಞಾನದಿಂದಲೇ ಮೋಕ್ಷವೆಂದು ಉತ್ತರ ಮೀಮಾಂಸಾಕಾರ ವೇದವ್ಯಾಸನೂ, ಅನಂತರ ಶಂಕರಾಚಾರ್ಯರೂ ವಾದಿಸಿರುತ್ತಾರೆ. ಶ್ರೀ ಶಂಕರಾಚಾರ್ಯರು 'ಚಿತ್ತಸ್ಯಶುದ್ಧಯೇ ಕರ್ಮನತು ವಸ್ತೂಪಲಬ್ಧಯೇ' (ವಿವೇಕಚೂಡಾಮಣಿ, ಶ್ಲೋಕ ೧೧). ಎಂದು ಹೇಳಿದ್ದಾರೆ. ಆದರೆ, ವೀರಶೈವರು ಕರ್ಮಜ್ಞಾನ ಇವೆರಡೂ ಸಾಧಕನಿಗೆ ಬೇಕೆನ್ನುತ್ತಾರೆ. 'ಕ್ರಿಯಾಜ್ಞಾನ ಸಮಾಯುಕ್ತಂ ವೀರಶೈವಸ್ಯಲಕ್ಷಣಂ, ಎಂದು ಶಾಸ್ತ್ರಕಾರರೂ, 'ಪರಸ್ತ್ರೀಯನು ನೋಡಬಾರದು ಎಂಬುದು ಜ್ಞಾನ, ಅದರಂತೆ ನಡೆಯುವುದು ಕ್ರಿಯೆ,' ಎಂದು

ಚೆನ್ನ ಬಸವೇಶ್ವರರೂ ಹೇಳಿದ್ದಾರೆ. (ಚೆ.ಬ.ವ.) ಒಂದು ಪಕ್ಷಿಯು ಎರಡು ರೆಕ್ಕೆಗಳ ಸಹಾಯದಿಂದ ತನ್ನ ಗುರಿಯನ್ನು ಸೇರುವಂತೆ ಕರ್ಮಜ್ಞಾನಗಳ ಸಹಾಯದಿಂದ ಮೋಕ್ಷವು ಜೀವನಿಗೆ ಬೇಗನೆ ಸಿಗುವುದೆಂದು ಶಿವ ಶರಣರು ಹೇಳುತ್ತಾರೆ. ಅಲ್ಪ ಪ್ರಯತ್ನದಿಂದ ಮಿಗಿಲಾದ ಮೋಕ್ಷಪ್ರಾಪ್ತಿ ಯಾಗುವುದು ವೀರಶೈವದಲ್ಲಿ ಮಾತ್ರ ಎಂಬುದು ಗಮನಾರ್ಹವಾಗಿದೆ.

ಭಕ್ತಿಯು ಮುಕ್ತಿಗೆ ಸಾಧನ:-

ವೀರಶೈವ ಧರ್ಮದಲ್ಲಿ ಭಕ್ತಿಗೆ ಪ್ರಾಮುಖ್ಯತೆಯಿದೆ. ಬಸವೇಶ್ವರನು ದೇವರನ್ನು ಕುರಿತು "ವೇದಪ್ರಿಯನೂ ಅಲ್ಲ, ನಾದಪ್ರಿಯನೂ ಅಲ್ಲ, ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ" ಎಂದು ತನ್ನ ವಚನದಲ್ಲಿ ಹೇಳಿದ್ದಾನೆ. ಶಿವ ಗೀತೆಯಲ್ಲಿ "ಕೋಟಿ ಜನ್ಮಾರ್ಜಿತೈಃ ಪುಣ್ಯೈಃ ಶಿವೇ ಭಕ್ತಿಃ ಪ್ರಜಾಯತೇ" (ಅಧ್ಯಾಯ ೧. ಶ್ಲೋಕ ೧೬) ಎಂದು ಹೇಳಿದೆ. ಮಹಾಕವಿ ಮಗ್ಗೆ ಮಾಯಿದೇವನು ತನ್ನ ಶತಕತ್ರಯದಲ್ಲಿ 'ಭಕ್ತಿಯು ಮುಕ್ತಿಗೆ ಅತಿ ಸಮೀಪವೆಂದೂ, ಭಕ್ತಿ-ಮುಕ್ತಿಗಳು ಬೀಜವೃಕ್ಷ ನ್ಯಾಯದಂತೆ ಇವೆ ಯೆಂದೂ ಬಸವಾದಿಪ್ರಮಥರು ಅದಕ್ಕಾಗಿಯೇ ಭಕ್ತಿಯನ್ನು ಆಶ್ರಯಿಸಿ ದರೆಂದೂ ಹೇಳಿದ್ದಾನೆ.

"ಏನೆನಲುಂಟು ಭಕ್ತಿಯ ಮಹಾತ್ಮತೆಯುಂ ಶ್ರುತಿ ಶಾಸ್ತ್ರ ಪಂಕ್ತಿ ಯೋಗೇನ ಅಪರಾ ಎನುತ್ತಮುಳ ಭಕ್ತಿಯ ವೈ ಭ ವ ವಂ ಪೊಗಳ್ದು ಸನ್ಮಾನಿಸಿತಾಗಿ ಎಂದೂ..

ಭಕ್ತಿ, ಶಿವಪ್ರಸಾದ ಜನನೀಭವನಂ, ಶಿವನಪ್ರಸಾದವು ಆ ಭಕ್ತಿಗೆ ಜನ್ಮಭೂಮಿ" (ಶತಕತ್ರಯ, ಶಿವಾಧವ ಶತಕಂ, ಪ. ೭-೮) ಎಂದೂ ಹೇಳುವಲ್ಲಿ ಭಕ್ತಿಯ ಮಹಿಮೆಯನ್ನು ಸ್ಪಷ್ಟಪಡಿಸಿದ್ದಾನೆ. ಷಟ್‌ಸ್ಥಲದಲ್ಲಿ ಭಕ್ತ, ಮಹೇಶ, ಪ್ರಸಾದಿ ಈ ಮೂರುಸ್ಥಲಗಳು ಭಕ್ತಿಪ್ರಧಾನವಾಗಿವೆ. ಉಳಿದುವು (ಪ್ರಾಣಲಿಂಗಿ, ಶರಣ,ಐಕ್ಯ) ಜ್ಞಾನ ಪ್ರಧಾನವಾಗಿವೆ. ಆಗಮ ಗಳಲ್ಲಿ ಭಕ್ತಿಯು ಪಂಚಮ ಪುರುಷಾರ್ಥವೆನಿಸಿದೆ.

ಅಹಿಂಸೆ:–ವೀರಶೈವರಲ್ಲಿ ಅಹಿಂಸೆಯು ಮನೆಮಾಡಿಕೊಂಡಿದೆ. ಇದು ವೀರಶೈವಧರ್ಮದ ಮೇಲೆ ಆದ ಜೈನ–ಬೌದ್ಧಧರ್ಮಗಳ ಪರಿಣಾಮವೆನ್ನ ಬಹುದು. ಶ್ರೀ ಬಸವೇಶ್ವರನು "ದಯೆಯಿಲ್ಲದ ಧರ್ಮವಾವುದಯ್ಯಾ ? ದಯೆಯೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯೆಯೇ ಧರ್ಮದ ಮೂಲವು" ಎಂದು ತನ್ನ ವಚನಗಳಲ್ಲಿ ಹೇಳಿದ್ದಾನೆ. ಶಿವಶರಣನಾದ ಸರ್ವಜ್ಞ ಮೂರ್ತಿಯು ತನ್ನ ತ್ರಿಪದಿಗಳಲ್ಲಿ

"ಕೊಲುವ ಧರ್ಮವನೊಯ್ದು ಒಲೆಯೊಳಗೆ ಹಾಕಲಿ ।
ಕೊಲಲಾಗದು ಎಂಬ ಜೈನರಾಮತವು ಎನ್ನ ತಲೆಯಮೇಲಿರಲಿ"

ಎಂದು ಹೇಳಿದ್ದಾನೆ. ವೀರಶೈವರು ಯಜ್ಞಯಾಗಗಳನ್ನೂ, ಪಶುಬಲಿ ಮೊದಲಾದುವುಗಳನ್ನೂ ಮಾಡುವುದಿಲ್ಲ. ಆದಕ್ಕಾಗಿಯೇ ವೇದದ ಕರ್ಮ ಕಾಂಡವನ್ನು ಲಿಂಗವಂತರು ಮಾನ್ಯಮಾಡುವುದಿಲ್ಲ. ವೀರಶೈವರಲ್ಲಿ ಮಾಂಸಾಹಾರ, ಮದ್ಯಪಾನಗಳು ನಿಷೇಧಿಸಲ್ಪಟ್ಟಿವೆ. ಶ್ರೀ ಬಸವೇಶ್ವರನು 'ಕೊಲ್ಲುವವನೇ ಮಾದಿಗ, ಹೊಲಸು ತಿನ್ನುವವನೇ ಹೊಲೆಯ' ಎಂದು ಟೀಕಿಸಿದ್ದಾನೆ. ಲಿಂಗಭೋಗೋಪಭೋಗಿಯಾದ ವೀರಶೈವನು ತಾನು ಸೇವಿಸುವ ಪ್ರತಿಯೊಂದು ಪದಾರ್ಥವನ್ನೂ ಲಿಂಗಕ್ಕೆ ನೈವೇದ್ಯಮಾಡಿ ಪ್ರಸಾದರೂಪದಿಂದ ಸೇವಿಸಬೇಕಾಗಿರುವುದರಿಂದ ಅಪವಿತ್ರ ಪದಾರ್ಥಗಳನ್ನು ಮುಟ್ಟಬಾರದು ಎಂದು ಶಾಸ್ತ್ರಗಳು ಹೇಳಿವೆ.

ಸಮನ್ವಯ ಯೋಗ:–ವೀರಶೈವರು, ದ್ವೈತ–ಅದ್ವೈತ, ಕರ್ಮ, ಜ್ಞಾನ, ಭಕ್ತಿಗಳನ್ನು ಸಮನ್ವಯ ಗೊಳಿಸುವುದರಿಂದ ಇದು 'ಸಮನ್ವಯಯೋಗ' ವೆನಿಸಿದೆ. ರಾಜಯೋಗ, ಹಠಯೋಗ, ಮಂತ್ರಯೋಗ, ಕರ್ಮಯೋಗ ಗಳನ್ನು ಮೀರಿದ ಶಿವಯೋಗವನ್ನು ವೀರಶೈವರು ಅಂಗೀಕರಿಸಿದ್ದಾರೆ. ಇದು ಶಿವಾಗಮಗಳಲ್ಲಿಯೂ, ಶಿವಯೋಗಪ್ರದೀಪಿಕೆಯಲ್ಲಿಯೂ ನಿರೂ ಪಿತವಾಗಿದೆ. ವೀರಶೈವರಲ್ಲಿ ಸಿದ್ಧರಾದವರನ್ನು ಶಿವಯೋಗಿಗಳೆನ್ನುತ್ತಾರೆ. ಹಿರಿಯರಾದವರನ್ನು ಅಣ್ಣ, ಅಕ್ಕ, ತಂದೆ, ತಾಯಿ ಎಂದು ಕರೆಯುತ್ತಾರೆ.

ಕಾಯಕ ತತ್ತ್ವ:–ವೀರಶೈವವು 'ಕಾಯಕ' ತತ್ತ್ವಕ್ಕೆ ಮನ್ನಣೆ ಇತ್ತಿದೆ. 'ಕಾಯಕವೇ ಕೈಲಾಸ' ಎಂದು ಬಸವೇಶ್ವರನು ಹೇಳಿದ್ದಾನೆ. ಶಿವಾ

ರ್ಪಿತ ಬುದ್ಧಿಯಿಂದ 'ಕಾಯಕ' ಮಾಡಿದರೆ, ಸಮಾಜವೂ ದೇಶವೂ ಉನ್ನತಿ ಹೊಂದುವುದೆಂದು ಶಿವಶರಣರ ಮತ. ಬಸವೇಶ್ವರನು ಶ್ರೀಮಂತನಾಗಿದ್ದರೂ "ಭವಿ ಬಿಜ್ಜಳನ ಪದತಳದಲ್ಲಿ ಕುಳಿತು ಸಾವಿರಹೊನ್ನಿಗೋಸುಗವಾಗಿ ಸೇವೆಯನು ಮಾಡುವುದು ಎನ್ನಯ ಹೊಟ್ಟೆಯ ಪಾಡಿಗಲ್ಲ, ಗುರು ಲಿಂಗ ಜಂಗಮದ ಸೇವೆ ಗೋಸುಗವಾಗಿ" ಎಂದು ಹೇಳಿದ್ದಾನೆ. ಶಿವಶರಣರೆಲ್ಲರೂ ಕಾಯಕ ಹಿಡಿದು ಜೀವಿಸಿದರೇ ಹೊರತು ಸೋಮಾರಿಗಳಾಗಿರಲಿಲ್ಲ. ಯಾವ ಕಾಯಕವಾಗಲಿ ಅದರಲ್ಲಿ ತರ ತಮ ಭಾವಗಳಿಲ್ಲವೆಂದು ಬಸವೇಶ್ವರನು ಹೇಳಿದ್ದಾನೆ. ಕಾಯಕವು ವ್ಯಕ್ತಿಯ, ಸಮಾಜದ ಹಾಗೂ ದೇಶದ ಸಂಪದಭಿವೃದ್ಧಿಗೆ ಕಾರಣ ವೆನಿಸುತ್ತದೆ. ಸಂಪತ್ತು ಸಮಾಜಕ್ಕೆ ಪ್ರಾಣಸ್ವರೂಪವೆನಿಸುತ್ತದೆ. 'ಸುಖಸ್ಯ ಮೂಲಂ ಅರ್ಥಃ,' ಅರ್ಥಾಃ ಬಹಿಚರಃ ಪ್ರಾಣಾಃ, ಎಂದು ಶಾಸ್ತ್ರಕಾರರು ಹೇಳಿದ್ದಾರೆ. Money is God, God is in the banks not in the temples ಎಂದು ಆಧುನಿಕರು ಕೂಡ ಹೇಳುತ್ತಿರುವುದು ಇಲ್ಲಿ ಗಮನಾರ್ಹವಾಗಿದೆ. ಕಾಯಕವು ಸಂಪದ ಭಿವೃದ್ಧಿಗೆ ಮಾತೃಸ್ಥಾನ ವೆನಿಸಿದೆ. ಸೋಮಾರಿತನವು ಬಡತನಕ್ಕೆ ಕಾರಣವಾದುದು, 'ಆರಾಂ ಹರಾಂ ಹೈ' ಎಂದು ಪಂಡಿತ ಜವಹರಲಾಲ್ ನೆಹರು ಹೇಳಿದ್ದಾರೆ. ಸೋಮಾರಿಯು ಶಿವ ದ್ರೋಹಿ (ಉಮಯಾ ಸಹಿತಃ ಸೋಮಃ, ಸೋಮಸ್ಯ ಅರಿಃ ಸೋಮಾರಃ) ಎಂದು ಶಿವ ಶರಣರು ಹೇಳಿದ್ದಾರೆ. ಲಿಂಗವು ಪರ ಲೋಕಕ್ಕೂ ಕಾಯಕವು ಈ ಲೋಕಕ್ಕೂ ಸಾಧನವೆಂದು ಶರಣರು ಮನಗಂಡಿದ್ದಾರೆ.

'ಉದ್ಯೋಗಿನಂ ಪುರುಷಸಿಂಹಂ ಉಪೈತಿ ಲಕ್ಷ್ಮೀಃ' ಎಂದು ಭರ್ತೃಹರಿ ಕವಿಯು ಹೇಳಿದ್ದಾನೆ. ಸಂಪತ್ತು, ಸಮಾಜವನ್ನು ಸುಭದ್ರ ಗೊಳಿಸುತ್ತದೆ. ಆಸಂಪತ್ತು ಕಾಯಕದಿಂದ ಲಭಿಸತ್ತುದೆ.

"ಆವ ಕಾಯಕವಾದಡೇನು ? ಶಿವಭಕ್ತನು ಶ್ರೇಷ್ಠನು, ಶೆಟ್ಟಿಯೆಂಬೆನೆ
ಸಿರಿಯಾಳನ ? ಮಡಿವಳನೆಂಬೆನೆ ಮಾಚಯ್ಯನ ? ಡೋಹರನೆಂಬೆನೆ
ಕಕ್ಕಯ್ಯನ ? ಆನು ಹಾರುವನೆಂದೊಡೆ ಕೂಡಲ ಸಂಗಮದೇವ ನಗುವನಯ್ಯ"

ಎಂಬ ವಚನದಲ್ಲಿ ಶಿವಶರಣರೆಲ್ಲರೂ ಸಮಾನರು, ಕಾಯಕನಿಷ್ಠರೆಲ್ಲರೂ ಧನ್ಯರು. ಕಾಯಕದಲ್ಲಿ ತಾರತಮ್ಯ ಭಾವವಿಲ್ಲ ಎಂದು ಬಸವೇಶ್ವರನು ಹೇಳಿದ್ದಾನೆ.

ಅನುಭವಪ್ರಧಾನ ಮತ :- ವೀರಶೈವರು ವೇದಾಗಮ ಪುರಾಣಗಳನ್ನು ನಂಬಿದರೂ ಅವರು ಮುಖ್ಯವಾಗಿ ಅನುಭವ ಪ್ರಧಾನರಾದವರು.

"ವೇದವನು ಹಿರಿದೆಂದು ವಾದವನು ಮಾಡುವಿರಿ,
ವೇದದೊಳಗೇನು ಹಿರಿದುಂಟು ? ಅನುಭವಿಯ ವೇದವೇ ವೇದ"

ಎಂದು ಜನಪ್ರಿಯ ರಾಷ್ಟ್ರಕವಿ ಸರ್ವಜ್ಞಮೂರ್ತಿಯು ಹೇಳಿದ್ದಾನೆ. ಶಿವಶರಣರು ೧೨ ನೆಯ ಶತಕದಲ್ಲಿ ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ, ಜನರ ಅನುಭವ ಜೀವನಕ್ಕೆ ಮಹತ್ವ ಕೊಟ್ಟಿರುತ್ತಾರೆ. ಶಬ್ದಪ್ರಮಾಣವು ಭಿನ್ನತೆಗೆ ಅವಕಾಶವೀಯುತ್ತದೆ. ಆದರೆ ಅನುಭವವು ಸದಾಕಾಲ ಏಕಪ್ರಕಾರವಾಗಿರುತ್ತದೆ ಎಂದು ಶರಣರು ಹೇಳಿದ್ದಾರೆ. ಗ್ರೀಸ್ ದೇಶದ ಸಾಕ್ರಟೀಸ್, ಚೀಣಾ ದೇಶದ ಕಾನ್‌ಫ್ಯೂಷಿಯಸ್, ಭಾರತದ ಬಸವೇಶ್ವರ ಇವರೆಲ್ಲರೂ 'ಸತ್ಯವನ್ನು ದೇವರೆಂದು' ತಮ್ಮ ತಮ್ಮ ಅನುಭವದಿಂದ ಹೇಳಿದ್ದಾರೆ. ಆದುದರಿಂದ ಅನುಭವವು ತ್ರಿಕಾಲಾಬಾಧಿತವಾದುದು. ಅತ್ಯಂತಮಹತ್ವದ್ದು ಎಂಬುದು ಶರಣರ ಅಂಬೋಣವಾಗಿದೆ.

ಪಂಚಸೂತಕಗಳಿಲ್ಲ-:-ಅಸ್ಪೃಶ್ಯತೆಯಿಲ್ಲ:- ಶಿವದೀಕ್ಷೆಯಿಂದ ಶುದ್ಧನಾದ ವೀರಶೈವನು, ಪಂಚಸೂತಕಗಳನ್ನೂ ಅಸ್ಪೃಶ್ಯತೆಯನ್ನೂ A ಮನ್ನಿಸುವುದಿಲ್ಲ. ಮನುಷ್ಯನು ವಿಚಾರಪರನಾಗಬೇಕು. ಪರಮೇಶ್ವರನಿರುವ ಮಾನವನ ದೇಹವನ್ನು ಅಸ್ಪೃಶ್ಯವೆನ್ನಬಾರದೆಂದು ಶಿವಶರಣರು ವಾದಿಸಿದ್ದಾರೆ. ಅನುಭವ ಮಂಟಪದಲ್ಲಿ, ಶಿವನಾಗಿಮಯ್ಯ, ಕಕ್ಕಯ್ಯ, ಹರಳಯ್ಯ ಮೊದಲಾದ ಅಂತ್ಯಜರು ಶಿವದೀಕ್ಷೆಯನ್ನು ಪಡೆದು, ಸ್ಪರ್ಶಮಣಿ ಮುಟ್ಟಿದ ಕಬ್ಬಿಣ ಚಿನ್ನವಾದಂತೆ ಶರಣರಾಗಿ ಧನ್ಯರಾದರೆಂಬುದನ್ನು ನಾವು ಬಸವಪುರಾಣಗಳಲ್ಲಿ ಓದಬಹುದು.

ಮಗ್ಗೆಯ ಮಾಯಿದೇವನೆಂಬ ಆಚಾರ್ಯನು 'ವೀರಶೈವರಲ್ಲಿ ಅಸ್ಪೃಶತೆಯಿಲ್ಲ' ಎಂದು ವಾದಿಸುತ್ತಾ "ಲಿಂಗಧಾರೀ ಸದಾ ಶುಚಿಃ" ಎಂದು ಹೇಳುತ್ತಾನೆ

A. ಜಾತಿ, ಜನನ, ಉಚ್ಛಿಷ್ಟ, ರಜ, ಮರಣ ಇವು ಪಂಚಸೂತಕಗಳು (ಸಂ)

ಶ್ವಪಚನ ದೈವದಂತರಮನೊರ್ಮೆ ವಿಚಾರಿಸಿ ನೋಡೆ ಲೋಕದೊಳ್ ।
ಶ್ವಪಚನೆ ಬಲ್ಲಿಲಾ ಜನದ ಬುದ್ಧಿಗೆ ದೈವಮನೊಲ್ದು ಮುಟ್ಟಿದ ।
ಲ್ಲಿ ಪರಮಶುದ್ಧತಾ ಸ್ಮರಣೆ ಇಲ್ಲದ ಶುದ್ಧ ಸಲೇಪ ಭಾವಮಾ ॥
ಶ್ವಪಚನ ತಟ್ಟು ಮುಟ್ಟ ನೆಡೆಯಲ್ಲಿಯೆ ಬರ್ಪುದರಿಂ ಶಿವಾಧವಾ ॥

(ಶತಕ ತ್ರಯ, ಶಿವಾಧವ ಶತಕ, ಪದ್ಯ ೨೬)

ಮೇಲಿನ ಪದ್ಯದಲ್ಲಿ ಪಂಚಮವರ್ಣದವನು ಒಂದು ದೇವತಾ ವಿಗ್ರಹವನ್ನು ಮುಟ್ಟಿದರೆ ಅದು ಅಪವಿತ್ರವಾಗುವುದು ಎಂಬ ಕರ್ಮ ಭ್ರಾಂತರಮಾತಿನಲ್ಲಿ ದೇವತಾವಿಗ್ರಹದ ಶಕ್ತಿಗಿಂತ ಪಂಚಮನ ಅಸ್ಪೃಶ್ಯತಾ ಶಕ್ತಿ ಅಧಿಕವೆಂದು ಅರ್ಥವಾಗುವುದಿಲ್ಲವೆ ? ಆದುದರಿಂದ ಈ ತರದ ಕರ್ಮಭ್ರಾಂತಿಯು ವಿವೇಕ ರಹಿತವಾದುದು. ಗಂಗೆಯಲ್ಲಿ ಸ್ನಾನಮಾಡಿದ ಪಾಪಿಗಳೆಲ್ಲರೂ ಪರಿಶುದ್ಧರಾಗುತ್ತಾರೆ. ಆದರಿಂದ ಗಂಗೆಗೆ ಅಪವಿತ್ರತೆ ಉಂಟಾಗುವುದೆ ? ಸೂರ್ಯಕಿರಣಗಳು ಚಂಡಾಲನ ಮೇಲೆ ಬಿದ್ದರೆ ಸೂರ್ಯನು ಮೈಲಿಗೆ ಯಾಗುವನೆ ? ಇಲ್ಲ. ಅದರಂತೆ ಒಬ್ಬ ಅಸ್ಪೃಶ್ಯನು ಅಥವಾ ಶೂದ್ರನು ದೇವಾಲಯವನ್ನು ಪ್ರವೇಶಿಸಿದರೆ ಆ ದೇವಾಲಯವು ಮೈಲಿಗೆ ಯಾಗುವುದಿಲ್ಲ, ಅದಕ್ಕೆ ಬದಲಾಗಿ ಅಲ್ಲಿಗೆ ಬಂದ ಆ ಭಕ್ತನು ಉದ್ಧಾರವಾಗುತ್ತಾನೆ ಎಂದು ಮಗ್ಗೆಯ ಮಾಯಿದೇವನು ಹೇಳಿರುವನು.

ಹಿಂದೂಧರ್ಮದಲ್ಲಿ ವೀರಶೈವರ ಸ್ಥಾನ:– ವೀರಶೈವ ಮತವು ಸನಾತನವಾಗಿದ್ದು ಹಿಂದೂಧರ್ಮದ ಒಂದು ಅಂಗವಾಗಿದೆ. ವೇದಾಗಮಗಳನ್ನು ಒಪ್ಪಿಕೊಳ್ಳುವುದರಿಂದ, ದೇವರನ್ನು ಅಂಗೀಕರಿಸುವದರಿಂದ ಇದು ಆಸ್ತಿಕ ಧರ್ಮವೆನಿಸಿದೆ. ಪರಮೇಶ್ವರನ ಉಸಿರಿನಂತಿರುವ ವೇದಗಳು, ಮಾತಿನಂತಿರುವ ಆಗಮಗಳು ಎರಡನ್ನೂ ವೀರಶೈವರು ಒಪ್ಪಿಕೊಂಡಿರುತ್ತಾರೆ. ಅಹಿಂಸಾತ್ಮಕವಾದ ಧರ್ಮವಾದುದರಿಂದ ವೀರಶೈವರಲ್ಲಿ ಯಜ್ಞಯಾಗಾದಿಗಳಿಗೂ, ಮಾಂಸ–ಮದ್ಯಗಳಿಗೂ ಸ್ಥಳವಿಲ್ಲ. ಜೈನರ ಅಹಿಂಸೆ, ಬೌದ್ಧರ ಸಮತೆ, ದ್ರಾವಿಡರ ಭಕ್ತಿ, ಆರ್ಯರ ಜ್ಞಾನ ಇವೆಲ್ಲವುಗಳನ್ನೂ ವೀರಶೈವರಲ್ಲಿ ಕಾಣಬಹುದು. ಈ ದೃಷ್ಟಿಯಿಂದ ವೀರಶೈವವು ಒಂದು

..ರಿಪೂರ್ಣ ಧರ್ಮವೆನಿಸಿದೆ. 'ವೀರಶೈವದಲ್ಲಿ ವಿಶ್ವಧರ್ಮದ ಕುರುಹುಗ ..ಳಿವೆ' ಎಂದು ಪ್ರಾಜ್ಞರು ಹೇಳಿದ್ದಾರೆ. "ಆಸಿಂಧು ಸಿಂಧು ಪರ್ಯಂತ ಯಸ್ಯ ..ಭಾರತ ಭೂಮಿಕಾ | ಪಿತೃಭೂಃ ಪುಣ್ಯಭೂಶ್ಚೈವ ಸವೈ ಹಿಂದುರಿತಿ ..ಸ್ಮೃತಃ" ಎಂಬ ಸಾವರ್ಕರರ ಸಿದ್ಧಾಂತದಂತೆ ಹಿಂದೂಸ್ಥಾನವನ್ನು ಪಿತೃ ..ಭೂಮಿ ಹಾಗೂ ಪುಣ್ಯಭೂಮಿ ಎಂದು ನಂಬಿರುವ ವೀರಶೈವರು ಹಿಂದೂ ..ಧರ್ಮೀಯರೇ ಆಗಿದ್ದಾರೆ. ಸಿಂಹಳದಲ್ಲಿರುವ ವೀರಶೈವರಿಗೆ ಲಂಕೆಯು ಪಿತೃ ..ಭೂಮಿಯಾಗಿಯೂ ಭಾರತವು ಪುಣ್ಯಭೂಮಿಯಾಗಿಯೂ ಇದೆ.

..ವೀರಶೈವ ಮತದ ಸ್ಥಾಪಕರಾರು ?

ವೀರಶೈವ ಮತವು ಪಂಚಾಚಾರ್ಯರಿಂದ ಸ್ಥಾಪನೆಯಾಯಿತೆಂದು ..ಕೆಲವರೂ, ಬಸವೇಶ್ವರನ ಕಾಲದಲ್ಲಿ ರೂಪಿತವಾಯಿತೆಂದು ಮತ್ತೆ ಕೆಲವರೂ ..ಹೇಳುತ್ತಾರೆ. ಆದರೆ ಇದು ಇತಿಹಾಸಕ್ಕೆ ವಿರೋಧವಾದ ಮಾತು. ಶೈವ ..ಸಂಸ್ಕೃತಿಯ ಮೂಲ ಪುರುಷರಾದ, ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ..ಮೊದಲಾದ ಪ್ರಮಥರು, ಸಾನಂದ, ಕುಂಭೋದ್ಭವ, ದಧೀಚಿ ಮೊದಲಾದ ..ಋಷಿಗಳು ವೀರಶೈವರೆಂದು ಪುರಾಣಗಳಲ್ಲಿ ಹೇಳಲಾಗಿದೆ. ತಮಿಳು ನಾಡಿನಲ್ಲಿ ..ಪ್ರಸಿದ್ಧ ಕವಿಯಾದ ತಿರುವಳ್ಳುವರ್ (ಕ್ರಿ.ಪೂ. ೫೦) ವೀರಶೈವನಾಗಿದ್ದಾನೆ. ..ಮದರಾಸ್ ಮೈಲಾಪುರದಲ್ಲಿರುವ ಇವನ ದೇವಾಲಯದಲ್ಲಿ ಇಂದಿಗೂ ವೀರ ..ಶೈವರೇ ಅಲ್ಲಿ ಅರ್ಚಕರಾಗಿದ್ದಾರೆ. ತಿರುವಳ್ಳುವರನ ಪತ್ನಿ ವಾಸುಕಿಯ ..ತಲೆಯಲ್ಲಿ ಇಂದಿಗೂ ಶಿವಲಿಂಗವಿರುವುದನ್ನು ಕಾಣಬಹುದು. ..ವರಹಿತವಾದ ದಕ್ಷಯಾಗವನ್ನು ವೀರಭದ್ರನು ..ನಾಶಮಾಡಿದ ಕಥೆ ಪ್ರಸಿದ್ಧವಾಗಿದೆ. ಅದರ ಹಿಂದೆ ದೊಡ್ಡ ತತ್ತ್ವವಿದೆ. ..ಹಿಂಸಾತ್ಮಕವಾದ ಹಾಗೂ ಶಿವರಹಿತವಾದ ಯಜ್ಞಯಾಗಗಳು ಸಮಾ ..ಜಕ್ಕೆ ಹಿತಕರವಲ್ಲವೆಂದು ಆದರ ತಾತ್ಪರ್ಯ. ಅಂತಹ ಯಜ್ಞಯಾಗಗಳನ್ನು ..ನಿಗ್ರಹಿಸುವುದಕ್ಕಾಗಿಯೇ ವೀರಭದ್ರನ ಅವತಾರವಾಯಿತು. ..ಹೀಗೆ ವೀರಭದ್ರನು ವೀರಶೈವರ ಪರಮಾರಾಧ್ಯ ದೇವತೆಯಾದನು ವೀರಶೈವ ..ಮತವು ಭಾರತೀಯ ದರ್ಶನಶಾಸ್ತ್ರದಲ್ಲಿ ಸುಪ್ರೌಢವೂ ಪ್ರಾಚೀನವೂ ಎನಿಸಿ ..ಕೊಂಡಿದೆ. ಶೈವಧರ್ಮದ ಅಂಗವಾಗಿ ಕ್ರಮಕ್ರಮದಿಂದ ಬಳೆದು ಬಂದಿದೆ. ..ವೀರಶೈವವು-ಸನಾತನವಾದ ಹಿಂದೂ ಧರ್ಮದ ಸಾರಸರ್ವಸ್ವವೆನಿಸಿದೆ.

ಮೂವತ್ತಾರು ತತ್ತ್ವಗಳು–ವೀರಶೈವ ಸಿದ್ಧಾಂತದಲ್ಲಿ ೩೬ ಮೂ
ವಾದ ತತ್ತ್ವಗಳಿವೆ. ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯ
ಮಾಯಾ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ, ಪುರುಷ, ಪ್ರಕೃತಿ,
ಅಹಂಕಾರ, ಬುದ್ಧಿ, ಮನ, ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ,
ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ
ಗಂಧ, ಆಕಾಶ, ವಾಯು, ವಹ್ನಿ, ಸಲಿಲ ಮತ್ತು ಭೂಮಿ. ಈ ಸಂಧ
ರ್ಭದಲ್ಲಿ ವೇದಾಂತಿಗಳು ೨೫ ಮೂಲಭೂತವಾದ ತತ್ತ್ವಗಳನ್ನು ಅಂಗೀಕರಿ
ಸಿರುವುದನ್ನು ನಾವು ಕಾಣಬಹುದು. ಕಾಶ್ಮೀರ ಶೈವದಲ್ಲಿಯೂ ೩೬ ತತ್ತ್ವ
ಗಳಿವೆ ಎಂಬುದು ಇಲ್ಲಿ ಗಮನಾರ್ಹ.

ಸಾಧನೋಪಾಯಗಳು :-ವೀರಶೈವಧರ್ಮದಲ್ಲಿ ಪ್ರತಿಯೊಬ್ಬರೂ ಚರಮ
ಧ್ಯೇಯವಾದ ಮೋಕ್ಷವನ್ನು ಪಡೆಯಬೇಕೆಂದು ಹೇಳಿದ್ದಾರೆ. ಆಮೋಕ್ಷವನ್ನು
ಪಡೆಯಬೇಕೆಂಬ ಜೀವನು, ಮೊದಲು ಶಿವದೀಕ್ಷೆಯಿಂದ ಪುನೀತ ನಾಗಬೇಕು
ಕ್ರಿಯಾ ಪ್ರಧಾನವಾದ ಅಷ್ಟಾವರಣ, ಜ್ಞಾನಪ್ರಧಾನವಾದ ಷಟ್‌ಸ್ಥಲ, ನೀ
ಪ್ರಧಾನವಾದ ಪಂಚಾಚಾರಗಳಿಂದ ಕೂಡಿರಬೇಕು. ವೀರಶೈವ ಶಾಸ್ತ್ರಾನುಸಾ
ವಾಗಿ ಈ ಸಾಧನೋಪಾಯಗಳನ್ನು ಆಚರಿಸುವವನೇ ನಿಜವಾದ ವೀರಶೈ
ನೆನಿಸುವನು. ಹಾಗೂ ಪುನರ್ಜನ್ಮರಹಿವಾದ ಆನಂದಮಯವಾದ ಮೋ
ವನ್ನು ಪಡೆಯುವನು ಎಂದು ಹೇಳಲಾಗಿದೆ.

ಅಷ್ಟಾವರಣ :–ಗುರು, ಲಿಂಗ ಜಂಗಮ, ಪಾದೋದಕ, ಪ್ರಸಾದ, ಭಸ್ಮ
ರುದ್ರಾಕ್ಷ, ಮಂತ್ರ ಎಂಬಿವು ಅಷ್ಟಾವರಣಗಳು. ವೀರಶೈವ ಭಕ್ತನ
ತನ್ನಲ್ಲಿರುವ, ಭಕ್ತಿ, ಜ್ಞಾನ, ವೈರಾಗ್ಯ ಎಂಬ ಸಂಪತ್ತನ್ನು ಉಳಿಸಿಕೊಳ್ಳ
ಕಾವರೆ, ಕಾಮ, ಕ್ರೋಧ, ಲೋಭ ಎಂಬ ಶತ್ರುಗಳಿಂದ ಪಾರಾಗಬೇಕ
ದರೆ ಈ ಅಷ್ಟಾವರಣವೆಂಬ ಎಂಟು ಸುತ್ತಿನ ಕೋಟೆಯಲ್ಲಿರಬೇಕ
"ನಗುರೋಃ ಅಧಿಕಂ, ನಾಸ್ತಿತತ್ತ್ವಂ ಗುರೋಃಪರಂ" ಮೊದಲಾದ ಆಗ
ವಾಕ್ಯಗಳು ಗುರುವಿನ ಹಿರಿಮೆಗೆ ನಿದರ್ಶನ. ಶಿವದೀಕ್ಷಾಧಿಕಾರವು ಗುರು
ಮಾತ್ರವಿದೆ. ವೀರಶೈವರಲ್ಲಿ ಗುರು ಅತ್ಯಧಿಕ ನಾಗಿದ್ದಾನೆ. ಆದುದರಿ
ಅಷ್ಟಾವರಣದಲ್ಲಿ ಗುರು ಪ್ರಥಮನಾಗಿ ಮತ್ತು ಪ್ರಧಾನನಾಗಿದ್ದಾನೆ.

ಿಂಗ:– ಲಿಂಗವು ಪರಬ್ರಹ್ಮ ಸೂಚಕವಾದುದು. ಸ್ಥಲ, ಶೂನ್ಯ, ಬಯಲು ೊದಲಾದುವುಗಳು ಇದಕ್ಕೆ ಪರ್ಯಾಯ ಶಬ್ದಗಳು. ಶಿವಾಗಮಗಳಲ್ಲಿ

ಲೀಯತೇ ಗಮ್ಯತೇ ಯತ್ರ ತ್ರೈಲೋಕ್ಯಂ ಸಚರಾಚರಂ |
ತದೇ ತಲ್ಲಿಂಗ ಮಿತ್ಯುಕ್ತ್ವಂ ಲಿಂಗತತ್ತ್ವ ವಿಶಾರದೈಃ|| ಎಂದು ಹೇಳಿದೆ.

ವೀರಶೈವನಾದವನು, ಇಷ್ಟ, ಪ್ರಾಣ, ಭಾವ ಎಂಬ ಮೂರು ಲಿಂಗಗಳನ್ನು ಸ್ಥೂಲ, ಸೂಕ್ಷ್ಮ, ಕಾರಣ (ತ್ಯಾಗಾಂಗ, ಭೋಗಾಂಗ, ಯೋಗಾಂಗ) ಇವುಗಳಲ್ಲಿ ಧರಿಸಿ ಪೂಜಿಸಬೇಕೆಂದು ಹೇಳಿದೆ. ಶಾಸ್ತ್ರಕಾರರು, ಇಷ್ಟಲಿಂಗವು ಸದ್‌ರೂಪವೆಂದೂ, ಪ್ರಾಣಲಿಂಗವು ಸಚ್ಚಿದ್‌ರೂಪವೆಂದೂ, ಭಾವಲಿಂಗವು ಸಚ್ಚಿದಾನಂದರೂಪವೆಂದೂ ಹೇಳಿರುತ್ತಾರೆ. ಮತ್ತೆ ಈ ಮೂರು ಲಿಂಗ ಗಳು, ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಆಚಾರ ಲಿಂಗ, ಗುರುಲಿಂಗ ಎಂದು ಆರು ಪ್ರಕಾರವಾಗಿವೆ. ಲಿಂಗರೂಪನಾದ ಶಿವನು ಆರು ವಿಧವಾದಂತೆ ಶಕ್ತಿಯೂ ಆರು ಪ್ರಕಾರವಾಗಿದೆ. ಶಾಂತಿಕಲಾ, ಶಾಂತ್ಯತೀತಕಲಾ, ಶಾಂತ್ಯತೀತೋತ್ತರಕಲಾ, ವಿದ್ಯಾಕಲಾ, ಪ್ರತಿಷ್ಠಾಕಲಾ, ನಿವೃತ್ತಿಕಲಾ ಎಂಬಿವು ಆರುಬಗೆಯ ಶಕ್ತಿ ಭೇದಗಳು. ಈ ಆರು ಶಕ್ತಿಗಳೂ, ಆರುಲಿಂಗಗಳ ಅನುಸಂಧಾನದಲ್ಲಿ ಪರ್ಯವಸಾನವಾಗುತ್ತವೆ.

ಜಂಗಮ:–ಅಷ್ಟಾವರಣದಲ್ಲಿ ಮೂರನೆಯ ಸ್ಥಲವು ಜಂಗಮವಾಗಿದೆ. ಜನನಮರಣಾತೀತನಾದವನನ್ನು ಜಂಗಮನೆಂದು ಕರೆಯುತ್ತಾರೆ. ವೀರಶೈವರಲ್ಲಿ ಅನುಭವ ಮಂಟಪದ ಅಧ್ಯಕ್ಷಪೀಠವಾದ ಶೂನ್ಯಸಿಂಹಾಸನ ಪರಂಪರೆಯವರನ್ನು ಜಂಗಮರೆಂದು ಕರೆಯುವ ವಾಡಿಕೆಯಿದೆ. ವೀರಶೈವ ಸಾಹಿತ್ಯದಲ್ಲಿ ಅತಿಥಿಗಳನ್ನೂ 'ಜಂಗಮ' ಎಂದು ಕರೆಯುತ್ತಾರೆ. ಅಷ್ಟಾವರಣದಲ್ಲಿ, ಗುರು, ಲಿಂಗ, ಜಂಗಮ ಇವು ಮೂರೂ ಪೂಜ್ಯ ವಸ್ತುಗಳಾಗಿವೆ.

ತೀರ್ಥ ಮತ್ತು ಪ್ರಸಾದ:–ವೀರಶೈವರಲ್ಲಿ ಜ್ಞಾನಿಗಳಾದ ಗುರು –ಜಂಗಮರನ್ನು ಮನೆಗೆ ಆಹ್ವಾನಿಸಿ ಅವರ ಪಾದಗಳನ್ನು ಪೂಜಿಸಿ, ಅವರ ಪಾದತೀರ್ಥವನ್ನು ಸೇವಿಸುವ ಪರಿಪಾಠವಿದೆ. ಇದರಿಂದ ಭಕ್ತರು ಕೃತಾರ್ಥರಾಗುವರೆಂದು ನಂಬಲಾಗಿದೆ. ಲಿಂಗವಂತರು ಪ್ರತಿಯೊಂದುವಸ್ತುವನ್ನೂ

ಲಿಂಗಕ್ಕೆ ಸಮರ್ಪಿಸಿಯೇ ಭುಂಜಿಸುವುದರಿಂದ ಅದು ಪ್ರಸಾದವಾಗುತ್ತದೆ. ಲಿಂಗವಂತ ಧರ್ಮದಲ್ಲಿ ಈ ತೀರ್ಥ ಪ್ರಸಾದಗಳು ಪೂಜೆಯ ಪರಿಣಾಮ ವಸ್ತುಗಳಾಗಿವೆ. ಆದ್ದರಿಂದಲೇ ಲಿಂಗವಂತರು, ಲಿಂಗಮುಖಿಗಳು, ಲಿಂಗ ಭೋಗೋಪಭೋಗಿಗಳು. ತೀರ್ಥಪ್ರಸಾದಗಳು ಪೂಜೆಯ ಪರಿಣಾಮಗಳು.

ವಿಭೂತಿ:–ಇದನ್ನು 'ಭಸ್ಮ' ಎಂದು ಸಹ ಕರೆಯುತ್ತಾರೆ. ಶಿವ ಪೂಜೆಯ ಮೊದಲು ಭಕ್ತನು ದೇಹವನ್ನು ವಿಭೂತಿಯಿಂದ ಅಲಂಕರಿಸಿ ಶಿವಪೂಜೆಯನ್ನು ಮಾಡಬೇಕೆಂದು ನಿಯಮವಿದೆ. 'ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ' ಎಂದು ಬಸವೇಶ್ವರನು ಹೇಳಿದ್ದಾನೆ. ಭಸ್ಮವು ಪಾಪಗಳನ್ನು ನಾಶಮಾಡತಕ್ಕುದು. ಭಸ್ಮವು ಪಾಪಗಳನ್ನು ಸುಡತಕ್ಕುದು. ಇದು 'ಅಗ್ನಿಯ ವೀರ್ಯ' ಎಂದು ಶಿವಗೀತೆಯಲ್ಲಿ ಹೇಳಿದೆ.

ರುದ್ರಾಕ್ಷಿ:–ವೈಷ್ಣವರಿಗೆ ತುಳಸಿ ಮಣಿಯು ಪೂಜ್ಯವಸ್ತುವೆನಿಸುವಂತೆ ವೀರಶೈವರಲ್ಲಿ ರುದ್ರಾಕ್ಷಿಯು ಪರಮ ಪೂಜ್ಯವೆನಿಸಿದೆ. ಇದು ಪಾಪಪರಿಹಾರಕವೆಂದು ಭಕ್ತರು ಭಾವಿಸಿದ್ದಾರೆ. ಜಪಕ್ಕೂ ರುದ್ರಾಕ್ಷಿಯು ಅವಶ್ಯವಿದೆ. ಇದು ರುದ್ರನ ಕಣ್ಣಿನಿಂದ ಹುಟ್ಟಿದ ಕಾರಣ ರುದ್ರಾಕ್ಷಿ ಎಂದಾಗಿದೆ. ಇದರ ಸಂಪರ್ಕದಿಂದ ಹಲವು ರೋಗಗಳು ಹೋಗುತ್ತವೆ.

ಮಂತ್ರ:–'ಓಂ ನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ವೀರಶೈವರು ಭಕ್ತಿಯಿಂದ ಪಠಿಸುತ್ತಾರೆ. ಇದು ಮುಕ್ತಿದಾಯಕವು ಎಂದು ನಂಬಿರುತ್ತಾರೆ. "ಮನನಾತ್ ತ್ರಾಯತಿ ಇತಿ ಮಂತ್ರಃ" ಎಂಬ ಅರ್ಥದಂತೆ ಈ ಪ್ರಣವಯುಕ್ತ ಪಂಚಾಕ್ಷರೀಮಂತ್ರ ಸಮಸ್ತ ಪಾಪಪರಿಹಾರಕವೆಂದೂ ಸಿದ್ಧಿದಾಯಕವೆಂದೂ ವೀರಶೈವರು ನಂಬಿದ್ದಾರೆ. ಇಲ್ಲಿ ಸಾನಂದ ಮುನಿಯ ಮತ್ತು ಸತ್ಯೇಂದ್ರ ಚೋಳನ ಕಥೆಗಳನ್ನು ಸ್ಮರಿಸಿಕೊಳ್ಳಬಹುದು. ಭಸ್ಮ, ರುದ್ರಾಕ್ಷಿ, ಮಂತ್ರ ಇವು ಪೂಜೆಗೆ ಸಾಧನಗಳು.

ಪಂಚಾಚಾರಗಳು :– ವೀರಶೈವರಲ್ಲಿ ನೀತಿ ಪ್ರಧಾನವಾದ ಐದು ಆಚಾರಗಳನ್ನು 'ಪಂಚಾಚಾರ' ಎಂದು ಕರೆಯುತ್ತಾರೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು

...ಜ; ಅನ್ಯರ ನಿಂದಿಸ ಬೇಡ, ತನ್ನ ಬಣ್ಣಿಸ ಬೇಡ, ಇದಿರು ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ" ಎಂದು ಹೇಳಿರುತ್ತಾನೆ. ಈ ವಚನದಲ್ಲಿ ಪಂಚಾಚಾರಗಳ ತಾತ್ಪರ್ಯವು ಅಡಗಿದೆ. 'ಸದಾಚಾರ' ಅಂದರೆ ಪರದ್ರವ್ಯ, ಪರಸ್ತ್ರೀ, ಪರವಸ್ತುಗಳನ್ನು ಬಯಸದೆ ಇರುವುದು. 'ಶಿವಾಚಾರ' ಅಂದರೆ ಶಿವಶರಣರ ಧರ್ಮ ತತ್ತ್ವಗಳಂತೆ ನಡೆಯುವುದು. 'ಲಿಂಗಾಚಾರ' ಅಂದರೆ ಲಿಂಗಪೂಜಾನಿಷ್ಠನಾಗಿರುವುದು. 'ಭೃತ್ಯಾಚಾರ' ಎಂದರೆ 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ವಿನಯಗುಣದಿಂದ ವರ್ತಿಸುವುದು. 'ಗಣಾಚಾರ' ಅಂದರೆ, ಶಿವಧರ್ಮ ಶಿವತತ್ತ್ವಗಳ ರಕ್ಷಣೆಗೆ ಕಂಕಣ ಕಟ್ಟುವುದು. ಈ ಪಂಚಾಚಾರಗಳು ಸಮಾಜದಲ್ಲಿ ಜನರು ಉತ್ತಮ ರೀತಿಯಿಂದ ನಡೆಯಲು ಬೋಧಿಸುತ್ತವೆ. ಹಾಗೂ ಸಮಾಜವನ್ನು ನೀತಿಯಿಂದ ಸುಭದ್ರಗೊಳಿಸುತ್ತವೆ.

ಷಟ್‌ಸ್ಥಲಗಳು :- ವೀರಶೈವ ಧರ್ಮದಲ್ಲಿ ಈ ಷಟ್‌ಸ್ಥಲಗಳಿಗೆ ಅತ್ಯಂತ ಮಹತ್ವವಿದೆ. ಒಂದು ರೀತಿಯಿಂದ ವೀರಶೈವವನ್ನು 'ಷಟ್‌ಸ್ಥಲ ಧರ್ಮ' ಎಂದು ಸಹ ಕರೆಯುತ್ತಾರೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬಿವೇ ಆ ಆರು ಸ್ಥಲಗಳು. ಷಟ್‌ಸ್ಥಲವು ವೀರಶೈವರ ಲಿಂಗೋಪಾಸನಾ ಸಾಧನದ ಮಾರ್ಗ. ಶಿವಶರಣರು ಈ ಷಟ್‌ಸ್ಥಲ ವಿಚಾರವನ್ನು ತಮ್ಮ ವಚನಶಾಸ್ತ್ರದಲ್ಲಿ ಬಹಳವಾಗಿ ಹೇಳಿರುವರು. ಈ ಷಟ್‌ಸ್ಥಲ ತತ್ತ್ವಗಳು ಮೊಟ್ಟಮೊದಲು, ವಾತುಲ, ಪಾರಮೇಶ್ವರ ಮತ್ತು ಸೂಕ್ಷ್ಮಾಗಮಗಳಲ್ಲಿ ನಿರೂಪಿತವಾದುವು. ಅನಂತರ ಶಿವಶರಣರ ವಚನಶಾಸ್ತ್ರದಲ್ಲಿ ವಿಸ್ತಾರವಾದುವು. ಭಕ್ತ ಮತ್ತು ಮಹೇಶ ಸ್ಥಲಗಳಿಗೆ ಇಷ್ಟಲಿಂಗಪೂಜೆ ಮುಖ್ಯ. ಪ್ರಸಾದಿ, ಪ್ರಾಣಲಿಂಗಿ ಸ್ಥಳಗಳಿಗೆ ಪ್ರಾಣಲಿಂಗಾನುಸಂಧಾನವೇ ಪ್ರಾಧಾನ್ಯ. ಶರಣ, ಐಕ್ಯಸ್ಥಲಗಳಿಗೆ ಭಾವಲಿಂಗದಲ್ಲಿ ಬೆರೆದು ತಲ್ಲೀನನಾಗುವುದೇ ಮುಖ್ಯ. ಕರಸ್ಥಲದಲ್ಲಿ ಇಷ್ಟಲಿಂಗ, ಉರಸ್ಥಲದಲ್ಲಿ ಪ್ರಾಣಲಿಂಗ, ಶಿರಸ್ಥಲದಲ್ಲಿ ಭಾವಲಿಂಗ, ವನ್ನು ಅಳವಡಿಸಿ ಅರ್ಚಿಸಬೇಕೆಂದು ಶರಣರು ಹೇಳುತ್ತಾರೆ. ಈ ಷಟ್

ಸ್ಥಲ ಸಾಧನೆಯನ್ನು ಕುರಿತು ಶರಣರು ಸುಂದರವಾಗಿ ಹೇಳಿರುತ್ತಾರೆ. ಭಕ್ತನಾದವನು, ತನ್ನ, ತನು, ಮನ, ಧನದ ಆಸೆ ಅಳಿದಿರಬೇಕು, ಮಹೇಶ್ವರ ನಾದರೆ ಪರ ಧನ, ಪರ ಚಿಂತೆ, ಪರಾಂಗನೆಯರ ಎಡೆಯುಳಿಯದೆ ಉಳಿದಿರ ಬೇಕು. ಪ್ರಸಾದಿಯಾದೊಡೆ ಸುಖ, ರುಚಿ, ಮೊದಲಾದುವನ್ನು ಮರೆತು ಪ್ರಸಾದ ಘಟವಳಿಯದೆ ಉಳಿದಿರಬೇಕು, ಪ್ರಾಣಲಿಂಗಿಯಾದೊಡೆ ಪ್ರಾಣ ವನ್ನು ಲಿಂಗದೊಳಗೆ ಬೆರಸಿ ಬೇರಿಲ್ಲದೆ ಇರಬೇಕು, ಐಕ್ಯನಾದೊಡೆ ಆಪ್ಯಾಯನದೆಡೆಗೆ ಸುಖದುಃಖಮಂ ತಾಳದೆ ನಿಭ್ರಾಂತನಾಗಿರಬೇಕು. ಮತ್ತೊಬ್ಬ ವಚನಕಾರನು, 'ಭಕ್ತಂಗೆ ಕ್ರಿಯೆ, ಮಹೇಶಂಗೆ ನಿಶ್ಚಯು, ಪ್ರಸಾದಿಗೆ ಅರ್ಪಣ. ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ' ಇವು ಮುಖ್ಯ ಲಕ್ಷಣಗಳೆಂದು ಹೇಳಿರುತ್ತಾನೆ. ಭಕ್ತನಿಗೆ ವಿಶ್ವಾಸವು, ಮಹೇಶ್ವರನಿಗೆ ನಿಷ್ಠೆಯು, ಪ್ರಸಾದಿಗೆ ಸಾವಧಾನವು, ಪ್ರಾಣಲಿಂಗಿಗೆ ಸ್ವಾನುಭಾವವು, ಶರಣನಿಗೆ ಅರಿವು, ಐಕ್ಯನಿಗೆ ಸಮರಸಭಾವವು ಇರಬೇಕೆಂದು ಅಲ್ಲಮಪ್ರಭು ಹೇಳುತ್ತಾನೆ. (ಅ.ಪ್ರ.ವ.) 'ಕೀಟಭೃಂಗನ್ಯಾಯದಂತೆ' 'ದುಂಬಿ ಪಿಡಿದಿಹ ಪುಳುವು ದುಂಬಿಯನೆ ನೆನೆ ನೆನೆದು ದುಂಬಿಯೇ ತಾನಾದ ರೀತಿಯಂತೆ' ಸಾಧಕನು ಈ ಷಟ್‌ಸ್ಥಲ ಮಾರ್ಗ ದಿಂದ;ಶಿವಯೋಗದಲ್ಲಿ ನಡೆದು ಕಡೆಗೆ ತಾನು ಶಿವನೇ ಆಗುತ್ತಾನೆ (ಶಿವೋಹಂ) ಎಂದು ಆಗಮಗಳು ಹೇಳಿವೆ. ಮತ್ತು ಅನುಭವಿಗಳು ಕೂಡ ಹೇಳಿದ್ದಾರೆ.

ಈ ಮೇಲೆ ಹೇಳಿದ ರೀತಿಯಿಂದ ಕ್ರಿಯಾಪ್ರಧಾನವಾದ ಅಷ್ಟಾ ವರಣ,-ನೀತಿಪ್ರಧಾನವಾದ ಪಂಚಾಚಾರ, ಜ್ಞಾನ ಪ್ರಧಾನವಾದ ಷಟ್ ಸ್ಥಲ ಮಾರ್ಗಗಳನ್ನು ಅರಿತು ಆಚರಿಸಿದವನು, ವೀರಶೈವ ಮಾರ್ಗದಿಂದ ಸುವರ್ಣಾಲಂಕಾರ ನ್ಯಾಯದಂತೆ ಮೋಕ್ಷವನ್ನು ಪಡೆಯುತ್ತಾನೆ. 'ಏಕೇನ ಜನ್ಮನಾ ಮುಕ್ತಿಃ ವೀರಾಣಾಂತು ಮಹೇಶ್ವರೀ' ಎಂಬ ಆಗಮದ ಮಾತು ಇಂತಹವರಿಗೆ ಮಾತ್ರ ಅನ್ವಯಿಸುತ್ತದೆ.

ನೂರೊಂದು ಸ್ಥಲಗಳು:- ಸಾಧಕನ ಸೌಕರ್ಯಕ್ಕಾಗಿ ಈ ಆರು, ನೂರೊಂದು ಸ್ಥಲ ಎನಿಸಿವೆ. ಅಂಗ ಸ್ಥಲ ೪೪, ಲಿಂಗಸ್ಥಲ ೫೭. ವೀರಶೈವ ದಲ್ಲಿ ಜೀವನು ಅಂಗನೆಂದೂ, ಬ್ರಹ್ಮನು ಲಿಂಗನೆಂದೂ ವ್ಯವಹರಿ

ಲ್ಪಟ್ಟದ್ದಾನೆ. ಈ ನೂರೊಂದು ಸ್ಥಲದ ವಿವರವು, ಸಿದ್ಧಾಂತ ಶಿಖಾಮಣಿ, ಗಣಭಾಷಿತ ರತ್ನಮಾಲೆ, ಏಕೋತ್ತರ ಶತಸ್ಥಲ ಮೊದಲಾದ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಅಗಸ್ತ್ಯಮುನಿ ಬರೆದಂತೆ ತಿಳಿದು ಬಂದಿರುವ 'ಅಗಸ್ತ್ಯ ಸೂತ್ರ ವೃತ್ತಿ'ಯಲ್ಲಿಯೂ, ಏಕೋರಾಮನು ಬರೆದಿರುವ 'ಅಧಿಕರಣ' ಭಾಷ್ಯದ ದಲ್ಲಿಯೂ, ಪಾಲ್ಕುರಿಕೆ ಸೋಮನಾಥನು ಬರೆದಿರುವ 'ಬಸವರಾಜೀಯ'ದ ಲ್ಲಿಯೂ ಈ ಏಕೋತ್ತರ ಶತಸ್ಥಲದ ವಿಷಯವು ನಿರೂಪಿತವಾಗಿದೆ. ಭರತ ಖಂಡದ ಯಾವ ದರ್ಶನದಲ್ಲಿಯೂ ಈ ತರದ ಸ್ಥಲಗಳ ವ್ಯವಸ್ಥೆ ಇಲ್ಲವೆಂದು ಹೇಳ ಬಹುದು. ವೀರಶೈವ ಧರ್ಮದಲ್ಲಿ, ಬ್ರಹ್ಮ, ಲಿಂಗ, ಸ್ಥಲ, ಶೂನ್ಯ, ಬಯಲು, ನಿರ್ಬಯಲು, ನಿಃಶೂನ್ಯ ಇವು ಪರಬ್ರಹ್ಮವಾಚಕಶಬ್ದಗಳು.

"ಈ ವೀರಶೈವಕ್ಕೆ ಭಕ್ತನು ಅಧಿಕಾರಿ, ಮುಕ್ತಿಯೇ ಪ್ರಯೋಜನ, ಶಿವಜ್ಞಾನವೇ ವಿಷಯ, ಪ್ರಕಾಶ್ಯ ಪ್ರಕಾಶ ಭಾವವೇ ಸಂಬಂಧ" ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದೆ.

ವೇದಾಂತ ಶಾಸ್ತ್ರವನ್ನು ಅಧ್ಯಯನ ಮಾಡುವವನು ಬ್ರಹ್ಮಾದ್ವೈತ ಮತ್ತು ಶಿವಾದ್ವೈತಗಳಿಗೆ ಇರುವ ವ್ಯತ್ಯಾಸವನ್ನು ತಿಳಿಯುವದು ಆವಶ್ಯಕ. ಇಲ್ಲಿ ಅವುಗಳ ಸಾಮ್ಯವೈಷಮ್ಯಗಳನ್ನು ಸಂಗ್ರಹವಾಗಿ ನಿರೂಪಿಸಿದೆ.

ಬ್ರಹ್ಮಾದ್ವೈತ

೧. ಬ್ರಹ್ಮ ಸತ್ಯ, ಜಗತ್ ಮಿಥ್ಯಾ
೨. ಜ್ಞಾನದಿಂದ ಮಾತ್ರ ಮೋಕ್ಷ ಪ್ರಾಪ್ತಿ
೩. ಸೂರ್ಯ, ಅಂಬಿಕೆ, ವಿಷ್ಣು, ಗಣಪತಿ, ಮಹೇಶ್ವರ ಎಂಬ ಐವರನ್ನು ಅರ್ಚಿಸುವರು
೪. ಯೋಗದಿಂದ ಮುಕ್ತಿ ಇಲ್ಲ.
೫. ಜಿಜ್ಞಾಸ್ಯ ವಸ್ತುವು ನಿರ್ವಿಶೇಷ ಬ್ರಹ್ಮ
೬. ಅಂತಃಕರಣ ವೃತ್ತಿಗಳು ಅನಿತ್ಯ
೭. ಅವಿದ್ಯೆಯು ಬ್ರಹ್ಮಕ್ಕೆ ಭಿನ್ನವಾದುದು
೮. ಸಾಧನ ಚತುಷ್ಟಯವುಳ್ಳವರು ಮಾತ್ರ ಮೋಕ್ಷಕ್ಕೆ ಅಧಿಕಾರಿಗಳು

೯. ಬ್ರಹ್ಮನ ವಿವರ್ತವೇ ಜಗತ್ತು
೧೦. ಅಂತಃಕರಣದಲ್ಲಿ ಬ್ರಹ್ಮದ ಪ್ರತಿಬಿಂಬವೇ ಜೀವ
೧೧. ಚಿಚ್ಛಕ್ತಿಯೇ ಬ್ರಹ್ಮ
೧೨. ಬ್ರಹ್ಮವು ಅಹಂ ಪದಾರ್ಥವಲ್ಲ
೧೩. ಅನರ್ಥ ಭೂತಗಳಾದ ಚಿತ್ತಾದಿಗಳು ನಾಶವಾಗಿ ಪರಮಾನಂದ ಪ್ರಾಪ್ತಿಯೇ ಮೋಕ್ಷ
೧೪. ಅದ್ವೈತವಾದ ಮಾತ್ರ ಮೋಕ್ಷಕ್ಕೆ ಸಾಧನ
೧೫. ವೇದಗಳು ಮಾತ್ರ ಪ್ರಮಾಣ
೧೬. ವರ್ಣಾಶ್ರಮವುಂಟು
೧೭. ಪ್ರಾಕೃತ ಸೃಷ್ಟಿ
೧೮. ಸ್ತ್ರೀಯರಿಗೆ ಮೋಕ್ಷಾಧಿಕಾರವಿಲ್ಲ
೧೯. ಯಜ್ಞ ಯಾಗಗಳಲ್ಲಿ ಪಶುಹಿಂಸೆಯುಂಟು
೨೦. ಶಬ್ದ ಪ್ರಮಾಣ ಪ್ರಧಾನ

ಶಿವಾದ್ವೈತ

೧. ಬ್ರಹ್ಮವೂ ಸತ್ಯ ಜಗತ್ತೂ ಸತ್ಯ
೨. ಕರ್ಮ ಮತ್ತು ಜ್ಞಾನ ಎರಡೂ ಮೋಕ್ಷಕ್ಕೆ ಸಾಧನಗಳು
೩. ಮಹೇಶ್ವರನನ್ನು ಮಾತ್ರ ಪೂಜಿಸುವರು. ಶಿವ ಸರ್ವೋತ್ತಮತ್ವವನ್ನು ಹೇಳುವರು.
೪. ಶಿವಯೋಗದಿಂದ ಮಾತ್ರ ಮುಕ್ತಿ
೫. ಸ ವಿಶೇಷ ಬ್ರಹ್ಮವೇ ಜಿಜ್ಞಾಸ್ಯ ವಸ್ತುವು
೬. ಅಂತಃಕರಣ ಪ್ರವೃತ್ತಿಗಳು ನಿತ್ಯ
೭. ಅವಿದ್ಯೆಯು ಬ್ರಹ್ಮಕ್ಕೆ ಭಿನ್ನವಲ್ಲ
೮. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಸಂಪನ್ನರು ಮಾತ್ರ ಮೋಕ್ಷಾಧಿಕಾರಿಗಳು
೯. ಜಗತ್ತು ಬ್ರಹ್ಮದ ಪರಿಣಾಮ
೧೦. ಚಿಚ್ಛಕ್ತಿಯ ಸಂಕೋಚ ರೂಪ ವಿಶಿಷ್ಟವೇ ಜೀವ

೧೧. ಅಹಂ ಪದಾರ್ಥವೇ ಬ್ರಹ್ಮ.
೧೨. ಚಿತ್ತಾದಿಗಳು ನಾಶವಾಗದೆ ವಿಕಾಸವಾಗಿ ಶಿವಪ್ರಾಪ್ತಿಯೇಮೋಕ್ಷ
೧೩. ದ್ವೈತಾದ್ವೈತ ಎರಡೂ ಮೋಕ್ಷಕ್ಕೆ ಸಾಧನ
೧೪. ಸಾಧಕಾವಸ್ಥೆಯಲ್ಲಿ ದ್ವೈತ, ಸಿದ್ಧಾವಸ್ಥೆಯಲ್ಲಿ ಅದ್ವೈತ
೧೫. ವೇದಾಗಮಗಳೆರಡೂ ಪ್ರಮಾಣ
೧೬. ವರ್ಣಾಶ್ರಮಗಳಿಲ್ಲ
೧೭. ಅಪ್ರಾಕೃತ ಸೃಷ್ಟಿ
೧೮. ಸ್ತ್ರೀಯರಿಗೂ ಮೋಕ್ಷಾಧಿಕಾರವಿದೆ
೧೯. ಯಜ್ಞಗಳೂ ಯಾಗಗಳೂ ಇಲ್ಲ
೨೦. ಅನುಭಾವಪ್ರಧಾನ

ವೀರಶೈವ ಮತಚರಿತ್ರೆ:–ವೀರಶೈವ ಧರ್ಮವು ವೇದಕ್ಕಿಂತಲೂ ಪೂರ್ವವಾದ ಶೈವಧರ್ಮದ ಪರಂಪರೆಗೆ ಸೇರಿದುದು. ಶೈವದ ಉತ್ಕ್ರಾಂತಿಯ ಫಲವೇ ವೀರಶೈವ. ವೇದಗಳು ಜನ್ಮಪ್ರಧಾನವಾದ ವರ್ಣಾಶ್ರಮ ಪ್ರಧಾನವಾದುವು. ಆಗಮಗಳು ದೀಕ್ಷಾಪ್ರಧಾನವಾದ ಅತಿವರ್ಣಾಶ್ರಮ ಪ್ರಧಾನವಾದುವು.

ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ |
ಆತ್ಮ ಜೀವಸಮುತ್ಪನ್ನಂ ವರ್ಣಾನಾಂ ಕಿಂ ಪ್ರಯೋ ಜನಂ ||

(ಬಸವನಾಳ್ ಸಂಪಾದಿತ ಬಸವೇಶ್ವರ ವಚನ, ಪುಟ ೧೫೭)

ಎಂಬುದು ಆಗಮದ ಸಂದೇಶ. ಬಸವಾದಿಗಳು ಆಗಮದ ಅನುಯಾಯಿಗಳು. ವೀರ, ನಂದಿ, ಭೃಂಗಿ, ಸ್ಕಂದ, ವೃಷಭ ಎಂಬುವರು ವೀರಶೈವರ ಪಂಚ ಗೋತ್ರ ಪುರುಷರು. ವೈದಿಕರು ಸಪ್ತಋಷಿಗಳಗೋತ್ರವನ್ನು ಹೇಳುತ್ತಾರೆ. ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಶಿಷ್ಠ ಇವರು ಆ ಸಪ್ತರ್ಷಿಗಳು. ವೀರಶೈವರು ಪಂಚ ಪ್ರಮಥರ ಗೋತ್ರಗಳನ್ನು ಅಂಗೀಕರಿಸಿದ್ದಾರೆ. ಲಿಂಗವಂತರು ಅಪ್ರಾಕೃತ ಸೃಷ್ಟಿಗೆ ಸೇರಿದವರು. ಆದ್ದರಿಂದಲೇ ಅವರು ಅತಿವರ್ಣಾಶ್ರಮಿಗಳು. ವೀರಶೈವರು ಹಿಂದುಗಳಾದರೂ, ಜೈನಧರ್ಮದಂತೆ, ಬೌದ್ಧ, ಸಿಕ್ಕರಂತೆ ಸ್ವತಂತ್ರ

ಪಂಥವುಳ್ಳವರು. ತಮ್ಮದೇ ಆದ ದರ್ಶನದಿಂದ, ಶಾಸ್ತ್ರಸಂಪತ್ತಿ ನಿಂದ ವೀರಶೈವರು ಭಾರತೀಯ ವೇದಾಂತ ಪ್ರಪಂಚಕ್ಕೆ ಮಿಗಿಲಾದ ಕಾಣಿಕೆಯನ್ನು ಕೊಟ್ಟಿರುತ್ತಾರೆ. ಭಾರತೀಯ ದರ್ಶನ ಸಂಪತ್ತನ್ನು ಪರಿಪೂರ್ಣಗೊಳಿಸಿದ್ದಾರೆ.

ವೀರಶೈವರು ಸ್ಥಾವರಕ್ಕಿಂತ ಜಂಗಮ ಅಧಿಕವೆಂದು ನಂಬಿರುತ್ತಾರೆ. 'ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ' ಎಂಬುದು ಅವರ ಸಿದ್ಧಾಂತ. 'ಲಿಂಗಮುಖ ಜಂಗಮ' ಎಂದು ಬಸವೇಶ್ವರನು ಹೇಳಿ ದ್ದಾನೆ. ಗುರು ಲಿಂಗ ಜಂಗಮ ಸೇವೆಯನ್ನು 'ತ್ರಿವಿಧ ದಾಸೋಹ, ಎಂದು ಕರೆಯಲಾಗಿದೆ. ವೀರಶೈವ ಧರ್ಮ ಸ್ವರೂಪನಾದ ಬಸವೇಶ್ವ ರನು 'ಅನಾದಿ ಭಕ್ತ' ವೀರಶೈವ ನಿರ್ಣಯ ಪರಮಾವತಾರ. Basava is the hart of veerashivism ಎನಿಸಿ ಕೊಂಡಿದ್ದಾನೆ. ಶ್ರೀ ಬಸ ವಾದಿ ಪ್ರಮಥರು ಈ ಮಾರ್ಗದಲ್ಲಿ ನಡೆದು ಧನ್ಯರಾಗಿದ್ದಾರೆ. "ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ, ಉಣುವ ಜಂಗಮ ಬರಲು ಉಣಬಡಿಸಲೊಲ್ಲದೆ ಉಣದಿರ್ಪ ಲಿಂಗಕೆ, ಎಡೆಮಾಡಿ ನಮಿಸುವ ಬಣಗುಗಳ ನೋಡ" ಎಂಬ ಶರಣರ ವಚನಗಳಲ್ಲಿ ಜಂಗಮಪೂಜೆಯ ಮಾಹಾತ್ಮ್ಯವು ತಿಳಿದು ಬಂದಿದೆ. ಸ್ಥಾವರಕ್ಕಿಂತ ಜಂಗಮ ವಸ್ತುಗಳಲ್ಲಿ ಬಹ್ಮಚೈತನ್ಯವು ಅಧಿಕವಾಗಿದೆ. ಎಂಬುದು ಉಪನಿಷತ್ತುಗಳ ಅಭಿಪ್ರಾಯ. ಉತ್ತರ ಭಾರತದಲ್ಲಿ ವೀರಶೈವರನ್ನು 'ಜಂಗಮರು' ಎಂದು ಕರೆಯುತ್ತಾರೆ. ಕಾಶಿ, ಕೇದಾರ, ಪ್ರಯಾಗ, ರಾಮೇಶ್ವರ ಗಳಲ್ಲಿರುವ ಲಿಂಗವಂತರ ಮಠಗಳಿಗೆ 'ಜಂಗಮವಾಡಿ' ಮಠಗಳೆಂದು ಹೆಸರು. ಮಂಗ ಳೂರು ಜಿಲ್ಲೆಯಲ್ಲಿರುವ ಲಿಂಗವಂತರ ಮಠಗಳನ್ನು ಈಗಲೂ 'ಜಂಗಮರ ಮಠ' ಗಳೆನ್ನುತ್ತಾರೆ. ಉಡುಪಿ, ಗುರುಪುರಗಳಲ್ಲಿರುವ ಜಂಗಮರ ಮಠಗಳು ಸುಪ್ರಸಿದ್ಧವಾಗಿವೆ.

ವೀರಶೈವರು ಅರುವತ್ತುಮೂರು ಮಂದಿ ಪುರಾತನರು, ಏಳುನೂರು ಎಪ್ಪತ್ತು ಅಮರ ಗಣಂಗಳು, ಪಂಚ ಆಚಾರ್ಯರು, ಬಸವಾದಿ ಪ್ರಮ

ಥರು ಇವರನ್ನೆಲ್ಲ ಪೂಜ್ಯರೆಂದು ತಿಳಿದಿದ್ದಾರೆ. ಇವರ ಸ್ತೋತ್ರ ಮತ್ತು ಪೂಜೆ ಪುಣ್ಯಪ್ರದವೆಂದು ನಂಬಿದ್ದಾರೆ. ಗಣಸಹಸ್ರ ನಾಮಾವಳಿಯಲ್ಲಿ ಈ ಶರಣರ ಮಹಿಮೆಯನ್ನು ಬಿತ್ತರಿಸಿದೆ. ಆರುವತ್ತು ಮೂವರು, ಏಳು ನೂರೆಪ್ಪತ್ತುಗಣಂಗಳು, ಸಹಸ್ರಗಣಂಗಳು ಇವರ ಮಂಟಪ–ಪೂಜೆಗಳು ಈಗಲೂ ಸಮಾಜದಲ್ಲಿ ನಡೆಯುತ್ತಿದ್ದು ಇದರ ಪತ್ಯಕ್ಷ ನಿದರ್ಶನವಾಗಿವೆ.

ಮೋಕ್ಷಸ್ವರೂಪ :– ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಮತ್ತು ಸಾಯುಜ್ಯ ಎಂಬ ನಾಲ್ಕು ಮೋಕ್ಷ ವಿಧಾನಗಳಲ್ಲಿ 'ಸಾಯುಜ್ಯ' ವನ್ನು ಲಿಂಗವಂತರು ಅಂಗೀಕರಿಸಿದ್ದಾರೆ. ಮೋಕ್ಷವನ್ನು, ಕೈವಲ್ಯ, ನಿರ್ವಾಣ, ನಿರ್ಬಯಲು, ಲಿಂಗೈಕ್ಯ ಎಂದು ಮೊದಲಾಗಿ ಕರೆದಿದ್ದಾರೆ. ಇದನ್ನು ಸಾಧಿಸುವ ಮಾರ್ಗವನ್ನು ಶಿವಾರ್ಪಣಯೋಗ, ಪೂರ್ಣಯೋಗ ಅಥವಾ ಶಿವಯೋಗ ಎಂದು ಲಿಂಗವಂತ ಅನುಭವಿಗಳು ಕರೆದಿದ್ದಾರೆ.

ಮತಸ್ಥಾಪಕರು ಯಾರು ?–:

ವೀರಶೈವ ಮತವು ಯಾವನೊಬ್ಬನಿಂದ ಒಂದು ಕಾಲದಲ್ಲಿ ಆದಂತೆ ತೋರುವುದಿಲ್ಲ. ಪಂಚಾಚಾರ್ಯರಿಗಿಂತ, ಬಸವೇಶ್ವರನಿಗಿಂತ ಈ ಮತವು ಪ್ರಾಚೀನವೆಂದು ತೋರುತ್ತದೆ. ಈಗ ಪ್ರಸಿದ್ಧರಾಗಿರುವ ರೇವಣ ಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ಏಕೋರಾಮರು ಹನ್ನೆರಡನೆಯ ಶತಮಾನದವರು. ವಿಶ್ವಾರಾಧ್ಯರ ಚರಿತ್ರೆ ಆಧುನಿಕವಾಗಿದೆ. ಶರಣ ದೇವರ ದಾಸಿಮಯ್ಯನು ಚಾಲುಕ್ಯರಾಜ ಇಮ್ಮಡಿ ಜಯಸಿಂಹನ ಕಾಲದಲ್ಲಿದ್ದುದು ಇತಿಹಾಸ ಪ್ರಸಿದ್ಧವಾಗಿದೆ. (ಕ್ರಿ. ಶ. ೧೦೧೭–೧೦೪೨) ದಾಸಿಮಯ್ಯನು ಚಾಲುಕ್ಯರಾಜಧಾನಿ ಪೊಟ್ಟಲಕೆರೆಗೆ ಹೋಗಿ ಮಹಾರಾಣಿ ಸುಗ್ಗಲದೇವಿ (ಈ ರಾಣಿ ಲಿಂಗವಂತಳು) ಯನ್ನು ಅನುಗ್ರಹಿಸಿದ ವಿಚಾರ ಬಸವಪುರಾಣಾದಿ ಗಳಲ್ಲಿ ಪ್ರಸಿದ್ಧವಾಗಿದೆ. ಶರಣ ಶಂಕರದಾಸಿಮಯ್ಯನು ದೇವರ ದಾಸಿಮಯ್ಯನ ಸಮಕಾಲೀನನು.ವಚನಕಾರರಾದ ಇವರೀರ್ವರೂ ವೀರಶೈವ ಮತೋದ್ಧಾರ ಕರೆಂಬುದು ಪ್ರಸಿದ್ಧವಾಗಿದೆ. ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ ಗಳು ಮೊಟ್ಟಮೊದಲ ವಚನಕಾರರಾಗಿದ್ದಾರೆ. ಇವರಿಬ್ಬರ ಬಗೆಗೂ

ಪುರಾಣಗಳು ರಚನೆಯಾಗಿ ಪ್ರಸಿದ್ಧವಾಗಿವೆ. ಚಾಲುಕ್ಯ ವಿಕ್ರಮನ ದಂಡನಾಯಕನಾಗಿದ್ದ ಕೊಂಡಗುಳಿ ಕೇಶಿರಾಜನು (೧೧೧೦) ಇಲ್ಲಿ ಸ್ಮರಣಾರ್ಹನು. ಈತನು ಲಿಂಗವಂತರ ಮೊದಲಕವಿ. ಷಡಕ್ಷರ ಕಂದ ಮತ್ತು ಲಿಂಗಸ್ತೋತ್ರ ಕಂದ ಮೊದಲಾದುವನ್ನು ಬರೆದಿದ್ದಾನೆ. ಹರಿಹರ-ರಾಘವಾಂಕರು ಈ ಕವಿಯನ್ನು ತಮ್ಮ ಗ್ರಂಥಗಳಲ್ಲಿ ಸ್ಮರಿಸಿದ್ದಾರೆ. ಹರೀಶ್ವರನು ಕೊಂಡಗುಳಿ ಕೇಶಿರಾಜನನ್ನು ಕುರಿತು ಒಂದು ರಗಳೆ ಬರೆದಿದ್ದಾನೆ. ಇತ್ತೀಚೆಗೆ ಕೊಂಡಗುಳಿಯಲ್ಲಿದ್ದ ಕೇಶಿರಾಜನ ಒಂದು ಶಾಸನ ಪ್ರಕಟವಾಗಿ ಈತನ ಕಾಲ ನಿಚ್ಚಳವಾಗಿದೆ. ಕಾಲಕ್ರಮದಲ್ಲಿ, ಪಾಶುಪತ, ಲಕುಲೀಶ, ಕಾಶ್ಮೀರಶೈವ ಮೊದಲಾದವರೆಲ್ಲರೂ ವೀರಶೈವದೀಕ್ಷೆಯನ್ನು ಪಡೆದಂತೆ ತೋರುತ್ತದೆ. ಲಿಂಗಧಾರಣವು ಅತಿ ಪ್ರಾಚೀನವಾದರೂ, ವೇದೋಕ್ತವೆಂದು ಸಿದ್ಧಾಂತವಾಗಿದ್ದರೂ ಅದು ಎಲ್ಲಿ, ಯಾರಿಂದ ಪ್ರಾರಂಭವಾಯಿತೆಂಬುದನ್ನು ವಿದ್ವಾಂಸರು ಸಂಶೋಧಿಸಿ ಹೇಳಬೇಕಾಗಿದೆ. ಶಿವಾಗಮಗಳ ಪರಿಶೀಲನೆಯಿಂದ, ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಮೊದಲಾದ ಭಾಷೆಗಳಲ್ಲಿರುವ ವೀರಶೈವ ಸಾಹಿತ್ಯದ ಅಧ್ಯಯನದಿಂದ, ವೀರಶೈವ ಮತಸ್ಥಾಪಕರಾರು? ಎಂಬುದನ್ನು ವಿದ್ವಾಂಸರು ವಿಮರ್ಶಿಸಿ ಹೇಳಬೇಕಾಗಿದೆ. ಮೂಢನಂಬಿಕೆಯ ಮಾತುಗಳಿಂದ ಫಲವಿಲ್ಲ. ದೇವ-ಜೀವರ ಸಂಬಂಧರೂಪಿ ಲಿಂಗಧಾರಣದಿಂದ ಕೂಡಿ, ಜೀವಮಾನವನ್ನೆಲ್ಲ ಲಿಂಗಮಯವನ್ನಾಗಿ ಮಾಡುವ ಲಿಂಗಭೋಗೋಪ ಭೋಗಿಯಾದ-ಲಿಂಗವಂತನು ಶ್ರೀ ನಿಜಗುಣರು ಹೇಳಿರುವಂತೆ 'ಮಾನವವರ್ಗದಲ್ಲಿ ಸರ್ವೋತ್ಕೃಷ್ಟನಾಗುವುದರಲ್ಲಿ ಸಂಶಯವೇನು. ?

ಶ್ರೀ ಶೈಲವೂ ವೀರಶೈವವೂ

ಭರತ ಖಂಡದ ಪ್ರಾಚೀನ ಕ್ಷೇತ್ರಗಳಲ್ಲಿ ಶ್ರೀ ಶೈಲವು ಪರಿಗಣಿಸಲ್ಪಟ್ಟಿದೆ. ಪವಿತ್ರವಾದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಶ್ರೀ ಶೈಲದ ಮಲ್ಲಿಕಾರ್ಜುನನೂ ಒಬ್ಬನು. ಆಂಧ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಈ ಶ್ರೀ ಶೈಲ ಕ್ಷೇತ್ರವಿದೆ. ಇದೇ ಹೆಸರಿನ, ನಲ್ಲಮಲೆ ಶ್ರೀಶೈಲ, ತಿರುಮಲೆ ಶ್ರೀಶೈಲ, ಬೌದ್ಧಶ್ರೀಶೈಲ ಎಂಬ ಮತ್ತೆ ಮೂರು ಕ್ಷೇತ್ರಗಳಿವೆ. ಕರ್ನೂಲು ಜಿಲ್ಲೆಯ ನಲ್ಲಮಲೆ ಶೈವ ಕ್ಷೇತ್ರ, ಚಿತ್ತೂರು ಜಿಲ್ಲೆಯ ತಿರುಮಲೆ ವಿಷ್ಣುಕ್ಷೇತ್ರ. ಗುಂಟೂರು ಜಿಲ್ಲೆಯ ನಾಗಾರ್ಜುನ ನಿವಾಸ ಬೌದ್ಧಕ್ಷೇತ್ರ. ಈ ಮೂರು ಮಹಾಕ್ಷೇತ್ರಗಳಿಗಿಂತಲೂ ಮಲ್ಲಿಕಾರ್ಜುನನ ರಾಜಧಾನಿಯಾದ 'ಶ್ರೀನಗರ' ಮೊದಲಾದ ಹೆಸರುಗಳಿಂದ ಪ್ರಸಿದ್ಧವಾದ 'ಶ್ರೀಶೈಲವು' ಹಲವು ಕಾರಣಗಳಿಂದ ಸುವಿಖ್ಯಾತವೆನಿಸಿದೆ.

ಶ್ರೀಶೈಲವು ದಕ್ಷಿಣ ಭಾರತದ ಪೂರ್ವಘಟ್ಟದ ಮಧ್ಯದಲ್ಲಿದೆ. ಪೂರ್ವ-ಪಶ್ಚಿಮ ಘಟ್ಟಗಳು ನೀಲಗಿರಿಯಲ್ಲಿ ಒಂದು ಗೂಡುತ್ತವೆ. ಈ ಎರಡೂ ಘಟ್ಟಗಳ ಸಾಲಿನಲ್ಲಿ ಸುಕ್ಷೇತ್ರಗಳು ಸಾಲುಸಾಲಾಗಿ ವಿರಾಜಿಸುತ್ತಿವೆ. ಕರ್ನಾಟಕದ ಘಾಟಿ ಸುಬ್ರಹ್ಮಣ್ಯ, ಮಾದೇಶ್ವರ, ರೇವಣಸಿದ್ಧೇಶ್ವರ, ಪಂಪಾಕ್ಷೇತ್ರ, ಮಹಾಕೂಟ, ಶತಶೃಂಗಪರ್ವತ ಇವೆಲ್ಲವೂ ಪೂರ್ವಘಟ್ಟದಲ್ಲಿಯೇ ಇವೆ. ಕುಕ್ಕೆಸುಬ್ರಹ್ಮಣ್ಯ, ಧರ್ಮಸ್ಥಳ, ಕೊಡಚಾದ್ರಿ, ಕೊಲ್ಲೂರು, ಮುಳ್ಳಯ್ಯನಗಿರಿ ಪಶ್ಚಿಮಘಟ್ಟದಲ್ಲಿವೆ. ಕರ್ಣಾಟಕವು ಬಹುಮಟ್ಟಿಗೆ ಪೂರ್ವ-ಪಶ್ಚಿಮಘಟ್ಟಗಳ ಮಧ್ಯಭಾಗದಲ್ಲಿದ್ದು, ಕರ್ಣಾಟಕವು 'ಕರುನಾಡು' ಅಥವಾ ಎತ್ತರವಾದ ಪ್ರದೇಶ ಎನಿಸಿಕೊಂಡಿದೆ. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕರಾವಳಿಯೆನಿಸಿವೆ.

ಶ್ರೀಶೈಲದಲ್ಲಿ ನಾಗಲೂಟಿ ವೀರಭದ್ರ, ಮಲ್ಲಿಕಾರ್ಜುನ ದೇವಾಲಯ, ಸೂರ್ಯಸಿಂಹಾಸನ ಮಠ, ಶಿಖರೇಶ್ವರ, ಪಾತಾಳಗಂಗೆ, ವೀರಶೈವರ ಪಂಚ ಮಠಗಳು, ಅಟಕೇಶ್ವರ, ಸಿದ್ಧರಾಮನ ಕೊಳ್ಳ, ಕದಳೀವನ, ಮಹಾದೇವಿಯಕ್ಕನ ಗವಿ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ. ಕೃಷ್ಣಾನದಿಯು

ಏಳು ಉಪನದಿಗಳ ನೀರು ಇಲ್ಲಿ ಕೂಡಿರುವುದು. ಇದನ್ನು 'ಪಾತಾಳ ಗಂಗೆ' ಎಂದು ಕರೆಯುತ್ತಾರೆ. ಈ ನದಿಯು ಪರ್ವತದ ಮಧ್ಯಭಾಗದಲ್ಲಿ ಆಳವಾದ ಪ್ರದೇಶದಲ್ಲಿ ಪ್ರಕೃತಿ ಸೌಂದರ್ಯದ ಮಡಲಿನಲ್ಲಿ ಹರಿಯುತ್ತಿದೆ. ಈ ಪಾತಾಳಗಂಗೆಯ ಸ್ನಾನ ಬಹು ಪವಿತ್ರವಾದುದೆಂದು ಭಾವಿಸಲಾಗಿದೆ. ಕೃಷ್ಣಾನದಿಯ ಏಳು ಉಪನದಿಗಳ ನೀರು ಇಲ್ಲಿ ಕೂಡಿರುವುದು. ಇದು ಹೆಚ್ಚು ಪವಿತ್ರವೆಂದೂ, ಸಪ್ತತೀರ್ಥವೆಂದೂ ಭಾವಿಸಲು ಕಾರಣವಾಗಿದೆ.

ಶ್ರೀಶೈಲ ಕ್ಷೇತ್ರದಲ್ಲಿ ಮಲ್ಲಿಕಾರ್ಜುನನಿಗೆ ಪ್ರಾಮುಖ್ಯತೆ ಇರುವಂತೆ ಭ್ರಮರಾಂಬಿಕಾದೇವಿಗೂ ಇದೆ. ಅಷ್ಟಾದಶ ಮಹಾಶಕ್ತಿಯರಲ್ಲಿ ಒಬ್ಬಳಾದ ಭ್ರಾಮರೀ ಶಕ್ತಿಯೇ ಈ ಭ್ರಮರಾಂಬಿಕೆಯೆಂದು ಹೇಳುತ್ತಾರೆ. ಹಿಮಾಲಯದಲ್ಲಿರುವ, ಕೈಲಾಸ, ಕೇದಾರ, ಅಮರನಾಥ, ಪಶ್ಚಿಮ ಸಮುದ್ರ ತೀರದದಲ್ಲಿರುವ, ಸೌರಾಷ್ಟ್ರ ಸೋಮನಾಥ, ಗೋಕರ್ಣ, ಮತ್ತು ಮಹಾಬಲೇಶ್ವರ, ದಕ್ಷಿಣ ಸಮುದ್ರತೀರದಲ್ಲಿರುವ ರಾಮೇಶ್ವರ, ಮಧ್ಯ ಭಾರತದ ಕಾಶೀವಿಶ್ವನಾಥ, ಘೃಷ್ಣೇಶ್ವರ, ಪರಳಿ ವೈದ್ಯನಾಥ, ದಕ್ಷಿಣ ಭಾರತದ ಅರುಣಗಿರಿ, ಚಿಂದಬರ, ಕಂಚಿ, ಮಧುರೆ ಮೊದಲಾದ ಶಿವ ಕ್ಷೇತ್ರಗಳಿಗಿಂತ ಶ್ರೀಶೈಲಕ್ಕೆ ಹೆಚ್ಚು ಜನಪ್ರಿಯತೆ ಪ್ರಾಪ್ತವಾಗಿದೆ. ಕ್ಷೇತ್ರ ಮತ್ತು ತೀರ್ಥಗಳ ಮಹಿಮೆಯು ಕಾಶಿಯಂತೆ ಇಲ್ಲಿಯೂ ಒಟ್ಟು ಕೂಡಿದೆ.

ಕಾಶಿಯಲ್ಲಿ ಮರಣವಾದವರಿಗೆ ಮೋಕ್ಷಪ್ರಾಪ್ತಿ (ಕಾಶ್ಯಾಂತೇ ಮರಣಾನ್ಮುಕ್ತಿಃ) ಅರುಣಾಚಲದಲ್ಲಿ ದೇವರ ಸ್ಮರಣೆಯಿಂದಲೇ ಮುಕ್ತಿ (ಸ್ಮರಣಾದರುಣಾಚಲೇ) ಶ್ರೀ ಶೈಲದಲ್ಲಿ ದರ್ಶನದಿಂದ ಮುಕ್ತಿ (ದರ್ಶನಾದೇವ ಶ್ರೀ ಶೈಲೇ) ಎಂಬ ಆರ್ಯೋಕ್ತಿಗಳಿವೆ. ಶ್ರೀಶೈಲದ ಶಿಖರೇಶ್ವರ ದರ್ಶನವು ಮುಕ್ತಿಪ್ರದವೆಂದು (ಶ್ರೀ ಶೈಲಶಿಖರಂ ದೃಷ್ಟ್ವಾ ಪುನರ್ಜನ್ಮಂ ನವಿದ್ಯತೇ) ಪುರಾಣೋಕ್ತಿಯಿದೆ. ಕೃತಯುಗದಲ್ಲಿ ಹಿರಣ್ಯ ಕಶ್ಯಪು, ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು, ದ್ವಾಪರಯುಗದಲ್ಲಿ ಪಾಂಡವರು, ಕಲಿಯುಗದಲ್ಲಿ ಸಿದ್ಧನಾಗಾರ್ಜುನನು ಮೊದಲಾದ ಯತಿಗಳು ಈ ಕ್ಷೇತ್ರದಲ್ಲಿ ತಪಸ್ಸುಮಾಡಿ ಕೃತಾರ್ಥರಾಗಿದ್ದಾರೆ. ಸನಾತನ ಧರ್ಮೋದ್ಧಾರಕರಾದ

ಆದಿ ಶಂಕರಾಚಾರ್ಯರು ಕೆಲವು ಕಾಲ ಈ ಕ್ಷೇತ್ರದಲ್ಲಿ ತಪಸ್ಸುಮಾಡಿದಂತೆ ಐತಿಹ್ಯವಿದೆ.

ಶ್ರೀ ಶೈಲಪರ್ವತವು ೩೦ ಗಾವುದ ಉದ್ದ-ಅಗಲ ಉಂಟೆಂದು ಪ್ರಾಚೀನರು ಹೇಳಿದ್ದಾರೆ. ಇದಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ಮಹಾ ದ್ವಾರಗಳಿವೆ. ಕರ್ನೂಲು ಜಿಲ್ಲೆಯ ಮಾರ್ಕಾಪುರದಲ್ಲಿ ತ್ರಿಪುರಾಂತಕ ವಿದೆ. ದಕ್ಷಿಣ ದ್ವಾರವು ಕಡಪಾಜಿಲ್ಲೆಯ ಸಿದ್ಧವಟದಲ್ಲಿದೆ. ಪಶ್ಚಿಮ ದ್ವಾರವು ಕರ್ನೂಲು ಜಿಲ್ಲೆಯ ಆಲಂಪುರದಲ್ಲಿದೆ. ಉತ್ತರದ್ವಾರವು ತೆಲಂಗಾಣದ ಉಮಾಮಹೇಶ್ವರದಲ್ಲಿದೆ. ಶ್ರೀ ಶೈಲದ ಸ್ಥಳಪುರಾಣವನ್ನು ವೇದವ್ಯಾಸ ವಿರಚಿತ ಸ್ಕಾಂದಪುರಾಣದ ಶ್ರೀ ಶೈಲಖಂಡದಲ್ಲಿ ಕಾಣಬ ಹುಹುದು. ಇದು ೧೨, ೫೧೦ ಶ್ಲೋಕಗಳಿಂದ ಕೂಡಿದೆ. ನಾಗಲೂಟಿ ಶೇಷನಾಥಾರ್ಯನೆಂಬ ಕವಿಯು 'ಶ್ರೀ ಪರ್ವತ ಪುರಾಣಮು' ಎಂಬ ಹೆಸರಿನಿಂದ ಒಂದು ಪದ್ಯಕಾವ್ಯವನ್ನು ತೆಲುಗಿನಲ್ಲಿ ಬರೆದಿದ್ದಾನೆ.

ಶಿಲಾದ ಮುನಿಯ ಮಕ್ಕಳಾದ 'ನಂದಿ' ಮತ್ತು 'ಪರ್ವತ' ಶಿವ ಭಕ್ತಿ ಪರಾಯಣರಾಗಿ ಶಿವನನ್ನು ಕೇಳಿಕೊಂಡ ಪ್ರಕಾರ, ಈ ನಂದಿ ಮತ್ತು ಪರ್ವತ ಎರಡು ಬೆಟ್ಟಗಳಾಗಿ ಅವುಗಳ ಮೇಲೆ ಶಿವನು ನೆಲೆಸಿದನು. ಅದೇ 'ನಂದಿ ಮಂಡಲ' ಮತ್ತು 'ಪರ್ವತ' ಎಂದು ಪುರಾಣೋಕ್ತಿಯಿದೆ. ಈ ಎರಡೂ ಕ್ಷೇತ್ರಗಳು ಆಂಧ್ರ ಪ್ರದೇಶದಲ್ಲಿವೆ. A. ಕೃತಯುಗದಲ್ಲಿ 'ವಸುಮತಿ' ಎಂಬ ಮುನಿಕನ್ಯೆಯು ಶಿವನನ್ನು ಕುರಿತು ತಪಸ್ಸುಮಾಡಿ ತಾನು ತಪಸ್ಸುಮಾಡಿದ ಈ ಪವರ್ತಕ್ಕೆ ಶ್ರೀಪರ್ವತ ಎಂದು ಹೆಸರಾಗಲೆಂದು ಕೇಳಿಕೊಂಡಳೆಂದೂ ಆದ್ದರಿಂದ ಇದು ಶ್ರೀ ಶೈಲವಾಯಿತೆಂದೂ ಮತ್ತೊಂದು ಕಥೆಯಿದೆ. ಚಂದ್ರಗುಪ್ತಎಂಬು ರಾಜನ ಮಗಳು 'ಚಂದ್ರಮತಿ' ದಿನವೂ ನವಮಲ್ಲಿಕಾ ಕುಸುಮಗಳಿಂದ ಈಪರ್ವತ ಲಿಂಗವನ್ನು ಪೂಜಿಸುತ್ತಿದ್ದುದರಿಂದ ಇದಕ್ಕೆ 'ಮಲ್ಲಿಕಾರ್ಜುನ' ಎಂದು

A. 'ನಂದಿ ಬೆಟ್ಟ' ಎಂಬ ಒಂದು ಶಿವಕ್ಷೇತ್ರವು ಕರ್ಣಾಟಕದ ಕೋಲಾರ ಜಿಲ್ಲೆಯಲ್ಲಿದೆ. ಇದು ನೀಲಗಿರಿಯಂತೆ ತಂಪಾದ ಹವೆಯಿಂದ ಕೂಡಿದ ಸುಪ್ರಸಿದ್ಧವಾದ ಆರೋಗ್ಯ ಧಾಮವೆನಿಸಿದೆ. ಇಲ್ಲಿ ಹಲವು ಗುಡಿಗೋಪುರಗಳಿವೆ. (ಸಂ)

ಹೆಸರುಬಂತೆಂದು ಮತ್ತೊಂದು ಪುರಾಣದ ಕಥೆಯಿದೆ. ಇಲ್ಲಿ 'ಅರ್ಜುನ' ಎಂಬ ಶಬ್ದಕ್ಕೆ 'ಬಿಳಿಯದು' ಎಂಬ ನಿಘಂಟಿನ ಅರ್ಥವನ್ನು ನಾವು ಸ್ಮರಿಸಿ ಕೊಳ್ಳಬೇಕು. ಪಾಂಡವರು ಅರಣ್ಯವಾಸಕಾಲದಲ್ಲಿ ಇಲ್ಲಿಗೆ ಬಂದಿದ್ದ ರೆಂದೂ, ಅರ್ಜುನನು ಕಾಡುಮಲ್ಲಿಗೆ ಹೂಗಳಿಂದ ಈ ಲಿಂಗವನ್ನು ಪೂಜಿಸುತ್ತಿದ್ದನೆಂದೂ ಪುರಾಣದ ಕಥೆಯಿದೆ. ಪೂರ್ವದಲ್ಲಿ ಈ ಶ್ರೀ ಶೈಲ ಕ್ಷೇತ್ರದಲ್ಲಿ ಒಂದು ನಗರವಿತ್ತೆಂದು ಇತಿಹಾಸಕಾರರು ಹೇಳಿದ್ದಾರೆ. ಕ್ರಿ.ಶ. ೬ನೆಯ ಶತಮಾನದಲ್ಲಿ ಕದಂಬರು ಈ ಕ್ಷೇತ್ರದ ಪ್ರದೇಶವನ್ನು ಆಳಿ ಈ ಕ್ಷೇತ್ರದಲ್ಲಿನ ಗುಡಿಗೋಪುರಗಳನ್ನು ಅಭಿವೃದ್ಧಿಪಡಿಸಿದರೆಂದು ತಿಳಿದು ಬರುತ್ತದೆ. ಕ್ರಿ.ಶ. ೭ನೆಯ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಹ್ಯೂಎನ್‌ತ್ಸಾಂಗನು ಶ್ರೀಶೈಲ ಮತ್ತು ನಾಗಾರ್ಜುನ ಇವನ್ನು ಕುರಿತು ತನ್ನ ವರದಿಯಲ್ಲಿ ಪ್ರಸ್ತಾಪಿಸಿದ್ದಾನೆ. ಕಾಕತೀಯರೂ ವಿಜಯನಗರದವರೂ ಸುಮಾರು ೫೦ ಶಾಸನಗಳು ಇಲ್ಲಿ ಕಂಗೊಳಿಸುತ್ತಿವೆ. ಕದಂಬರ ಕಾಲದ ಶಾಸನ ಗಳನ್ನು ಕೂಡ ಇಲ್ಲಿ ನಾವು ನೋಡಬಹುದು. ವಿಜಯನಗರದ ಪ್ರೌಢದೇವ ರಾಯ, ವಿರೂಪಾಕ್ಷರಾಯ, ಕೃಷ್ಣದೇವರಾಯ ಮೊದಲಾದವರು ಇಲ್ಲಿಗೆ ಬಂದು ಇಲ್ಲಿನ ಗುಡಿಗೋಪುರಗಳನ್ನು ಜೀರ್ಣೋದ್ಧಾರ ಗೊಳಿಸಿದ್ದಾರೆ. ಛತ್ರಪತಿ ಶಿವಾಜಿ ಮಹಾರಾಜನು ಇಲ್ಲಿಗೆ ಬಂದಿದ್ದನೆಂದೂ ದೇವಾಲ ಯದ ಉತ್ತರ ದಿಕ್ಕಿನ ಗೋಪುರ ಅನನಿಂದ ಕಟ್ಟಿಸಲ್ಪಟ್ಟಿತೆಂದೂ ಹೇಳು ತ್ತಾರೆ. ಇತ್ತೀಚೆಗೆ ಆಂಧ್ರ ರಾಜ್ಯದವರು, ಅಭಿವೃದ್ಧಿಯೋಜನೆಗಳನ್ನು ಕೈಗೊಂಡಿದ್ದಾರೆ. ಇಲ್ಲಿಗೆ ಹೋಗಿ ಬರಲು ಮಾರ್ಗವನ್ನೂ ಇಲ್ಲಿರುವವರಿಗೆ ನೀರು, ದೀಪ, ವಸತಿ ಸೌಕರ್ಯಗಳನ್ನೂ ಒದಗಿಸಿಕೊಟ್ಟಿದ್ದಾರೆ. ಶ್ರೀ ಶೈಲ ದೇವಾಲಯದ ಸುತ್ತಲೂ ಇರುವ ಗೋಡೆ ಅನೇಕ ಐತಿಹಾಸಿಕ ಶಿಲ್ಪ ಗಳಿಂದ ಕೂಡಿದೆ. ಸಂಶೋಧಕರಿಗೆ ಇಲ್ಲಿ ವಿಪುಲವಾದ ಆಹಾರವಿದೆ.

ಶ್ರೀ ಶೈಲ ಪರ್ವತಕ್ಕೂ ವೀರಶೈವಧರ್ಮಕ್ಕೂ ನಿಕಟವಾದ ಬಾಂಧವ್ಯ ವಿದೆ. ನನ್ನೆಚೋಳನೆಂಬ ತೆಲುಗಿನ ಮಹಾ ಕವಿಯೊಬ್ಬನು ತನ್ನ 'ಕುಮಾರ ಸಂಭವಮು' ಎಂಬ ಕಾವ್ಯವನ್ನು ಶ್ರೀ ಶೈಲದ ಪ್ರಾಚೀನ ಮಲ್ಲಿ ಕಾರ್ಜುನ ಜಂಗಮನಿಗೆ ಒಪ್ಪಿಸಿದ್ದಾನೆ. ಪಾಲ್ಕುರಿಕೆ ಸೋಮನಾಥ ಮಹಾಕವಿಯು ತನ್ನ ಮಹಾಕೃತಿಗಳಾದ ಬಸವಪುರಾಣಮು ಮತ್ತು ಪಂಡಿತಾ

ರಾಧ್ಯಚರಿತೆ--ಈ ಎರಡೂ ಗ್ರಂಥಗಳಲ್ಲಿ ಶ್ರೀ ಶೈಲಕ್ಷೇತ್ರವನ್ನು ಬಹಳವಾಗಿ ಬಣ್ಣಿಸಿರುವನು. ಹಾಗೂ ಇಲ್ಲಿಯೇ ಇವೆರಡು ಗ್ರಂಥಗಳನ್ನೂ ರಚಿಸಿದನು. ಪಾಲ್ಕುರಿಕಿ ಸೋಮನ ಶಿಷ್ಯನಾದ ಚಕ್ರಪಾಣಿ ರಂಗನಾಥನೆಂಬ ಕವಿಯು ಶ್ರೀ ಗಿರಿನಾಥ ವಿಕ್ರಮ, ಶಿವಭಕ್ತಿದೀಪ್ತಿರಗಳೆ, ನಮಶ್ಶಿವಾಯ ರಗಳೆ ಎಂಬ ಮೂರು ರಗಳೆಗಳನ್ನು ಇಲ್ಲಿಯೇ ಬರೆದಂತೆ ತಿಳಿದು ಬರುತ್ತದೆ. ಶ್ರೀಗಿರಿ ಎಂಬ ಕವಿಯು 'ಶ್ರೀ ಗಿರೀಶ' ಎಂಬ ಒಂದು ಶತಕವನ್ನು ಬರೆದಿದ್ದಾನೆ. ರಾವಿಪಾಟಿ ತ್ರಿಪುರಾಂತಕ ಕವಿಯು 'ತ್ರಿಪುರಾಂತಕೋದಾಹರಣಗದ್ಯ' ಎಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ಆಂಧ್ರ ಕವಿಸಾರ್ವಭೌಮನಾದ ಶ್ರೀನಾಥನು 'ಕಾಶೀಖಂಡ' ಎಂಬ ಗ್ರಂಥದಲ್ಲಿ ಶ್ರೀ ಶೈಲವನ್ನು ವಿಪುಲವಾಗಿ ಬಣ್ಣಿಸಿದ್ದಾನೆ; ಹಾಗೂ ಶಿವರಾತ್ರಿ ಮಹಾತ್ಮೆಯನ್ನು ಹೃದಯಂಗಮವಾಗಿ ನಿರೂಪಿಸಿದ್ದಾನೆ. ಇದೇ ಕವಿಯು ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನು ಕುರಿತು ಒಂದು ಮಹಾಕಾವ್ಯವನ್ನು ಬರೆದಿದ್ದಾನೆ. ತಮಿಳರ ತೇವಾರಗಳು, ನಾಗಾರ್ಜುನನ ರಸರತ್ನಾಕರ ಮೊದಲಾದ ಗ್ರಂಥಗಳಲ್ಲಿ ಕೂಡ ಶ್ರೀ ಶೈಲದ ಮಾಹಾತ್ಮ್ಯವು ನಿರೂಪಿತವಾಗಿದೆ.

ವೀರಶೈವ ಮತಚರಿತ್ರೆಯಲ್ಲಿ ವಿಖ್ಯಾತರಾದ ಶಿವಯೋಗಿ ಮಲ್ಲರಸರು ಮತ್ತು ಸಕಲೇಶ ಮಾದರಸರು, ಶ್ರೀ ಶೈಲದಲ್ಲಿ ತಪಸ್ಸುಮಾಡಿ ಸಿದ್ಧರಾಗಿದ್ದಾರೆ. ಆಚಾರ್ಯ ರೇವಣಸಿದ್ಧನು ಇಲ್ಲಿ ತಪಸ್ಸುಮಾಡಿದ್ದಾನೆ. ಶಿವಯೋಗಿ ಸಿದ್ಧರಾಮನಿಗೆ ಇಲ್ಲಿ ಶಿವಸಾಕ್ಷಾತ್ಕಾರವಾಗಿದೆ. ಶ್ರೀ ಶೈಲದ ಕದಳೀವನದಲ್ಲಿ ಶ್ರೀ ಪ್ರಭುದೇವರು ಮತ್ತು ಅಕ್ಕಮಹಾದೇವಿ ತಮ್ಮ ಕಡೆಯ ಕಾಲವನ್ನು ಶಾಂತವಾಗಿ ಕಳೆದು ಇಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಕ್ರಿ.ಶ. ೧೪೮೦ ರ ಸುಮಾರಿನಲ್ಲಿದ್ದ ಹೇಮರೆಡ್ಡಿ ಮಲ್ಲಮ್ಮ ಎಂಬ ಭಕ್ತೆ ಇಲ್ಲಿ ಮಲ್ಲಿಕಾರ್ಜುನನನ್ನು ಸಾಕ್ಷಾತ್ಕಾರ ಮಾಡಿಕೊಂಡು 'ಮಹಾ ಶರಣೆ ಎನಿಸಿಕೊಂಡಿದ್ದಾಳೆ. ಕನ್ನಡದಲ್ಲಿ 'ಹೇಮರೆಡ್ಡಿ ಮಲ್ಲಮ್ಮ' ಪುರಾಣವು ಪ್ರಸಿದ್ಧವಾಗಿದೆ. ಈಕೆ ತೆಲುಗು ಕವಿ ವೇಮಣ್ಣನ ಬಂಧುವೆಂಬುದು ಸ್ಮರಣಾರ್ಹ.

ಇವೆಲ್ಲಕ್ಕೊ ಮಿಗಿಲಾಗಿ ಶ್ರೀ ಶೈಲದಲ್ಲಿ ವೀರಶೈವರ ಪಂಚಪೀಠಗಳಲ್ಲಿ ಒಂದಾದ ಸೂರ್ಯಸಿಂಹಾಸನ ಮಠವಿದೆ. ಇದರ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು 'ಶಿವತತ್ತ್ವಸಾರಮು' ಮತ್ತು 'ಗಣಸಹಸ್ರನಾಮಾವಳಿ' ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರು ಅಧ್ಯಕ್ಷರಾಗಿದ್ದರು. ಶ್ರೀ ಮಲ್ಲಿಕಾರ್ಜುನ ದೇವಾಲಯದ ಹಿಂಭಾಗದಲ್ಲಿ ಈ ಸಿಂಹಾಸನ ಮಠವಿದೆ. ಆ ಪ್ರಾಚೀನ ಶಿಲಾಮಯ ಕಟ್ಟಡವನ್ನು ಇತ್ತೀಚೆಗೆ ಭಕ್ತರು ನೂತನವಾಗಿ ಕಟ್ಟಿಸಿದ್ದಾರೆ.

ಶಿವರಾತ್ರಿ ಮತ್ತು ಯುಗಾದಿಗಳಲ್ಲಿ ಶ್ರೀ ಶೈಲದಲ್ಲಿ ದೊಡ್ಡ ಜಾತ್ರೆಯಾಗುತ್ತದೆ ಆಗ ಭಾರತದ ಎಲ್ಲ ಕಡೆಗಳಿಂದಲೂ ಲಕ್ಷಗಟ್ಟಲೆ ಜನರು ಬಂದು ಹೋಗುತ್ತಾರೆ. ಶ್ರೀ ಶೈಲ ಮಲ್ಲಿಕಾರ್ಜುನನ ಅರ್ಚನೆಯು ಇಂದಿಗೂ ವೀರಶೈವರಿಂದಲೇ ನಡೆಯುತ್ತಿದೆ. ಕರ್ಣಾಟಕದ ಪ್ರಸಿದ್ಧ ಕವಿಯಾದ ಷಡಕ್ಷರ ದೇವನು ತನ್ನ "ರಾಜಶೇಖರ ವಿಳಾಸ" ಎಂಬ ಮಹಾಕಾವ್ಯವನ್ನು "ಶ್ರೀ ಶೈಲಾದಿ ಪ್ರಸಿದ್ಧಂ" ಎಂದು ಪ್ರಾರಂಭಿಸಿದ್ದಾನೆ. 'ಅನುಭವಾಮೃತ' ಎಂಬ ಗ್ರಂಥದ ಕರ್ತೃ ಮಹಲಿಂಗರಂಗನು "ಶ್ರೀ ಗಿರಿ ಮಲ್ಲಿಕಾರ್ಜುನ ಸಲಹು ಮೂಜಗವ" ಎಂದು ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಬ್ರಹ್ಮಸೂತ್ರಗಳ ಮೇಲೆ ಶ್ರೀಕರಭಾಷ್ಯವನ್ನು ಬರೆದ ಶ್ರೀಪತಿ ಪಂಡಿತನ ಶ್ರೀ ಶೈಲ ಮಲ್ಲಿಕಾರ್ಜುನನ ಅನುಗ್ರಹವನ್ನು ಪಡೆದಿದ್ದವನು. ಹಾಗೂ ಶ್ರೀ ಶೈಲ ಪೀಠಾಧಿಪತಿ ಎಂದು ಕೂಡ ಪ್ರಸಿದ್ಧನಾಗಿದ್ದಾನೆ. ವೀರಶೈವ ಧರ್ಮದಲ್ಲಿ ವಿಖ್ಯಾತನಾಗಿ ವೀರಶೈವ ಪಂಡಿತತ್ರಯರಲ್ಲಿ ಒಬ್ಬನಾದ ಶಿವಲೆಂಕ ಮಂಚಣ್ಣನು ಶ್ರೀಶೈಲ ಮಲ್ಲಿಕಾರ್ಜುನನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಂತೆ ತಿಳಿಯುತ್ತದೆ. ಆಂಧ್ರರಾಜ್ಯವನ್ನು ೧೩ ಮತ್ತು ೧೪ನೆಯ ಶತಮಾನಗಳಲ್ಲಿ ವೈಭವದಿಂದ ಆಳುತ್ತಿದ್ದ ಕಾಕತೀಯರಾಜರು ವೀರಶೈವ ಮತೀಯರಾದುದರಿಂದ ಈ ಕ್ಷೇತ್ರದ ಅಭಿವೃದ್ಧಿಗೆ ಬಹಳವಾಗಿ ಪ್ರೋತ್ಸಾಹ ಇತ್ತಿರುತ್ತಾರೆ.

ವೀರಶೈವ ಮತೋದ್ಧಾರಕರಾದ ಶ್ರೀ ಬಸವೇಶ್ವರರ ಒಂದು ವಚನದಲ್ಲಿ, ಕಾಶಿ, ಕೇದಾರ, ಪಂಪಾಕ್ಷೇತ್ರಗಳ ಜತೆಯಲ್ಲಿ ಶ್ರೀಶೈಲದ ಹೆಸರೂ ಬಂದಿದೆ. ಈ ಕ್ಷೇತ್ರದ ಅಭಿವೃದ್ಧಿಯ ವಿಚಾರದಲ್ಲಿ ಆಂಧ್ರಸರ್ಕಾರ

ದವರೂ, ಕರ್ಣಾಟಕದ ಭಕ್ತರೂ ಹೆಚ್ಚಿನ ಆಸಕ್ತಿಯನ್ನು ವಹಿಸಿರುತ್ತಾರೆ. ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರರೂ, ಬಹುಭಾಷಾಪಂಡಿತೋತ್ತಮರೂ, ಶಿವಯೋಗ ನಿಷ್ಠರೂ ಆದ ಶ್ರೀ ಜಗದ್ಗುರು ವಾಗೀಶ ಪಂಡಿತಾಚಾರ್ಯ ಮಹಾಸ್ವಾಮಿಗಳವರು ಶ್ರೀಶೈಲ ಕ್ಷೇತ್ರದ ಬಗೆಗೂ ತಮ್ಮ ಪೀಠದ ಬಗೆಗೂ ಹೆಚ್ಚಿನ ಆಸಕ್ತಿಯನ್ನು ವಹಿಸಿ ಅವುಗಳ ಅಭಿವೃದ್ಧಿಗಾಗಿ ತಮ್ಮ ಆಯುಷ್ಯವನ್ನು ಮೀಸಲು ಮಾಡಿದ್ದಾರೆ.

ಶ್ರೀಶೈಲ ಮಲ್ಲಿಕಾರ್ಜುನನ ಹೆಸರಿನಲ್ಲಿ ಕರ್ಣಾಟಕದ ತುಂಬ ದೇವಾಲಯಗಳಿವೆ. ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಹೊಯ್ಸಳ ರಾಜಧಾನಿಯಾದ ಹಳೇಬೀಡಿನ ಪುಷ್ಪಗಿರಿಯಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಗಂಗರ ರಾಜಧಾನಿಯಾದ ತಲಕಾಡಿನಲ್ಲಿ ಭ್ರಮರಾಂಬಾ-ಮಲ್ಲಿಕಾರ್ಜುನ ದೇವಾಲಯವಿದೆ. ಮೈಸೂರು ಜಿಲ್ಲಾ ಬೆಟ್ಟದಪುರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಗುಬ್ಬಿಯಲ್ಲಿ (ಅಮರ ಗುಂಡ) ಮಲ್ಲಿಕಾರ್ಜುನನು ನೆಲಸಿದ್ದಾನೆ. ವೇದಾವತೀ ತೀರದಲ್ಲಿ ಯಗಟಿಯಲ್ಲಿ ಮಲ್ಲಿಕರ್ಜುನ ದೇವಾಲಯವಿದೆ. ಶ್ರೀಶೈಲದ ಜಾತ್ರೆಯ ಕಾಲದಲ್ಲಿ ಕರ್ಣಾಟಕದ ವೀರಶೈವರು ಅತ್ಯಂತ ಭಕ್ತಿಯಿಂದ ಕಂಬಿಗಳನ್ನು ಒಯ್ಯುತ್ತಾರೆ. ವೀರಶೈವ ಮತೋದ್ಧಾರಕನಾದ ಶ್ರೀ ಬಸವೇಶ್ವರನ ಹೆಸರಿನಲ್ಲಿ, ಬಿಜಾಪುರಜಿಲ್ಲಾ ಬಾಗೆವಾಡಿಯಿಂದ ಪ್ರತಿವರ್ಷ ಜಂಗಮರು ಕಂಬಿಯನ್ನು ಒಯ್ಯುತ್ತಾರೆ. ಆ ಜಾತ್ರೆಯಲ್ಲಿ ಬಸವೇಶ್ವರನ ಕಂಬಿಗೆ ಅಗ್ರಪೂಜೆ ಸಲ್ಲುತ್ತದೆ. ಶಿವಯೋಗಿ ಸಿದ್ಧರಾಮೇಶ್ವರನು ಸೊಲ್ಲಾಪುರದಲ್ಲಿ ಕಟ್ಟಿಸಿರುವ ಮಲ್ಲಿಕಾರ್ಜುನ ದೇವಾಲಯವನ್ನು ನಾವು ಇಂದಿಗೂ ನೋಡಬಹುದು. ಈ ಎಲ್ಲ ನಿದರ್ಶನಗಳಿಂದ ಶ್ರೀ ಶೈಲಕ್ಷೇತ್ರಕ್ಕೂ ವೀರಶೈವಧರ್ಮಕ್ಕೂ ನಿಕಟಬಾಂಧವ್ಯ ಉಂಟೆಂಬುದನ್ನು ನಾವು ತಿಳಿಯಬಹುದು.

ಮಹಾ ಭಾರತದಲ್ಲಿ ಶ್ರೀಶೈಲದ ಉಲ್ಲೇಖವಿದೆ. ಮಲ್ಲಿಕಾರ್ಜುನ ಲಿಂಗವು 'ಸ್ವಯಂಭು' ಎಂಬ ನಂಬಿಕೆಯಿದೆ. ಇಲ್ಲಿ ವಾಸವಾಗಿದ್ದ ಬೌದ್ಧ ಗುರು ನಾಗಾರ್ಜುನನಲ್ಲಿ ಒಂದು ದೊಡ್ಡ ಬೌದ್ಧಗ್ರಂಥಾಲಯವಿದ್ದಂತೆ ಹ್ಯೂಯೆನ್‌ಸ್ತಾಂಗನು ತನ್ನ ವರದಿಯಲ್ಲಿ ಹೇಳಿದ್ದಾನೆ. ಕ್ರಿ.ಶ. ೬ನೆಯ ಶತಕದಲ್ಲಿ ಕದಂಬರ ಮಯೂರ ಶರ್ಮನು ಶ್ರೀಶೈಲವನ್ನು ಆಕ್ರಮಿಸಿದನು. ತಮಿಳಿನ ತೇವಾರಗಳಲ್ಲಿ (೬ನೆಯ ಶತಕ) ಶ್ರೀಶೈಲದ ಉಲ್ಲೇಖವಿದೆ.

೧೨ನೆಯ ಶತಮಾನದಲ್ಲಿ ಹೊಯ್ಸಳರ ಸಾಮಂತರಾಜನೊಬ್ಬನು ಲಿ... ಪ್ರತಿಷ್ಠೆಗಾಗಿ ಪಾತಾಳಗಂಗೆಯ ಪ್ರದೇಶದಿಂದ ಒಂದು ಶಿವಲಿಂಗವನ್ನು ಒಯ್ದಂತೆ ಶಾಸನಾಧಾರವಿದೆ. ಕುಲೋತ್ತುಂಗ ಚೋಳ (೧೧೮೮-೧೨೧೬) ಕಾಕತೀಯ ಪ್ರತಾಪರುದ್ರ (೧೨೩೪)ಇವರ ಶಾಸನಗಳು ಇಲ್ಲಿವೆ. ಓರುಂಗಲ್ಲಿನ ವಿದ್ಯಾಮಂಟಪದ ಅಧ್ಯಕ್ಷನಾಗಿದ್ದ ಶಿವದೇವನ ಹೆಸರುಳ್ಳ ಶಾಸನವೊಂದು ಕದಳೀವನದ ಅಕ್ಕನ ಗವಿ ಹತ್ತಿರವಿದೆ. ಆಂಧ್ರಪ್ರದೇಶದ ಬ್ರಾಹ್ಮಣರು ಸಂಕಲ್ಪ ಮಾಡುವಾಗ ಶ್ರೀಶೈಲದ ಹೆಸರು ಹೇಳುತ್ತಾರೆ. ಶ್ರೀಶೈಲದ ಶಿಲ್ಪವು ಪಲ್ಲವ ಸಂಪ್ರದಾಯವೆಂದು ವಿಮರ್ಶಕರು ಹೇಳುತ್ತಾರೆ. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯವು ಶಿಲ್ಪಕಲಾದೃಷ್ಟಿಯಿಂದ ಕೂಡ ಮಹತ್ವದ್ದಾಗಿದೆ.

ವೀರಶೈವ ಪಂಚಾಚಾರ್ಯರ ಹೆಸರಿನ ಐದು ಮಠಗಳು ಇಲ್ಲಿವೆ. ಇದೇ ರೀತಿ, ಕೊಲ್ಲಿಪಾಕಿ, ಶಿವಗಂಗೆಗಳಲ್ಲಿ ಕೂಡ ವೀರಶೈವರ ಪಂಚ ಮಠಗಳಿವೆ. ಆಂಧ್ರದೇಶದ ಶಾಸನಗಳಲ್ಲಿ ಶ್ರೀ ಶೈಲದಲ್ಲಿರುವ ಬಸವ ಮಠ, ಕಲ್ಲುಮಠ, ಸಾರಂಗಮಠ, ಗೋಳಕಿಮಠಗಳ ಉಲ್ಲೇಖನಗಳಿವೆ. ಪಾಲ್ಕುರುಕಿ ಸೋಮನಾಥನ ಪಂಡಿತಾರಾಧ್ಯ ಚರಿತೆಯಲ್ಲಿ ಶ್ರೀ ಶೈಲದ ವರ್ಣನೆ ಬಹಳವಾಗಿದೆ. ರಾಘವಾಂಕನ ಸಿದ್ಧರಾಮ ಪುರಾಣದಲ್ಲಿ ಸಿರಿಗಿರಿಯ ಬಣ್ಣನೆ ಅಧಿಕವಾಗಿವೆ.

ತೆಲುಗು ಭಾಷೆಯಲ್ಲಿ ಅತ್ತಲೂರಿ ಪಾಪಕವಿಯು 'ಶ್ರೀ ಶೈಲ ಖಂಡಮು' ಎಂಬ ಗ್ರಂಥ ಬರೆದಿದ್ದಾನೆ. ಅಕ್ಕನಾರಸನು 'ಶಿವರಾತ್ರಿ ಮಾಹಾತ್ಮ್ಯ' ಎಂಬ ಗ್ರಂಥ ಬರೆದಿದ್ದಾನೆ. ಇದರಲ್ಲಿ ಶ್ರೀಶೈಲದ ವಿಚಾರ ಬಂದಿದೆ. ಶ್ರೀ ಶೈಲದ ಕಾಡಿನಲ್ಲಿ 'ಚುಂಚರು' ಎಂಬ ಕಾಡು ಜನರಿದ್ದಾರೆ. ಅವರ ಜೀವನ ಪಶುಪಾಲನೆ ಹಾಗೂ ಬೇಟೆ. ಶ್ರೀ ಮಲ್ಲಿಕಾರ್ಜುನನ ಜಾತ್ರೆಯಲ್ಲಿ ಇವರ ಸೇವೆ ಮುಖ್ಯವಾಗಿರುತ್ತದೆ. ಅಂದು ಇವರ ಸಡಗರ ಹೇಳತೀರದು. ಯಾತ್ರಿಕರಿಗೆ ಇವರ ನೆರವು ಅಗತ್ಯವಾಗಿರುತ್ತದೆ. ಇವರು 'ಶ್ರೀಶೈಲದ ಮೂಲ ನಿವಾಸಿಗಳು' ಎಂದು ಹೇಳಲಾಗಿದೆ. ವೀರಶೈವರು ಧರಿಸುವ ಇಷ್ಟಲಿಂಗ ರಚನೆಗೆ ಶ್ರೀಶೈಲದ ಶಿಲೆಯು ಶ್ರೇಷ್ಠವೆಂದು ಹೇಳಿರುವುದು ಶ್ರೀಶೈಲ ಕ್ಷೇತ್ರಕ್ಕೂ ವೀರಶೈವ ಧರ್ಮಕ್ಕೂ ಇರುವ ನಿಗೂಢ ಸಂಬಂಧಕ್ಕೆ ಇದು ನಿದರ್ಶನವಾಗಿದೆಯಲ್ಲವೆ. ?

'ಇಷ್ಟಲಿಂಗದ ಮಹತ್ತ್ವ'

ಅಥವಾ

'ಕರಸ್ಥಲದ ಪರಬ್ರಹ್ಮ'

ವೀರಶೈವ ಧರ್ಮ ಗ್ರಂಥಗಳಲ್ಲಿ ಸಂಸ್ಕೃತದಲ್ಲಿ 'ಸಿದ್ಧಾಂತ ಶಿಖಾಮಣಿ' ಕನ್ನಡದಲ್ಲಿ 'ಶೂನ್ಯಸಂಪಾದನೆ'ಇವು ಉದ್ಗ್ರಂಥಗಳೆನಿಸಿವೆ. 'ಸಿದ್ಧಾಂತ ಶಿಖಾಮಣಿಗೆ' ಶ್ರೀ ರೇಣುಕಾಚಾರ್ಯರು ಉಗಮಸ್ಥಲವಾದರೆ 'ಶೂನ್ಯ ಸಂಪಾದನೆಗೆ' ಪ್ರಭುದೇವರು ಮೂಲಪುರುಷರು. ಅಲ್ಲಿ ಹೇಳುವವರು ಆಚಾರ್ಯ ರೇಣುಕರು, ಕೇಳು ವವನು ಅಗಸ್ತ್ಯಮುನಿ. ಇಲ್ಲಿ ಹೇಳುವವರು ಪ್ರಭುದೇವರು, ಕೇಳುವವರು ಬಸವಾದಿ ಶರಣರು. ಸಿದ್ಧಾಂತ ಶಿಖಾ ಮಣಿಯು ಏಕೋತ್ತರ ಶತಸ್ಥಲವನ್ನು ಕುರಿತು ಪ್ರಮಾಣ ಭೂತವಾಗಿ ಹೃದಯಂಗಮವಾಗಿ ಸಂಭಾಷಣಾ ರೂಪದಿಂದ ನಿರೂಪಿಸುತ್ತದೆ. ಅದರಲ್ಲಿ ನಲವತ್ತುನಾಲ್ಕು ಅಂಗಸ್ಥಲಗಳು, ಐವತ್ತೇಳು ಲಿಂಗಸ್ಥಲಗಳ ವಿವರಗಳನ್ನು ಅಲ್ಲಿ ನಾವು ಚೆನ್ನಾಗಿ ಮನದಟ್ಟುಮಾಡಿಕೊಳ್ಳ ಬಹುದು. ಶೂನ್ಯ ಸಂಪಾದನೆಯಲ್ಲಿ ಏಕೋತ್ತರ ಶತಸ್ಥಲವನ್ನು ಒಳಗೊಂಡ ಷಟ್ಸ್ಥಲ ತತ್ತ್ವ ಗಳನ್ನು ಗುರು ಶಿಷ್ಯರ ಸಂವಾದ ರೂಪದಿಂದ ಆಶ್ಚರ್ಯಕರವಾದ ರೀತಿ ಯಲ್ಲಿ, ಅನುಭವ ಪೂರ್ಣವಾದ ದೃಷ್ಟಿಯಿಂದ ನಿರೂಪಿಸಲಾಗಿದೆ. 'ಸಿದ್ಧಾಂತ ಶಿಖಾಮಣಿಯು' ಶಿವಾದ್ವೈತ, ದ್ವೈತಾದ್ವೈತ ಅಥವಾ ಶಕ್ತಿವಿಶಿಷ್ಟಾ ದ್ವೈತ ಸಿದ್ಧಾಂತವನ್ನು ಯುಕ್ತಿ ಯುಕ್ತವಾಗಿ, ಪ್ರಮಾಣ ಪೂರ್ವಕವಾಗಿ ನಿರೂಪಿಸುತ್ತದೆ. ಶೂನ್ಯಸಂಪಾದನೆಯು **ಲಿಂಗಾಂಗ ಸಾಮರಸ್ಯ ತತ್ತ್ವಗಳನ್ನು**–ಜೀವನು ದೇವನಾಗುವ ಮಾರ್ಗವನ್ನು ತನ್ನದೇ ಆದ ವಿವೇಕಪೂರ್ಣ ದೃಷ್ಟಿಯಿಂದ ಪ್ರತಿಪಾದಿಸುತ್ತದೆ. ಒಟ್ಟಿನಲ್ಲಿ 'ಸಿದ್ಧಾಂತ ಶಿಖಾಮಣಿ' ಮತ್ತು 'ಶೂನ್ಯಸಂಪಾದನೆ' ಇವೆರಡೂ ವಿರಶೈವ ತತ್ತ್ವಜ್ಞಾನ ವೆಂಬ ಹಿಮಾಲಯದ ಅತ್ಯುನ್ನತ ಶಿಖರಗಳಾದ ಗೌರೀಶಂಕರ ಮತ್ತು ಮೌಂಟ್‌ಎವರೆಸ್ಟ್ ಗಳಂತೆ ಇವೆ ಎಂದು ನಾವು ಧೈರ್ಯವಾಗಿ ಹೇಳಬಹುದು.

ವೀರಶೈವ ಪರಿಭಾಷೆಯಲ್ಲಿ 'ಶೂನ್ಯ' ಎಂದರೆ 'ಶಿವ' ಎಂದರ್ಥ. ಪರಬ್ರಹ್ಮ, 'ಪರಶಿವ' ಎಂಬುದನ್ನು, ಶೂನ್ಯ, ಸ್ಥಲ, ಲಿಂಗ, ಬಯಲು, ನಿರ್ಬಯಲು, ನಿಶ್ಶೂನ್ಯ ಮೊದಲಾದ ಪರ್ಯಾಯ ಶಬ್ದಗಳಿಂದ ಇಲ್ಲಿ ನಿರೂಪಿಸಲಾಗಿದೆ. ಬೌದ್ಧ ಸಾಹಿತ್ಯದಲ್ಲಿ ಶೂನ್ಯಕ್ಕೆ ಅಭಾವ, ಇಲ್ಲದುದು ಎಂದು ಅರ್ಥವಿದೆ. ಗಣಿತ ಶಾಸ್ತ್ರದಲ್ಲಿ 'ಶೂನ್ಯ' ಎಂದರೆ ಸೊನ್ನೆ (೦) ಪೂಜಿ ಎಂದು ಅರ್ಥವಿದೆ.

ವೀರಶೈವ ವಚನಕಾರರು ಉಪನಿಷತ್ಕಾರರಂತೆಯೇ ಸ್ವತಂತ್ರ ವಿಚಾರಿಗಳು. ಉಪನಿಷತ್ಕಾರರು ಶಿರಃಪ್ರಧಾನರಾದರೆ, ವಚನಕಾರರು ಹೃದಯ ಪ್ರಧಾನರು. ಆದುದರಿಂದ ಈ ಎರಡೂ ವಾಙ್ಮಯ ಶಿವಾದ್ವೈತ ದರ್ಶನದ ಬುದ್ಧಿ ಮತ್ತು ಹೃದಯದ ಶ್ರೇಷ್ಠ ನಿದರ್ಶನವೆಂಬಂತಿವೆ ಎಂದು ನಾವು ತಿಳಿಯಬಹುದು.

ವಚನಕಾರರು ಸ್ವತಂತ್ರ ವಿಚಾರಿಗಳಷ್ಟೇ ಅಲ್ಲ ಹಿರಿಯ ಅನುಭಾವಿಗಳು, ಉನ್ನತ ಶಾಸ್ತ್ರಕಾರರು, ಅವರು ನಿರೂಪಿಸಿರುವ ಕೆಲವು ಶಬ್ದಗಳು ಉಪನಿಷತ್ತಿನ ಮಾತುಗಳಿಗಿಂತ ಸೂಕ್ಷ್ಮವಾಗಿವೆ. ಉದಾಹರಣೆಗೆ ಉಪನಿಷತ್ತಿನಲ್ಲಿ 'ಆಕಾಶ' ಎಂಬ ಒಂದು ತತ್ತ್ವವನ್ನು ಪಂಚಭೂತಗಳಲ್ಲಿ' ಒಂದು ಎಂಬ ಅರ್ಥವನ್ನು ಹೇಳಲಾಗಿದೆ. ಆದರೆ ವಚನಕಾರರು 'ಬ್ರಹ್ಮ' ಎಂಬ ಶಬ್ದಕ್ಕೆ, 'ಬಯಲು' ಎಂಬ ಶಬ್ದವನ್ನು ಪರ್ಯಾಯವಾಗಿ ಬಳಸಿದ್ದಾರೆ. ಲಿಂಗವಂತ ಸಮಾಜದಲ್ಲಿ ಶಿವನ ಪಾದವನ್ನು ಸೇರಿದರು, ಲಿಂಗೈಕ್ಯರಾದರು ಎಂಬುದನ್ನು 'ಬಯಲಾದರು, ಸರಿಯಾದರು' ಎಂದು ಹೇಳುವುದನ್ನು ಈಗಲೂ ನಾವು ಕೇಳಬಹುದು. ಆದರೆ ವಚನಕಾರರು ಬಳಸುವ 'ನಿರ್ಬಯಲು' 'ನಿಶ್ಶೂನ್ಯ' ಎಂಬ ಶಬ್ದಗಳಿಗೆ ಉಪನಿಷತ್ತಿನಲ್ಲಿ ಸರಿಯಾದ ಶಬ್ದಗಳು ಯಾವುವು ? ಎಂಬುದನ್ನು ನಾವು ಬಹಳವಾಗಿ ಹುಡುಕಿ ನೋಡಬೇಕಾಗುತ್ತದೆ.

'ಶೂನ್ಯ ಸಂಪಾದನೆ' ಎಂದರೆ 'ಶಿವನನ್ನು ಸಂಗ್ರಹಿಸುವುದು' ಎಂದು ಅರ್ಥ. 'ಶೂನ್ಯ ಪೀಠ' ಎಂದರೆ ಶಿವನ ತತ್ತ್ವಗಳನ್ನು ಉಪದೇಶಿಸುವ ಪೀಠ

ಅಥವಾ 'ಶಿವನ ಗದ್ದುಗೆ' ಎಂದು ತಾತ್ಪರ್ಯ. ಅನುಭವ ಮಂಟಪದ ಅಧ್ಯಕ್ಷ ಪೀಠವಾದ ಆ ಹಿರಿಯ ಗದ್ದುಗೆಯು ಶೂನ್ಯಪೀಠವಲ್ಲದೆ ಮತ್ತಾವು ದಾದಿತು ? ಈ ಶೂನ್ಯಸಂಪಾದನೆಯಲ್ಲಿ ವೀರಶೈವ ಸಿದ್ಧಾಂತವನ್ನು ಅನುಭವದ ನೆಲಗಟ್ಟಿನ ಮೇಲೆ ಪ್ರತಿ ಪಾದಿಸಲಾಗಿದೆ. ಪ್ರಾಯೇಣ ಇಷ್ಟೊಂದು ಅನುಭವ ಪ್ರಧಾನ ಸಾಹಿತ್ಯವು ಭಾರತದಲ್ಲಿ-ಉಪನಿಷತ್ತು ಆದ ಮೇಲೆ-ಕನ್ನಡದ ವಚನಶಾಸ್ತ್ರವೇ ಎಂದು ನಾವು ಧೈರ್ಯವಾಗಿ ಹೇಳ ಬಹುದು. ಈ ವಚನಶಾಸ್ತ್ರವನ್ನು 'ಕನ್ನಡದ ಉಪನಿಷತ್ತು' ಎಂದು ಕನ್ನಡ ಕವಿಚರಿತೆಕಾರರು ಕರೆದಿರುವುದರಲ್ಲಿ ತುಂಬ ಔಚಿತ್ಯವಿದೆ.

ವಚನಶಾಸ್ತ್ರಕ್ಕೆ ಹಿನ್ನೆಲೆಯು, ತಮಿಳಿನ ತೇವಾರ, ತಿರುವಾಚಕಂ, ಮತ್ತು ತಿರುಕುರಳ್ ಎಂದು ಸಂಶೋಧಕರು ಹೇಳುತ್ತಾರೆ. ಶಿವಶರಣರ ಮುಖದಿಂದಲೇ ಆದ್ಯರ ವಚನಗಳ ಹಿರಿಮೆ ಗರಿಮೆಗಳ ವರ್ಣನೆ ಬಂದಿದೆ. 'ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ ಸಮ, ಆದ್ಯರ ವಚನ ಪರುಷ ಕಂಡಯ್ಯ' ಇತ್ಯಾದಿಗಳಿಂದ ವಚನಶಾಸ್ತ್ರದ ತಾಯಿಬೇರು, ತಮಿಳಿನ ತೇವಾರ, ತಿರುವಾಚಕಂಗಳಲ್ಲಿದೆ ಎಂಬುದನ್ನು ನಾವು ಒಪ್ಪಿ ಕೊಳ್ಳಬೇಕಾಗುತ್ತದೆ. ಬಸವಾದಿಗಳಿಗೆ ಮಾರ್ಗದರ್ಶಕರಾದ, ಅರುವತ್ತು ಮಹಾವರ ಚರಿತ್ರೆಯಲ್ಲಿ, ಶಿವಭಕ್ತಿ, ಮಂತ್ರ ನಿಷ್ಠೆ, ಭಸ್ಮಶ್ರದ್ಧೆ, ಗುರು ಸೇವೆ, ವಿಶ್ವಪ್ರೇಮ, ವೀರವ್ರತ, ಆತ್ಮಾರ್ಪಣ ಇತ್ಯಾದಿಗಳ ಹಿನ್ನೆಲೆ ಯನ್ನು ನಾವು ನೋಡ ಬಹುದು. ಈ ವಿಷಯವನ್ನು ವಿಸ್ತಾರವಾಗಿ ತಿಳಿ ಯಲು ತಮಿಳಿನ ಪೆರಿಯಪುರಾಣವನ್ನು ಓದಬೇಕು. ಇದರಲ್ಲಿ ಆಶ್ಚರ್ಯ ಕರ ಸಂಗತಿ ಎಂದರೆ : ಭಕ್ತಿಯ-ಗಂಗೆ, ಅನುಭವದ-ಯಮುನೆ, ಸಿದ್ಧಾಂತದ -ಸರಸ್ವತಿ ಈ ಮೂರೂ ದಕ್ಷಿಣದಲ್ಲಿ ಹುಟ್ಟಿ ಉತ್ತರಕ್ಕೆ ಹರಿದಿರುವುದನ್ನು ಭಾರತೀಯ ಸಂತ ಸಾಹಿತ್ಯದಲ್ಲಿ ನಾವು ಗುರುತಿಸಬಹುದು. ಈ ಸ್ಫೂರ್ತಿಯು, ತಮಿಳಿನಿಂದ ಕನ್ನಡಕ್ಕೆ, ಕನ್ನಡದಿಂದ ಮರಾಠಿಗೆ, ಬಂಗಾಳಿಗೆ, ಅಲ್ಲಿಂದ ಗುಜರಾತಿ, ಹಿಂದಿ, ಅಸ್ಸಾಮಿ ಮೊದಲಾದ ಉತ್ತರ ಭಾರತದ ಭಾಷೆ ಗಳಿಗೆ ಪಸರಿಸಿರುವುದನ್ನು ನಾವು ಸಂಶೋಧನೆಯಿಂದ ಅರಿಯಬಹುದು. ಇದು ಅತ್ಯಂತ ಗಮನಾರ್ಹ ಸಂಗತಿ.

ಇದರಂತೆಯೇ ಸಿದ್ಧಾಂತಗಳ ಸ್ಥಾಪನೆಕೂಡ ದಕ್ಷಿಣದವರಿಂದಲೇ ಆಗಿರುವುದು ಕುತೂಹಲ ಜನಕವಾದ ಸಂಗತಿಯಾಗಿದೆ. ಶಂಕರಾಚಾರ್ಯರು ಅದ್ವೈತವನ್ನು, ಮಧ್ವಾಚಾರ್ಯರು ದ್ವೈತವನ್ನು, ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವನ್ನು, ನೀಲಕಂಠ, ರೇಣುಕ ಮತ್ತು ಶ್ರೀಪತಿ ಮೊದಲಾದವರು ಶಕ್ತಿವಿಶಿಷ್ಟಾದ್ವೈತವನ್ನು ಭಾಷ್ಯಾದಿಗಳ ಮೂಲಕವಾಗಿ ಸಿದ್ಧಾಂತಗೊಳಿಸಿರುವುದನ್ನು ನಮ್ಮ ವಾಙ್ಮಯದಲ್ಲಿ ತಿಳಿಯ ಬಹುದು.

ಇಷ್ಟಲಿಂಗ ಪೂಜೆಯು ವೀರಶೈವರ ವೈಶಿಷ್ಟ್ಯವಾಗಿದೆ. ವಿಶ್ವದಲ್ಲಿ ಲಿಂಗವಂತರಲ್ಲದೆ ಬೇರೆಯವರು ಹೀಗೆ ಪೂಜಿಸರು. ಅಂಗದಮೇಲೆ ಲಿಂಗವನ್ನು ಧರಿಸಿಕೊಂಡು ಎಡಬಿಡದಿರುವ ಲಿಂಗಪೂಜೆಯು ತತ್ತ್ವವು, ಬಹಳ ಪ್ರಾಚೀನವೆಂದು :ಸಂಶೋಧಕರು ಹೇಳಿದ್ದಾರೆ. ಶಿವಕ್ಷೇತ್ರಗಳಾದ, ಕಾಶಿ, ಕೇದಾರ, ಗೋಕರ್ಣ, ಶ್ರೀ ಶೈಲ, ಅಮರನಾಥ, ಪಂಪಾ, ರಾಮೇಶ್ವರ ಮೊದಲಾದುವು ಭರತಖಂಡದಲ್ಲಿ ಅತಿ ಪ್ರಾಚೀನ ಕ್ಷೇತ್ರಗಳಾಗಿರುವುದೇ ಇದಕ್ಕೆ ನಿದರ್ಶನ. ಹರಪ್ಪ ಮತ್ತು ಮುಹಂಜದಾರೋ ಸಂಶೋಧನೆಯಲ್ಲಿ ಕೂಡ ಲಿಂಗ ಮತ್ತು ವೃಷಭ ವಿಗ್ರಹಗಳು ಸಿಕ್ಕಿರುವುದು ಇಲ್ಲಿ ಗಮನಾರ್ಹವಾಗಿದೆ. ಶೈವಧರ್ಮದ ಒಂದು ಅಂಗವೇ ಆಗಿದೆ ವೀರಶೈವ ಧರ್ಮ. ಸ್ಥಾವರ ಲಿಂಗಪೂಜೆಯ ವಿಕಾಸವೇ ಇಷ್ಟಲಿಂಗಪೂಜೆ. ಇಷ್ಟಲಿಂಗ ಪೂಜೆಯು ಅಷ್ಟಕ್ಕೇನಿಲ್ಲದೆ, ಪ್ರಾಣಲಿಂಗ, ಭಾವಲಿಂಗ ಪೂಜೆಯಾಗಿ ಮುಂದುವರಿಯುವುದು ಇದರ ಮಹತ್ವವನ್ನು ತಿಳಿಸುತ್ತದೆ. ಸ್ಥೂಲ, ಸೂಕ್ಷ್ಮ, ಕಾರಣ ದೇಹಗಳು, ಅಂದರೆ, ತ್ಯಾಗಾಂಗ, ಭೋಗಾಂಗ, ಯೋಗಾಂಗಗಳಲ್ಲಿ, ಇಷ್ಟ, ಪ್ರಾಣ, ಭಾವಲಿಂಗಗಳನ್ನು ಅನುಸಂಧಾನ ಮಾಡುವುದೇ ಇದರ ಉದ್ದೇಶವಾಗಿದೆ. ಪ್ರಾಣ ಹಾಗೂ ಭಾವಲಿಂಗಗಳ ಪೂಜೆಗೆ ಇಷ್ಟಲಿಂಗಪೂಜೆಯು ಸಾಧಕವಾಗಿದೆ. ಇಷ್ಟಲಿಂಗ ಪೂಜೆ ಇಲ್ಲದೆ, ಪ್ರಾಣಲಿಂಗ, ಭಾವಲಿಂಗ ಪೂಜೆಗಳು ಸಾಧ್ಯವಾಗುವುದಿಲ್ಲ. ಪ್ರಾಚೀನ ಕಲ್ಯಾಣದ ಅನುಭವ ಮಂಟಪದಲ್ಲಿ, ಶಿವಯೋಗಿ ಸಿದ್ಧರಾಮನಿಗೆ, ಷಟ್‌ಸ್ಥಲಜ್ಞಾನಿ ಚೆನ್ನಬಸವಣ್ಣನು, ಜಗದಾದಿಜಂಗಮ ಅಲ್ಲಮ ಪ್ರಭುವಿನ ಅಪ್ಪಣೆಯಂತೆ ಇಷ್ಟಲಿಂಗ ಧಾರಣಮಾಡಿದ ಉದ್ದೇಶ ಇಲ್ಲಿ ಗಮ

ನಾರ್ಹ. ಇಷ್ಟಾರ್ಥವನ್ನು ಕೊಡುವ, ಅನಿಷ್ಟಗಳನ್ನು ಪರಿಹರಿಸುವ, ಶಿವಯೋಗಸಿದ್ಧಾಂತಕ್ಕೆ ತಾಯಿ ಬೇರಿನಂತಿರುವ–ಇಷ್ಟಲಿಂಗವನ್ನು ಪೂಜಿಸುವುದರಿಂದ ಲಾಭವುಂಟು ಇದನ್ನು 'ಕರಸ್ಥಲದ ಪರಬ್ರಹ್ಮ' ಪೂಜೆಯಿಂದ ಎಂದು ಶರಣರು ಕರೆದಿದ್ದಾರೆ. ಇಷ್ಟಲಿಂಗದ ಸಾಧಕನು ಕೃತಾರ್ಥನಾಗುತ್ತಾನೆ. ಜಗಗಲ, ಮುಗಿಲಗಲ, ಆಕಾಶದಿಂದತ್ತತ್ತ, ಪಾತಾಳದಿಂದಿತ್ತಿತ್ತ, ಎನಿಸುವ ಪರಬ್ರಹ್ಮನು ಭಕ್ತನ ಅಂಗಯ್ಯಲ್ಲಿ ಚುಳುಕಾಗಿ ನಿಲ್ಲುವುದು ಶಿವಯೋಗದಿಂದ ಸಾಧ್ಯವಾಗಿದೆ. ಇಷ್ಟಲಿಂಗದ ಕಳೆ ಪ್ರಾಣಕ್ಕೆ ವೇಧಿಸಿ, ಪ್ರಾಣಲಿಂಗ ಸಂಬಂಧವಪ್ಪ ಭೇದವು ನಿಮ್ಮ ಶರಣರ ಸಂಘದಿಂದಲ್ಲದೆ ದೊರೆಕೊಳ್ಳದು .... ಬಸವಣ್ಣ ತನ್ನ ಕರಸ್ಥಳದ ಇಷ್ಟಲಿಂಗಾರ್ಚನೆಯಲ್ಲಿ ಮುಳುಗಿ ಲಿಂಗದೊಳ್ ತಿಳಿದು ನೋಡುತ್ತಿರುವಲ್ಲಿ, ಇಷ್ಟಲಿಂಗದಕಳೆ ಪ್ರಾಣಕ್ಕೆ ವೇಧಿಸಿ, ಕರಸ್ಥಳದಲ್ಲಿ ಇಷ್ಟ- ಪ್ರಾಣ ಚೈತನ್ಯದ ಬೀಜದಲ್ಲಿ ಮಹಾಲಿಂಗ ಮೊಳಕೆ ಯೊಡೆದು ಪ್ರಾಣಲಿಂಗವಾಗಿ ಪ್ರಜ್ವಲಿಸಿ, ಪ್ರಕಾಶಿಸುವ ಪ್ರಾಣಲಿಂಗದ ಸಂಬಂಧ ಇಷ್ಟಲಿಂಗದಿಂದ ಅಷ್ಟ ವಿಧಾರ್ಚನೆಯ ಕ್ರಿಯೆ ಅಂತರಂಗದ ಅರಿವಿನಲ್ಲಿ ನಾಟಿ ಅರಿವೆಲ್ಲ ಜ್ಞಾನಲಿಂಗ ವಾಗಿ, ಜ್ಞಾನಲಿಂಗ ಹೊರಗೆ ಕಾಯದಲ್ಲಿ ಮೂಡಿ ತೋರಿದರೆ, ಆಚಾರ ಲಿಂಗವಾಗಿ ಹೊಮ್ಮುವ ಕ್ರಿಯಾಜ್ಞಾನಗಳ ಸಮರಸ ಸಂಬಂಧ ತಿಳಿಯಬೇಕಾದರೆ ಶರಣರ ಸಂಗ ಬೇಕು. ಕೂಡಲ ಸಂಗಮದೇವರ ನೆನೆವೊಡೆ ಶರಣರ ಸಂಗವೇ ಮೊದಲು (ಪರಾಮರ್ಶೆ, ಪುಟ :೪೪೬)

"ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನಲ್ಲದೆ ಮತ್ತಾರನೂ ಕಾಣೆ" (ಪರಾಮರ್ಶೆ, ಪುಟ : ೪೫೨–೪೫೪)

"ಚೆನ್ನಬಸವಣ್ಣನು, ಚೆನ್ನಸಂಗಮನಾಥ" ಎಂಬ ಅಂಕಿತವುಳ್ಳ ತನ್ನ ಅಂಗೈಯಲ್ಲಿದ್ದ ಇಷ್ಟಲಿಂಗವನ್ನು, 'ಲಕ್ಷಣವನ್ನು ನೋಡು, ಅಂಗಲಕ್ಷಣವನ್ನು ಬೋಧಿಸು' ಎಂದು ಬಸವಣ್ಣನವರ ಕೈಗೆ ಕೊಟ್ಟರೆ, ಬಸವಗುರು 'ಲಿಂಗದಲ್ಲಿ ಲಕ್ಷಣವನ್ನು ನೋಡಲಾಗದು' ಎಂದು ಅನುಗ್ರಹಿಸಿ 'ಚೆನ್ನಸಂಗಮನಾಥ' ಲಿಂಗವನ್ನು ಶಿಷ್ಯನ ಕರಸ್ಥಳಕ್ಕೆ ಕೊಟ್ಟನಲ್ಲದೆ, 'ದಿವ್ಯಾನುಗ್ರಹ' ಎಂದು ಗುರುವಿನಿಂದ ಬಂದ ಲಿಂಗವನ್ನು ಕೈಯ್ಯಲ್ಲಿ ತೆಗೆದುಕೊಂಡ ಶಿಷ್ಯ

ಚೆನ್ನಬಸವಣ್ಣನು ಪರಿಮಿತಿಯು ಹೊಟ್ಟೆಯು ಕೂಸಿಗೆ ಕಟ್ಟಿದ ವಿಭೂತಿಯ ಪಟ್ಟ ಈಗ ಕೂಡಲ ಚೆನ್ನಸಂಗಮದೇವರ ಮಹಾಮನೆಯ ಗಣಂಗಳು ಮೆಚ್ಚು ವಂತೆ ನಡೆಯಿತು. ಚೆನ್ನಬಸವಣ್ಣ-ಸಂಗನಬಸವಣ್ಣನ ಕರುಣದ ಶಿಶು ವಾದ (ಪರಾಮರ್ಶೆ, ಪುಟ : ೪೫೭)

ಈ ಪ್ರಸಂಗವು ಅಂದರೆ ಚೆನ್ನಬಸವನಿಗೆ ಬಸವನು ಲಿಂಗದೀಕ್ಷೆಯನ್ನು ಮಾಡಿದ ವಿಧಾನವು, ಚೆನ್ನಬಸವ ಪುರಾಣ, (ಪುಟ ೫೬, ಕಾಂಡ ೧) ದಲ್ಲಿಯೂ ಬಸವಪುರಾಣದಲ್ಲಿಯೂ ನಿರೂಪಿತವಾಗಿದೆ. ಚೆನ್ನಬಸವಣ್ಣನು ತನ್ನ ವಚನಗಳಲ್ಲಿ 'ಎನ್ನ ಕೈಯ್ಯಲ್ಲಿ ಕೊಟ್ಟನಯ್ಯ ನಿಕ್ಷೇಪವಾಗಿ ಕೂಡಲ ಚೆನ್ನಸಂಗನಲ್ಲಿ ಬಸವಣ್ಣನೆಂಬ ಗುರು ಲಿಂಗವನ್ನು.' ಎಂಬುದೊಂದು ವಚ ನವಿದೆ. ಇದು ಚೆನ್ನಬಸವನಿಗೆ ಬಸವನ, ಲಿಂಗದೀಕ್ಷೆಯನ್ನು ಕೊಟ್ಟನೆಂಬ ಶೂನ್ಯಸಂಪಾದನೆಯ ವಾಕ್ಯಕ್ಕೆ ನಿದರ್ಶನವಾಗಿದೆ.

ವೇಧಾ, ಮಂತ್ರ, ಕ್ರಿಯಾ ಎಂಬ ತ್ರಿವಿಧದೀಕ್ಷೆಯಿಂದ ಕಾರಣಶರೀರ ವೆನಿಸುವ ಯೋಗಾಂಗದ ಭಾವಕರಸ್ಥಲದಲ್ಲಿ, ಭಾವಲಿಂಗವನ್ನು ಪ್ರತಿ ಷ್ಠಾಪಿಸಿದ್ದಾನೆ ಶ್ರೀಗುರು ಸೂಕ್ಷ್ಮ ಭೋಗಾಂಗದ ಪ್ರಾಣಸ್ಥಲ ಶರೀರವೆನಿ ಸುವ ತ್ಯಾಗಾಂಗದ ಕೈಯ್ಯಲ್ಲಿ ಇಷ್ಟಲಿಂಗವನ್ನು ನೆಲೆಗೊಳಿಸಿದ್ದಾನೆ ಶ್ರೀ ಗುರು. ಈ ದೀಕ್ಷೆ ಹೆಸರಿಗೆ ಮೂರುವಿಧ, ಒಳಗೆ ನೋಡಿದರೆ ಸರ್ವವಿಧ (ಪರಾಮರ್ಶೆ, ಪುಟ: ೪೬೦)

ಈ ವಚನವು ತ್ರಿವಿಧ ದೇಹಗಳಲ್ಲಿ, ತ್ರಿವಿಧ ಲಿಂಗಗಳನ್ನು ಶ್ರೀ ಗುರುವು ಅನುಗ್ರಹಿಸಿ ಕೊಡುವ ವಿಧಾನವನ್ನು ನಿರೂಪಿಸುತ್ತದೆ.

"ಶ್ರೀ ಗುರು ಕೃಪೆಯಿಂದ ಕೂಡಲ ಚೆನ್ನಸಂಗಯ್ಯನಲ್ಲಿ ಸರ್ವಾಂಗ ಲಿಂಗಿಯಾದ ಚೆನ್ನಬಸವಣ್ಣ — ಪರುಷದ ಕೈಯಲ್ಲಿ ಸಿಕ್ಕ ಲೋಹದ ಅವಗುಣಕೆಟ್ಟು ಬಂಗಾರವಾದಂತೆ, ಕರಸ್ಥಲದಲ್ಲಿ ಪ್ರತ್ಯಕ್ಷ ದೃಷ್ಟಿತಾಗಿ ಇಷ್ಟಲಿಂಗ ರಸಮೂರ್ತಿಯಾದ ಶಿಷ್ಯನ ಪ್ರಾಣಸ್ಥಲದ ಲಿಂಗರಸವೇ ಜಂಗಮ ಲಿಂಗವಾಗಿ ಪರಿಪೂರ್ಣನಿತ್ಯವನ್ನು ಪ್ರಾಣಿಸಿದೆ (ಪರಾಮರ್ಶೆ, ಪುಟ ೪೬೩)

ಈ ಮೇಲಿನ ಉಲ್ಲೇಖನಗಳು ಶಿವದೀಕ್ಷಾಪದ್ಧತಿಯಲ್ಲಿ, ಗುರು, ಹಸ್ತ ಮಸ್ತಕ ಸಂಯೋಗದಿಂದ, ತನ್ನ ಮಂತ್ರಶಕ್ತಿಯಿಂದ, ಶಿಷ್ಯನ ಹೃದಯ ಸ್ಥವಾದ ಪ್ರಾಣತತ್ತ್ವವನ್ನು ಕರದ – ಇಷ್ಟಲಿಂಗಕ್ಕೆ ಆಹ್ವಾನಿಸಿ, ಅಲ್ಲಿ ಶಿವಚೈತನ್ಯವನ್ನು ಅಳವಡಿಸಿ, ಶಿಷ್ಯನ ಕರಸ್ಥಳಕ್ಕೆ ಇಷ್ಟಲಿಂಗವನ್ನು ಅನು ಗ್ರಹಿಸುವ ವಿಚಾರಗಳನ್ನೇ ನಿರೂಪಿಸುತ್ತವೆ.

"ಚೆನ್ನಬಸವಣ್ಣನು ತನ್ನ ಗುರುಸ್ವಾಮಿ ಬಸವಣ್ಣನ ಕರಸ್ಥಳದಲ್ಲಿ ಉದಯಿಸಿದ್ದಾನೆ. ಇಷ್ಟಲಿಂಗವನ್ನು ಸರ್ವಾಂಗದಲ್ಲಿ ಹೊತ್ತುಕೊಂಡಿದ್ದಾನೆ. ಮತ್ತೆ ಅದೇ ಲಿಂಗದಲ್ಲಿ ಲಿಂಗದ ಆಗುಹೋಗು ಆಗಿದ್ದಾನೆ. ಅಂಗದ ರೂಪುಗೊಂಡು ಇದ್ದಾನೆ."

ಒಳಗೆ ಹುದುಗಿ ಎಣ್ಣೆ ಇದ್ದರೆ ಮಥನಿಗೆ ತೆಗೆದು ತೋರಿದಲ್ಲದೆ ಅವು ಕಾಣುವುದೆಂತು ? ಪ್ರಾಣದ ಮರೆಯಲ್ಲಿ ಹುದುಗಿದ್ದು ಹೊರಗೆ ಪ್ರಕಟ ವಾಗಿ ತೋರದೆ ಒಳಗೆ ಮಂದಾಗ್ನಿಯಂತೆ ನಿತ್ಯ ನಿವಾಸವಾಗಿ ಸ್ವಯಂಭೂ ಪ್ರಾಣಲಿಂಗ ಉರಿಯುತ್ತಿದ್ದರೆ, ಪ್ರಾಣವನ್ನು ಮಥನಿಸಿ ಲಿಂಗವನ್ನು ತೆಗೆದು ಅಂತರಂಗದ ಅನುಭವಕ್ಕೆ ಪ್ರತ್ಯಕ್ಷಮಾಡಿ ಕೊಡಬಲ್ಲ ಗರುವ (ಗುರು) ಬೇಕಲ್ಲವೆ ? ಅಂಥ ಗರುವ ಚೆನ್ನಬಸವಣ್ಣ. ಜಗದೊಳಗೆ ಕೂಡೆ ಪರಿಪೂರ್ಣ ಶಿವನೆಂದರೆ ಅಂತರಂಗದಲ್ಲಿ ಕಾಣಬಹುದೆ ? ಜಗದ ಕಟ್ಟಿಗೆಯನ್ನು, ಜಗ ವೆಂಬ ಎಳ್ಳನ್ನು ಹಿಂಡಿ ಪರಿಪೂರ್ಣ ಪ್ರಾಣ ಪರಂಜ್ಯೋತಿಯನ್ನು ತೆಗೆದು ತೋರಿದ ಲಿಂಗಧೀರ ಚಿಕ್ಕ ದಣಾಯಕ. ಮತ್ತೆ ನಿಜಪ್ರಾಣದೊಳಗಿನ ಲಿಂಗವ ಕರಸ್ಥಲಕೆ ತಂದು, ಆ ಕರಸ್ಥಳದ ಲಿಂಗವನ್ನು ಸರ್ವಾಂಗದಲ್ಲಿ ಪ್ರತಿ ಷ್ಠಿಸಿ ತೋರಿ ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಅರಿವತೋರಿಸಿ. ಮರ್ತ್ಯ ಲೋಕದೊಳಗೆಲ್ಲ ಇಂದು ಮೊದಲಾಗಿ ಪ್ರಾಣಲಿಂಗದ ಘನವ ಹರಸಿ ಶಿವ ಭಕ್ತಿಯನು ಉದ್ಧರಿಸಿದರು ಚಿಕ್ಕದಣ್ಣಾಯಕ. ಸ್ಥಾವರಲಿಂಗದಲ್ಲಿ ಮುಗಿ ಯುತ್ತಿದ್ದ ಶೈವ ಭಕ್ತಿಯು, ಕರಸ್ಥಳದ ಇಷ್ಟಲಿಂಗಕ್ಕೆ ಏರಿ ಬಂದು ಅಲ್ಲಿಯೂ ಮುಕ್ತಾಯವಾಗದೆ, ಪ್ರಾಣದ ಮರೆಯ ಮಹಾಂತ ಮರ್ಮಸ್ಥಾನವನ್ನು ಭೇದಿಸಿ ನಿಜಪ್ರಾಣದೊಳಗಿಹ ಸುಜ್ಞಾನಲಿಂಗವನು ಕಂಡು ಸರ್ವಾಂಗದಲ್ಲಿ ಪ್ರಾಣಲಿಂಗ ಪ್ರಜ್ವಲಿಸಿ ಪ್ರತಿಷ್ಠಿತವಾಗಿರುವುದನ್ನು ಅನುಭವದ ಕಣ್ಣಾರೆ

ಕಂಡು, ಪ್ರಸಾದ, ನಿಜಲಿಂಗೈಕ್ಯ, ಒಂದು ಗಂಟೆ, ದಿನ-ವರ್ಷದ ಪರಿಮಿತಿಯನ್ನು ದಾಟಿ, ತನ್ನ ನಿಜವಾದ ಲಿಂಗದಲ್ಲಿ ನಿತ್ಯ ಅಂಗದ ಕೂಟದಲ್ಲಿ, ಕೂಡದ ಕೂಟದಲ್ಲಿ ಒಂದಾಗಿರುವ ಹಾದಿಯನು ಕಂಡು ನಡೆದ ಶಿವ ಭಕ್ತಿಯು ಪ್ರಾಣಲಿಂಗಕ್ಕೆ ಎತ್ತಲ್ಪಟ್ಟಿತು ಚೆನ್ನಬಸವಣ್ಣನಿಂದ. ಅಂತರ್ಲಿಂಗ ಮಾರ್ಗದ ಗಂಭೀರ ಸಾಹಸಿ ಚೆನ್ನಬಸವಣ್ಣ.

(ಪುಟ,೪೭೧) "ಶೂನ್ಯಸಂಪಾದನೆಯ ಪರಾಮರ್ಶೆ" ಎಂಬ ಗ್ರಂಥದ ಮೇಲೆಕಂಡ ಉಲ್ಲೇಖಗಳಿಂದ ಸ್ಥಾವರಲಿಂಗಪೂಜೆಯು ಶಿವಭಕ್ತಿಮಾರ್ಗದಲ್ಲಿ ಉತ್ಕ್ರಾಂತಿ ಇಷ್ಟಲಿಂಗಪೂಜೆ, ಇಷ್ಟಲಿಂಗದ ವಿಕಾಸ ಪ್ರಾಣ-ಭಾವ ಲಿಂಗಗಳಲ್ಲಿದೆ. ಈ ಲಿಂಗ ಧಾರಣವು ಗುರುವಿನ ಹಸ್ತಮಸ್ತಕ ಸಂಯೋಗದಿಂದ ಆಗತಕ್ಕುದು. ಪರುಷ ಮುಟ್ಟಿದ ಕಬ್ಬಿಣವು ಸುವರ್ಣವಾಗುವಂತೆ, ಶಿಷ್ಯನ ಹೃದಯಸ್ಥವಾದ ಪ್ರಾಣವು ಶ್ರೀ ಗುರು ಕರುಣೆಯ ಬಲದಿಂದ ಶಿಷ್ಯನ ಅಂಗೈಯ್ಯಲ್ಲಿ ಚುಳುಕಾಗಿ ಬಂದು ಆನಂದ ಮೂರ್ತಿಯಾಗಿ ಕಂಗೊಳಿಸುತ್ತದೆ ಎಂಬ ತತ್ತ್ವವು ಇಲ್ಲಿ ನಿರೂಪಿತವಾಗಿದೆ.

ವೀರಶೈವ ಧರ್ಮದಲ್ಲಿ ಇಷ್ಟಲಿಂಗ ಧಾರಣವು ಅತಿಮುಖ್ಯವಾದ ವಿಷಯ. ಇದು ಈ ಧರ್ಮದ ಕೇಂದ್ರೀಭೂತವಾದ ತತ್ತ್ವವಾಗಿದೆ. ಇಷ್ಟಲಿಂಗಪೂಜೆಯನ್ನು ಅವಲಂಬಿಸಿಯೇ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳು ಸುತ್ತುವರಿದಿವೆ. ಇಷ್ಟಲಿಂಗವನ್ನೇ 'ಕರಸ್ಥಲದ ಪರಬ್ರಹ್ಮ' ಎಂದು ವಚನಕಾರರು ಕರೆದಿದ್ದಾರೆ ವಚನಕಾರರು ಸಚ್ಚಿದಾನಂದರೂಪವಾದ ಪರಬ್ರಹ್ಮವು ತಮ್ಮ ಅಂಗೈಯ್ಯಲ್ಲಿ 'ಚುಳುಕಾದುದು' ಎಂದು ಹಲವು ಸಮಯದಲ್ಲಿ ಹೇಳಿರುತ್ತಾರೆ. 'ಇಷ್ಟಲಿಂಗವು' ಕಾಂತಿಯಿಂದ ಅಂದರೆ ಚಿದ್ರಸದಿಂದ ಕೂಡಿರುವುದು. ಪೂಜಕನು ತನ್ನ ಮುಖಕ್ಕೆ ಹನ್ನೆರಡು ಅಂಗುಲದ ದೂರದಲ್ಲಿ ಇಷ್ಟಲಿಂಗವನ್ನು ತನ್ನ ಎಡ ಅಂಗೈಯ್ಯಲ್ಲಿಟ್ಟುಕೊಂಡು ನಿಷ್ಠೆಯಿಂದ ನೋಡಿದರೆ, ಆಗ ಲಿಂಗದಲ್ಲಿ ಪೂಜಕನಾದ ತನ್ನ ಪ್ರತಿಬಿಂಬವನ್ನು ಕಾಣಬಹುದು. ಹೀಗೆ ತನ್ನನ್ನು ತಾನು ಲಿಂಗದಲ್ಲಿ ಕಾಣುವ ವಿಧಾನವು ಅತ್ಯಂತ ರಹಸ್ಯತಮವೆನಿಸಿದೆ. ಲಿಂಗದಲ್ಲಿ ತಾನೂ ತನ್ನಲ್ಲಿ ಲಿಂಗವೂ

ಇರುವುದನ್ನು ಇಷ್ಟಲಿಂಗಪೂಜೆಯಲ್ಲಿ ಮನಗಾಣಿಸಿರುವರು. ಇಷ್ಟಲಿಂಗದ ಮೇಲಣ ಕಾಂತಿಯು ಪ್ರಕಾಶಮಾನವಾಗಿದ್ದರೆ ಪೂಜಕನ ಮನಸ್ಸನ್ನು ತನ್ನೆಡೆಗೆ ಆಕರ್ಷಿಸಲು ನೆರವಾಗುತ್ತದೆ. 'ಲಿಂಗವೆಂಬ ದೇಹಕ್ಕೆ ಕಾಂತಿಯು-ಚಿದ್ರಸವು ಶಿವಪ್ರಕಾಶದಂತಿರುವುದು' ಎಂದು ಪೂಜಕನು ತಿಳಿಯಬೇಕು. ಹಾಗೆ ಮನಸ್ಸು ಲಿಂಗದಲ್ಲಿ ರಮಿಸುವುದರಿಂದ ಮನಸ್ಸಿನ ಚಂಚಲವು ಹರಿದು ಮನಸ್ಸು ಶಿವಯೋಗದಲ್ಲಿ ರಮಿಸುತ್ತದೆ. "ಯೋಗಃ ಚಿತ್ತವೃತ್ತಿ ನಿರೋಧಃ" ಎಂಬ ಯೋಗಶಾಸ್ತ್ರದ ನಿಯಮದಂತೆ ಅಲ್ಲಿ ಶಿವಯೋಗವು ಸಿದ್ಧವಾಗಲು ಸಾಧ್ಯವಾಗುತ್ತದೆ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂದು ಉಪನಿಷತ್ತು ಹೇಳುತ್ತದೆ. ಆಧುನಿಕ ಶಾಸ್ತ್ರಜ್ಞರು ಕೂಡ The mind is the man ಎಂದು ಹೇಳಿರುತ್ತಾರೆ.

ವೀರಶೈವರ ಇಷ್ಟಲಿಂಗವು ಗುಂಡಾಗಿರುತ್ತದೆ. ಆ ಆಕಾರವು ಆದ್ಯಂತ ರಹಿತನಾದ ಪರಬ್ರಹ್ಮನ ಸಂಕೇತ. ಲಿಂಗವು ಸುತ್ತಲೂ ಕಾಂತಿ ಅಥವಾ ಚಿದ್ರಸ ಎಂಬ ಕವಚದಿಂದ ಕೂಡಿರುತ್ತದೆ. ಅದು ಪರಶಿವನನ್ನು ಆವರಿಸರುವ ಶಕ್ತಿಯಸಂಕೇತ. ಆ ಕಾಂತಿಯನ್ನು ಗೇರುಎಣ್ಣೆಯಿಂದ ಮಾಡಿರುತ್ತಾರೆ. ಅದು ಒಂದುಬಗೆಯ ಆಕರ್ಷಣ ಶಕ್ತಿಯಿಂದ ಕೂಡಿರುತ್ತದೆ. ಚಂದ್ರಕಾಂತ ಶಿಲೆಯು ಚಂದ್ರನನ್ನು ಆಕರ್ಷಿಸುವಂತೆ, ಲಿಂಗದ ಕಾಂತಿಯು ಪೂಜಕನ ಮನಸ್ಸನ್ನು ತನ್ನಕಡೆಗೆ ಆಕರ್ಷಿಸುತ್ತದೆ. ಇಷ್ಟಲಿಂಗದ ಚಿದ್ರಸವು ನಿರ್ಮಲವಾಗಿದ್ದರೆ-ಕನ್ನಡಿಯಲ್ಲಿ ನಾವು ನಮ್ಮ ಮುಖವನ್ನು ನೋಡಿಕೊಳ್ಳುವಂತೆ -ಪೂಜಕನು ಲಿಂಗದಲ್ಲಿ ತನ್ನ ಪ್ರತಿಬಿಂಬವನ್ನು ತಾನೇ ನೋಡಿ ಹರುಷಗೊಳ್ಳಬಹುದು. ತನನ್ನು ತಾನೇ ನೋಡುವ ಈ ವಿಷಯವು ಎಲ್ಲರಿಗೂ ಪ್ರಿಯವಾದುದು. ಈ ಘಟನೆಯು 'ತಾನು ಲಿಂಗದಲ್ಲಿ' ಎಂಬುದನ್ನು ದೃಢಪಡಿಸುತ್ತದೆ. ಅಲ್ಲದೆ 'ತತ್-ತ್ವಂ-ಅಸಿ'-ಆ ಪರಬ್ರಹ್ಮವೇ ನೀನಾಗಿರುವೆ, 'ಅಹಂ ಬ್ರಹ್ಮಾಸ್ಮಿ' 'ಶಿವೋಹಂ' ನಾನು ಬ್ರಹ್ಮನಾಗಿರುವೆ, ಶಿವನೇ ನಾನಾಗಿರುವೆ, ಎಂಬ ಅನುಭವವನ್ನು ನಮ್ಮಮನಸ್ಸಿಗೆ ಉಂಟು ಮಾಡುತ್ತದೆ. ಷೋಡಶೋಪಚಾರದಿಂದ ಇಷ್ಟಲಿಂಗವನ್ನು ಪೂಜಿಸುವುದು ಶಿವಯೋಗದಲ್ಲಿ ಒಂದು ಘಟ್ಟವನ್ನು ಏರಿದಂತಾಗುತ್ತದೆ. ಅಲ್ಲಿಂದ ಮುಂದೆ

ಪ್ರಾಣಾಯಾಮ ಕ್ರಮದಿಂದ ಪ್ರಾಣಲಿಂಗವನ್ನು ಅರ್ಚಿಸುವುದರಿಂದ ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಇಷ್ಟಲಿಂಗ ಪ್ರಾಣಲಿಂಗಗಳ ಅನುಸಂಧಾನದ ಫಲವಾಗಿ ಆನಂದರೂಪವಾದ ಭಾವಲಿಂಗಪೂಜೆಯನ್ನು ಮನಸ್ಸಿನಲ್ಲಿ ಸಾಧಿಸಬಹುದು. ಅಂತಃಕರಣಗಳು ಪರಿಶುದ್ಧವಾಗಿ, ಮನಸ್ಸು ನಿಶ್ಚಂಚಲವಾಗಿದ್ದರೆ ಮಾತ್ರ ಈ ಭಾವಲಿಂಗಪೂಜೆ ಸಿದ್ಧವಾಗುತ್ತದೆ. ಈ ತ್ರಿವಿಧ ಲಿಂಗಪೂಜೆಯಿಂದ ಪಾರಲೌಕಿಕ ಫಲಪ್ರಾಪ್ತಿಯಲ್ಲದೆ, ಅದರಿಂದ ಉಂಟಾಗುವ ಮನೋಬಲ ಮತ್ತು ಆತ್ಮಬಲಗಳಿಂದ ಸಾಧಕನು ಲೌಕಿಕಕಾರ್ಯಗಳಲ್ಲಿ ಕೂಡ ಸಿದ್ಧಿಯನ್ನು ಪಡೆಯಬಹುದು. ಈ ಇಷ್ಟಲಿಂಗವನ್ನು, ಬಂಗಾರದ, ಬೆಳ್ಳಿಯ, ಅಥವಾ ಶ್ರೀಗಂಧದ ಕರಡಿಗೆಯಲ್ಲಿ ಧರಿಸುವುದು ಶುಭಪ್ರದ. ಆ ಕರಡಿಗೆಯನ್ನು ಕಟ್ಟುವ ಶಿವದಾರವು ೬೩ ಎಳೆಗಳಿಂದ ಕೂಡಿರಬೇಕೆಂದು ಶಿವಶರಣರ ಅಂಬೋಣ. ಇದು ೬೩ ಶೀಲಗಳ ಅಥವಾ ೬೩ ಮಂದಿ ಪುರಾತನರ ಸಂಕೇತವೆಂದು ನಾವು ತಿಳಿಯ ಬಹುದು.

ಇಷ್ಟಲಿಂಗವನ್ನು ಶರಣರು ಮೂಗಿಗೆ ಹನ್ನೆರಡಂಗುಲ ದೂರದಲ್ಲಿಇರುವಂತೆ ಎಡ ಅಂಗೈನಲ್ಲಿಟ್ಟು ನಿರೀಕ್ಷಿಸಿ ರುದ್ರಾಕ್ಷಿಯಿಂದ ಪ್ರಣವ ಪಂಚಾಕ್ಷರೀ ಮಂತ್ರವನ್ನು ನಿಯಮಿತ ಪ್ರಮಾಣದಲ್ಲಿ ಎಣಿಸಿ ಶಿವಪೂಜೆಯನ್ನು ಬೆಳಗು-ಸಂಜೆ ಎರಡು ವೇಳೆಯಾದರೂ ನಿರ್ವಹಿಸಬೇಕು ಎಂದಿದ್ದಾರೆ. ಇತ್ತೀಚೆಗೆ ಕೆಲವರು ಇಷ್ಟಲಿಂಗವನ್ನು ತಮ್ಮ ಮುಂದೆ ಒಂದು ತಟ್ಟೆಯಲ್ಲಿಟ್ಟು ಕೊಂಡು ಪೂಜೆ ಮಾಡುವ ರೂಢಿಯನ್ನು ಪ್ರಚಾರದಲ್ಲಿ ತರುತ್ತಿದ್ದಾರೆ. ಇದು ಶೈವ ಪದ್ಧತಿಯೇ ಹೊರತು ವೀರಶೈವವಲ್ಲ. ಇವನ್ನು ಪೂರ್ವಪೂರ್ವ ಪ್ರಯಾಣವೆನ್ನದೆ ವಿಧಿಯಿಲ್ಲ. 'ಗುರುವು ಕೊಟ್ಟಲಿಂಗವನ್ನು ಕ್ಷಣಮಾತ್ರವೂ ಅಂಗದಿಂದ ಹೊರಗೆ ಇರಿಸಬಾರದು' ಎಂದು ಶಿವಾಗಮದ ವಚನವಿದೆ. ಮತ್ತೆ ಕೆಲವರು ಇಷ್ಟಲಿಂಗವನ್ನು ಬಿಟ್ಟು, 'ಕೇವಲ ಪ್ರಾಣಲಿಂಗ, ಭಾವಲಿಂಗ ಪೂಜೆಯನ್ನು ಮಾತ್ರ ಮಾಡುತ್ತೇವೆ' ಎಂದು ಹೇಳುವರು. ಇದು ವಿವೇಕ ಶೂನ್ಯವಾದ ದಾರಿ. ಸಿಚ್ಚಣಿಗೆ ಇಲ್ಲದೆ ಮಹಡಿಹತ್ತುವುದು, ಹಾಗೂ ನೆಲಗಟ್ಟಿಲ್ಲದೆ ಮನೆ ಕಟ್ಟುವುದು ಹೇಗೆ ಅಸಾಧ್ಯವೋ, ಅಪಾಯಕಾರಿಯೋ ಹಾಗೆ-ಇಷ್ಟಲಿಂಗ

ಪೂಜೆಯನ್ನು ಬಿಟ್ಟು ಮತ್ತುಳಿದ ಪ್ರಾಣ ಭಾವ ಲಿಂಗಗಳನ್ನು ಪೂಜಿಸುವುದು ಎಂದು ನಾವು ಹೇಳಬಹುದು.

ಶಿವದೀಕ್ಷೆಯಲ್ಲಿ ವಿಧ್ಯುಕ್ತ ಮಂತ್ರಗಳಿಂದ ಸಂಸ್ಕಾರ ಹೊಂದಿ, ಗುರುವಿನ ಮಂತ್ರಶಕ್ತಿಯಿಂದ ಚೈತನ್ಯಪಡೆದ ಇಷ್ಟಲಿಂಗವು, ಸಾಧಕನಿಗೆ ಇದ್ದಲ್ಲಿಯೇ ಪ್ರಪಂಚದ ಎಲ್ಲ ವಿಷಯಗಳನ್ನೂ-ಭಕ್ತನ ಅಂಗೈಯ್ಯಲ್ಲಿ ಅರಿಯುವ ಸಾಮರ್ಥ್ಯವನ್ನು ಉಂಟುಮಾಡುತ್ತದೆ. ಟೆಲಿವಿಜನ (Television) ಯಂತ್ರದ ಸಹಾಯದಿಂದ ಪ್ರಪಂಚದಲ್ಲಾಗುವ ಎಲ್ಲ ಸಂಗತಿಗಳನ್ನೂ ಈಗ ನಾವು ಕುಳಿತಲ್ಲಿಯೇ ನೋಡುತ್ತೇವೆ. ಮೊನ್ನೆ ಚಂದ್ರಲೋಕ ಗಮನವನ್ನು ಕೂಡ ಅಮೆರಿಕನ್ನರು ಈ ಭೂಲೋಕದಲ್ಲಿಯೇ – ಟಿಲಿವಿಜನ್ ಮೂಲಕ- ನೋಡಿದುದನ್ನು ಇಲ್ಲಿ ಸ್ಮರಿಸಬಹುದು. ಇದು ವಿಜ್ಞಾನ ಶಾಸ್ತ್ರದ ಮಹತ್ತ್ವದಿಂದ ಆದುದು. ಹಾಗೆಯೇ ಸುಜ್ಞಾನ ಮೂಲವಾದ ಶಿವಯೋಗದ ಬಲದಿಂದ ಇಷ್ಟಲಿಂಗದಲ್ಲಿ ಚೈತನ್ಯಮೂಡುವುದು. ನಾವು ವಿಶ್ವದ ಎಲ್ಲ ಆಗುಹೋಗುಗಳನ್ನೂ ಕುಳಿತಲ್ಲಿಯೇ ತಿಳಿಯಲು ಸಾಧ್ಯವಾಗುತ್ತದೆ. ಶಿವಶರಣರ ಇಂತಹ ಅನುಭವಗಳನ್ನು-ಪ್ರತ್ಯಕ್ಷಗಳನ್ನು ನಾವು ಪುರಾಣಗಳಲ್ಲಿ ಓದುತ್ತೇವೆ. ಹಾಗೂ ಅಂತಹ ಶಿವಯೋಗಿಗಳನ್ನು ಈಗಲೂ ನಾವು ನೋಡುತ್ತಿದ್ದೇವೆ.

ಇಷ್ಟಲಿಂಗದ ಮಹಿಮೆಯನ್ನು ವೇದಶಾಸ್ತ್ರಪುರಾಣಗಳು ಬಹಳವಾಗಿ ಬಣ್ಣಿಸಿವೆ. ಸಿದ್ಧಾಂತ ಶಿಖಾಮಣಿಯಲ್ಲಿ 'ಬ್ರಹ್ಮೇತಿ ಲಿಂಗಂ ಆಖ್ಯಾತಂ' ಎಂದಿದೆ. ಶಿವಾನುಭವಸೂತ್ರದಲ್ಲಿ 'ಲಿಂಗಂ ಸ್ಯಾತ್ ಶಿವ ಏವಹಿ 'ನಾದಂ ಲಿಂಗಂ, ಮಂತ್ರಂ ಲಿಂಗಮಿತಿ' ಲಿಂಗಂ ಪುರುಷ ಈರಿತಃ, 'ಭರ್ಗಪದಂ ಲಿಂಗಮೇವ" ಎಂದು ಮೊದಲಾಗಿ ಲಿಂಗದ ಮಹಿಮೆಯನ್ನು ಹೇಳಿದೆ. ವೇದಾಂತ ಸಾರೋಪನಿಷತ್ತು 'ಹೃದಯಾಬ್ಜಮಧ್ಯೇ ಲಿಂಗಂ" ಎಂದೂ, ನಿರ್ಲೇಪೋಪನಿಷತ್ತು 'ಲಿಂಗಂ ಸತ್ಯನಿಷ್ಕಳಂ ಬ್ರಹ್ಮರೂಪಂ' ಎಂದೂ, ಮಹಾನಾರಾಯಣೋಪನಿಷತ್ತು 'ಊರ್ಧ್ವ ಲಿಂಗಾಯ ನಮಃ' ಎಂದೂ, ಚಿದಂಬರೋಪನಿಷತ್ತು 'ಅಂತರ್ಲಿಂಗಂ ಜ್ಯೋತಿಷಾ ಸಂವಿಭಾತಿ" ಎಂದೂ, ವೀರಲೈಂಗ್ಯೋಪನಿಷತ್ತು 'ಆತ್ಮ ಲಿಂಗಂ' ಎಂದೂ, ಸೂಕ್ಷ್ಮಾಗಮವು "ಪ್ರಾಣಲಿಂಗಾರ್ಚನಂ ಸದಾ" ಎಂದೂ, ಪಾರಮೇಶ್ವರಾಗಮವು "ಲಿಂಗಂ ಮದಾತ್ಮಕಮ್"

ಎಂದೂ, ಯೋಗಜಾಗಮವು "ಓಂಕಾರ ಏವ ಲಿಂಗಂಸ್ಯಾತ್" ಎಂದೂ, ವಾತುಲಾಗಮವು "ಲಿಂಗಮಕ್ಷರ ಮಾತೃಕಾಃ" ಎಂದೂ, ವೈಶೇಷಿಕ ದರ್ಶನವು 'ಆಕಾಶಸ್ಯ ಲಿಂಗಂ' ಮತ್ತು 'ಆತ್ಮನೋ ಲಿಂಗಾನಿ' ಎಂದೂ, ನ್ಯಾಯ ಸೂತ್ರವು 'ಜ್ಞಾನಾತ್ಮನೋ ಲಿಂಗಂ' ಎಂದೂ, ಬ್ರಹ್ಮಸೂತ್ರವು 'ಪರ ಭಯಲಿಂಗಂ" ಎಂದೂ, ಮನುಸ್ಮೃತಿಯು "ಯದ್ವರ್ತುರ್ಲಿಂಗಾನ್ಯೃತವಃ" ಮತ್ತು "ನಶ್ರೋತ್ರಿಯೋನ ಲಿಂಗಸ್ಥೋ" ಮತ್ತು"ಬ್ರಾಹ್ಮಣಾ ಲಿಂಗಿನಂ ಚೈವ"ಎಂದೂ ಹೇಳಿದೆ. ಮಾಧವಾಚಾರ್ಯರ ಶಂಕರವಿಜಯದಲ್ಲಿ "ಶಿರಸಿ ಲಿಂಗಂಚ ಧಾರಿಣೋ ಜಂಗಮಸ್ತಥಾ" ಎಂದೂ ಹೇಳಲಾಗಿದೆ. ಮಾಧ್ವ ಭಾಷ್ಯದಲ್ಲಿ"ಓಂ ಲಿಂಗಾತ್ಮಕಾನಾಂ" ಎಂದು ಹೇಳಿದೆ. ಲಿಂಗಪುರಾಣದಲ್ಲಿ "ಲಿಂಗಾಂಗಸಂಗಿನಾಂ" ಎಂದೂ, ಕಾಮಿಕಾಗಮದಲ್ಲಿ "ಪ್ರಾಣಲಿಂಗದ್ಯುತಿಃ" ಎಂದೂ, ಸಿದ್ಧಾಂತಾಗಮದಲ್ಲಿ 'ಷಡಧ್ವಶುದ್ಧ ಲಿಂಗಂತು' ಎಂದೂ, ಶಂಕರ ಸಂಹಿತೆಯಲ್ಲಿ "ಲಿಂಗಂ ಪರಮಾತ್ಮ ಚಿಹ್ನಂ" ಎಂದೂ ಹೇಳಲಾಗಿದೆ.

ಮಹಾಭಾರತದಲ್ಲಿ 'ಲಿಂಗಿನೇಚೇತರಾಯಚ' ಎಂದು ನಿರೂಪಿತ ವಾಗಿದೆ. ವ್ಯಾಕರಣ ಶಾಸ್ತ್ರದಲ್ಲಿ ಜಗತ್ತೆಲ್ಲವೂ ಲಿಂಗರೂಪವೆಂಬುದನ್ನು "ಸ್ತ್ರೀಲಿಂಗ-ಪುಲ್ಲಿಂಗ-ನಪುಂಸಕ ಲಿಂಗ" ಎಂಬ ಮೂರರಲ್ಲಿದೆ ಎಂದು ಹೇಳ ಲಾಗಿದೆ.

ಶ್ರೀ ಸರ್ಪಭೂಷಣ ಶಿವಯೋಗಿಗಳು "ಪರವಸ್ತುವು ಕರದೊಳಗೆ ಕಾಣಿ ಪುದು, ಅರೆಮರುಳರು ಇದನರಿಯದೆ ಅರಸಿ ತೊಳಲಿಬಳಲುವರು. ಗೋವಿ ನೊಳಗಿಹ ಘೃತವು ಪೊರಮಟ್ಟು ಗೋವಿನಂಗದರುಜೆಯ ಕೆಡಿಸುವಂತೆ, ಆ ವಿಮಲ ಚಿದ್ಬಿಂದು ಸಾಧಕನ ಜೀವಭಾವವ ಕಳೆಯಲು ಹೊರಗೆ ಇಷ್ಟ ಲಿಂಗವಾಗಿ ತೋರುವುದು. ಕಾಷ್ಟದ ಒಳಗಿರ್ದ ಶಿಖೆಯು ಕಾಷ್ಟದಿಂದ ಹೊರಬಂದು ಉಜ್ವಲಿಸಿಕಾಷ್ಟವನೆ ತಾ ಸುಟ್ಟು ಬೆಳಗುವಂತೆ, ಸಾಧಕನ ಶ್ರೇಷ್ಠ ಚಿತ್ಕಳೆಯು ಪೊರಮಟ್ಟು ಅವನ ಜಡ ಭಾವವನು ನಿಟ್ಟುರಿಸಲು ಪ್ರಾಣಲಿಂಗತಾನಾಗಿ ತೋರುವುದು, ಮನೆಯ ಸೊಡರಿನ ಬೆಳಗು ಮನೆಯ ಬಾಗಿಲೊಳೈದಿ, ಅಂಗಳದ ಮರ್ಬ ನೂಕುವಂತೆ, ಚಿನ್ನಾದಂ ಉಜ್ವಳಿಸುತ

ತನುತಮುವ ಕಳೆಯುಲ್ಕೆ ಅನುಪಮ ಅದ್ವಯ ಭಾವಲಿಂಗವಾಗಿ ಶೋಭಿಸುವುದು, 'ಲಿಂಗಪೀಠವು ಅದು ಇಷ್ಟಲಿಂಗವು, ಗೋಮುಖವೇ ಪ್ರಾಣಲಿಂಗವು, ಗೋಳಕವು ಭಾವಲಿಂಗವು.' ಆದ ಕಾರಣ ಈ ಮೂರೂ ಲಿಂಗಗಳನ್ನು, ಕರ, ಮನ, ಭಾವ ದೊಳಗೆ ಇರಿಸಿ ಕೃತಾರ್ಥನಹುದು, ಎಂದು ಇಷ್ಟ, ಪ್ರಾಣ, ಭಾವಲಿಂಗಗಳ ಮಹಿಮೆಯನ್ನು ಕೈವಲ್ಯಕಲ್ಪವಲ್ಲರಿಯಲ್ಲಿ ತಿಳಿಸಿರುತ್ತಾರೆ. ಶಿವಶರಣರು ಇಷ್ಟಲಿಂಗದ ಮಹಿಮೆಯನ್ನು ಬಹಳ ಸುಂದರವಾಗಿ ತಿಳಿಸಿರುತ್ತಾರೆ. "ಲಿಂಗವೆಂಬುದು ಪರಶಿವನ ನಿಜದೇಹ", ಘನತೇಜಂ ನಿರತಿಶಯಾನಂದ ಸುಖವು "ಪರಮಜ್ಞಾನ" ಷಡಧ್ವಮಯ ಜಗಜ್ಜನ್ಮಭೂಮಿ ಅಖಂಡಿತವೆಂದ" 'ಹರಿಬ್ರಹ್ಮರರಮನೆಗಳ ಜ್ಯೋತಿ ರ್ಲಿಂಗ' ಎಂದು ಉರಿಲಿಂಗಪೆದ್ದಿಯು ಹೇಳುತ್ತಾನೆ. ಅದೇ ಶರಣನು "ಯತೋವಾಚಾನಿವರ್ತಂತೇ ಅಪ್ರಾಪ್ಯಮನಸಾ ಸಃ, ಅತ್ಯತಿಷ್ಠದ್ದಶಾಂಗುಲಂ, ಚಕಿತಮಭಿದತ್ತೇ, ಅಣೋರಣೀಯಾನ್ ಮಹತೋಮಹೀಯಾನ್, ಅಯಂ ಮೇ ಭಗವಾನ್, ಅಯಂಮೇ ಭಗವತ್ತರಂ' ಎಂದೆನಿಸುವ ಲಿಂಗವು, ಗುರುಲಿಂಗ ಜಂಗಮರೂಪಾಗಿ, ಇಷ್ಟ, ಪ್ರಾಣ, ಭಾವ ತ್ರಿವಿಧಮೇಕೀಭವಿಸಿ ಲಿಂಗರೂಪಾಗಿ, ಎನ್ನ ಕರಸ್ಥಲಕ್ಕೆ ಬಂದು ಕರತಲಾ ಮಲಕದಂತೆ ತೋರುತ್ತಿದೆ" ಎಂದು ಆ ಶರಣನು ಹೇಳುತ್ತಾನೆ. ಮಹಾ ಶರಣೆ ಅಕ್ಕಮಹಾದೇವಿಯು "ಪಾತಾಳವಿತ್ತಿತ್ತ, ಪಾದಂಗಳತ್ತತ್ತ, ದಶದಿಕ್ಕು ಇತ್ತಿತ್ತ, ದಶಭುಜಂಗಳತ್ತತ್ತ, ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟವತ್ತತ್ತ ಚೆನ್ನಮಲ್ಲಿಕಾರ್ಜು ನಯ್ಯ ನೀನೆನ್ನ ಕರಸ್ಥಲಕೆ ಬಂದು ಚುಳುಕಾರದಿರಿ ಲಿಂಗವೆ" ಎಂದು ಇಷ್ಟಲಿಂಗವನ್ನು ಕುರಿತು ಬಣ್ಣಿಸಿರುತ್ತಾಳೆ. ಹಿರಿಯ ವಚನಕಾರ ದಾಸಿಮಯ್ಯನು "ಕರಸ್ಥಳದ ಜ್ಯೋತಿಯದು ಕುರುಹದು, ಎರಕವದು, ಅದರ ನೆಲೆಯ ತಿಳಿವರೆ ನಿಜಾನಂದವು, ಹೊಲುಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾತನೇ ಮೃಡನು ಕಾಣಾ ರಾಮನಾಥಾ" ಎಂದು ಹೇಳಿರುವರು. ಶೂನ್ಯಸಿಂಹಾಸನಾಧ್ಯಕ್ಷ ಅನಾದಿ ಜಂಗಮ ಅಲ್ಲಮ ಪ್ರಭುವು"ಅರಿದರಿವು ಬರಿದೊರೆವೋಯಿತ್ತು, ಕುರುಹುದೋರಿದಡೆ ಎಂತು ನಂಬರು ತೆರಹಿಲ್ಲದ ಘನವ ನೆನೆದು, ಗುರುಶರಣೆಂಬುದಲ್ಲದೆ ಮರಹು ಬಂದಿಹುದೆಂದು ಗುರು, ಕುರುಹ ಕೈಯಲ್ಲಿ

ತೋರಿದ, ಅರಿಯಬಲ್ಲಡೆ ಗುಹೇಶ್ವರಲಿಂಗವು ಹೃದಯದಲ್ಲಿದ್ದಾನೆ" ಎಂದ ಇಷ್ಟಲಿಂಗದ ಮಾಹಾತ್ಮ್ಯವನ್ನು ಕೊಂಡಾಡಿದ್ದಾನೆ.

ಇಷ್ಟಲಿಂಗವನ್ನು ಬಿಟ್ಟು ಶಿವಯೋಗಸಾಧನೆಯು ಅಸಾಧ್ಯ ಎಂಬುದನ್ನು ಉರಿಲಿಂಗಪೆದ್ದಿಯು "ಆಕಾರವಿಡಿದು ಅರ್ಚನೆ ಪೂಜೆಯ ಮಾಡುವುದಲ್ಲದೆ, ನಿರಾಕಾರನ ನಂಬಲಾಗದು, ಶ್ರೀ ಗುರುಲಿಂಗವು ಪ್ರಾಣಲಿಂಗವನ್ನು ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟ ಬಳಿಕ ಬಯಲನರಸಲುಂಟೆ" ? -ಎಂದು ಪ್ರಶ್ನಿಸುತ್ತಾನೆ. ತೋಂಟದ ಸಿದ್ಧಲಿಂಗ ಪ್ರಭುವು. ಇದೇ ವಿಷಯವನ್ನು ಕುರಿತು "ಭಾವ ಮನಕ್ಕೆ ಲಿಂಗವಧರಿಸಿ, ಕಾಯಕ್ಕೆ ಲಿಂಗ ವಿಲ್ಲದಿರಬಹುದೆ? ಎರಡಂಗ ಭಕ್ತರಾಗಿ, ಒಂದಂಗ ಭವಿಯಾಗಿರ್ಪ ಭ್ರಾಂತರ ಮುಖವ ನೋಡಲಾಗದು. ತನು ಮನಭಾವದಲ್ಲಿ ಲಿಂಗಪಧರಿಸಿ, ಲಿಂಗತ್ರಯಕ್ಕೆ ಅಂಗ ತ್ರಯಕ್ಕೆ ಅಗಲಿಕೆಯಿಲ್ಲದ ಅಚರನಾಗಿದ್ದೆಸೆಯ್ಯ" ಎಂದು ತಮ್ಮ ಅನುಭವವನ್ನು ನಿರೂಪಿಸುತ್ತಾರೆ.

ಇದೇ ವಿಷಯವನ್ನು ಕುರಿತು ಚೆನ್ನಬಸವಣ್ಣನವರು "ಅಂಗದ ಮೇಲೆ ಲಿಂಗ ವಿಲ್ಲದನ್ನಕ್ಕರ, ಪ್ರಾಣದಲ್ಲಿ ಲಿಂಗ ಪರಿಣಾಮವನ್ನೈದುವ ಪರಿ ಎಂತಯ್ಯಾ ? ಅಂಗತ್ರಯವುಳ್ಳವರು, ಲಿಂಗತ್ರಯ ಸಂಪನ್ನರಾಗಬೇಕು, ಒಂದಂಗ ವಿರಹಿತರಾಗಿಪ್ಪವರುಂಟೆ ? ಒಂದಂಗವ ಬಿಟ್ಟು ಒಂದಂಗವ ತೊರೆದವರಾಗಿ" ಎಂದೂ, "ಆಕಾಶದಲ್ಲಿರುವ ಪಟವಾದರೂ ಮೂಲಸೂತ್ರವಿರಬೇಕು, ಕಲಿಯಾದರೂ ಸುರಿಗೆಯಿಲ್ಲದಾಗದು, ಭೂಮಿಯಿಲ್ಲದೆ ಬಂಡಿ ನಡೆಯದು, ಅಂಗಕ್ಕೆ ಲಿಂಗವಿಲ್ಲದೆ ನಿಸ್ಸಂಗವಾಗಬಾರದು" ಎಂದೂ ಹೇಳಿರುತ್ತಾರೆ. ಇನ್ನೊಂದು ವಚನದಲ್ಲಿ ಚೆನ್ನ ಬಸವಣ್ಣನವರು, "ತಿಳಿದುಪ್ಪ ಘಟ್ಟಿದುಪ್ಪಕ್ಕೆ ಭೇದವುಂಟೆ ? ದೀಪಕ್ಕೆ ದೀಪ್ತಿಗೆ ಭಿನ್ನವುಂಟೆ ? ಆತ್ಮಕ್ಕೆಯೂ ದೇಹಕ್ಕೆಯೂ ಹಂಗುಂಟೆ ? ಕ್ಷೀರಕ್ಕೆಯೂ ಸ್ವಾದಕ್ಕೆಯೂ ಭೇದವುಂಟೆ ?" ಇದು ಕಾರಣ ಸಾಕಾರವೇ ನಿರಾಕಾರವೆಂದು ಅಂಗಲಿಂಗ ಸಂಬಂಧವಿಲ್ಲದವರ ಸಂಗ ಭಂಗ ಕೂಡಲ ಚೆನ್ನಸಂಗಯ್ಯನ ಶರಣರು ಮೆಚ್ಚರು" ಎಂದೂ ಹೇಳಿ, ಇಷ್ಟ-ಪ್ರಾಣ-ಭಾವ ಲಿಂಗಗಳು ಒಂದೇ ಪರವಸ್ತುವಿನ ಮೂರುರೂಪಗಳೆಂದು ಹೇಳಿರುತ್ತಾರೆ. "ಇಷ್ಟಲಿಂಗವೀಗ ದರ್ಪಣ, ಪ್ರಾಣಲಿಂಗ ಪ್ರತಿ

...ರಬು, ದರ್ಪಣವನುಳಿದರೆ ಪ್ರತಿಬಿಂಬ ಕಾಣಬಹುದೆ ? ಆದುದರಿಂದ ತ್ರಿವಿಧ ...ಲಿಂಗಳು ಒಂದನ್ನು ಬಿಟ್ಟು ಒಂದಿಲ್ಲ" ಎಂದು ಹೇಳಿರುತ್ತಾರೆ.

'ನೀರು' ಎಂಬುದು ಪಂಚಭೂತಗಳಲ್ಲಿ ಒಂದು ತತ್ತ್ವ. ನಾವು, ಜಲವು ...ಮದಗಡ್ಡೆಯಾಗಿ, ಹಬೆಯಾಗಿ, ನೀರಾಗಿ, ಒಂದೇ ವಸ್ತುವು ಮೂರು ರೂಪಗಳಾಗಿರುವುದನ್ನು ಕಾಣುತ್ತೇವೆ. ಆದುದರಿಂದ ಇಷ್ಟ, ಪ್ರಾಣ, ಭಾವ ಲಿಂಗಗಳು 'ಒಂದೇ ಪರಶಿವನ ಮೂರು ರೂಪಗಳು' ಎಂಬುದನ್ನು ನಾವು ತಿಳಿಯಬಹುದು.

ರಾಷ್ಟ್ರಕವಿ ಸರ್ವಜ್ಞನು ಲಿಂಗಪದ್ಧತಿಯಲ್ಲಿ ಹೇಳಿರುವ ಕೆಲವು ಸಂಗತಿಗಳು ಇಲ್ಲಿ ಗಮನಾರ್ಹವಾಗಿವೆ.

ಲಿಂಗಕ್ಕೆ ಕಡೆಯೆಲ್ಲಿ ? ಲಿಂಗಿಲ್ಲದೆಡೆಯೆಲ್ಲಿ ? |
ಲಿಂಗದೊಳು ಜಗವು ಅಡಗಿಹುದು ಲಿಂಗವನು |
-ಹಿಂಗಿದವರುಂಟೆ ? ||

ಲಿಂಗವುಳ್ಳನೆ ಪುರುಷ ಲಿಂಗವುಳ್ಳನೆ ಸರಸ |
ಲಿಂಗವುಳ್ಳವನ ಭೋಗದಿಂ ಶುಭ, |
ಲಿಂಗ ದಿಂ ಜನನ ||

ಗುರು ಲಿಂಗ ಜಂಗಮವು ಹರನೊಲಿದ ರೂಪೆಂದು |
ಅರಿದು ನಿಶ್ಚಯಿಸಿ ನಡೆಯುವಾಭಕ್ತಂಗೆ |
ಪರಮಪದವಹುದು ||

ಲಿಂಗವಿರಹಿತನಾಗಿ ನುಂಗದಿರು ಏನುವನು |
ತಿಂಗಳಲಿ ಸತ್ತಹಳೆನಾಯ ಮಾಂಸವನು |
ನುಂಗಿದಂದಕ್ಕು ||

ಮಲಯಜದ ಮರದೊಳಗೆ ಸಲೆ ಗಂಧವಿರುವಂತೆ |
ಸುಲಲಿತವಾದ ಶರಣರಾಹೃದಯದಲಿ |
ನೆಲಸಿಹನು ಶಿವನು

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ ।
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕ್ಕೆ ।
ದೇಗುಲವೆ ಇಲ್ಲ ॥

ಎಂದು ಹೇಳಿರುವನು.

ಇಷ್ಟಲಿಂಗದ ಪೂಜೆಯನ್ನು ಕುರಿತು ಸರ್ವಜ್ಞನ ಮಾತುಗಳನ್ನು ಲಾಲಿಸಬೇಕು

ಅಷ್ಟವಿಧದರ್ಚನೆಯನೆಷ್ಟು ಮಾಡಿದಡೇನು ।
ನಿಷ್ಠೆ ನೆಲೆಗೊಳದೆ ಭಜಿಸುವಾ ಪೂಜೆಯದು ।
ನಷ್ಟ ಕಾಣಯ್ಯ ॥

ಗಂಗೆಗೋದಾವರಿಯುತುಂಗಭದ್ರೆಯು ಕೃಷ್ಣೆ ।
ಹಿಂಗದಲೆ ಮುಳುಗಿ ಫಲವೇನು ? ತನ್ನಲಿಹ ।
ಲಿಂಗವನರಿಯದಲೆ ॥

ಎಂದು ಹೇಳಿರುವನು:

ಸಿದ್ಧಾಂತ ಶಿಖಾಮಣಿಯಲ್ಲಿ ಶಿವಲಿಂಗವನ್ನು ಕುರಿತು :
ಲಿಂಗಂತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಂ ।
ಇಷ್ಟಲಿಂಗಮಿದಂ ಸ್ಥೂಲಂ ಯದ್ ಬಾಹ್ಯೇಧಾರ್ಯತೇ ತನೌ ॥

ಭಾವನಾತೀತಮವ್ಯಕ್ತಂ ಪರಬ್ರಹ್ಮಶಿವಾಭಿಧಂ ।
ಇಷ್ಟಲಿಂಗಮಿದಂ ಸಾಕ್ಷಾತ್ ಅನಿಷ್ಟ ಪರಿಹಾರಕಂ ॥

ಲಿಂಗಧಾರೀಸದಾಶುದ್ಧೋ ನಿಜಲಿಂಗಂ ಮನೋರಮಂ ।
ಅರ್ಚಯೇತ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥

ಪ್ರಾಣಲಿಂಗಂತು ತತ್‌ಸೂಕ್ಷ್ಮಂ ಯದಂತರ್‌ಭಾವನಾಮಯಂ ।
ಪಾರಾತ್ಪರಂತು ಯತ್ ಪ್ರೋಕ್ತಂ ತೃಪ್ತಿ ಲಿಂಗಂ ತದು ಚ್ಯತೇ॥

ಬಾಹ್ಯಪೀಠಾರ್ಚನಾದೇತತ್ ಕರಪೀಠಾರ್ಚನಂ ವರಂ ।
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ ॥

(ಸಿದ್ಧಾಂತ ಶಿಖಾಮಣಿ, ಪರಿಚ್ಛೇದ-೬)

ಇಷ್ಟಲಿಂಗ ಪೂಜೆ ಅಗತ್ಯ. ಎಡ ಅಂಗೈನಲ್ಲಿಟ್ಟು ವಿಧ್ಯುಕ್ತವಾಗಿ ಪೂಜಿಸಬೇಕು. ಇಷ್ಟಲಿಂಗ ಪೂಜೆಯಿಂದಲ್ಲದೆ ಪ್ರಾಣಲಿಂಗ, ಭಾವಲಿಂಗ ಪೂಜೆ ಸಿದ್ಧಿಸುವುದಿಲ್ಲ. ಲಿಂಗಪೂಜೆಯಿಲ್ಲದೆ ಅನ್ನವನ್ನು ಸ್ವೀಕರಿಸಲಾಗದು' ಎಂಬಿವೇ ಈ ಮೇಲಿರುವ ಶ್ಲೋಕಗಳ ತಾತ್ಪರ್ಯವಾಗಿದೆ.

ಶಿವಭಕ್ತರಿಗೆ ಪರಮ ಪ್ರಿಯವಾದ ಸ್ಕಾಂದಪುರಾಣದಲ್ಲಿ

ಯೋಹಸ್ತಪಿಠೇ ನಿಜಮ್ ಇಷ್ಟಲಿಂಗಂ ।
ವಿನ್ಯಸ್ಯತಲ್ಲೀ ನ ಮನಃ ಪ್ರಚಾರಂ ॥

ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ ।
ಯಃಪೂಜಯತ್ಯಂಗ ಸ ವೀರಶೈವಃ ॥

'ಹಸ್ತಪೀಠದಲ್ಲಿ ಲಿಂಗಪೂಜೆ ಮಾಡುವವನೇ ವೀರಶೈವನು' ಎಂದು ಹೇಳಿದೆ. ಕಾರಣ, ಎಷ್ಟೇ ದೊಡ್ಡವರಾಗಲಿ ತಟ್ಟೆ ವಗೈರೆಗಳಲ್ಲಿಟ್ಟು ಇಷ್ಟಲಿಂಗಪೂಜೆ ಯನ್ನುಮಾಡಬಾರದು ಎಂದು ಶಾಸದಲ್ಲಿ ಹೇಳಿದೆ.

ಲಿಂಗಧಾರಣದ ಮಹತ್ವವನ್ನು, ನಂದಿಕೇಶ್ವರ ಶಿವಾಚಾರ್ಯರು ಲಿಂಗಧಾರಣಚಂದ್ರಿಕೆಯಲ್ಲಿಯೂ, ಮರಿತೋಂಟದಾರ್ಯರು ಆನಂದ ಚಂದ್ರಿಕೆಯಲ್ಲಿಯೂ, ಶಿವಪೂಜಾ ಶಿವಲಿಂಗಸ್ವಾಮಿಗಳು ಶ್ರುತಿಸಾರ ಭಾಷ್ಯದಲ್ಲಿಯೂ, ಪಾಲ್ಕುರಿಕೆ ಸೋಮನಾಥರು ಬಸವರಾಜೀಯದಲ್ಲಿಯೂ ವಿಸ್ತಾರವಾಗಿ ಹೇಳಿದ್ದಾರೆ. ಶಿವಾಗಮಗಳು, ಲಿಂಗಪುರಾಣ, ಸ್ಕಾಂದ–ಆದಿತ್ಯ ಮೊದಲಾದ ಪುರಾಣಗಳಲ್ಲಿಯೂ ಹೇಳಿದೆ. ಇಂತಹ ವೇದಾಗಮ ಪುರಾಣ ಸಮ್ಮತವಾದ ಇಷ್ಟಲಿಂಗದ ಮಹಿಮೆಯನ್ನರಿತ ಶರಣರು, ಅದನ್ನು "ಕರಸ್ಥಲದ ಪರಬ್ರಹ್ಮ" ಎಂದು ಹೇಳಿರುವುದು ಸಮಂಜಸವಾಗಿದೆ. ಇಷ್ಟಲಿಂಗವೇ ವೀರಶೈವ ಧರ್ಮದ ಸಾರ ಸರ್ವಸ್ವವಾಗಿದೆ.

॥ ಸರ್ವಂ ಲಿಂಗಮಯಂ ಜಗತ್ ॥

ಕವಿ ರಾಘವಾಂಕನ ಕಾಶೀಯಾತ್ರೆ ?

೧೨ನೆಯ ಶತಮಾನದ ಕಡೆಯ ಭಾಗದಲ್ಲಿ, ೧೩ ನೆಯ ಶತಕದ ಪ್ರಾರಂಭದಲ್ಲಿ, ಮಹಾ ಕವಿಗಳಾದ ಹಂಪೆಯ ಹರಿಹರ ಮತ್ತು ರಾಘ ವಾಂಕರ ಹೆಸರು ಕನ್ನಡ ನಾಡಿನಲ್ಲಿ ಪ್ರಖ್ಯಾತವಾಗಿತ್ತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ, ವೀರಶೈವ ಮತಧರ್ಮದ ಇತಿಹಾಸದಲ್ಲಿಯೂ, ಈ ಇಬ್ಬರು ಹಿರಿಯ ಕಬ್ಬಿಗರ ಹೆಸರು ಅಗ್ರಗಣ್ಯವೆನಿಸಿದೆ. ಹರಿಹರ-ರಾಘ ವಾಂಕರ ಸ್ಥಳ ಪಂಪಾಕ್ಷೇತ್ರ. ಇವರ ಕಾಲ ಸುಮಾರು ಕ್ರಿ. ಶ. ೧೨೦೦. ಇವರು ಪ್ರಸಿದ್ಧಿಯನ್ನು ಪಡೆದ ಸ್ಥಳಗಳು ಬೇಲೂರು ಮತ್ತು ಓರುಂಗಲ್ಲು. ಹರಿಹರನ ಐಕ್ಯಸ್ಥಳ ಪಂಪಾಕ್ಷೇತ್ರ. ರಾಘವಾಂಕನ ಶಿವಸಮಾಧಿ ಸ್ಥಳ ಬೇಲೂರು. ಹರಿಹರನು ಶಿವಶರಣರ ನೂರೆಂಟು ರಗಳೆಗಳು, ಪಂಪಾಶತಕ, ರಕ್ಷಾಶತಕ, ಗಿರಿಜಾಕಲ್ಯಾಣ ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ರಾಘವಾಂಕನು, ಸಿದ್ಧರಾಮಪುರಾಣ, ಸೋಮನಾಥ ಚಾರಿತ್ರ, ಹರಿಶ್ಚಂದ್ರ ಕಾವ್ಯ, ವೀರೇಶ ಚರಿತೆ ಮೊದಲಾದ ಕೃತಿಗಳನ್ನು ರಚಿಸಿದ್ದಾನೆ. ರಗ ಳೆಯ ಕಾವ್ಯಗಳನ್ನು ಬರೆಯುವುದರಲ್ಲಿ ಹರಿಹರನೂ, ಷಟ್ಪದಿ ಕಾವ್ಯಗಳನ್ನು ಬರೆಯುವುದರಲ್ಲಿ ರಾಘವಾಂಕನೂ ಮೊಟ್ಟ ಮೊದಲಿಗರು, ಹಾಗೂ ಆಚಾ ರ್ಯರು ಎನಿಸಿದ್ದಾರೆ. ಈ ಇಬ್ಬರೂ ಪವಾಡಪುರುಷರು, ನೈಷ್ಠಿಕ ಬ್ರಹ್ಮಚಾರಿಗಳು, ಶಿವಯೋಗ ಸಂಪನ್ನರು. ಹರಿಹರನು ಪಂಪಾಪತಿಯ ಸಾಕ್ಷಾತ್ ಸುಪುತ್ರನಾದರೆ, ರಾಘವಾಂಕನು 'ಹರೀಶ್ವರನ ವರಸುತ' ಎಂದು ಹೇಳಿಕೊಂಡಿದ್ದಾನೆ. ಇವರು ಗುರು-ಶಿಷ್ಯರು ಅಥವಾ ಮಾವ -ಅಳಿಯರು ಎಂಬ ಬಾಂಧವ್ಯದಿಂದ ಪ್ರಖ್ಯಾತರಾಗಿರುವರು. ಉಭಯ ಭಾಷಾ (ಕನ್ನಡ-ಸಂಸ್ಕೃತ) ವಿಶಾರದರೂ, ಸುಕವಿತ್ವವಿಶಾರದರೂ ಆದ ಈ ಕವಿಗಳಿಬ್ಬರು, ಕನ್ನಡಸಾಹಿತ್ಯ ಪ್ರಪಂಚದಲ್ಲಿ ಸೂರ್ಯಚಂದ್ರರಂತೆ, ಗಂಗೆ -ಯಮುನೆಯರಂತೆ, ಹಿಮಾಲಯ-ವಿಂಧ್ಯಪರ್ವತಗಳಂತೆ ಪ್ರಖ್ಯಾತ ರಾಗಿದ್ದಾರೆ. ಈ ಇಬ್ಬರು ಕವಿಗಳ ಬಗೆಗೂ ಕನ್ನಡ ನಾಡಿನಲ್ಲಿ ಹಲವು

ದಂತಕಥೆಗಳು ಬಳಕೆಯಲ್ಲಿವೆ. ಪ್ರಕೃತ ರಾಘವಾಂಕನು ಕಾಶೀಯಾತ್ರೆಗೆ ಹೋಗಿ ಬಂದ ವಿಚಾರದ ದಂತಕಥೆಯನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಒಂದು ದಿನ ರಾಘವಾಂಕನು ಪಾವನ ತುಂಗಭದ್ರೆಯಲ್ಲಿ ಸ್ನಾನ ಮಾಡಿ, ವಿವಿಧ ಪತ್ರಪುಷ್ಪಗಳನ್ನು ತೆಗೆದುಕೊಂಡು ಪಂಪಾವಿರೂಪಾಕ್ಷನ ಸನ್ನಿಧಿಗೆ ಬರುತ್ತಾನೆ. ಭಕ್ತಿಭಾವದಿಂದ ಪಂಪಾಪತಿಯನ್ನು ಅರ್ಚಿಸಿ, ವಿವಿಧ ಛಂದಸ್ಸಿನಿಂದ ಪ್ರಾರ್ಥಿಸುತ್ತಾನೆ. ಕರುಣಾಳು ಪಂಪಾಪತಿಯು ಭಕ್ತಕವಿ ರಾಘವಾಂಕನಿಗೆ ಪ್ರತ್ಯಕ್ಷನಾಗುತ್ತಾನೆ. ಆಗ ಅವರಿಬ್ಬರಿಗೂ ಈ ಮುಂದೆ ಹೇಳುವಂತೆ ಸಂಭಾಷಣೆಯಾಗುತ್ತದೆ.

ವಿರೂಪಾಕ್ಷ –"ಕಂದಾ, ರಾಘವಾಂಕ, ನಿನ್ನ ಸರಸಭಕ್ತಿಗೂ, ಕವಿತಾ ಶಕ್ತಿಗೂ ನಾನು ಮೆಚ್ಚಿದ್ದೇನೆ. ನಿನಗೆ ಬೇಕಾದ ವರವನ್ನು ಕೇಳಿಕೋ ಕೊಡಲು ಬಂದಿದ್ದೇನೆ."

ರಾಘವಾಂಕ :–"ಭಗವಾನ್, ನಾನು ನಿನ್ನ ಕರುಣೆಯ ಶಿಶು. ಕೈ ಹಿಡಿದು ದಾರಿತೋರಿಸು. ನಿನ್ನ ಚಿತ್–ಪ್ರಕಾಶದಲ್ಲಿ ಬದುಕುವಂತೆ ಮಾಡು. ನಾನು ಒಂದು ಹೆಬ್ಬಯಕೆಯನ್ನು ಹೊತ್ತುತಂದಿದ್ದೇನೆ. ಕೃಪೆಮಾಡಿ ಹೇಳಲು ಅಪ್ಪಣೆ ಕೊಡು.

ವಿರೂಪಾಕ್ಷ:–"ಮಗನೆ, ಮನಬಿಚ್ಚಿ ಮಾತನಾಡು–
ತಂದೆಯಬಳಿ ಮಗನಿಗೆ ಸಂಕೋಚವೆ ? ಹರನಬಳಿ ನರನಿಗೆ ಸಂಶಯವೆ ?
ಶಿವನು ಭಕ್ತಪರಾಧೀನನಲ್ಲವೆ ? ಶಿವಾಗಮಗಳನ್ನು ನೀನರಿಯೆಯಾ ? ನಿನ್ನ ಅಂತರಂಗದ ಬಯಕೆ ಯಾವುದು ? ಗಣಪ, ವೀರಭದ್ರ, ಷಣ್ಮುಖ ರಂತೆ ನೀನೂ ನನಗೆ ಅತೀವ ಮಮತೆಗೆ ಪಾತ್ರನಲ್ಲವೆ ? ಶಿವಕವಿಯಾದ ನೀನು ಕೇವಲನೆ ? ಕಾರಣ ಪುರುಷನಲ್ಲವೆ ?

ರಾಘವಾಂಕ: "ಭಗವಾನ್, ಕ್ಷೇತ್ರಗಳಲ್ಲಿ ಕಾಶಿಯೂ, ತೀರ್ಥಗಳಲ್ಲಿ ಗಂಗೆಯೂ, ದೈವಗಳಲ್ಲಿ ವಿಶ್ವನಾಥನೂ ಅಧಿಕಾಧಿಕರೆಂದು ನಾನು ಪುರಾಣ ಗಳಲ್ಲಿ ಓದಿದ್ದೇನೆ. ನನ್ನ ಜೀವನದಲ್ಲಿ ಒಮ್ಮೆ ಕಾಶೀ ಕ್ಷೇತ್ರಕ್ಕೆ ಹೋಗಿ ಪಾವನ ಗಂಗಾನದಿಯಲ್ಲಿ ಸ್ನಾನಮಾಡಿ, ಜಗದ್ಗುರು ವಿಶ್ವನಾಥನನ್ನು ಅರ್ಚಿಸಬೇಕೆಂಬ ಇಚ್ಛೆಯಿದೆ. ಆದಕ್ಕಾಗಿ ನಿನ್ನ ಅಪ್ಪಣೆಯನ್ನು ಬೇಡು

ತ್ತೇನೆ. ರಸಿಕಚಕ್ರಿ ಹರೀಶ್ವರ ತಂದೆಯ ಆದೇಶದಂತೆ ಇಲ್ಲಿಗೆ ಬಂದಿದ್ದೇನೆ." ಎಂದು ಹೇಳಿ ಪಂಪಾವಿರೂಪಾಕ್ಷನಿಗೆ ಸಾಷ್ಟಾಂಗ ನಮಸ್ಕಾರ ಮಾಡುವನು.

ವಿರೂಪಾಕ್ಷ :–(ಪೊಡಮಟ್ಟ ರಾಘವಾಂಕನನ್ನು ಚತುರ್ವೇದಗಳಂತಿರುವ ತನ್ನ ನಾಲ್ಕು ಕೈಗಳಿಂದ ಹಿಡಿದೆತ್ತಿ, ತಲೆಯಮೇಲೆ ತನ್ನ ವರದ ಹಸ್ತವನ್ನಿಟ್ಟು) "ಕಂದಾ ರಾಘವಾಂಕಾ, ನಿನ್ನ ಈ ಬಯಕೆಯು ಪಾಂಡಿತ್ಯ ಪೂರ್ಣವಾದುದು, ಆದರೆ, ಅನುಭವ ರಹಿತವಾದುದು ಎನ್ನದೆ ವಿಧಿಯಿಲ್ಲ. "ಕಾಶಿಯ ವಿಶ್ವನಾಥನೇ ಹಂಪೆಯ ವಿರೂಪಾಕ್ಷ, ಕಾಶಿಯ ಅನ್ನಪೂರ್ಣೆಯೇ ಹಂಪೆಯ ಪಂಪಾಂಬಿಕೆ" ಎಂಬುದನ್ನು ನೀನು ಅರಿಯಲಾರೆಯಾ ? 'ಗಂಗಾಸ್ನಾನ ತುಂಗಾಪಾನ' ಎಂಬ ನಾಣ್ಣುಡಿಯನ್ನು ಕೇಳಿಲ್ಲವೆ ? ತುಂಗಭದ್ರೆಯು ಗಂಗೆಗಿಂತ ಕಡಿಮೆಯಲ್ಲ ಪಾವನ ಚರಿತ್ರಳು. ಪಾಪಪರಿಹಾರಕಳು. ತ್ರೇತೆಯಲ್ಲಿ ಶ್ರೀರಾಮಚಂದ್ರಾದಿಗಳು ಇಲ್ಲಿಗೆ ಬಂದು ಧನ್ಯರಾಗಿರುವರು. ಕಾಶಿ ಮತ್ತು ಹಂಪೆ ಇವೆರಡರಲ್ಲಿ ಯಾವುದು ಶ್ರೇಷ್ಠ ಎಂಬುದನ್ನು ಒಮ್ಮೆ ಮಾಧವನು ತಕ್ಕಡಿಯಲ್ಲಿ ತೂಗಿ ನೋಡಿದನಂತೆ ! ಕಾಶಿಗಿಂತ ಹಂಪೆಯೇ ಒಂದು ಗುಲಗಂಜಿ ತೂಕ ಹೆಚ್ಚಾಯಿತಂತೆ ! ಇದಕ್ಕೆ 'ದಕ್ಷಿಣಕಾಶಿ' ಎಂಬ ಹೆಸರೂ ಪ್ರಸಿದ್ಧವಾಗಿದೆ. ಇಂತಹ ಒಂದು ನಿದರ್ಶನವನ್ನು ಈ ದೇಗುಲದಲ್ಲಿಯೇ ಕಾಣಬಹುದು A ಕಾರಣ ಪಾವನ ಪಂಪಾಕ್ಷೇತ್ರವನ್ನು ಬಿಟ್ಟು ಕಷ್ಟದ ಕಾಶೀಯಾತ್ರೆಯನ್ನು ಏತಕ್ಕಾಗಿ ಕೈಗೊಳ್ಳುವೆ ? ಕಾಶೀ ಯಾತ್ರೆಗಿಂತ ಪಂಪಾಯಾತ್ರೆ ಅಧಿಕವಾದುದು. ಕಾಶಿಯ ನಗರಜೀವನದಲ್ಲಿ ಬೇಸತ್ತು ನಾನು ಹಂಪೆಯ ಅರಣ್ಯ ಜೀವನದಲ್ಲಿಯೇ ಹೆಚ್ಚುಕಾಲ ಇರಲು ಬಯಸಿದ್ದೇನೆ ಎಂಬುದನ್ನು ನೀನು ಅರಿಯಲಾರೆಯಾ ? ಹಂಪೆಯು ಕೃತ–ತ್ರೇತಾದಿಯುಗಗಳಿಂದ ಮುನಿಗಳಿಗೆ ತಪೋಭೂಮಿಯೆನಿಸಿಲ್ಲವೆ ? ಸೊಂಪಿನ ಹಂಪೆಯ ಪೆಂಪು

A. ಪಂಪಾವಿರೂಪಾಕ್ಷನ ದೇವಾಲಯದಲ್ಲಿ 'ಗುಲಗಂಜಿ ಮಾಧವನ' ವಿಗ್ರಹ ಇರುವುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. (ಸಂ)

ಆಸದಳವಲ್ಲವೆ ? 'ನೋಡಿದರೆ ಹಂಪೆಯನ್ನು ನೋಡು, ಇಲ್ಲವಾದರೆ ನಿನ್ನ ಕೊಂಪೆಯಲ್ಲಿರು' ಎಂಬ ಗಾದೆ ನಿನಗೆ ಗೊತ್ತಿಲ್ಲವೆ.

ಕವಿರಾಘವಾಂಕ, ರಾ ಘ ವಾ ಂ ಕ ಪಂಡಿತಾ, ನಿನ್ನ ಇಷ್ಟ ಬಂದಂತೆಯೇ ಮಾಡು, ಕಾಶೀಯಾತ್ರೆಯಲ್ಲಿ ನಷ್ಟವೇನೂ ಇಲ್ಲ. ಭಾರತೀಯನಾದವನು ಒಮ್ಮೆಯಾದರೂ ಕಾಶಿ, ರಾಮೇಶ್ವರ, ಶ್ರೀಶೈಲ, ಕೇದಾರ, ಗೋಕರ್ಣ, ಸೋಮನಾಥ ಮೊದಲಾದ ಸುಕ್ಷೇತ್ರಗಳನ್ನು ನೋಡಬೇಕು.

ರಾಘವಾಂಕ:–"ಜಗದೀಶ್ವರಾ ಅಪ್ಪಣೆಮಾಡು, ಶಿರಸಾವಹಿಸಿ ನಡೆಯುತ್ತೇನೆ.

ವಿರೂಪಾಕ್ಷ:–"ಕವಿ ರಾಘವಾಂಕಾ, ಕಾಶಿಯ ನೆಲಕ್ಕೆ ಕಾಲಿಟ್ಟ ಮೇಲೆ ಅಲ್ಲಿ ಪಂಪಾವತಿ, ಪಂಪಾಂಬಿಕಾ, ಪಂಪಾಕ್ಷೇತ್ರ" ಎಂಬ ಹೆಸರುಗಳನ್ನು ಬಾಯಿಯಲ್ಲಿ ಉಚ್ಚರಿಸಬೇಡ, ಹಾಗೆ ಉಚ್ಚರಿಸಿದಲ್ಲಿ ನಿನ್ನ ಕಾಶೀಯಾತ್ರೆಯು ಅಪೂರ್ಣವಾಗದು, ಜಾಗ್ರತನಾಗಿರು. ಆಮೇಲೆ ನಿರಾಶನಾಗಬೇಡ, ಎಚ್ಚರ.

ರಾಘವಾಂಕ :–"ಜಗತ್ ಪ್ರಭು, ನಿನ್ನ ಅಪ್ಪಣೆಯಂತೆಯೇ ಆಗಲಿ, ನಾನು ಎಚ್ಚರದಿಂದ ಕಾಶೀಯಾತ್ರೆ ಮಾಡುವೆನು, ಎಂದು ಹೇಳಿ ಮೃಡನಿಗೆ ಪೊಡಮಟ್ಟು ದೇವಾಲಯದಿಂದ ಹೊರಗೆ ಬರುವನು.

ಅತ್ತ ವಿರೂಪಾಕ್ಷನು ಲಿಂಗದಲ್ಲಿ ಅಡಗುವನು.

ಇತ್ತ ರಾಘವಾಂಕನು ಗುರು ಹರೀಶ್ವರ, ತಂದೆ ಮಹಾದೇವಭಟ್ಟ, ತಾಯಿ ರುದ್ರಾಣಿ ಇವರಿಗೆ ಪೊಡಮಟ್ಟು ಕಾಶಿಗೆ ಅಭಿಮುಖನಾಗುವನು. ಅನೇಕ ದಿನಗಳು ಕಷ್ಟಪಟ್ಟು ನಡೆದು ಪಾವನ ಕಾಶೀಕ್ಷೇತ್ರಕ್ಕೆ ಬಂದು ಸೇರುವನು. ಮಹಾಕವಿ ರಾಘವಾಂಕನು ಕಾಶಿಗೆ ಬಂದ ವಾರ್ತೆ ವಾರಣಾಸಿಯಲ್ಲಿ ಪಸರಿಸುವುದು. ವೀರಶೈವರ ಪಂಚಪೀಠಗಳಲ್ಲಿ ಒಂದಾದ ಕಾಶಿಯ ಜಂಗಮವಾಡಿ ಮಠದ ಸ್ವಾಮಿಗಳು ಕವಿ ರಾಘವಾಂಕನನ್ನು ಆಕ್ಕರೆಯಿಂದ ಬರಮಾಡಿಕೊಳ್ಳುವರು. ಋಷಿಕವಿಯಾದ ಅವನ ಘನತೆಗೆ ತಕ್ಕಂತೆ ಸತ್ಕರಿಸುವರು. ಮರುದಿನ ಬೆಳಗ್ಗೆ ಹಾಸಿಗೆಯಿಂದೆದ್ದು, ವೀರ

ಶೈವ ಧರ್ಮಾಚರಣೆಯಂತೆ ಶಿವಾರ್ಚನಾದಿ ಪ್ರಾತಃಕರ್ಮಗಳನ್ನು ಮುಗಿಸಿ ಕೊಂಡು, ಜಂಗಮವಾಡಿಮಠಕ್ಕೆ ಅನತಿದೂರದಲ್ಲಿರುವ ಗಂಗಾನದಿಗೆ ಸ್ನಾನಕ್ಕೆ ಹೋಗುವನು. ಅವನು ಹೋದಕಾಲ ತುಂಬಾ ಚಳಿಗಾಲ ವಾಗಿತ್ತು. ಗಂಗೆಯ ನೀರು ಶೈತ್ಯಮಯವೆನಿಸಿತ್ತು. ಹಿಮಾಲಯದಿಂದ ಹುಟ್ಟಿ ಬರುವ ಆ ಪವಿತ್ರ ನದಿಯ ನೀರು ಶೀತವಾಗಿರುವುದು ಸಹಜ ವಷ್ಟೆ? ಅದರಲ್ಲಿಯೂ ಚಳಿಗಾಲದಲ್ಲಿ ಗಂಗಾಸ್ನಾನವು ಸುಖಕರವಲ್ಲ. ರಾಘ ವಾಂಕನು ಒಮ್ಮೆ ನದಿಯಲ್ಲಿ ಮುಳುಗಿ ಮೇಲಕ್ಕೇಳುವನು, ತಂಗಾಳಿ ಮೈಮೇಲೆ ಬೀಸುವುದು, ಮೈ ಗಡಗಡ ನಡುಗುವುದು.

"ಗಂಗೇಚ ಯಮುನಾಚೈವ ಗೋದಾವರಿ ಸರಸ್ವತೀ ನರ್ಮದಾ ಸಿಂಧು ಕಾವೇರೀ ಜಲೇಸ್ಮಿನ್‌ಸನ್ನಿಧಿಂ ಕುರು" ಎಂಬ ಶ್ಲೋಕವನ್ನು ಹೇಳು ವನು. ಶೀತಮಾರುತಗಳ ಪ್ರಭಾವದಿಂದ ಮೈ ನಡುಕವಾಗುವುದು. ಬಹುದಿನಗಳ ಅಭ್ಯಾಸ ಬಲದಿಂದ, ಶಿವ ಶಿವಾ, ಪಂಪಾಧವಾ, ಪಂಪಾಂ ಬಿಕಾ' ಎಂಬ ಶುಭ ನಾಮಗಳನ್ನು ಉಚ್ಚರಿಸುವನು. ಆಗ ಮತ್ತೊಮ್ಮೆ ಗಂಗೆಯಲ್ಲಿ ಮುಳುಗುವನು, ಆದರೆ ಅವನು ಮೇಲಕ್ಕೆದ್ದುದು ಪಂಪಾ ಕ್ಷೇತ್ರದ ವಿರೂಪಾಕ್ಷ ಮಂದಿರದ ಎಡಭಾಗದಲ್ಲಿರುವ ತುಂಗಭದ್ರೆಯ ಮನ್ಮಥಕುಂಡದಲ್ಲಿ. ರಾಘವಾಂಕನು ನೀರಿನಿಂದೆದ್ದು ಕಣ್ಣುಬಿಟ್ಟು ನೋಡುತ್ತಾನೆ. ತಾನಿರುವ ಕ್ಷೇತ್ರ ಕಾಶಿಯಲ್ಲ! ಹಂಪೆ ಎಂಬುದು ಅನುಭವಕ್ಕೆ ಬರುತ್ತದೆ! ಗುರು ವಿರೂಪಾಕ್ಷನ ಸಂದೇಶ ನೆನಪಾಗುತ್ತದೆ. 'ಕಾಶಿಯಲ್ಲಿ ಪಂಪಾಂಬಿಕಾ, ಪಂಪಾಧವ' ಎಂಬುದರ ಫಲ ನನಗಿಂದು ಸಿದ್ಧವಾಯಿತು. "ಕಾಶಿಗಿಂತಲೂ ಪಂಪಾಕ್ಷೇತ್ರವೇ ಮೇಲು ಗಂಗೆಗಿಂತ ತುಂಗೆಯೇ ಮೇಲು" ಎಂದು ಸಮಾಧಾನಗೊಂಡು ಇದಕ್ಕೆ 'ದಕ್ಷಿಣ ಕಾಶಿ' ಎಂಬ ಹೆಸರು ನಿಜಕ್ಕೂ ಸಾಧುವಾದುದು ಎಂದು ಅಂದುಕೊಳ್ಳುತ್ತಾನೆ.

ತನ್ನ ಕಾಶೀಯಾತ್ರೆಯು ವಿಫಲವಾಯಿತೆಂದುಕೊಳ್ಳುತ್ತಾನೆ. ವಿಶ್ವ ನಾಥನ ಸಂದರ್ಶನವಾಗಲಿಲ್ಲವಲ್ಲಾ ಎಂದು ಕಳವಳಗೊಳ್ಳುತ್ತಾನೆ. ಆದರೆ ಮತ್ತೆ ಕಾಶಿಗೆ ಹೋಗುವ ಹುಚ್ಚು ಅವನಿಗೆ ಬರಲಿಲ್ಲವೆಂಬುದು ಗಮನಾರ್ಹ

[illegible]ೇದ ಓದುವುದಕ್ಕಿಂತ ಬೋಧೆ ಕೇಳುವುದು ಮೇಲು' ಎಂಬ ಮಾತು ಆವನಿಗೆ ಅಂದು ಅರಿವಾಗುತ್ತದೆ.

ನಾನು ೪೦ ವರ್ಷಗಳಹಿಂದೆ ಹಂಪೆಗೆ ಹೋಗಿದ್ದಾಗ, ಪ್ರವಾಸಿಗಳಿಗೆ ಗುಡಿಗೋಪುರಗಳನ್ನು ತೋರಿಸುವ ಮಾರ್ಗದರ್ಶಕನೊಬ್ಬನು ಹೇಳಿದ ಕಥೆಯಿದು. ಈ ಕಥೆಯನ್ನು ಪುಷ್ಟೀಕರಿಸುವ ಒಂದು ಸಂಸ್ಕೃತ ಶ್ಲೋಕವನ್ನೂ ಅವನು ನನಗೆ ಹೇಳಿದನು. ಆ ಶ್ಲೋಕವನ್ನು ಇದ್ದಕ್ಕಿದ್ದಂತೆಯೇ ಅಂದಿನ ನನ್ನ ದಿನಚರಿ ಟಿಪ್ಪಣಿಯಿಂದ ಎತ್ತಿ ನಮ್ಮ ವಾಚಕರ ಪ್ರಯೋಜನಾರ್ಥವಾಗಿ ಇಲ್ಲಿ ಬರೆಯುತ್ತೇನೆ.

ಯದ್ ಗಚ್ಛಾವನಿ ಮಂಡಲಾತಿಮಹಿತೇ ಕಾಶೀಪುರೇಸ್ಮತ್ ಪುರೀಂ |
ಪಂಪಾಂ ಮಾ ಸ್ಮರ ಮಾ ಸ್ಮರೇತಿ ಗಿರಿಶಾದಿಷ್ಟೋಪ್ಯಸೌ ವಿಸ್ಮರನ್||
ಗಂಗಾಪೂರ ನಿಮಜ್ಜನಾವಸರಯೇ ಮೇಚ್ಚಾರ್ಯ-ಪಂಪಾಂ ಸಕೃತ್ |
ತೀರ್ಥೇ ಮನ್ಮಥನಾಮಕೇ ಸಮುದಿತಃ ಪಂಪಾಮಹತ್ವೋದಯಾತ್||

ಮೇಲೆ ಹೇಳಿರುವ ರಾಘವಾಂಕನ ಕಾಶೀಯಾತ್ರೆಯ ವೃತ್ತಾಂತವೇ ಈ ಮೇಲಿನ ಶ್ಲೋಕದಲ್ಲಿ ಸಂಗ್ರಹವಾಗಿದೆ. ಈ ಶ್ಲೋಕವು ಕಥೆ ನಡೆದುದೆಂಬುದಕ್ಕೆ ಒಂದು ಬಲವಾದ ನಿದರ್ಶನವಾಗಿದೆಯಲ್ಲವೆ ?

ಗುಬ್ಬಿ ಮಲ್ಲಣಾರ್ಯನು ಪುರಾಣ ಹೇಳಿದುದು

ತುಮಕೂರು ಜಿಲ್ಲಾ 'ಗುಬ್ಬಿ' ಎಂಬ ಸ್ಥಳಕ್ಕೆ ೧೬ ನೆಯ ಶತಮಾನಕ್ಕೆ ಹಿಂದೆ 'ಅಮರಗೊಂಡ' ಎಂಬ ಹೆಸರಿತ್ತು. ಹಿಮಾಲಯದ ಕೇದಾರ ಕ್ಷೇತ್ರದಲ್ಲಿ 'ಅಮೃತಕುಂಡ' ಎಂಬ ಕ್ಷೇತ್ರವೂ, ಆಂಧ್ರದೇಶದಲ್ಲಿ 'ಸುಧಾಕುಂಡ' ಎಂಬ ಕ್ಷೇತ್ರವೂ ಇವೆ. ನಂದಿಬೆಟ್ಟದ ಮೇಲಿರುವ ಕೊಳಕ್ಕೆ 'ಅಮೃತ ಸರೋವರ' ಎಂಬ ಹೆಸರಿದೆ. ಹೀಗೆ ಅಮರ, ಸುಧಾ, ಅಮೃತ ಎಂಬ ಹೆಸರುಗಳ ಸ್ಥಳಗಳು ಅಲ್ಲಲ್ಲಿ ಪ್ರಸಿದ್ಧವಾಗಿವೆ. ಪ್ರಕೃತ ತುಮಕೂರು ಜಿಲ್ಲೆಯ 'ಅಮರ ಗೊಂಡ'ಕ್ಕೆ 'ಗುಬ್ಬಿ' ಎಂಬ ಹೆಸರು ಹೇಗೆ ಬಂದಿತೆಂಬುದನ್ನು ತಿಳಿಸಲು ಈ ಸುಂದರ ದಂತಕಥೆಯು ಸಹಾಯವಾಗಿದೆ.

ಕ್ರಿ. ಶ. ೧೫೧೩ ರ ಸುಮಾರಿನಲ್ಲಿ ಅಮರಗೊಂಡದಲ್ಲಿ ಮಹಾಕವಿ ಮಲ್ಲಣಾರ್ಯ ಎಂಬ ಓರ್ವ ವಿದ್ವಾಂಸನಿದ್ದನು. ಈತನು 'ಭಾವಚಿಂತಾರತ್ನಂ' 'ವೀರಶೈವ ಮಹಾಪುರಾಣಂ' ಮತ್ತು 'ಪುರಾತನರ ರಗಳೆ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಮೊದಲೆರಡು ಗ್ರಂಥಗಳು ಅಚ್ಚಾಗಿವೆ. ಕಡೆಯ ಗ್ರಂಥ ಕಣ್ಮರೆಯಾಗಿದೆ. ಆತನ ಗ್ರಂಥಗಳಿಂದ ಇವನ ಹಿರಿಯರ ಹೆಸರುಗಳು ಈ ಮುಂದಿನಂತೆ ಗೋಚರವಾಗುತ್ತವೆ.

೧. ವಚನಕಾರ ಅಮರಗೊಂಡದ ಮಲ್ಲಿಕಾರ್ಜುನ ತಂದೆ (ಇವನ ಹೆಸರು ಗಣಸಹಸ್ರದಲ್ಲಿದೆ) ಇವನಿಗೆ 'ಮಲ್ಲೇಶ್ವರಾಚಾರ್ಯ' ಎಂಬ ಹೆಸರೂ ಇದೆ.

೨. ಅವನ ಶಿಷ್ಯ, ಶೂಲವೇರಿದ ಮಹಾತ್ಮ 'ಗುರುಭಕ್ತ'

೩. ಅವನ ಸುತ ದೇಶಿಕ ಪಟ್ಟವರ್ಧನ ಸೌಂದರ ಮಲ್ಲಿಕಾರ್ಜುನ ಪಂಡಿತ

೪. ಅವನ ಮಗ 'ನಾಗನಾಥಾಚಾರ್ಯ' ಇವನ ಮಗ

೫. ಅಹಿಯುಂ ಲಿಂಗಕೆ ಛತ್ರಮುಂ ಮಾಡಿದ 'ಅಮರಗೊಂಡಾರ್ಯ' ಇವನ ಮಗ

೬. ಗುಬ್ಬಿಯ ಮಲ್ಲಿಕಾರ್ಜುನ ಪಂಡಿತ. ಇವನು ಗಣಭಾಷ್ಯ ರತ್ನ ಮಾಲೆ, ಹಾಗೂ ವಾತುಲತಂತ್ರಟೀಕೆಗಳನ್ನು ಬರೆದಿದ್ದಾನೆ. ಇವನ ಮಗ 'ಗುರುಭಕ್ತ'

೭. ಈ ಗುರುಭಕ್ತ–ಸಪ್ಪೆಯಮ್ಮಗಳ ಮಗ ಮಹಾಕವಿ ಮಲ್ಲಣಾರ್ಯ, ಇವನ ಮಗ

೮. ಕವಿ ಶಾಂತೇಶ. ಇವನು ಸಿದ್ಧಲಿಂಗೇಶ್ವರ ಪುರಾಣವನ್ನು ಬರೆದಿದ್ದಾನೆ. ಇಂತಹ ಹಿರಿಯ ವಂಶಕ್ಕೆ ಸೇರಿದವನು ಮಲ್ಲಣಾರ್ಯನು. ಈತನನ್ನು ಚೇರಮ ಕವಿ, ಸಿದ್ಧನಂಜೇಶ, ಷಡಕ್ಷರದೇವ ಮೊದಲಾದವರು ತಮ್ಮತಮ್ಮ ಕಾವ್ಯಗಳಲ್ಲಿ ಸ್ಮರಿಸಿದ್ದಾರೆ. ಮಹಾಕವಿ ಷಡಕ್ಷರದೇವನ ರಾಜ ಶೇಖರ ವಿಳಾಸಕ್ಕೆ (೧೬೫೫) ಆಧಾರವಾದುದೇ 'ಭಾವ ಚಿಂತಾರತ್ನ' ಮತ್ತು ವೀರಶೈವ ಧರ್ಮವೆಂಬ ಹಿಮಾಲಯಕ್ಕೆ ಗೌರೀಶಂಕರ ಶಿಖರದಂತಿ ರುವುದೇ 'ವೀರಶೈವಾಮೃತ ಮಹಾ ಪುರಾಣ' ಎಂಬ ಈ ಮಾತು ಇಲ್ಲಿ ಸ್ಮರಣಾರ್ಹವಾಗಿದೆ.

ಮಲ್ಲಣಾರ್ಯನ ಗುರು ಸಿದ್ಧ ಮಲ್ಲೇಶನು. ಶಿವಗಂಗೆಯ ಮೇಲಣ ಗವಿ ಸಿಂಹಾಸನಾಧಿಪತಿ ಶಾಂತನಂಜೇಶ, ಮತ್ತು ಸಪ್ಪೆಯ ಲಿಂಗಣಾ ಚಾರ್ಯ ಇವರೂ ಕವಿಗೆ ಗುರುಗಳೆಂದು ತಿಳಿದು ಬಂದಿದೆ. ಈ ಕವಿಯು ೧೫೧೩ ರಲ್ಲಿ 'ಭಾವಚಿಂತಾರತ್ನ'ವನ್ನೂ, ೧೫೩೦ ರಲ್ಲಿ ವೀರಶೈವ ಮಹಾ ಪುರಾಣವನ್ನೂ ಬರೆದಂತೆ ತಿಳಿದುಬಂದಿದೆ.

ಪುರಾಣ ಪ್ರಸಿದ್ಧವಾದ ಗುಬ್ಬಿಯಲ್ಲಿ (ಅಮರಗೊಂಡದಲ್ಲಿ) ಈಗ ಗದ್ದೆಮಲ್ಲಿಕಾರ್ಜುನ ದೇವಾಲಯ, ಗುಬ್ಬಿಚೆನ್ನಬಸವೇಶ್ವರ ಸಮಾಧಿ ಮಂದಿರ, ಅಡವಿಸ್ವಾಮಿಗಳ ಮಠ, ಚನ್ನಶೆಟ್ಟಿಹಳ್ಳಿ ಗದ್ದಿಗೆ, ಓಹಿಲ ಯ್ಯನ ಗುಡಿ ಎಂಬಿಷ್ಟು ಐತಿಹಾಸಿಕ ಸ್ಮಾರಕಗಳಿವೆ. ಇವುಗಳಲ್ಲಿ 'ಗದ್ದೆ ಮಲ್ಲಿಕಾರ್ಜುನ ಮಂದಿರವು' ಪ್ರಾಚೀನತಮವೂ ಐತಿಹಾಸಿಕವೂ ಮಹಿ ಮಾನ್ವಿತವೂ ಎನಿಸಿದೆ.

ಮಹಾಕವಿ ಮಲ್ಲಣಾರ್ಯನು ಸಕಲಶಾಸ್ತ್ರಪಂಡಿತನು, ಕನ್ನಡ, ಸಂಸ್ಕೃತ ಕವಿತಾವಿಶಾರದನು. ಭಾವಚಿಂತಾರತ್ನವನ್ನು–ಪಿಳ್ಳೈನೈನಾರರ 'ಸತ್ಯೇಂದ್ರ ಕಥೆ' ಯಿಂದ–ತಮಿಳು ಭಾಷೆಯಿಂದ- ಕನ್ನಡಕ್ಕೆ ಭಾಷಾಂತರಿಸಿರುವುದರಿಂದ ಇವನಿಗೆ ತಮಿಳುಭಾಷೆ ಕೂಡ ಬರುತ್ತಿರಬೇಕೆಂದು ತರ್ಕಿಸಬಹುದು. ಇವನು ಬರೆದಿರುವ 'ಪುರಾತನರ ರಗಳೆಯು' ತಮಿಳು ಪೆರಿಯ ಪುರಾಣದ ಅನುವಾದವಾಗಿದ್ದರೂ ಇರಬಹುದು. A ಮಲ್ಲಣಾರ್ಯನು ಮಹಾಕವಿಯೂ ಶಾಸ್ತ್ರಜ್ಞನೂ ಅಲ್ಲದೆ ಬಸವಪುರಾಣವನ್ನು ಓದುವುದರಲ್ಲಿ ಪ್ರಸಿದ್ಧನಾಗಿದ್ದನು. ಇವನಿಗೆ 'ಬಸವ ಪುರಾಣದ ಮಲ್ಲಣಾರ್ಯ' ಎಂಬ ಹೆಸರೂ ಉಂಟು. ಅಭಿನವಕಾಲಿದಾಸ ಬಸವಪ್ಪಶಾಸ್ತ್ರಿಗಳು ಮಹಾ ಕವಿಗಳಾಗಿದ್ದಂತೆ ಪ್ರಸಿದ್ಧ ಗಮಕಿಗಳೂ ಆಗಿದ್ದರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ೧೬ ನೆಯ ಶತಕದಲ್ಲಿ ಮಲ್ಲಣಾರ್ಯನು ಗಮಕಕಲೆಯಲ್ಲಿ ಪ್ರಸಿದ್ಧನಾಗಿದ್ದುದು ಇವನ ಹಿರಿಮೆ–ಗರಿಮೆಗಳಿಗೆ ನಿದರ್ಶನವಾಗಿದೆ. ಪ್ರಾಚೀನ ಭಾರತದಲ್ಲಿ, ಕವಿ, ಗಮಕಿ, ವಾದಿ, ಗಾಯಕ, ಶಿಲ್ಪಿ, ಚಿತ್ರಗಾರ ಇವರೆಲ್ಲರೂ ರಾಜಾಸ್ಥಾನದಲ್ಲಿ ಪರಿಶೋಭಿಸುತ್ತಿದ್ದ ಜೀವಂತರತ್ನಗಳು ಎಂಬುದು ಇಲ್ಲಿ ಗಮನಾರ್ಹವಾಗಿದೆ.

ಗುಬ್ಬಿಯಲ್ಲಿ ಇಂದು ಪ್ರಾಚೀನವೆನಿಸಿರುವ (ಊರು ಮಧ್ಯದಲ್ಲಿರುವ) –ಆ ಗದ್ದೆ ಮಲ್ಲಿಕಾರ್ಜುನ ಗುಡಿಯಲ್ಲಿ ಶ್ರಾವಣಮಾಸದಲ್ಲಿ ಕವಿ ಮಲ್ಲಣಾರ್ಯನು ಪುರಾಣವನ್ನು ಹೇಳುತ್ತಿದ್ದಾನೆ. ಪ್ರಾಯೇಣ ಅದು ಭೀಮಕವಿಯ ಬಸವಪುರಾಣವೇ ಆಗಿರಬೇಕು. ಜನರೂ ಭಕ್ತಿಯಿಂದ ಬಂದು ದಿನವೂ ಪುರಾಣ ಶ್ರವಣ ಮಾಡುತ್ತಿದ್ದಾರೆ. ಆ ಸಭೆಯಲ್ಲಿ ಎರಡು ಗುಬ್ಬಿ ಹಕ್ಕಿಗಳು ದಿನವೂ ಪುರಾಣಕ್ಕೆ ಬಂದು, ಗುಡಿಯ ಒಂದು ಮೂಲೆಯಲ್ಲಿ ತೆಪ್ಪನೆ ಕುಳಿತು ಪುರಾಣ ಕೇಳುತ್ತಿವೆ- ಜನರು ಆಶ್ಚರ್ಯ ಭರಿತರಾಗಿದ್ದಾರೆ. ಕವಿ ಮಲ್ಲಣಾರ್ಯನು ಆ ಗುಬ್ಬಿ ಹಕ್ಕಿಗಳ ಕಥೆಯನ್ನು ಪುರಾಣದ ಮುಕ್ತಾಯದಲ್ಲಿ ಹೇಳುವುದಾಗಿ ಜನರಿಗೆ ತಿಳಿಸುತ್ತಿದ್ದಾನೆ. ಜನರ ಕುತೂಹಲವು ದಿನದಿನಕ್ಕೆ ಹೆಚ್ಚುತ್ತಲೇ ಇದೆ. ಶ್ರಾವಣಾಂತ್ಯದಲ್ಲಿ ಪುರಾಣದ ಮಹಾ

A. 'ಪುರಾತನರ ರಗಳೆ' ಸಿಕ್ಕಿಲ್ಲ. ಅದು ಕಾಲಗರ್ಭದಲ್ಲಿ ಅಡಗಿ ಹೋಗಿರಬಹುದು.

ಮಂಗಲವಾಗುತ್ತದೆ. ಅಂದು ಆ ಗುಬ್ಬಿ ಹಕ್ಕಿಗಳು ಭಕ್ತಿಯಿಂದ ಬಂದು ಪುರಾಣ ಕೇಳುತ್ತಿವೆ. ಮಹಾ ಮಂಗಲವಾಗುತ್ತಿರುವಲ್ಲಿ ಆ ಗಂಡು-ಹೆಣ್ಣು ಗುಬ್ಬಿಹಕ್ಕಿಗಳು ಬಂದು, ಮಲ್ಲಿಕಾರ್ಜುನನ ಮುಂದೆ ಮೂರುಸಾರಿ ಸುತ್ತಿ ಮಂಗಲಾರತಿಯ ಮುಂದೆ ನೆಲಕ್ಕೆ ಬಿದ್ದು ಅಸುವನ್ನು ನೀಗುತ್ತವೆ. ಈ ಸೋಜಿಗವನ್ನು ಕಂಡು ಅಮರಗೊಂಡದ ಜನರು ಹೌಹಾರಿ ಹೋಗುತ್ತಾರೆ. ಜನರು ಮಲ್ಲಣಾರ್ಯರನ್ನು ಕುರಿತು 'ಈ ಘಟನೆಗೆ ಏನು ಕಾರಣ' ಎಂದು ಕೇಳುತ್ತಾರೆ.

ಆಗ ಮಹಾ ಕವಿಯು-ತನ್ನ ದಿವ್ಯಜ್ಞಾನದಿಂದ ತಿಳಿದು ಹೇಳುತ್ತಾನೆ. ಜನರೇ ಕೇಳಿರಿ:- "ಈ ಗುಬ್ಬಿ ಹಕ್ಕಿಗಳು, ಪೂರ್ವಜನ್ಮದಲ್ಲಿ ಶಿವಭಕ್ತ ದಂಪತಿಗಳಾಗಿದ್ದರು. ಪುರಾಣ ಪುಣ್ಯ ಕಥೆಗಳಿಗೆ ಸದಾ ಅಡಚಣೆ ಮಾಡುತ್ತಿದ್ದರು. ಅದು ನಿಮಿತ್ತವಾಗಿ ಒಂದು ದಿನ ಒಬ್ಬ ಮಹಾತ್ಮನ ಶಾಪಕ್ಕೆ ಈಡಾಗಿ "ಗುಬ್ಬಿ ಹಕ್ಕಿಗಳಾಗಿ" ಎಂದು ಶಾಪ ಹೊಂದಿದರು. ಆಗ ಭಯಗ್ರಸ್ಥರಾಗಿ ಶಾಪವಿಮೋಚನೆ ಕೇಳಿದರು ಆ ಮಹಾತ್ಮನ ಪಾದಗಳ ಮೇಲೆ ಬಿದ್ದು. ಆಗ ಆ ಮುನಿಯು ಮುಂದೆ ಅಮರಗೊಂಡದ ಮಲ್ಲಿಕಾರ್ಜುನನ ಗುಡಿಯಲ್ಲಿ ನಡೆಯುವ ಬಸವಪುರಾಣವನ್ನು ಶ್ರದ್ಧೆಯಿಂದ ಕೇಳಿದರೆ ನಿಮ್ಮ ಶಾಪವಿಮೋಚನೆಯಾಗಲಿ ಎಂದು ವಿಶಾಪವಿತ್ತನು. ಆ ದಂಪತಿಗಳು ಗುಬ್ಬಿ ಹಕ್ಕಿಗಳಾಗಿದ್ದು ಈಗ ಪುರಾಣ ಶ್ರವಣದಿಂದ ಶಾಪವಿಮೋಚನೆ ಪಡೆದಿವೆ. ಪುಣ್ಯಪ್ರದ ಬಸವಪುರಾಣ ಶ್ರವಣದಿಂದ ಇದು ಇಲ್ಲಿ ನಡೆದ ಒಂದು ಅಪೂರ್ವ ಘಟನೆಯಾಗಿದೆ. ಕಾರಣ ಈ ಹಕ್ಕಿಗಳನ್ನು ಈ ಗುಡಿಯಲ್ಲಿ ಮಲ್ಲಿಕಾರ್ಜುನನ ಮುಂದೆ ಸಮಾಧಿ ಮಾಡಿ ಬಸವನನ್ನು ಮೇಲೆ ಸ್ಥಾಪಿಸಿರಿ. ಇದಕ್ಕೆ 'ಗುಬ್ಬಿಹಕ್ಕಿ ಬಸವಣ್ಣ' ಎಂದು ಹೆಸರಾಗಲಿ. ಮಲ್ಲಿಕಾರ್ಜುನನ ಪೂಜೆಯ ಕಾಲದಲ್ಲಿ ಈ ಗುಬ್ಬಿಹಕ್ಕಿ ಬಸವಣ್ಣನಿಗೂ ಪೂಜೆಯಾಗಲಿ. ಈ ಅಪೂರ್ವ ಘಟನೆಯ ಸ್ಮಾರಕವಾಗಿ ಈ ಊರಿಗೆ ಇನ್ನು ಮುಂದೆ 'ಗುಬ್ಬಿ' ಎಂದು ಹೆಸರಾಗಲಿ, ನನಗೆ 'ಗುಬ್ಬಿಮಲ್ಲಣಾರ್ಯ' ಎಂದು ಹೆಸರಾಗಲಿ ಎಂದು ಹೇಳಿದನು.

ಅಂದಿನಿಂದ ಅಮರಗೊಂಡಕ್ಕೆ 'ಗುಬ್ಬಿ' ಎಂಬ ಹೆಸರಾಯಿತು. ಮಲ್ಲಣಾರ್ಯನು ಪುರಾಣಗಳನ್ನು ಬರೆಯುವಾಗ ಊರಿನ ಹೆಸರು 'ಅಮರ

ಗೊಂಡ' ಎಂದೇ ಇದ್ದಿತು. ಅವನ ಗ್ರಂಥಗಳಲ್ಲಿ ಹಾಗೆಯೇ ನಿರೂಪಿತವಾಗಿದೆ. ಕವಿಯ ಜೀವಿತದ ಕಡೆಗಾಲದಲ್ಲಿ ಈ ಪವಾಡ ನಡೆದು ಊರಿನ ಹೆಸರು ಬದಲಾಗಿ 'ಗುಬ್ಬಿ' ಆಗಿರಬೇಕು.

ಇಲ್ಲವಾದರೆ ಇತಿಹಾಸಪ್ರಸಿದ್ಧವಾದ ಆ ಊರಿಗೆ ಸಣ್ಣಹಕ್ಕಿ 'ಗುಬ್ಬಿ' ಎಂಬ ಹೆಸರು ಏಕಾಗಿ ಬಂದಿತು ಎಂಬ ಪ್ರಶ್ನೆ ಏಳುತ್ತದೆ.

ಮಲ್ಲಣಾರ್ಯನು ಮಹಾಕವಿಯೂ ಮಹಾನುಭಾವನೂ ಆಗಿದ್ದನೆಂಬುದಕ್ಕೆ ಈ ದಂತಕಥೆಯು ನಿದರ್ಶನವಾಗಿದೆ. ಗುಬ್ಬಿ ಮಲ್ಲಿಕಾರ್ಜುನನ ಗುಡಿಯಲ್ಲಿ ಇಂದಿಗೂ ಆ ಗುಬ್ಬಿಹಕ್ಕಿ ಸಮಾಧಿಗೆ 'ಗುಬ್ಬಿಹಕ್ಕಿ ಬಸವಣ್ಣ' ಎಂಬ ಹೆಸರಿದೆ. ಸ್ವಾಮಿಯ ಪೂಜೆಯ ಕಾಲದಲ್ಲಿ ಈ ಹಕ್ಕಿಗಳ ಸಮಾಧಿಗೆ ಈಗಲೂ ಪೂಜೆಯಾಗುತ್ತಿದೆ.

೧೯೨೩–೨೪, ೧೯೨೪–೨೫ ರಲ್ಲಿ ನಾನು ಗುಬ್ಬಿಯಲ್ಲಿ ಉಪಾಧ್ಯಾಯನಾಗಿದ್ದೆನು. ಅಲ್ಲಿನ ತಪೋಭೂಮಿ ಅಡವಿಯ ಸ್ವಾಮಿಗಳ ಮಠದಲ್ಲಿ ವಾಸವಾಗಿದ್ದೆನು. ದಿನವೂ ಶ್ರೀಗುಬ್ಬಿ ಚೆನ್ನಬಸವೇಶ್ವರನ ದರ್ಶನ ಭಾಗ್ಯ ಪಡೆಯುತ್ತಿದ್ದೆನು. ಆ ಕಾಲದಲ್ಲಿ ಗುಬ್ಬಿಯ ಹಿರಿಯರಿಂದ ಕೇಳಿದ ಈ ಕಥೆಯನ್ನು ಇಂದು ಸ್ಮರಿಸಿಕೊಂಡು ಮಾನ್ಯ ವಾಚಕರಿಗಾಗಿ ಈ ಬರೆಹದ ರೂಪದಲ್ಲಿ ನಿರೂಪಿಸಿರುವೆನು.

ಸರ್ವ ಶೀಲೆ ಚೆನ್ನಮ್ಮನವರ ಸನ್ನಿಧಿಯಲ್ಲಿ -ಪಾಲ್ಕುರಿಕೆ ಸೋಮನಾಥ

ಹನ್ನೆರಡನೆಯ ಶತಮಾನದ ಕಟ್ಟಕಡೆಯಲ್ಲಿ (ಕ್ರಿ. ಶ. ೧೧೯೩) 'ಪಾಲ್ಕುರಿಕೆ ಸೋಮನಾಥ' ಎಂಬ ಮಹಾ ಕವಿಯು ಆಂಧ್ರದೇಶದ ರಾಜಧಾನಿಯಾದ ಓರುಂಗಲ್ಲಿನಲ್ಲಿ ಕಾಕತೀಯ ರಾಜರ ಆಸ್ಥಾನಕವಿಯಾಗಿ ಪ್ರಖ್ಯಾತನಾಗಿದ್ದನು. ಈತನು 'ಬಸವಪುರಾಣಮು' ಪಂಡಿತಾರಾಧ್ಯಚರಿತಮು' ಬಸವರಾಜೀಯಂ' ಗಣಸಹಸ್ರನಾಮ' ಚತುರ್ವೇದ ಸಾರಸಂಗ್ರಹಮು, ಅನುಭವ ಸಾರಮು, ವೃಷಾಧಿಪ ಶತಕಮು' ಚೆನ್ನಮಲ್ಲು ಸೀಸಮುಲು, ಚೆನ್ನಬಸವ ರಗಳೆ,'ಶರಣುಬಸವ ರಗಳೆ' ಬಸವಲಿಂಗ ನಾಮಾವಳಿ, ಬಸವಾದಿ ಪಂಚ ಉದಾಹರಣ ಗದ್ಯಗಳು ಇತ್ಯಾದಿ ಹಲವಾರು ಗ್ರಂಥಗಳನ್ನು, ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಬರೆದು ವೀರಶೈವ ಧರ್ಮವನ್ನು ಉದ್ಧರಿಸಿದನು. ಈತನು ಭೃಂಗೀಶ್ವರನ ಅವತಾರವೆಂದು ಪುರಾಣಗಳಲ್ಲಿ ಹೇಳಿದೆ. ಇವನು ಚಕ್ರಪಾಣಿ ರಂಗನಾಥನನ್ನು ವಾದದಲ್ಲಿ ಜಯಿಸಿ ಅವನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನು. ವೀರಶೈವ ಮತೋದ್ಧಾರಕರಲ್ಲಿ ಈತನಿಗೂ ಸ್ಥಳವಿದೆ. ವಿರಕ್ತ ತೋಂಟದಾರ್ಯರು ಈತನನ್ನು ಕುರಿತು ಕನ್ನಡದಲ್ಲಿ 'ಪಾಲ್ಕುರಿಕೆ ಸೋಮನಾಥ ಪುರಾಣ' ಬರೆದಿದ್ದಾರೆ (೧೬೫೦)

ಈತನು ಜನಿಸಿದ್ದು ತೆಲುಗು ದೇಶದ ಪಾಲ್ಕುರಿಕೆಯಲ್ಲಿ. ಅಲ್ಲಿರುವ ಸೋಮನಾಥಲಿಂಗದ ಅನುಗ್ರಹದಿಂದ ಈತನು ಜನಿಸಿದನು. ಈತನು ಸಮಾಧಿಸ್ಥನಾದುದು ಬೆಂಗಳೂರು ಜಿಲ್ಲಾ ಕಲ್ಲೆಯ ಕ್ಷೇತ್ರದಲ್ಲಿ. ಅಲ್ಲಿ ಇವನ ಸಮಾಧಿಯಿದೆ ಇವನು ವೃಷಾಧಿಪ ಶತಕದಲ್ಲಿ, ಕನ್ನಡ, ತೆಲುಗು, ತಮಿಳು, ಸಂಸ್ಕೃತ, ಮರಾಠಿ ಈ ಐದು ಭಾಷೆಗಳಲ್ಲಿಯೂ ಪದ್ಯಗಳನ್ನು ಬರೆದಿದ್ದಾನೆ. ವೀರಶೈವ ಧರ್ಮೋದ್ಧಾರಕಾರ್ಯದಲ್ಲಿ,ಕರ್ನಾಟಕದಲ್ಲಿ ಹಂಪೆಯ ಹರೀಶ್ವರನೂ, ತಮಿಳುನಾಡಿನಲ್ಲಿ ಶಿವಪ್ರಕಾಶಸ್ವಾಮಿಗಳೂ, ಮಹಾರಾಷ್ಟ್ರದಲ್ಲಿ ಮನ್ಮಥ

ಸ್ವಾಮಿಗಳೂ ಪಡೆದಿರುವಸ್ಥಾನವನ್ನು ಆಂಧ್ರದಲ್ಲಿ ಮಹಾಕವಿ ಪಾಲ್ಕುರಿಕೆಯ ಸೋಮನಾಥನು ಪಡೆದಿರುವನೆಂದು ಹೇಳಬಹುದು.

ಧರ್ಮಭಂಡಾರಿಯಾದ ಈತನು, ಕೊಲ್ಲಿಪಾಕಿ, ಶ್ರೀಶೈಲ ಇತ್ಯಾದಿ ಸುಕ್ಷೇತ್ರಗಳಲ್ಲಿಯೂ ಕೆಲಕಾಲ ಇದ್ದಂತೆ ತಿಳಿದು ಬಂದಿದೆ. ಈತನು ಬಸವ ಪುರಾಣ, ಪಂಡಿತಾರಾಧ್ಯ ಚರಿತ್ರೆಗಳನ್ನು ಬರೆದುದು ಶ್ರೀಶೈಲ ಮಲ್ಲಿಕಾರ್ಜು ನನ ಸನ್ನಿಧಿಯಲ್ಲಿ ಎಂದು ಹೇಳುತ್ತಾರೆ. ಈ ಗ್ರಂಥಗಳೆರಡೂ ಕನ್ನಡದಲ್ಲಿ ಅನುವಾದವಾಗಿವೆ. ಅಷ್ಟೇ ಅಲ್ಲ, ಸಂಸ್ಕೃತ–ತಮಿಳು ಭಾಷೆಗಳಿಗೂ ಇವು ಭಾಷಾಂತರವಾಗಿವೆ.

ಒಂದು ದಿನ ಓರುಂಗಲ್ಲಿನ ಕವಿಯ ಬಿಡಾರಕ್ಕೆ, ಕರ್ಣಾಟಕದಿಂದ ಓರ್ವ ಚರಮೂರ್ತಿಗಳು ಆಗಮಿಸಿ ಸೋಮನಾಥ ಕವಿಗೆ ಅರಿಕೆಯಿತ್ತರು. ಆಗ ಕವಿಗೂ ಚರಮೂರ್ತಿಗಳಿಗೂ ಈ ಮುಂದಿನಂತೆ ಸಂಭಾಷಣೆ ನಡೆಯಿತು.

ಕವಿ ಸೋಮನಾಥ : ಸ್ವಾಮಿಗಳೆ, ತಾವು ಎಲ್ಲಿಂದ ಬಂದಿರಿ ? ಓರುಂಗಲ್ಲಿಗೆ ಬರಲು ಕಾರಣವೇನು ? ನನ್ನಿಂದ ಏನಾದರೂ ಆಗ ಬೇಕಾದು ದುಂಟೆ ?

ಚರಮೂರ್ತಿ : ನಾವು ಕರ್ಣಾಟಕದ ಕಕುದ್ಗಿರಿಕ್ಷೇತ್ರದ (ಶಿವ ಗಂಗೆ) ದಕ್ಷಿಣ ಭಾಗದಲ್ಲಿರುವ 'ತಾರಾಚಲ' ಅಥವಾ 'ಕಲ್ಲೆಯು' ಎಂಬ ಕ್ಷೇತ್ರದಿಂದ ಬಂದೆವು. ಅವತಾರ ಪುರುಷರೂ, ಮಹಾಕವಿಗಳೂ, ಚೌಷಷ್ಟಿ ಶೀಲಗಳನ್ನು ಆಚರಿಸತಕ್ಕವರೂ ಆದ ತಮ್ಮ ಸಂದರ್ಶನವೇ ನನ್ನ ಬರು ವಿಕೆಗೆ ಕಾರಣ. ಶಿವಶರಣರ ಸಂದರ್ಶನ ಲಾಭವೇ ನನ್ನ ಆಗಮನದ ಉದ್ದೇಶ. ಇಂದು ನಾನು ಧನ್ಯನಾದೆನು ತಮ್ಮ ದರ್ಶನದಿಂದ.

ಸೋಮನಾಥ : ಕರ್ಣಾಟದಲ್ಲಿ ಏನು ವಿಶೇಷ ? ಬಸವಣ್ಣನವರೇ ಆದಿ ಪ್ರಮಥರು ಕೈಲಾಸಕ್ಕೆ ಹೋದಮೇಲೆ ಅಲ್ಲಿಂದ ನಮಗೆ ಹೆಚ್ಚು ಸುದ್ದಿ ಗಳಿಲ್ಲ. ಕಲ್ಯಾಣದ ಕ್ರಾಂತಿಯು ಇದಕ್ಕೆ ಕಾರಣವಿರಬಹುದೆ ?

ಚರಮೂರ್ತಿ : ಕನ್ನಡ ನಾಡಿನಲ್ಲಿ ಎಲ್ಲೆಲ್ಲೂ ನಿಮ್ಮ ಕೀರ್ತಿ ಹಬ್ಬಿದೆ. ನೀವು ತೆಲುಗಿನಲ್ಲಿ ಬರೆದಿರುವ ಬಸವಪುರಾಣಮು, ಪಂಡಿತಾ ರಾಧ್ಯಚರಿತ್ರಮು ಇವುಗಳನ್ನು ನಮ್ಮವರು ಓದಿಸಿ ಕೇಳುತ್ತಿದ್ದಾರೆ. ತಾವು

ಕನ್ನಡದಲ್ಲಿ ಬರೆದಿರುವ ಶರಣು ಬಸವ ರಗಳೆ, ಚೆನ್ನಬಸವ ರಗಳೆ, ಬಸವಲಿಂಗ ನಾಮಾವಳಿ, ಗಣಸಹಸ್ರ ನಾಮಾವಳಿ, ಅಕ್ಷರಾಂಕ ಗದ್ಯ ಇವನ್ನು ಜನರು ಪಾರಾಯಣಮಾಡಿ ನಲಿದಾಡುತ್ತಿದ್ದಾರೆ. ಬಸವೇಶ್ವರಾದಿಗಳ ವಚನಗಳಂತೆಯೇ ಈ ತಮ್ಮ ಕೃತಿಗಳೂ ಕನ್ನಡ ಜನರಿಗೆ ಪ್ರಿಯವಾಗಿವೆ. ತಮ್ಮ ಸತ್ಕೃತಿಗಳು ಭಕ್ತಿರಸದ ಗಂಗೆಯನ್ನು ನಾಡಿನಲ್ಲಿ ಹರಿಸುತ್ತಿವೆ. ವೀರಶೈವ ಧರ್ಮಕ್ಕೂ, ಬಸವಣ್ಣನವರಿಗೂ ತಾವು ಮಾಡಿರುವ ಸೇವೆ ಅಪಾರವಾಗಿದೆ. ಮತ್ತು ಅಸದೃಶವಾಗಿದೆ.

ಕವಿ ಸೋಮನಾಥ : ಚರಮೂರ್ತಿಗಳೆ, ತಮ್ಮ ಹೊಗಳಿಕೆಯ ಮಾತುಗಳು ನನಗೆ ಹೊನ್ನಶೂಲದಂತೆ ಹಿಂಸಿಸುತ್ತಿವೆ. ನಾನು ಭಕ್ತಿ ಭಂಡಾರಿ ಬಸವಣ್ಣನವರ ಮಾರ್ಗಾವಲಂಬಿ. ಅಣ್ಣನವರನ್ನೂ ಅವರು ಹುಟ್ಟಿ ಬಳೆದ, ಬಾಗೆವಾಡಿ, ಸಂಗಮ, ಮಂಗಳವಾಡ, ಕಲ್ಯಾಣಗಳನ್ನೂ ನಾನು ಕಣ್ಣಾರಕಂಡಿಲ್ಲ. ಕಲ್ಯಾಣದಿಂದ ಬಂದ ಜಂಗಮರ ಮುಖದಿಂದ ಕಿವಿಯಾರೆ ಕೇಳಿದ ಸಂಗತಿಗಳನ್ನು ಆಧರಿಸಿ ನಾನು ಬಸವ ಪುರಾಣ ಹಾಗೂ ಸ್ತೋತ್ರಗಳನ್ನು ಬರೆದಿದ್ದೇನೆ. ಬಸವಣ್ಣನವರ ಕರ್ಣಾಟಕದಿಂದ ಬಂದ ನಿಮ್ಮ ಸಂದರ್ಶನವು ನನಗೆ ಅಣ್ಣನವರ ದರ್ಶನದಷ್ಟೇ ಆನಂದದಾಯಕವಾಗಿದೆ. ಇರಲಿ, ನೀವು ಇರುವ ಕಲ್ಲೆಯ ಕ್ಷೇತ್ರದಲ್ಲಿ ಏನು ವಿಶೇಷ ?

ಚರಮೂರ್ತಿ : ಕವೀಶ್ವರಾ, ನಿಜವಾಗಿಯೂ ಅಲ್ಲಿ ವಿಶೇಷವಿದೆ. ತಾರಕಾಸುರನ ಮಕ್ಕಳು ಅಲ್ಲಿ ತಪಸ್ಸುಮಾಡಿ ಪ್ರತ್ಯಕ್ಷಮಾಡಿಕೊಂಡು ವರವನ್ನು ಪಡೆದ ಕಲ್ಲೇಶ್ವರ ಶಿವಲಿಂಗವಿದೆ. ಆದ್ದರಿಂದಲೇ ಅದಕ್ಕೆ "ಕಲ್ಲೆಯ" ಎಂದು ಹೆಸರಿದೆ. ಅಲ್ಲಿ ಇನ್ನೊಂದು ಮುಖ್ಯವಿಚಾರವೆಂದರೆ "ಚೆನ್ನಮ್ಮ" ಎಂಬ ಉಜ್ವಲ ಭಕ್ತೆ ಅಲ್ಲಿ ನೆಲಸಿರ್ಪಳ್, ಅವಳ "ಶೀಲವ್ರತವಂ ಇಳೆ

A ಆಂಧ್ರಸಾಹಿತ್ಯ ಪರಿಷದಧ್ಯಕ್ಷರಾಗಿರುವ ಶ್ರೀ ಬಂಡಾರು ತಮ್ಮಯ್ಯನವರು ಈಗ ತೆಲುಗು ಭಾಷೆಯಲ್ಲಿ 'ಪಾಲ್ಕುರಿಕೆ ಸೋಮನಾಥ' ಎಂಬ ಒಂದು ಮಹತ್ವದ ಗ್ರಂಥವನ್ನು ಬರೆದಿದ್ದಾರೆ. (ಸಂ)

ಯೊಳ್ ಆವಂ ಪೇಳ್ವಂ" ಅವಳು ಅರುವತ್ತುನಾಲ್ಕು ಆಚಾರಗಳನ್ನೂ ತಪ್ಪದೆ ನಡೆಸುತ್ತಿದ್ದಾಳೆ. ಏಳೇಶ ಕೇತಯ, ಪಡಿಹಾರಿ ಬಂಕಣ, ಮರುಳ ಪರ್ವತದೇವ ಮೊದಲಾದ ಶಿವಶರಣರನ್ನೆಲ್ಲಾ ಈ ಅರುವತ್ತುನಲ್ಕು ಶೀಲ ವ್ರತಾಚರಣೆಯಲ್ಲಿ ಮೀರಿದ್ದಾಳೆ. "ಅವಳ್ಗೆ ಸರಿಯಂ ಹಿಂದೆಯುಂ ಮುಂದೆ ಯುಂ ಕಾಣೆಂ" ಆದರೆ, ಅವಳ ಶೀಲವ್ರತದ ಮಾರ್ಗಕ್ಕೆ ಸರಿಯಾಗಿ 'ಅವನಿ ಯೊಳ್ ನೀವೊರ್ವರ್ ಇರ್ಪಿರಿ' ಅಲ್ಲದೆ, "ಮತ್ತೆ ಭುವನ ದೊಳಗಾರುಂ ಇಲ್ಲಂ" ಹೀಗೆಂದು ಚರಮೂರ್ತಿಯು ಚೆನ್ನಮ್ಮನ ಸರ್ವಶೀಲವನ್ನೂ ಬಣ್ಣಿ ಸಿದನು. ಆಕೆ ರಾಟೆಯ ಕಾಯಕದಿಂದ ಜೀವಿಸುತ್ತಿದ್ದಾಳೆ ಎಂದನು.

ಕವಿ ಸೋಮನಾಥ : ಚರಮೂರ್ತಿಗಳೆ, ಅಂತಹ ಮಹಾ ತಾಯಿಯ ಸಂದರ್ಶನವನ್ನು ನಾವು ಖಂಡಿತವಾಗಿ ಮಾಡಬೇಕು. ನಾಳೆಯೇ ಅಲ್ಲಿಗೆ ಪ್ರಯಾಣ ಬಳೆಸೋಣ. ತಾವು ನಮ್ಮ ಸಂಗಡ ಬಂದು ಮಾರ್ಗ ದರ್ಶನ ಮಾಡಿರಿ. ಹಾಗೆಯೇ 'ದಕ್ಷಿಣ ಕಾಶಿ' ಎನಿಸಿದ ಕಕುದ್ಗಿರಿಯನ್ನೂ ಸಂದರ್ಶಿಸಿ ಕೊಂಡು ಬರೋಣ.

ಚರಮೂರ್ತಿ : ಕವಿ ಶೇಖರಾ, ಅಗತ್ಯವಾಗಿ ಆಗಬಹುದು. ನಾನೂ ನಿಮ್ಮೊಂದಿಗೆ ಬರುತ್ತೇನೆ. ನಿಮ್ಮಂಥ ಧರ್ಮೋದ್ಧಾರಕರು ಆ ಮಹಾ ಶರಣೆಯನ್ನು ಸಂದರ್ಶಿಸುವುದಗತ್ಯವೇ ಸರಿ. "ಬಲ್ಲವರೇ ಬಲ್ಲರು, ಬೆಲ್ಲದ ಸವಿಯ ?" ಎಂಬ ಗಾದೆಯು ನಾಡಿನಲ್ಲಿ ಪ್ರಸಿದ್ಧವಾಗಿಯೇ ಇದೆ.

ಮರುದಿನ ಮುಂಜಾನೆ ಸೋಮನಾಥನು ಒಂದು ಸುಭದ್ರವಾದ ಎತ್ತಿನ ಗಾಡಿಯಲ್ಲಿ, ಚರಮೂರ್ತಿಯ ಮಾರ್ಗದರ್ಶನದಲ್ಲಿ, ಮಾಗ ಚತು ರ್ಮುಖ ಬಸವದೇವರು, ಶಿಷ್ಯರಾದ ಸೂರಾಮಾತ್ಯ ಮತ್ತು ರಂಗನಾಥ ಇವರ ಜತೆಯಲ್ಲಿ ಬಹು ದೂರದ ಕಕುದ್ಗಿರಿಗೆ ಹೋಗಿ ದೇವರ ಸಂದರ್ಶನ ಪಡೆದು, ಅನಂತರ ಕಳ್ಳೆಯದ ಬೆಟ್ಟದ ಬುಡಕ್ಕೆ ನಡೆದು ಬಂದು ನಿಂತನು.

ಇತ್ತ . ಕಳ್ಳೆಯದ ಬೆಟ್ಟದಲ್ಲಿರುವ ತನ್ನ ಗವಿಯಲ್ಲಿ ಶಿವಪೂಜಾ ನಿರತ ಳಾಗಿದ್ದ ಚೆನ್ನಮ್ಮನು, ಶಿವಯೋಗದ ಬಲದಿಂದ ತನ್ನ ಕರದ ಇಷ್ಟಲಿಂಗದ ಮುಖದಿಂದ-(ಟೆಲಿವಿಜನ್‌ನಲ್ಲಿ ಕೂತಲ್ಲಿಯೇ ವಿಶ್ವದ ಸಂಗತಿಗಳನ್ನು ಅರಿ ಯುವಂತೆ) ಓರುಂಗಲ್ಲಿನಲ್ಲಿ ನಡೆದ ಎಲ್ಲ ವಿದ್ಯಮಾನಗಳನ್ನೂ ತಿಳಿದು, ಕಲ್ಲಿ

ಖಕ್ಕೆ ಬಂದ ಸೋಮನಾಥನನ್ನು ಸ್ವಾಗತಿಸಲು, ನಾರುಮಡಿಯನ್ನುಟ್ಟು, ವಿಭೂತಿ ರುದ್ರಾಕ್ಷಿಗಳಿಂದ ಅಲಂಕೃತೆಯಾಗಿ, ಕೈಯಲ್ಲಿದ್ದ ಬಿಂದಿಗೆಯಲ್ಲಿ ಶುಭ್ರವಾದ ಅಗ್ಗವಣಿಯನ್ನು ಸಿದ್ಧ ಮಾಡಿಕೊಂಡು ಕಲ್ಲೆಯದ ಬೆಟ್ಟದ ಬುಡದಲ್ಲಿ ಬಂದು ನಿಂತಿರುತ್ತಾಳೆ.

ಗಾಡಿಯಿಂದಿಳಿದ ಸೋಮನಾಥ ಮತ್ತ ಇತರರು, ಮುಂದೆ ನಿಂತಿದ್ದ ಚೆನ್ನಮ್ಮನನ್ನು ನೋಡಿ ಆಶ್ಚರ್ಯಪಟ್ಟರು. ಮೊದಲು ಚರಮೂರ್ತಿಗಳು ಮುಂದೆ ಬಂದು ಶರಣೆಗೆ ತಲೆಬಾಗಿ "ಚೆನ್ನಮ್ಮನವರೆ, ತಾವು ದಿನವೂ ಪಾರಾಯಣ ಮಾಡುತ್ತಿರುವ, ಬಸವ ರಗಳೆ, ಗಣಸಹಸ್ರ ನಾಮಾವಳಿ ಮತ್ತು ಳಿದ ಕೃತಿಗಳನ್ನು ರಚಿಸಿದ ಭೃಂಗಿಯ ಅವತಾರಿ ಶ್ರೀ ಪಾಲ್ಕುರಿಕೆ ಸೋಮನಾಥ ಕವೀಶ್ವರರು ಹಾಗೂ ಅವರ ಪುತ್ರ ಮತ್ತು ಶಿಷ್ಯರು ತಮ್ಮ ಸಂದರ್ಶನಕ್ಕಾಗಿ ಬಂದಿದ್ದಾರೆ" ಎಂದು ಪರಿಚಯ ಮಾಡಿಕೊಟ್ಟರು.

ಶರಣೆ ಚೆನ್ನಮ್ಮ : ಮಹಾಕವಿ ಸೋಮನಾಥರೆ, "ಬಹುದಿನದ ನನ್ನ ಬಯಕೆ ಇಂದು ಕೈಗೂಡಿತು. ಮಹಾಕವಿಗಳೂ, ಚೌಷಷ್ಟಿಶೀಲಗಳನ್ನು ಆಚರಿಸತಕ್ಕವರೂ ಆದ ತಮ್ಮ ಸಂದರ್ಶನವು ನನಗೆ ಅಪೂರ್ವ ಲಾಭವೆನಿಸಿದೆ. ನನ್ನ ಜೀವನದ ಸಿದ್ಧಿ ಇಂದು ಆದಂತಾಯಿತು. ಶಿವನ ಕೃಪೆ" ಯಿಂದ ನೀವು ಇಲ್ಲಿಗೆ ಆಗಮಿಸಿರುವಿರಿ. ನಾನು ನಿಜಕ್ಕೂ ಧನ್ಯಳು. ಎಂದು ಸೋಮನಾಥಾದಿಗಳ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಅವರ ಪಾದಗಳನ್ನು ಬಿಂದಿಗೆಯ ಅಗ್ಗವಣಿಯಿಂದ ತೊಳೆದು ಪಾದಕ್ಕೆ ಭಸಿತವನ್ನು ಪೂಸಿ, ಅವರ ಪಾದ ಧೂಳನ್ನು ತನ್ನ ತಲೆಯಮೇಲೆ ಪ್ರೋಕ್ಷಿಸಿಕೊಂಡಳು. ವೈವೆತ್ತ ಮುಕ್ತಿಕಾಂತೆಯಂತಿದ್ದ ಆ ಮಹಾಶರಣೆಯ ಈ ನಡೆ-ನುಡಿಗಳು, ಆ ಪಂಡಿತಪ್ರಕಾಂಡರ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿದುವು. ಸೋಮನಾಥನು ನಿರುತ್ತರನಾದನು. ಶಿವ ಶರಣರ ಮಾರ್ಗ ಅಂದರೇನು ಎಂಬುದನ್ನು ಅಂದು ಕಣ್ಣಾರ ನೋಡಿದನು. ಪುರಾತನರು ಆಚರಿಸಿತೋರಿಸಿದ ಮಾರ್ಗವಿದೆಂದನು.

ಸರ್ವಶೀಲೆ ಚೆನ್ನಮ್ಮನ ಹಿಂದೆ ಮೌನದಿಂದ ಎಲ್ಲರೂ ಕಲ್ಲೆಯದ

ಬೆಟ್ಟವನ್ನು ಹತ್ತಿ ಕ್ಷೇತ್ರನಾಥ ಕಲ್ಲೇಶ್ವರನ ಸಂದರ್ಶನಮಾಡಿ, ಚೆನ್ನಮ್ಮನ ಗವಿಮಠಕ್ಕೆ ಬಂದು ಬಿಡಾರ ಮಾಡಿದರು. ಶರಣೆ ಚೆನ್ನಮ್ಮ ಅತಿಥಿಗಳಿಗೆ ಭಸಿತವನ್ನು ಕೊಟ್ಟು ಎಲ್ಲರೂ ಒಂದು ತಿಂಗಳು ಕಾಲ ತಮ್ಮ ಮಠದಲ್ಲಿರುವಂತೆ ಬಿನ್ನೈಸಿಕೊಂಡಳು. ಭಕ್ತಿಯೇ ಸಾಕಾರವಾದಂತಿದ್ದ ಆ ಮಹಾ ಶರಣೆಯ ಮಾತನ್ನು ಮೀರದೆ, ಅಲ್ಲಿ ಒಂದು ತಿಂಗಳಕಾಲ ಇರಲು ಅವರು ಒಪ್ಪಿಕೊಂಡರು. ಪ್ರಕೃತಿ ಸೌಂದರ್ಯದಿಂದ ಕೂಡಿದ ಪ್ರಶಾಂತವಾದ ಆ ಕ್ಷೇತ್ರದಲ್ಲಿ, ಶಿವಪೂಜೆ ಹಾಗೂ ಪಾರಾಯಣದಿಂದ ಕಾಲವನ್ನು ಕಳೆಯುತ್ತಿದ್ದರು. ಸುತ್ತಮುತ್ತಣ ಜನರುಬಂದು ಈ ಮಹಾತ್ಮರ ಸಂದರ್ಶನ ಪಡೆಯುತ್ತಿದ್ದರು. ಚೆನ್ನಮ್ಮನು ತನ್ನ ರಾಟಿಯ ಕಾಯಕದಿಂದ ಬಂದ ಉತ್ಪನ್ನಗಳಿಂದ ರಾಗಿಯ ಅಂಬಲಿ ಮತ್ತು ಶಿವದಾನವನ್ನು ಸಿದ್ಧಗೊಳಿಸಿ ತನ್ನ ಅನುಭವದ ಅಡಿಗೆಯ ವಿಧಾನದಿಂದ ಅತಿಥಿಗಳನ್ನು ತೃಪ್ತಿಗೊಳಿಸುತ್ತಿದ್ದಳು. ಸದಾ ಅರಮನೆಯಲ್ಲಿ ರಾಜಭೋಜನ ಮಾಡುತ್ತಿದ್ದ ಸೋಮನಾಥಾದಿಗಳು ಆ ಮಹಾ ಪ್ರಸಾದದಿಂದ ಆನಂದ ಭರಿತರಾಗಿದ್ದರು. 'ಅರಮನೆಯಲ್ಲಿ ಸಿಕ್ಕುವುದು ಭುಕ್ತಿ, ಈ ಶರಣೆಯ ಆಶ್ರಮದಲ್ಲಿ ಲಭಿಸುವುದು ಮುಕ್ತಿ' ಎಂದು ಅವರು ಅಂದು ಕೊಂಡರು. 'ಪ್ರಸಾದದೊಳು ರುಚಿಯು ನರಸುವರೆ' ಎಂಬ ಶರಣರ ವಚನ ಅವರಿಗೆ ಚೆನ್ನಾಗಿ ತಿಳಿದಿತ್ತು.

ಕವಿ ಸೋಮನಾಥನು, ಅರುವತ್ತುನಾಲ್ಕು ಶೀಲಗಳನ್ನು ಚಾಚೂ ತಪ್ಪದೆ ನಡೆಸುತ್ತಿರುವ ಶರಣೆ ಚೆನ್ನಮ್ಮನ ನಿಶ್ಚಲ ಮನಸ್ಸನ್ನು ಕಂಡು ಬೆರಗಾದನು. ಚರಮೂರ್ತಿಯು ಹೇಳಿದಂತೆ ಈಕೆಗೆ "ಸರ್ವಶೀಲೆ" ಎಂಬ ಹೆಸರೇ ಸರಿ ಎಂದು ಕೊಂಡನು. ಚೌಷಷ್ಟಿಶೀಲಗಳನ್ನು ಆಚರಿಸುವವನು ನಾನೊಬ್ಬನೇ ಎಂಬ ಕವಿಯ ಅಹಂಕಾರವು ಕಲ್ಲೆಯಕ್ಕೆ ಬಂದಮೇಲೆ ಅಡಗಿ ಹೋಯಿತು. 'ಬಹುರತ್ನಾವಸುಂಧರಾ' ಎಂಬ ಶಾಸ್ತ್ರವಾಕ್ಯವು ನಿಜಕ್ಕೂ ಸತ್ಯವಾಗಿದೆ ಎಂದುಕೊಂಡನು.

ಒಂದು ದಿನ ಚೆನ್ನಮ್ಮನು ಅತಿಥಿಗಳ ಶಿವಪೂಜೆಗೆ ನೀರನ್ನು ತರಲು ಆ ಬೆಟ್ಟದಲ್ಲಿರುವ ದೊಣೆಗೆ ಹೋದಳು. ನೀರನ್ನು ತುಂಬಿಕೊಂಡು ಹಿಂದಿರುಗುವಾಗ ವಯೋವೃದ್ಧಳಾದ ಆಕೆ, ಕೊಡವನ್ನು ಕವಿಗಳು ನಡೆದ್ರು

ಬಂದ ನೆಲದ ಮೇಲಿಟ್ಟಳು. ಅಕಸ್ಮಾತ್ತಾಗಿ ಅದನ್ನು ಸೋಮನಾಥನೂ, ಅವನ ಬಳಗದವರೂ ನೋಡಿದರು. ಆಗ ಅವರು "ಓಹೋ ಈ ಶರಣೆ ಜನರು ತಿಳಿದಿರುವಂತೆ ಸರ್ವಶೀಲೆಯಲ್ಲ, ಶಿವಪೂಜೆಗೆ ತರುವ ನೀರಿನ ಬಿಂದಿಗೆಯನ್ನು ನೆಲದಲ್ಲಿಟ್ಟು ಮೈಲಿಗೆ ಮಾಡಿದಳು. ಇದು ಶೀಲವಂತರ ಆಚಾರಕ್ಕೆ ವಿರೋಧ, ಇನ್ನು ನಾವು ಇಲ್ಲಿದ್ದು ಪ್ರಯೋಜನವಿಲ್ಲ" ಎಂದು ಪಿಸುಗುಟ್ಟಿದರು. ಬೆಳಗಾದ ಕೊಡಲೇ ಅಲ್ಲಿಂದ ಊರಿಗೆ ಹೊರಡಲು ತೀರ್ಮಾನಿಸಿದರು. ಚೆನ್ನಮ್ಮ ಎಂದಿನಂತೆ ಶಿವಪೂಜೆಗೆ ಸಿದ್ಧಮಾಡಿ ಆತಿಥಿಗಳನ್ನು ಪೂಜೆಗೆ ಕರೆದಳು. ಆಗ ಚೆನ್ನಮ್ಮನಿಗೂ ಸೋಮನಾಥನಿಗೂ ನಡೆದ ಸಂಭಾಷಣೆ ನಿಜವಾಗಿಯೂ ಗಮನಾರ್ಹವಾಗಿದೆ.

ಕವಿ ಸೋಮನಾಥ : ಅಮ್ಮಾ, ಇಂದು ನೀವು ದೋಣಿಯಿಂದ ನೀರನ್ನು ತರುವ ವಿಧಾನವನ್ನು ನಾವು ಕಣ್ಣಾರೆ ಕಂಡೆವು. ನೀರಿನ ಕೊಡವು ಭೂಮಿಗೆ ತಗುಲಿ ಮೈಲಿಗೆಯಾಯಿತು. ಇದು ನಮ್ಮ ಶೀಲಾಚರಣೆಗೆ ವಿರುದ್ಧ. ಇನ್ನು ನಾವಿಲ್ಲಿ ಪೂಜೆ ಮಾಡುವುದಿಲ್ಲ. ನಮ್ಮ ಊರಿಗೆ ಹೊರಡುವೆವು. ದಯಮಾಡಿ ನಮಗೆ ಅಪ್ಪಣೆಕೊಡಿ. ನಾವು ರಾಜಾಸ್ಥಾನದ ಕವಿಗಳು.

ಶರಣೆ ಚೆನ್ನಮ್ಮ : ಕವಿ ಪುಂಗವರೆ, ನಿಮ್ಮ ಈ ಬಾಲವಾಕ್ಯವನ್ನು ಕೇಳಿ ನನಗೆ ನಗೆ ಬರುತ್ತಿದೆ. ಅಲ್ಲದೆ ನಿಮ್ಮ ಬಗೆಗೆ ಮರುಕವೂ ಆಗುತ್ತಿದೆ. ನೀವು ಕವಿಗಳೆಂಬುದು ನಿಜವಾದರೂ ಅನುಭವಿಗಳಂತೆ ತೋರುತ್ತಿಲ್ಲ. ಪುಣ್ಯಾತ್ಮರಾದ ನೀವು ನಡೆದುಬಂದ ದಾರಿಯಲ್ಲಿ ಮೈಲಿಗೆಯಿದೆಯೆ ? ಜಂಗಮರು ನಡೆದು ಬಂದ ಸ್ಥಳವು ಅವಿಮುಕ್ತ ಕ್ಷೇತ್ರವಲ್ಲವೆ? ಅಲ್ಲದೆ, ಈ ಕಲ್ಲೆಯ ಕ್ಷೇತ್ರವು ಪುಣ್ಯಭೂಮಿ, ಕಲ್ಲಿನಾಥನ ಜಾಗ್ರತಸ್ಥಳ. ಇಲ್ಲಿ ಹಲವುಮಂದಿ ಸಾಧಕರು ಸಿದ್ಧಿಪಡೆದಿದ್ದಾರೆ. ಇಲ್ಲಿಗೆ ಬಂದವರಿಗೆ ಪಾಪದ ಲೇಪವಿಲ್ಲ. ಇದನ್ನು ತಿಳಿಯದೆ ನೀವು ಕೇವಲ ಪಂಡಿತರಾಗಿ ಮಾತನಾಡುತ್ತಿರುವಿರಲ್ಲಾ ಶಿವಶಿವಾ ! ತಮ್ಮಂತಹ ಶರಣ ಕವಿಗಳಿಗೂ ಅಜ್ಞಾನವೆ ? "ಶಾಸ್ತ್ರವೆಂಬ ವೊಸರನ್ನು, ಸಂಕಲ್ಪವೆಂಬ ಗಡಿಗೆಯಲ್ಲಿ ಹಾಕಿ,

ಪಂಡಿತರೂ ಯೋಗಿಗಳೂ ಕಡೆಯುತ್ತಾರೆ. ಆ ಮಂಥನದಿಂದ ಬರುವ ಅನುಭವವೆಂಬ ಬೆಣ್ಣೆಯನ್ನು ಸವಿಸಿ ಶರಣರೂ ಯೋಗಿಗಳೂ ಮೌನ ದಿಂದಿರುವರು. ನಿಸ್ಸಾರವಾದ ಮಜ್ಜಿಗೆಗಾಗಿ ಪಂಡಿತರು 'ನಾನು, ತಾನು' ಎಂದು ಹೊಡೆದಾಡುತ್ತಾರೆ" ಎಂಬ ಹಿರಿಯರ ಮಾತು ಇಂದು ನಿಜವಾ ಯಿತು. ನೀವು ಒಂದು ತಿಂಗಳು ಇಲ್ಲಿರುವಂತೆ ವಿಭೂತಿಯನ್ನು ಹಿಡಿ ದಿರುವಿರಿ. ಅದನ್ನು ಮೀರಿ ನೀವು ಇಲ್ಲಿಂದ ಹೊರಡುವುದು ಶರಣ ಮಾರ್ಗವಲ್ಲ. ನಡೆನುಡಿಗಳೊಂದಾಗಿರುವುದು ಅನುಭವಿಗಳ ಲಕ್ಷಣವಲ್ಲವೆ? ಇದರ ಮೇಲೆ ಶಿವನ ಇಚ್ಛೆಯಂತಾಗಲಿ. 'ಭವಿತವ್ಯಂ ಭವತ್ಯೇವ'.

ಕವಿ ಸೋಮನಾಥ : ತಾಯಿ, ನಾನು ರಾಜಾಸ್ಥಾನದ ಪಂಡಿತ, ಜತೆಯಲ್ಲಿ ಮಕ್ಕಳೂ ಶಿಷ್ಯರೂ ಪರಿವಾರದವರೂ ಬಂದಿದ್ದಾರೆ. ಈ ಕಾಡಿ ನಲ್ಲಿ ಬಹುದಿನ ಇರಲಾರೆವು. ತಾವು ಕೃಪೆಮಾಡಿ ಅಪ್ಪಣೆಕೊಟ್ಟು ಅನು ಗ್ರಹಿಸಿರಿ. ತಮ್ಮ ಸಂದರ್ಶನದಿಂದ ನಾವು ಧನ್ಯರಾದೆವು. ಈಗ ನಮ್ಮ ಗಳ ಮನವೆಲ್ಲ ಓರುಂಗಲ್ಲಿನ ಕಡೆಗೆ ತಿರುಗಿದೆ. ತಾಯಿ, ನಾವೆಲ್ಲರೂ ಸಂಸಾರಿಗಳು, ಸಂನ್ಯಾಸಿಗಳಲ್ಲ.

ಶರಣೆ ಚೆನ್ನಮ್ಮ : ಕವಿವರ್ಯರೆ, ಶಿವನು ಅನುಗ್ರಹಿಸಿದಂತೆ ಆಗಲಿ, ನಿಮ್ಮಿಚ್ಛೆಯಂತೆ ಹೊರಡಬಹುದು. ಅದಕ್ಕೆ ನನ್ನ ತಡೆಯಿಲ್ಲ. 'ತೇನ ವಿನಾ ತೃಣಮಪಿ ನಚಲತಿ' ಎಂಬುದು ನಿಮಗೂ ತಿಳಿದಿರತಕ್ಕುದೇ ಆಗಿ ದೆಯಲ್ಲವೆ ?

ಸೋಮನಾಥಾದಿಗಳು ಶಿವನ ಮಹಿಮೆಯನ್ನು ಅರಿಯದೆ, ತಾವು ಶರಣೆಗೆ ಕೊಟ್ಟ ಮಾತನ್ನು ಮೀರಿ ಪ್ರಯಾಣಕ್ಕೆ ಸಿದ್ಧರಾದರು. ಗಾಡಿಯು ಸಿದ್ಧವಾಯಿತು. ಶಿವಶರಣೆಗೆ ವಂದಿಸಿ ಎಲ್ಲರೂ ಗಾಡಿಯಲ್ಲಿ ಕುಳಿತುಕೊಳ್ಳುವರು. ಆದರೆ ಆ ಬಲವಾದ ಎತ್ತುಗಳು ಒಂದು ಅಡಿ ಕೂಡ ಮುಂದೆ ಹೋಗದೆ ನಿಲ್ಲುವುವು. ಇದನ್ನು ಕಂಡು ಸೋಮನಾಥನು ಅಚ್ಚರಿಗೊಂಡನು. ಆಗ ಎಲ್ಲರೂ ಕೆಳಗಿಳಿದು ಬಂದು ಮತ್ತೆ ಚೆನ್ನಮ್ಮ ಶರಣೆಯ ಪಾದಗಳಿಗೆ ಅಭಿವಂದಿಸಿ ಅಪ್ಪಣೆಯನ್ನು,

ಬೇಡಿದರು. ಪ್ರಯಾಣಕ್ಕೆ ಏನೋ ತಡೆಯಿದೆ ತಾಯಿ, ಅನುಗ್ರಹಿಸಬೇಕು, ನಮ್ಮ ತಪ್ಪುಗಳಿದ್ದಲ್ಲಿ ಕ್ಷಮಿಸಬೇಕು ಎಂದು ಪ್ರಾರ್ಥಿಸುವರು.

ಆಗ ಕಲ್ಲಿನಾಥನ ಗುಡಿಯಿಂದ ಒಂದು ಅಶರೀರವಾಣಿ ಕೇಳಿಸಿತು. "ಎಲೈ ಸೋಮನಾಥನೆ. ನೀನಿನ್ನು ಓರುಂಗಲ್ಲಿಗೆ ಹೋಗಲಾರೆ. ನಾಳಿನ ಸೋಮವಾರ ಬೆಳಗ್ಗೆ ದೇವಾಲಯದ ಮುಂಭಾಗದಲ್ಲಿ ನೀನು ಶಿವಸಮಾಧಿಯನ್ನು ಹೊಂದಬೇಕು. ಇದು ನನ್ನ ಸಂಕಲ್ಪ, ಆದುವರೆಗೆ ನೀನು ಇಲ್ಲಿಯೇ ಇದ್ದು ಕೈಲಾಸ ಯಾತ್ರೆಯ ಸಿದ್ಧತೆಯನ್ನು ಮಾಡಿಕೊಳ್ಳುವುದು. ಇನ್ನು ಓರುಂಗಲ್ಲಿನ ಭ್ರಾಂತಿಯನ್ನು ಬಿಡುವುದು. ಅರುವತ್ತು ನಾಲ್ಕು ಶೀಲವನ್ನು ಆಚರಿಸಿದ ನಿನಗೆ ಸಮಾಧಿಯನ್ನು ಕೊಡತಕ್ಕವಳು ಸರ್ವಶೀಲೆ ಚೆನ್ನಮ್ಮ ಶರಣೆ. ಆಕೆಯೇ ನಿನ್ನ ಮೋಕ್ಷದ ಗುರು. ಇದಕ್ಕಾಗಿಯೇ ನೀನು ಕಲ್ಲೆಯಕ್ಕೆ ಬಂದಿರುವೆ" ಅಸಿರೀಕ್ಷಿತವಾದ ಈ ಆಕಾಶವಾಣಿಯನ್ನು ಕೇಳಿ ಸೋಮನಾಥನು ಅವಾಕ್ಕಾದನು. ಅವನ ಬಳಗದವರು ನಿರುತ್ತರರಾದರು. 'ಕಿಂಕರ್ತವ್ಯ ಮೂಢರಾದರು' ನಿಜ, 'ತೇನವಿನಾ' ಎಂದುಕೊಂಡರು.

ಶರಣೆ ಚೆನ್ನಮ್ಮ : ಕವಿವರ್ಯರೆ, ಶಿವನ ಶಾಸನವನ್ನು ಕಿವಿಯಾರೆ ಕೇಳಿದಿರಿ. 'ಮರಣವೇ ಮಹಾ ನವಮಿ' ಎಂಬುದೇ ಶರಣರಪಂಥ. 'ಶರಣರ ಗುಟ್ಟು ಮರಣದಲ್ಲಿ' ಎಂಬುದು ಲೋಕವಾಣಿ. ಶಿವನ ಮುಖದಿಂದ ಮರಣದ ಸೂಚನೆ ತಿಳಿದ ದೀವು ನಿಜಕ್ಕೂ ಭಾಗ್ಯಶಾಲಿಗಳು. ಇದುವರೆಗೆ ಇಂತಹ ಘಟನೆಯನ್ನು ನಾನು ಕೇಳಿಲ್ಲ, ಕಂಡಿಲ್ಲ. ಮಹಾಕವಿಗಳಾದ ನಿಮಗೆ ಕೈಲಾಸದಲ್ಲಿ ಸ್ಥಾನ ಮೀಸಲಾಗಿದೆ. ವೀರಶೈವ ಧರ್ಮ, ಮತ್ತು ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳು, ಇವಕ್ಕೆ ನಿಮ್ಮ ಉನ್ನತವಾದ ಸೇವೆ ಸಾಮಾನ್ಯವಲ್ಲ. ನಿಮ್ಮ ಸಮಾಧಿಕ್ರಿಯೆ ಮುಗಿಯುವತನಕ ಉಳಿದವರೆಲ್ಲರೂ ಇಲ್ಲಿಯೇ ಇದ್ದು ಅನಂತರ ಓರುಂಗಲ್ಲಿಗೆ ಹೊರಡಲಿ. ನೀವು ಶಿವನ ಸನ್ನಿಧಿಗೆ ಸಿದ್ಧರಾಗಿರಿ. ಸರ್ವತಂತ್ರ ಸ್ವತಂತ್ರನಾದ ಶಿವನ ಅಪ್ಪಣೆಯನ್ನು ಮೀರುವವರಾರು ? 'ಆಗುವುದು ಆಗಲೇಬೇಕು, ಎಂದು ಶಿವಾಗಮಗಳು ಹೇಳುತ್ತಿಲ್ಲವೆ ? ಬಪ್ಪುದು ತಪ್ಪದು, ಬಾರದು ಬರದು.

ಕವಿ ಸೋಮನಾಥ : ಮಹಾಶರಣೆ, ಈಗ ನಿಮ್ಮಹೊರತು ನನಗೆ ಬೇರೆ ಗತಿಯಿಲ್ಲ. ನೀವೇ ನನ್ನ ಭಾಗದ ಜಗನ್ಮಾತೆ. ನಿಮ್ಮಂತಹ ಮಹಾ ಶರಣೆಯ ಮಂಗಲ ಹಸ್ತದಿಂದ ಸಮಾಧಿಸ್ಥನಾಗುವ ನಾನು ಧನ್ಯನೇ ಸರಿ. ಇನ್ನು ಎಲ್ಲವೂ ನಿಮ್ಮ ಅಪ್ಪಣೆಯಂತೆ ಆಗಲಿ. 'ಶುಭಸ್ಯ ಶೀಘ್ರಂ' ದಿನವೂ ಜಂಗಮಾರಾಧನೆ, ಪುಣ್ಯ ಕಥೆ, ಶಿವ ಭಜನೆ ಇಲ್ಲಿ ಸದಾ ನಡೆಯಲಿ. ಕಲ್ಲಿಯವು ನಿಜಕ್ಕೂ ಕೈಲಾಸವಾಗಲಿ.

ಆಕಾಶವಾಣಿಯಂತೆ ಸೋಮವಾರದ ಬೆಳಗ್ಗೆ ಕಲ್ಲೇಶ್ವರನ ಗುಡಿಯ ಮುಂದೆ ಕ್ರಿಯಾಸಮಾಧಿ ಸಿದ್ಧವಾಯಿತು. ಚೆನ್ನಮ್ಮನವರ ಮಠದಲ್ಲಿ ಗಣಪರ್ವವು ನಡೆಯಿತು. ನೆರೆದ ಗುರು ಜಂಗಮರು ಸೋಮನಾಥನಿಗೆ ಕೈಲಾಸಕ್ಕೆ ಹೋಗಲು ಅಪ್ಪಣೆ ಇತ್ತರು. 'ವಿಭೂತಿಪಟ್ಟ' ನಡೆಯಿತು. ಕ್ಷೇತ್ರದಲ್ಲೆಲ್ಲಾ ಶಿವನಾಮಸ್ಮರಣೆ ಮೊಳಗಿತು. ಸೋಮನಾಥನು ಶರಣೆ ಚೆನ್ನಮ್ಮನ ಮತ್ತು ಗಣಂಗಳ ಪಾದಕ್ಕೆ ಎರಗಿ, ತನ್ನ ಪುತ್ರ ಮತ್ತು ಶಿಷ್ಯರನ್ನು ಹರಸಿ ಸಂತೋಷದಿಂದ ಸಮಾಧಿಗೆ ನಡೆದನು. ಅವನು ಕ್ರಿಯಾ ಸಮಾಧಿಗೆ ಇಳಿಯುವಾಗ "ಚೆನ್ನಮ್ಮ ಸೀಸಮುಲು" ಎಂಬ ವೀರಶೈವ ಸಿದ್ಧಾಂತ ಪ್ರತಿಪಾದಕವಾದ ಪದ್ಯಗಳನ್ನು ಹಾಡಿದನು. ಅವು ತೆಲುಗು ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. ಅನಂತರ ಪ್ರಶಾಂತ ಚಿತ್ತನಾಗಿ ಕ್ರಿಯಾ ಸಮಾಧಿಯಲ್ಲಿ ಕುಳಿತನು. ಓಂಕಾರನಾದ ಮಾಡಿ, ಇಷ್ಟಲಿಂಗದಲ್ಲಿ ನಿಷ್ಠೆಯುಳ್ಳವನಾಗಿ, ಪಂಚಭೂತಾತ್ಮಕವಾದ ತನ್ನ ದೇಹದಲ್ಲಿದ್ದ ಆತ್ಮವನ್ನು ಬೇರ್ಪಡಿಸಿ ಪರಶಿವನಲ್ಲಿ ಸಮರಸ ಗೊಳಿಸಿದನು. ಸದೇಹ ಕೈವಲ್ಯವನ್ನು ಸಾಧಿಸಿದನು. ಸೂರ್ಯಕಿರಣವು ಸೂರ್ಯನಲ್ಲಿ ಅಡಗುವಂತೆ, ಪವಿತ್ರನದಿಯು ಸಾಗರದಲ್ಲಿ ಲೀನವಾಗುವಂತೆ ಪರಶಿವ ಲಿಂಗದಲ್ಲಿ ಬೆರೆದು ಹೋದನು. ಕರ್ಪೂರವು ಬೆಂಕಿಯನೆರವಿನಿಂದ ಬೆಳಕಿನಲ್ಲಿ ಸೇರಿಹೋಯಿತು. ಎಲ್ಲೆಡೆ 'ಉಘೇ' ಎಂಬ ಜಯ ಘೋಷಗಳು ಮೊಳಗಿದುವು. ಶರಣರ 'ಗುಟ್ಟು ಮರಣದಲ್ಲಿ' ಎಂಬುದು ನಿಜವಾಯಿತು.

ಅನಂತರ ಕಳ್ಳಿಯ ಕ್ಷೇತ್ರದಲ್ಲಿ ನೆರೆದ ಗಣಂಗಳು ಕವಿಪುತ್ರ ಚತುರ್ಮುಖ ಬಸವೇಶ್ವರನಿಗೆ ಚೆನ್ನಮ್ಮನ ಮಠದಲ್ಲಿಯೇ ಗುರುಪಟ್ಟವನ್ನು

...ರ್ವಶೀಲೆ ಚೆನ್ನಮ್ಮನವರ ಸನ್ನಿಧಿಯಲ್ಲಿ ಪಾಲ್ಕುರಿಕೆ ಸೋಮನಾಥ ಒ...

ಕಟ್ಟಿದರು. ಶಿಷ್ಯರಾದ ದೋರಾಮಾತ್ಯ, ರಂಗನಾಥರು ಗುರುವಿನ ಮಹಿಮೆಯನ್ನು ಕಂಡು ಬೆರಗಾಗಿ ಹೋದರು. ಗುರುವಿನ ಶಿವಯೋಗ ಸಮಾಧಿಯ ಅನಂತರ ಎಲ್ಲರೂ ನಿರಾಶೆಯಿಂದ ಓರುಂಗಲ್ಲಿಗೆ ತೆರಳಿದರು. ಪ್ರತಾಪರುದ್ರರಾಜನಿಗೆ ಎಲ್ಲವನ್ನೂ ತಿಳಿಸಿದರು. ಅಲ್ಲಿನ ಜನರಿಗೆ ನಡೆದ ಮಹಿಮಾವಳಿಯನ್ನು ಬಣ್ಣಿಸಿದರು. ಆಸ್ಥಾನವೇ ದುಃಖಿಸಿತು ಕವಿಯ ವಿಯೋಗದಿಂದ. ಆಂಧ್ರದಲ್ಲಿ ಜನಿಸಿದ ಕವಿ ಸೋಮನಾಥನು, ಕರ್ಣಾಟಕದ ವಿಭೂತಿ ಬಸವೇಶ್ವರನನ್ನು ಬಣ್ಣಿಸಿದ ಪುಣ್ಯದ ಫಲವಾಗಿ, ಕನ್ನಡ ನಾಡಿನ ಸುಕೃತದಬೀಡಾದ ಕಲ್ಲೆಯ ಕ್ಷೇತ್ರದಲ್ಲಿ ಸಮಾಧಿಸ್ಥನಾದನು ಎಂದು ಜನ ಹಾಡಿ ಹರಸಿದರು. ಕಲ್ಲೆಯವು ಅವಿಮುಕ್ತ ಕ್ಷೇತ್ರವೆನಿಸಿತು.

ಕಳ್ಳೆಯ ಕ್ಷೇತ್ರವು ಬೆಂಗಳೂರು ಜಿಲ್ಲಾ ಮಾಗಡಿ ತಾಲೂಕಿನಲ್ಲಿ ಮಾಗಡಿ ಊರಿಗೆ ಎರಡು ಮೈಲಿ ದೂರದಲ್ಲಿದೆ. ಕವಿಯ ಸಮಾಧಿಯೂ ಅಲ್ಲಿದೆ. ಈ ಕಥೆ ನಡೆಯುವಾಗ ಬೆಂಗಳೂರು ಸ್ಥಾಪನೆಯಾಗಿರಲಿಲ್ಲ ಎಂಬುದು ಗಮನಾರ್ಹವಾಗಿದೆ. ಕಳ್ಳೆಯದ ಬೆಟ್ಟದಲ್ಲಿ ಕಲ್ಲೇಶ್ವರನ ಗುಡಿಯ ಮುಂದೆ ಈಗಲೂ ನಾವು ಸೋಮನಾಥನ ಸಮಾಧಿಯನ್ನು ಕಾಣಬಹುದು. ಶಿವಭಕ್ತರು ಈಗಲೂ ವರ್ಷಕ್ಕೊಮ್ಮೆ ಅಲ್ಲಿ ಗಣಪರ್ವವನ್ನು–ಸೋಮನಾಥನ ಹೆಸರಿನಲ್ಲಿ ಮಾಡುತ್ತಾರೆ. ಆ ಬೆಟ್ಟದಲ್ಲಿ ಚೆನ್ನಮ್ಮನ ಗವಿಮಠದಲ್ಲಿ ಆಕೆಯ ಸಮಾಧಿಯಿದೆ. ಸೋಮನಾಥನು ಪ್ರಯಾಣಮಾಡಿದ ಗಾಡಿ ಎತ್ತುಗಳು ಅಲ್ಲಿಯೇ ಸಮಾಧಿಯಾಗಿವೆ. ಈ ಮಹತ್ವದ ಕಥೆ ಆ ಕ್ಷೇತ್ರದ ಸುತ್ತಮುತ್ತಣ ಪ್ರದೇಶದಲ್ಲಿ ದಂತಕಥೆಯಾಗಿ ಉಳಿದಿದೆ. ಅಲ್ಲಿನ ಕಲ್ಲೇಶ್ವರನ ಗುಡಿ ಸುಪ್ರಸಿದ್ಧವಾಗಿದೆ. ಕ್ರಿ. ಶ. ೧೫೫೦ರಲ್ಲಿ ಬಿಜ್ಜಾವರದಲ್ಲಿ ರಾಜಗುರುವಾಗಿದ್ದ ವಿರಕ್ತತೋಂಟದಾರ್ಯರು ಬರೆದಿರುವ 'ಪಾಲ್ಕುರಿಕೆ ಸೋಮೇಶ್ವರ ಪುರಾಣ' ಎಂಬ ಗ್ರಂಥದಲ್ಲಿ ಈ ಕಥೆಗೆ ಕೊಂಚ ಆಧಾರ ಸಿಗುತ್ತದೆ. (ಸಂಧಿ ೧೪–೧೫) ಕಳ್ಳೆಯದಲ್ಲಿರುವ ಶಾಸನಗಳನ್ನೂ ವೀರಗಲ್ಲುಗಳನ್ನೂ ಓದಿದರೆ ಮತ್ತೆ ಕೆಲವು ವಿಚಾರಗಳು ಈ ಕ್ಷೇತ್ರದ ಬಗೆಗೆ ಸಿಗಬಹುದು. ಪಾಲ್ಕುರಿಕೆ ಸೋಮನಾಥನ ಗಣಸಹ್ರದಲ್ಲಿಯಾಗಲಿ, ಪುರಾತನ ದೇವಿಯ ಸ್ತೋತ್ರದಲ್ಲಿಯಾಗಲಿ, ಡಾ|| ಫ. ಗು. ಹಳಕಟ್ಟಿಯವರ ಶಿವಶರಣೆ

ಯರ ಚರಿತ್ರೆಯಲ್ಲಾಗಲಿ ಈ ಮಹಾತಾಯಿ ಚೆನ್ನಮ್ಮನ ಚರಿತ್ರೆಯು ಇದ್ದಂತೆ ತೋರುವುದಿಲ್ಲ.

ನನಗೆ ಈ ದಂತಕಥೆಯನ್ನು ಮೊಟ್ಟಮೊದಲು ತಿಳಿಸಿದವರು ನನ್ನ ವಿದ್ಯಾ ಗುರುಗಳಾಗಿದ್ದ ಕೈ|| ಕರ್ಣಾಟಕ ಭಾಷಾರತ್ನಂ ಪಿ. ಆರ್. ಕರಿಬಸವಶಾಸ್ತ್ರಿಗಳು. ಕಲ್ಲೆಯ ಕ್ಷೇತ್ರದ ಸಂದರ್ಶದ ಮತ್ತು ಸೋಮನಾಥನ ಪ್ರಸಿದ್ಧ ಗ್ರಂಥಗಳ ಅವಲೋಕನದಿಂದ ಈ ದಂತಕಥೆಯ ಬಗೆಗೆ ನನಗೆ ಆಸಕ್ತಿ ಹೆಚ್ಚಿತು. ನಾನು ಎರಡುಸಾರಿ ಈ ಕ್ಷೇತ್ರಕ್ಕೆ ಹೋಗಿಬಂದಿರುವೆನು. ಈ ಲೇಖನವನ್ನು ಓದಿದ ಜನರಲ್ಲಿ ಕೆಲವರಾದರೂ ಕಲ್ಲೆಯಕ್ಕೆ ಹೋಗಿ ಸೋಮನಾಥನ ಸಮಾಧಿ ದರ್ಶನ ಮಾಡಿದರೆ ಆತನ ಅಮರ ಕೃತಿಗಳನ್ನು ಓದಿದರೆ ನನ್ನ ಶ್ರಮಸಾರ್ಥಕವೆಂದು ನಂಬುತ್ತೇನೆ.

ಪಾಲ್ಕುರಿಕೆ ಸೋಮನಾಥನು ತುಮಕೂರು ಜಿಲ್ಲಾ ಹಾಲ್ಕುರಿಕೆಯವನೆಂದು ಡಾ|| ಚಿಲಕೂರಿ ನಾರಾಯಣ ರಾವ್ ಮೊದಲಾದ ಮಹನೀಯರು ಹೇಳಿರುವುದು ಸಾಧುವಲ್ಲ. ನಾನು 'ಹಾಲ್ಕುರಿಕೆ'ಯನ್ನು ಕಣ್ಣಾರೆ ನೋಡಿದ್ದೇನೆ. ಅದು ತಿಪಟೂರು ತಾಲೂಕಿನಲ್ಲಿದೆ ಅಲ್ಲಿ ಯಾವ ಪ್ರಾಚೀನಸ್ಮಾರಕವೂ ಇಲ್ಲ. ನಾಮಸಾದೃಶ್ಯದಿಂದ ನಾವು ಭ್ರಾಂತಿ ಪಡಬಾರದು. ಸೋಮನಾಥನು ಆಂಧ್ರದಲ್ಲಿ ಹುಟ್ಟಿದವನೆಂಬುದರಲ್ಲಿ ಯಾವ ಸಂಶಯವಿಲ್ಲ. ಅವನಗ್ರಂಥಗಳೇ ಇದಕ್ಕೆ ಸಾಕ್ಷಿಯಾಗಿವೆ.

ಚೆನ್ನಬಸವಣ್ಣನವರ 'ನಾಮಕರಣ ಮಹೋತ್ಸವ'

ಹನ್ನೆರಡನೆಯ ಶತಮಾನದ ಕನ್ನಡ ನಾಡಿನ ಶಿವಶರಣರ ಚರಿತ್ರೆಯಲ್ಲಿ, ಚೆನ್ನಬಸವಣ್ಣನವರ ಹೆಸರು ಧೃವನಕ್ಷತ್ರದಂತೆ ಚಿರಸ್ಥಾಯಿಯಾಗಿದೆ. ಚೆನ್ನಬಸವಣ್ಣನವರು, ಷಟ್‌ಸ್ಥಳ ಚಕ್ರವರ್ತಿಯಾಗಿ. ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿ, ಶಿವಶರಣರ ಸಂರಕ್ಷಕರಾಗಿ, ಅನುಭವ ಮಂಟವನ್ನು ಸುವ್ಯವಸ್ಥಿತವಾಗಿ ನಡೆಸಿದವರಾಗಿ, ಕಡೆಗೆ ಕೆಲಕಾಲ ಬಿಜ್ಜಳನ ಮಂತ್ರಿಯಾಗಿ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಈ ಮಹಾನುಭಾವರನ್ನು ಕುರಿತು ಕನ್ನಡದಲ್ಲಿ ವಿರೂಪಾಕ್ಷ ಪಂಡಿತನು ಚೆನ್ನಬಸವ ಪುರಾಣವನ್ನು ರಚಿಸಿದ್ದಾನೆ. ಕವಿ ಪಾಪಯಾಮಾತ್ಯನು ತೆಲುಗಿನಲ್ಲಿ ಚೆನ್ನಬಸವ ಪುರಾಣವನ್ನೂ, ಪಾಲ್ಕುರಿಕೆ ಸೋಮನಾಥನು 'ಚೆನ್ನಬಸವ ರಗಳೆ' ಯನ್ನೂ, ಕುಮಾರಸ್ವಾಮಿ ಶಾಸ್ತ್ರಿಯು ಸಂಸ್ಕೃತದಲ್ಲಿ ಚೆನ್ನಬಸವಚಂಪುವನ್ನೂ ರಚಿಸಿದ್ದಾರೆ. ಪಾಲ್ಕುರಿಕೆ ಸೋಮನಾಥನು ಸಂಸ್ಕೃತದಲ್ಲಿ 'ಚೆನ್ನಬಸವೋದಾಹರಣ ಗದ್ಯ' ಬರೆದಿದ್ದಾನೆ. ಸ್ವಯಂ ಚೆನ್ನಬಸವಣ್ಣನವರು ಕನ್ನಡದಲ್ಲಿ, 'ಷಟ್‌ಸ್ಥಲ ವಚನ,' 'ಕರಣ ಹಸುಗೆ' 'ಮಿಶ್ರಾರ್ಪಣ' 'ಮಂತ್ರಗೋಪ್ಯ,' 'ಪದ ಮಂತ್ರಗೋಪ್ಯ' ಮತ್ತು ರುದ್ರಭಾರತ ಸೃಷ್ಟಿ ಎಂಬಿಷ್ಟು ಗ್ರಂಥಗಳನ್ನು ಬರೆದಿದ್ದಾರೆಂದು ಕನ್ನಡ ಕವಿಚರಿತ್ರೆಯಲ್ಲಿ ಹೇಳಿದೆ. (ಭಾಗ ೧ ಪು; ೧೭೮) ೧೬ನೆಯ ಶತಕದಲ್ಲಿದ್ದ ನಾಸಿಕದ ಶಾಂತಲಿಂಗದೇಶಿಕನು ಈತನ 'ಕರಣ ಹಸುಗೆ'ಯನ್ನು ಮರಾಠಿಗೆ ಭಾಷಾಂತರ ಮಾಡಿದ್ದಾನೆ.

ಬಸವಣ್ಣನವರೂ, ಅಕ್ಕನಾಗಮ್ಮನವರೂ ಕೂಡಲ ಸಂಗಮಕ್ಷೇತ್ರದಲ್ಲಿ ಸುಮಾರು ಹನ್ನೆರಡು ವರ್ಷಕಾಲ ಇದ್ದಂತೆ ಸಂಶೋಧಕರು ನಿಶ್ಚಯಿಸಿದ್ದಾರೆ. ಸುಮಾರು ಕ್ರಿ. ಶ. ೧೧೩೧ರಲ್ಲಿ ಬಸವಣ್ಣನವರು ಬಾಗೆವಾಡಿಯಲ್ಲಿ ಜನಿಸಿ ಹನ್ನೆರಡುವರ್ಷಕಾಲ ಬಾಲ್ಯವನ್ನು ಕಳೆದರು. ಕ್ರಿ. ಶ. ೧೧೪೩ ರಲ್ಲಿ ಕಾರಣಾಂತರಗಳಿಂದ ಕೂಡಲ ಸಂಗಮಕ್ಕೆ-ಅಕ್ಕನಾಗಮ್ಮ ಸಹಿತವಾಗಿ ಬಂದರು. ಕುಲಪತಿಗಳಾದ ಜಾತವೇದಸ್ವಾಮಿಗಳ ಕೃಪಾಶ್ರಯದಲ್ಲಿ

ಬಳೆದರು. ಶಿವಸ್ವಾಮಿ ಅಕ್ಕನಾಗಮ್ಮನವರಿಗೆ ಸಂಗಮದಲ್ಲಿ ಲಗ್ನವಾಯಿತು. ಚೆನ್ನಬಸವಣ್ಣನವರು ಅಕ್ಕನಾಗಮ್ಮನ ಪುತ್ರನಾಗಿ ಅಲ್ಲಿಯೇ ಜನಿಸಿದರು. ಸುಮಾರು ೧೧೫೫ರಲ್ಲಿ, ಬಸವಣ್ಣ, ಅಕ್ಕನಾಗಮ್ಮ-ಶಿವಸ್ವಾಮಿ ಎಲ್ಲರೂ ಮಂಗಳವಾಡಕ್ಕೆ ಹೋದರು. ಅಲ್ಲಿ ಏಳು ವರ್ಷಕಾಲ ಇದ್ದರು. ೧೧೬೨ರಲ್ಲಾದ ರಾಜಕೀಯ ಬದಲಾವಣೆಯು ಕಾರಣವಾಗಿ ಎಲ್ಲರೂ ಕಲ್ಯಾಣಕ್ಕೆ ಹೋದರು. ಈ ಕಾಲದಲ್ಲಿ ಶಿವಸ್ವಾಮಿ ಕಣ್ಮರೆಯಾದಂತೆ ತೋರುತ್ತದೆ. ಅನುಭವ ಮಂಟಪವನ್ನು ಕಟ್ಟಿ ನಡೆಸಿದರು. ೧೧೬೭ರಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಆನಂತರ ಶರಣರು ತಮ್ಮ ತಮ್ಮ ಐಕ್ಯಸ್ಥಳಗಳಿಗೆ ತೆರಳಿದರು. ಎಂಬಿಷ್ಟು ವಿಚಾರಗಳು ಸಂಶೋಧನೆಯಿಂದ ತೀರ್ಮಾನಕ್ಕೆ ಬಂದಿವೆ.

ಪ್ರಕೃತ ಲೇಖನವು ಚೆನ್ನಬಸವಣ್ಣನವರ ನಾಮಕರಣಕ್ಕೆ ಸಂಬಂಧಪಟ್ಟುದು. ಕೂಡಲ ಸಂಗಮದ ಪರಿಸರದಲ್ಲಿ ಮತ್ತು ಕನ್ನಡ ನಾಡಿನಲ್ಲಿ ದಂತಕಥೆಯಾಗಿರ ತಕ್ಕುದು. ಚೆನ್ನಬಸವಣ್ಣನವರು, ಕೃಷ್ಣಾ ಮತ್ತು ಮಲಪ್ರಭಾನದಿಗಳ ಸಂಗಮ ಸ್ಥಾನವಾದ ಕೂಡಲ ಸಂಗಮದಲ್ಲಿ, ಅಕ್ಕನಾಗಮ್ಮನ ಪವಿತ್ರಗರ್ಭದಲ್ಲಿ, ಶರಣ ಶಿವಸ್ವಾಮಿಗಳ ಪುತ್ರನಾಗಿ ಜನಿಸಿದರು. ಅವರಿಗೆ ಏನು ಹೆಸರಿಡಬೇಕು ಎಂಬ ಬಗೆಗೆ ನೆರೆದವರಲ್ಲಿ ಚರ್ಚೆಯಾಯಿತು. ಕೆಲವರು ಬಸವಣ್ಣನ ಸೋದರಳಿಯನಾದ್ದರಿಂದ ಆಶಿಶುವಿಗೆ 'ಚಿಕ್ಕಬಸವಣ್ಣ' ಎಂದು ಹೆಸರಿಡಬೇಕೆಂದರು. ಮತ್ತೆ ಕೆಲವರು ಮಗುವು ಪ್ರಕಾಶಮಾನವಾಗಿಯೂ ಮುದ್ದಾಗಿಯೂ ಇರುವುದರಿಂದ 'ಮುದ್ದು ಬಸವಣ್ಣ' ಎಂದು ಹೆಸರಿಡಬೇಕು ಎಂದರು. ಮತ್ತೆ ಕೆಲವರು ಕಂಚಿಯ ಶರಣ ಚನ್ನಯ್ಯನ ಹೆಸರು ಇಡಬೇಕೆಂದರು. ಹನ್ನೊಂದನೆಯ ದಿನ ನಾಮಕರಣದಂದು ಈ ಗಡಿಬಿಡಿ ನಡೆಯಿತು. ಒಟ್ಟಿನಲ್ಲಿ ಹೆಸರಿನ ಬಗೆಗೆ ಎಲ್ಲರಲ್ಲಿಯೂ ಒಮ್ಮತದ ತೀರ್ಮಾನವಾಗಲಿಲ್ಲ.

ಆಗ ಎಲ್ಲರೂ ಬಸವಣ್ಣನವರನ್ನು ಮುಂದುಮಾಡಿಕೊಂಡು ಜಾತವೇದಸ್ವಾಮಿಗಳ ಸನ್ನಿಧಿಗೆ ಹೋದರು. "ಗುರುದೇವಾ, ಶಿವಸ್ವಾಮಿ-

ಅಕ್ಕನಾಗಮ್ಮನರ ಪುತ್ರ ಜನಿಸಿದ್ದಾನೆ. ಅವನಿಗೆ ಯಾವ ಹೆಸರಿಡಬೇಕು ತಾವೇ ಅಪ್ಪಣೆ ಮಾಡಿ" ಎಂದು ತಮ್ಮ ಚರ್ಚೆಯನ್ನು ತಿಳಿಸಿದರು.

ಆಗ ಮಹರ್ಷಿ ಜಾತವೇದಸ್ವಾಮಿಗಳು ಕೊಂಚಕಾಲ ಧ್ಯಾನಾಸಕ್ತರಾಗಿದ್ದು ಯೋಚಿಸಿ, ಕಡೆಗೆ ಬಹಿರ್ಮುಖರಾಗಿ ಹೀಗೆ ಅಪ್ಪಣೆ ಕೊಡಿಸಿದರು. "ಈ ಮಗು ಕಾರಣ ಶಿಶು. ಮುಂದೆ ಮಹಾಪುರುಷನಾಗುತ್ತಾನೆ. ಧರ್ಮೋದ್ಧಾರಕನಾದ ಬಸವಣ್ಣನಿಗೆ ಬೆಂಬಲವಾಗಿರುತ್ತಾನೆ. ಆದುದರಿಂದ ಈತನಿಗೆ ಸಮಾಚೀನವಾದ ಹೆಸರನ್ನೇ ಕರೆಯಬೇಕು. ಕಾರಣ, ಶಿವನನ್ನು ಒಲಿಸಿಕೊಂಡು ಅವನಿಗೆ ಅಂಬಲಿಯನ್ನು ನೀಡಿದ ಮಹಾಶರಣ ಕಂಚಿಯ ಚನ್ನಯ್ಯ, ಮತ್ತು ಧರ್ಮೋದ್ಧಾರಕನಾಗಿ ಅವತರಿಸಿರುವ ಭಕ್ತ ಬಸವಣ್ಣ, ಇವರಿಬ್ಬರ ಹೆಸರೂ ಕೂಡಿಕೊಂಡಿರುವಂತೆ 'ಚೆನ್ನಬಸವಣ್ಣ' ಎಂಬ ಹೆಸರಾಗಲಿ. ಈ ಹೆಸರಿನಲ್ಲಿರುವ ಆರು ಅಕ್ಷರಗಳು ಷಟ್‌ಸ್ಥಲ ಮತ್ತು ಷಡಕ್ಷರಮಂತ್ರಗಳ ಸಂಕೇತವಾಗಲಿ 'ಚೆನ್ನಬಸವಣ್ಣನು' ಧರ್ಮಧುರಂಧರನಾಗಿ ಬಳೆಯಲಿ" ಎಂದು ಹರಸಿದರು. ಅನಂತರ ವಿಧ್ಯುಕ್ತವಾಗಿ ಶಿಶುವಿಗೆ ನಾಮಕರಣ ಮಾಡಿದರು. ಮಹರ್ಷಿ ಜಾತವೇದರು ಮಗುವಿಗೆ ವಿಭೂತಿ ಧರಿಸಿ, ಲಿಂಗಧಾರಣ ಮಾಡಿ ಆಶೀರ್ವದಿಸಿದರು. ಆಗ ಸಂಗಮೇಶನ ಗುಡಿಯಲ್ಲಿ ಘಂಟೆಗಳು ತಾವಾಗಿಯೇ ಶಬ್ದ ಮಾಡಿದುವು. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಹರುಷದಿಂದ ತುಂಬಿ ಹರಿದುವು. ಸಂಗಮೇಶನ ದೇವಾಲಯವು ದೀಪಗಳಿಂದ ಕಂಗೊಳಿಸಿತು. ಸಂಗಮಕ್ಷೇತ್ರದಲ್ಲಿ ವೈಭವದ ಗಣಪರ್ವ ನಡೆಯಿತು. ಚೆನ್ನಬಸವಣ್ಣನ ನಾಮಕರಣವು ಎಲ್ಲೆಲ್ಲಿಯೂ ಹರುಷದ ಸುದ್ದಿಯಾಗಿ ಪಸರಿಸಿತು. ಶಿವಶರಣರಿಗೆ ಬಲಭುಜಗಳು ಅದುರಿದುವು. ಬಲಗಣ್ಣುಗಳು ಹಾರಿದುವು. ಅಗ ನೆರೆದ ಜನರು ಜಯ "ಚೆನ್ನಬಸವಣ್ಣ" ಎಂದು ಜಯಘೋಷ ಮಾಡಿದರು.

ಚೆನ್ನಬಸವಣ್ಣನವರು ಎಂತಹ ಮಹಾತ್ಮರೋ ಚರಿತ್ರೆಯಲ್ಲಿ ಅಂತಹ ದುರದೃಷ್ಟವಂತರು. ಅವರ ಹೆಸರಿನಲ್ಲಿ ಬರೆದ, ಕನ್ನಡ, ತೆಲಗು, ಸಂಸ್ಕೃತ ಗ್ರಂಥಗಳಲ್ಲೆಲ್ಲಾ ಅವರು 'ಕಕ್ಕಯ್ಯನ ಮಿಕ್ಕ ಪ್ರಸಾದದಿಂದ ಜನಿಸಿದರು'

ಎಂದಿದೆ. 'ಶಿವತತ್ತ್ವ ಚಿಂತಾಮಣಿ' ಮೊದಲಾದ ಗ್ರಂಥಗಳಲ್ಲಿಯೂ ಹೀಗೆಯೇ ಇದೆ. ಈ ಕಟ್ಟುಕಥೆಯು ಅದೆಂತು ಇಷ್ಟೊಂದು ಭಯಂಕರವಾಗಿ ಬಳೆಯಿತೆಂಬುದು ಊಹಾತೀತವಾಗಿದೆ. 'ತಂದೆಯಿಲ್ಲದೆ ಮಕ್ಕಳು ಹುಟ್ಟುವುದು ಸೃಷ್ಟಿನಿಯಮಕ್ಕೆ ವಿರೋಧ' ಎಂಬುದನ್ನು 'ಕರ್ಣದೊಳಗೆ ಜನಿಸಿದವರುಂಟೆ' ಎಂಬ ಬಸವಣ್ಣನರ ವಚನಾಧಾರದಿಂದ ತಿಳಿಯಬಹುದಾಗಿದೆ. 'ಸ್ತ್ರೀಪುರುಷರ ಸಂಗದಿಂದಲ್ಲದೆ ಪಿಂಡವಾಗದು' ಎಂದು ಶಿವಶರಣರು ಹೇಳಿದ್ದಾರೆ. ಆದರಿಂದ ಕಕ್ಕಯ್ಯನಿಗೂ ಚೆನ್ನಬಸವಣ್ಣನವರಿಗೂ ಯಾವ ಸಂಬಂಧವೂ ಇಲ್ಲ.

ಕನ್ನಡ ಕವಿಚರಿತ್ರೆಯಲ್ಲಿ ವಚನಕಾರರಲ್ಲಿ ಕಕ್ಕಯ್ಯನ ಹೆಸರಿಲ್ಲ. ಡಾ|| ಫ. ಗು. ಹಳಕಟ್ಟಿಯವರ ವಚನಶಾಸ್ತ್ರಸಾರ (ಭಾಗ-೧, ಪುಟ ೫೯೯ರಲ್ಲಿ) ವಚನಕಾರರ ಹೆಸರಿನಲ್ಲಿ ಕಕ್ಕಯ್ಯನ ಹೆಸರು ಚೆನ್ನಯ್ಯನ ಹೆಸರಿನ ಜತೆಗೆ ಹಲವುಸಾರಿ ಬಂದಿದೆ. ಕಲ್ಯಾಣದಲ್ಲಿ ಕಕ್ಕಯ್ಯನವರಿದ್ದಂತೆ ತೋರಿಬರುವುದಿಲ್ಲ. ಪ್ರಾಯೇಣ ಕಕ್ಕಯ್ಯನವರು ಹಿಂದಿನ ವಚನಕಾರರಾಗಿರಬೇಕು. ಪ್ರಸಾದದ ಮಹಿಮೆ ಹೇಳುವುದಕ್ಕಾಗಿ, ಹರಿಜನೋದ್ಧಾರ ತತ್ತ್ವಕ್ಕೆ ಹೆಚ್ಚು ಮಹತ್ವ ಕೊಡುವ ಸಲುವಾಗಿ, ಈ ಕಕ್ಕಯ್ಯನ ಪ್ರಸಾದದ ಕಥೆ ಬಳೆದು ಬಂದಿರಬೇಕು. ಕವಿ ಸಿಂಗಿರಾಜನು ಚೆನ್ನಬಸವಣ್ಣನವರ ತಂದೆ 'ಶಿವಸ್ವಾಮಿ' ಎಂದು ಹೇಳಿ ಚರಿತ್ರೆಕಾರರರಿಗೆ ಉಪಕಾರ ಮಾಡಿದ್ದಾನೆ.

ಸರ್ಪಭೂಷಣರು ಸ್ನಾನಮಾಡಿದ ಬಾವಿ

ಬೆಂಗಳೂರು ಇಂದು ಕರ್ನಾಟಕದ ರಾಜಧಾನಿ ಹದಿನೈದುಲಕ್ಷ ಜನರ ನಿವಾಸಸ್ಥಳ. ವ್ಯಾಪಾರ, ವಿದ್ಯೆ, ವಿಜ್ಞಾನ, ಕೈಗಾರಿಕೆ, ಆರೋಗ್ಯ, ಸೌಂದರ್ಯಗಳಿಗೆ ಹೆಸರಾದ ಸ್ಥಳ. ಈ ಮಹಾನಗರದಲ್ಲಿ ದೊಡ್ಡ ಬಸವೇಶ್ವರ, ಗವಿ ಗಂಗಾಧರೇಶ್ವರ, ಸೋಮೇಶ್ವರ, ಮಲ್ಲೇಶ್ವರ, ವೆಂಕಟರಮಣ, ರಂಗ ಸ್ವಾಮಿ, ಆಂಜನೇಯ ವೀರಭದ್ರ, ಅಣ್ಣಮ್ಮದೇವತೆ ಮೊದಲಾದ ಪ್ರಖ್ಯಾತ ದೇವಾಲಯಗಳಲ್ಲದೆ ಹಲವು ಸಾಧುಸಂತರ ಮಠಗಳೂ ಇವೆ. ವಿಖ್ಯಾತರಾದ ವಿದ್ವಾಂಸರೂ ಕಲಾವಿದರೂ ದೇಶಭಕ್ತರೂ ದಾನಿಗಳೂ ಬೆಂಗಳೂರಿನಲ್ಲಿ ಬಹಳವಾಗಿ ಆಗಿ ಹೋಗಿದ್ದಾರೆ.

ಬೆಂಗಳೂರಿನಲ್ಲಿ ನೋಡತಕ್ಕ ಸ್ಥಳಗಳಲ್ಲಿ ಶ್ರೀ ಸರ್ಪಭೂಷಣರ ಮಠ ವೊಂದಿದೆ. ಅಲ್ಲಿ ಶಿವಯೋಗಿ ಸರ್ಪಭೂಷಣರ ಸಮಾಧಿಯೂ, ಸರ್ಪಭೂಷಣ ರಿಂದ ಸ್ಥಾಪಿಸಲ್ಪಟ್ಟ ಶ್ರೀ ಓಂಕಾರೇಶ್ವರ ದೇವಾಲಯವೂ ಇವೆ. 'ಗೀತಾ ಚಲನಚಿತ್ರ ಮಂದಿರವು' ಆ ಮಠದ ಆವರಣದಲ್ಲಿಯೇ ಇದೆ. ಸುಪ್ರಸಿದ್ಧ ಹಾಡುಗಬ್ಬಕಾರರಾದ ಶ್ರೀ ಸರ್ಪಭೂಷಣ ಸ್ವಾಮಿಗಳ ಹೆಸರು ಕರ್ನಾಟಕ ದಲ್ಲಿ ಮನೆಮಾತಾಗಿದೆ. ಶ್ರೀ ನಿಜಗುಣರು, ಶಾಲ್ಯದ ಅರಸರು, ಮುಳು ಗುಂದದ ಮಹಾಂತರು, ಘನಮಠೇಶರು, ಸರ್ವಜ್ಞಮೂರ್ತಿ ಮೊದಲಾದ ವರ ಕೃತಿಗಳಂತೆ ಇವರ ಗ್ರಂಥಗಳು ಕನ್ನಡಿಗರಿಗೆಲ್ಲಾ ಚಿರಪರಿಚಿತವಾಗಿವೆ. ಸರ್ಪ ಭೂಷಣರು ಕನ್ನಡದಲ್ಲಿ ಕೈವಲ್ಯ ಕಲ್ಪವಲ್ಲರಿ (ಹಾಡುಹಬ್ಬ) ಸಂಸ್ಕೃತದಲ್ಲಿ ಜ್ಞಾನಶತಕಂ (ವೇದಾಂತ ಗ್ರಂಥ) ಮತ್ತು ವೇದಾಂತ ಶಿಖಾರತ್ನ ಪ್ರಕಾಶಿಕೆ (ವಚನ) ಎಂಬ ಮೂರು ಗ್ರಂಥಗಳನ್ನು ಬರೆದಿದ್ದಾರೆ. ಅವರ ಶಿವಸಮಾಧಿಯು ಬೆಂಗಳೂರಿನಲ್ಲಿ ಶ್ರೀ ಮಠದಲ್ಲಿದೆ. ಉರವಕೊಂಡ ಮಠದಲ್ಲಿ ಸರ್ಪಭೂಷಣರು ತಪಸ್ಸುಮಾಡಿದ ಮಹತ್ವದ ಮಂಟಪವಿದೆ. ಸುರಪುರದಲ್ಲಿ ಅವರು ಸ್ನಾನಮಾಡಿದ ಒಂದು ಬಾವಿಯಿದೆ. ಈ ಕಥೆಯು ಆ ಬಾವಿಗೆ ಸಂಬಂಧಪಟ್ಟಂತಿದೆ.

ಶ್ರೀ ಸರ್ಪಭೂಷಣರು ಬೆಂಗಳೂರು ಗಾಂಧಿನಗರದಲ್ಲಿರುವ ತಿಪ್ಪಶೆಟ್ಟರ ಮಠದ ಗುರುಸಿದ್ಧಸ್ವಾಮಿಗಳಲ್ಲಿ, ಕನ್ನಡ, ಸಂಸ್ಕೃತ, ಸಂಗೀತ, ಸಾಹಿತ್ಯ ಶಾಸ್ತ್ರಗಳನ್ನು ಶ್ರದ್ಧೆಯಿಂದ ಅಭ್ಯಾಸಮಾಡಿದರು. ವಿದ್ಯೆ ಮುಗಿದಮೇಲೆ ಅವರು ದೇಶಾಟನಕ್ಕೆ ಹೊರಟರು. ಶ್ರೀಶೈಲ, ಹಂಪೆ, ಮಹಾಕೂಟ, ಗೋಕರ್ಣ, ಕಾಶಿ ರಾಮೇಶ್ವರಗಳನ್ನು ಸಂಚರಿಸಿದರು. 'ದೇಶನೋಡು, ಕೋಶ ಓದು' ಎಂಬ ಗಾದೆಯನ್ನು ಸಾರ್ಥಕಗೊಳಿಸಿದರು. ಮಿಗಿಲಾದ ಶಾಸ್ತ್ರಾನುಭವ-ಲೋಕಾನುಭವಗಳನ್ನು ಗಳಿಸಿ ಕನ್ನಡ-ಸಂಸ್ಕೃತಭಾಷೆಗಳಲ್ಲಿ ಗ್ರಂಥರಚನೆಮಾಡಿ ಉಭಯ ಕವಿತಾ ವಿಶಾರದರಾದರು.

ಒಂದು ದಿನ ಸರ್ಪಭೂಷಣರು ಬಳ್ಳಾರಿಯಿಂದ ಕಲ್ಯಾಣಕ್ಕೆ ಹೋಗುವ ದಾರಿಯಲ್ಲಿ ಸುರಪುರಕ್ಕೆ ಹೋದರು. ಬಿಸಿಲು ಸುಡುಸುಡುತ್ತಿತ್ತು. ಬಾಯಾರಿಕೆಯೂ ಬಹಳವಾಯಿತು. ಮಧ್ಯಾಹ್ನವೂ ಆಗಿತ್ತು. ಹೋಗುವ ದಾರಿಯಲ್ಲಿ ಊರ ಆಚೆ ಒಂದು ಬಾವಿ ಸಿಕ್ಕಿತು. ನೀರು ಚೊಕ್ಕಟವಾಗಿತ್ತು. ಪಕ್ಕದಲ್ಲಿ ಒಂದು ದೊಡ್ಡ ಮರವೂ ಇತ್ತು. ಸ್ನಾನಕ್ಕೆ ಬಾವಿ, ಪೂಜೆಗೆ ಮರದ ನೆರಳು ಅವರ ಮನಸ್ಸಿಗೆ ಹಿತವಾಗಿ ಕಂಡಿತು. ಕೂಡಲೇ ಸ್ವಾಮಿಗಳು ಆ ಬಾವಿಯಲ್ಲಿ ಸ್ನಾನಮಾಡಿಕೊಂಡು ಮರದ ಕೆಳಗೆ ಶಿವಪೂಜೆಗೆ ಸಿದ್ಧಪಡಿಸಿಕೊಂಡರು. ಅಷ್ಟು ಹೊತ್ತಿಗೆ ಜೇವರಗಿ ಕಡೆಯಿಂದ ಒಬ್ಬ ದೊಡ್ಡ ವ್ಯಾಪಾರಿ ಆ ದಾರಿಯಲ್ಲಿ ಹೋಗುತ್ತಿದ್ದವನು ಮರದ ಕೆಳಗೆ ಕಾಣಿಸಿಕೊಂಡ ಶಿವಯೋಗಿಗಳನ್ನು ಕಂಡು ನಮಸ್ಕರಿಸಲು ಬಂದನು. ಸ್ವಾಮಿಗಳ ಪಾದಕ್ಕೆರಗಿದನು. ಮುಂದೆ ಅವರೀರ್ವರಿಗೂ ಹೀಗೆ ಸಂಭಾಷಣೆಯಾಯಿತು.

ವರ್ತಕ : ಸ್ವಾಮಿಗಳೆ, ತಾವು ಯಾರು ? ಎಲ್ಲಿಂದ ಬಂದಿರಿ? ಎಲ್ಲಿಗೆ ಹೊರಟಿರುವಿರಿ? ತಮ್ಮಸ್ಥಳ, ನಾಮ, ತಿಳಿಸಬಹುದೆ ?

ಸರ್ಪಭೂಷಣರು : ಸಂತೋಷವಾಗಿ ಆಗಬಹುದು. ನಮ್ಮ ಹೆಸರು ಸರ್ಪಭೂಷಣಸ್ವಾಮಿ, ಸ್ಥಳ ಬೆಂಗಳೂರು. ಈಗ ಬಳ್ಳಾರಿಯಿಂದ, ಜೇವರಗಿ, ಕಲ್ಬುರ್ಗಿ ಮಾರ್ಗವಾಗಿ ಕಲ್ಯಾಣಕ್ಕೆ ಹೊರಟಿದ್ದೇವೆ. ನೀವು ಯಾರು?

ವ್ಯಾಪಾರಿ : ಬುದ್ಧಿ, ನಾನು ಜೇವರಗಿಯವನು. ಹೊಸಪೇಟೆಗೆ ಬಂಧುಗಳ ಮನೆಗೆ ಹೊರಟಿದ್ದೇನೆ. ತಮ್ಮನ್ನು ನೋಡಿ ಇಲ್ಲಿಗೆ ಬಂದೆನು ದರ್ಶನಾರ್ಥವಾಗಿ.

ಸ್ವಾಮಿಗಳು :– ತುಂಬಾ ಸಂತೋಷ, ನಿಮ್ಮ ಗುರುಭಕ್ತಿಯು ನಿಜಕ್ಕೂ ಶ್ಲಾಘ್ಯವಾದುದು.

ವರ್ತಕ :– ಸ್ವಾಮಿಗಳೆ, ನಾನು ಜೇವರಗಿ ಷಣ್ಮುಖಸ್ವಾಮಿಗಳ ಮಠದ ಶಿಷ್ಯ. ನಿತ್ಯವೂ ಗುರುಸಂದರ್ಶನ ಮಾಡುವ ಪದ್ಧತಿ. ಇಂದು ಮಾರ್ಗ ಮಧ್ಯೆ ತಮ್ಮ ದರ್ಶನವಾಗಿ ನನಗೆ ಸಂತೋಷವಾಯಿತು. ನಾನು ಧನ್ಯನಾದೆನು.

ಸ್ವಾಮಿಗಳು :– ಮನಂಬಾಳು. ಮನಸಿನಂತೆ ಮಹಾದೇವ. ನಿಮ್ಮ ಸದ್ ಭಾವನೆಯೇ ನಿಮ್ಮನ್ನು ರಕ್ಷಿಸುತ್ತದೆ. ಇನ್ನು ನೀವು ಪ್ರಯಾಣ ಮುಂದುವರಿಸ ಬಹುದು. ನಾವು ಶಿವಪೂಜೆಗೆ ಕೊಡುತ್ತೇವೆ. ಬಿಸಿಲು ಏರಿದೆ.

ವರ್ತಕ :– ಸ್ವಾಮಿಗಳೆ ಎಲ್ಲಿ ಸ್ನಾನಮಾಡಿದಿರಿ ?

ಸ್ವಾಮಿಗಳು :– ಇಗೋ ಇಲ್ಲಿರುವ ಬಾವಿಯಲ್ಲಿ. ನೀರು ಬಹಳ ತಿಳಿಯಾಗಿದೆ. ಪ್ರದೇಶವೂ ನಿರ್ಜನವಾಗಿದೆ. ಮುಂದೆ ಕಾಣುವ ಊರೇ 'ಸುರಪುರ' ಎಂದು ಕೇಳಿದೆವು.

ವರ್ತಕ :– ಬುದ್ಧಿ, ಎಂತಹ ಅಚಾತುರ್ಯವಾಯಿತು. ಪವಿತ್ರ ಜಂಗಮರಾದ ತಾವು ಸ್ನಾನಮಾಡಿದ ಈ ಬಾವಿ ಹರಿಜನರ ಬಾವಿ, ಅದಕ್ಕಾಗಿಯೇ ಊರ ಹೊರಗಿದೆ. ಹೊಲೆಯರು-ಮಾದಿಗರು ಹೊರತು ಮತ್ತಾರೂ ಇಲ್ಲಿಗೆ ಬರುವುದಿಲ್ಲ. ಈ ಬಾವಿಯ ನೀರಿನಿಂದ ತಮಗೆ ಎಂತಹ ಮಡಿ ಸಂದಿದೆ, ಇದರಲ್ಲಿ ಶಿವಪೂಜೆಯೇ ? ಶಿವಶಿವಾ !!

ಸ್ವಾಮಿಗಳು :–ಇದು ನಿಜವೆ ? ಪರಸ್ಥಳದವರಾದ ನಮಗೆ ಇದು ಹೇಗೆ ತಾನೇ ಗೊತ್ತಾಗಬೇಕಪ್ಪ ?

ಈ ಬಾವಿಯ ಹತ್ತಿರ ನಗರಸಭೆಯವರು ಒಂದು ವಿಳಾಸದ ಹಲಗೆ ಹಾಕಬೇಕಾಗಿತ್ತು. ಪರಸ್ಥಳದವರಿಗೆ ಅದರಿಂದ ನಿಜಸ್ಥಿತಿ ತಿಳಿಯುತ್ತಿತ್ತು.

ವರ್ತಕ :– ಈಗ ಶಿವಪೂಜೆ ನಿಲ್ಲಿಸಿ ಸುರಪುರಕ್ಕೆ ನಡೆಯಿರಿ. ಅಲ್ಲಿ ಶರಣರ–ಮನೆ ಮಠಗಳಿವೆ. ತಮಗೆ ಭವ್ಯಸ್ವಾಗತ ಸಿಗುತ್ತದೆ. ಈ ಹೊಲೆಯರ ಬಾವಿಯಲ್ಲಿ ಸ್ನಾನ ಮಾಡಿದ ಸಂಗತಿ ಮಾತ್ರ ಜನರಿಗೆ ಗೊತ್ತಾಗಬಾರದಷ್ಟೆ ?

ಸ್ವಾಮಿಗಳು :– ಚಿಂತಾಕ್ರಾಂತರಾಗಿ ಕುಳಿತರು. ಮುಂದೇನು ಮಾಡಬೇಕೆಂದು ಚಿಂತಿಸುತ್ತಿದ್ದರು. ಆಗ ಕಲ್ಯಾಣದಿಂದ ಹಂಪೆಗೆ ಬರುತ್ತಿದ್ದ ಶರಣರ ತಂಡವೊಂದು ಶಿವಭಜನೆಯೊಂದಿಗೆ ಆ ದಾರಿಯಲ್ಲಿ ಬರುತ್ತಿದ್ದು ಮರದಕೆಳಗೆ ಕುಳಿತಿದ್ದ ಸ್ವಾಮಿಗಳಿಗೆ ನಮಸ್ಕರಿಸಲು ಬಂದಿತು. ಸ್ವಾಮಿಗಳು ಚಿಂತಾಕ್ರಾಂತರಾಗಿ ಕುಳಿತಿರುವುದನ್ನು ಕಂಡು ತಂಡದ ಮುಂದಾಳು 'ಕಲ್ಯಾಣಶೆಟ್ಟಿ' ಸ್ವಾಮಿಗಳನ್ನು ಹೀಗೆ ಪ್ರಶ್ನಿಸುತ್ತಾನೆ.

ಕಲ್ಯಾಣಶೆಟ್ಟಿ :– ಬುದ್ಧಿ, ಪಾದಕ್ಕೆ ಬಿದ್ದೆವು. ಆಶೀರ್ವದಿಸಬೇಕು.

ಸ್ವಾಮಿಗಳು :– ಮೌನದಿಂದಿರುವರು. (ಅವರ ಮನಸ್ಸಿನಲ್ಲಿ ಹೊಲೆಯರ ಬಾವಿಯಲ್ಲಿ ಸ್ನಾನಮಾಡಿದ್ದಕ್ಕೆ ಪರಿಹಾರವೇನೆಂಬ ಯೋಚನೆ ನಡೆದಿರಬೇಕು !!)

ವರ್ತಕ :– ಶರಣರೆ, ಈಗೊಂದು ಅಚಾತುರ್ಯ ನಡೆದುಹೋಗಿದೆ. ಸ್ವಾಮಿಗಳು ಈ ಪಕ್ಕದ ಬಾವಿಯಲ್ಲಿ ಸ್ನಾನಮಾಡಿ ಕುಳಿತಿದ್ದಾರೆ. ಶಿವಪೂಜೆಗೆ ಸಿದ್ಧವಾಗಿದ್ದಾರೆ. ಆದರೆ ಈ ಬಾವಿ ಹರಿಜನರ ಬಾವಿ ಎಂದು ಈಗ ತಿಳಿದು ಚಿಂತಿಸುತ್ತಿದ್ದಾರೆ. 'ಪರಸ್ಥಳವೋ ಪರದಾಟವೋ' ಎಂಬ ಗಾದೆ ಗೊತ್ತಿದೆಯಷ್ಟೆ.

ಕಲ್ಯಾಣಶೆಟ್ಟಿ :– (ಕೊಂಚ ಯೋಚಿಸಿ) ಸ್ವಾಮಿಗಳೆ, ಚಿಂತಿಸದಿರಿ. ತಾವು ನಿಜವಾಗಿಯೂ ಹೊಲೆಯರ ಬಾವಿಯಲ್ಲಿ ಸ್ನಾನಮಾಡಿದೆವೆಂಬ ಸಂಶಯ ಬೇಡಿರಿ, ಕೊಂಚ ವಿಚಾರಮಾಡಿರಿ ಬುದ್ಧಿ, ಅದು ಪವಿತ್ರ ತೀರ್ಥ ! ಪವಿತ್ರ ತೀರ್ಥ !!

ಸ್ವಾಮಿಗಳು :– ಶೆಟ್ಟರೆ, ವರ್ತಕರು ಹೇಳುತ್ತಿದ್ದಾರೆ ಇದು ಹರಿಜನರ ಬಾವಿಯೆಂದು. ಅದು ಪವಿತ್ರ ತೀರ್ಥ ಹೇಗಾಗುತ್ತದೆ. ?

ಕಲ್ಯಾಣಶೆಟ್ಟಿ ;– ಬುದ್ಧಿ, ತಾವು ಬಾವಿಗೆ ಇಳಿಯುವಾಗ ಮೊದಲು ತಮ್ಮ ಪಾದಗಳನ್ನು ನೀರಿನಲ್ಲಿಟ್ಟು ತಾನೇ ಸ್ನಾನ ಮಾಡಿಮದು ?

ಸ್ವಾಮಿಗಳು;– ಹೌದು, ಮೊದಲು ಬಾವಿಗೆ ಪಾದ ಇಟ್ಟು, ಆಮೇಲೆ ದೇಹವನ್ನು ಮುಳುಗಿಸಿ ತಾನೇ ಸ್ನಾನವನ್ನು ಮಾಡುವುದು ? ಪಾದ ಊರದೆ ಸ್ನಾನ ಹೇಗೆ ಮಾಡುವುದು ?

ಕಲ್ಯಾಣಶೆಟ್ಟಿ :– ಬುದ್ಧಿ, ನಾವು ಕಲ್ಯಾಣದಿಂದ ಬಂದವರು. ಬಸವಾದಿಗಳ ತಪಸ್ಸಿನಿಂದ ಪವಿತ್ರವಾದ ಆ ಕ್ಷೇತ್ರದಲ್ಲಿರುವ ನಮಗೆ ಜಂಗಮರ ಪಾದದ ಮಹತ್ವ ಚೆನ್ನಾಗಿ ತಿಳಿದಿದೆ ಬುದ್ಧಿ ?

ಸ್ವಾಮಿಗಳು :– ಜಂಗಮರ ಪಾದಕ್ಕೂ ಈ ಬಾವಿಯ ಸ್ನಾನಕ್ಕೂ ಏನು ಸಂಬಂಧ ಶೆಟ್ಟರೆ ?

ಕಲ್ಯಾಣ ಶೆಟ್ಟಿ :– ಬುದ್ಧಿ, "ಚರಸ್ಯಪಾದ ತೀರ್ಥೇನ ಲಿಂಗಮಜ್ಜನ ಮುತ್ತಮಂ" ಎಂದು ಆಗಮಗಳು ಹೇಳುತ್ತಿವೆ. ಶ್ರೀ ಗುರು ಸಿದ್ಧಲಿಂಗೇಶ್ವರನ ಪಾದವನ್ನು ಸ್ಪರ್ಶಿಸಿದ ಸತ್ತ ಹಾವು ಕಗ್ಗೆರೆಯಲ್ಲಿ ಬದುಕಿತೆಂಬ ಕಥೆ ಕೇಳಿದ್ದೇವೆ. ತಾವು ವಿರಕ್ತ ಮೂರ್ತಿಗಳು, ಜಂಗಮ ಪುಂಗವರು, ಕಾರಣ, ತಾವು ಪಾದಸ್ಪರ್ಶಮಾಡಿದ ಕೂಡಲೇ ಈ ಬಾವಿಯ ನೀರು ಶಿವ ತೀರ್ಥವಾಯಿತು. ಅಲ್ಲಿ ಸ್ನಾನಮಾಡಿದವರಿಗೆ ಅಪವಿತ್ರತೆಯೆಲ್ಲಿ ? ಮೈಲಿಗೆಯೆಲ್ಲಿ ? ತಾವು ಇಲ್ಲಿ ನೆಮ್ಮದಿಯಿಂದ ಸ್ನಾನಮಾಡಬಹುದು. ಪೂಜ್ಯರಾದ ತಮ್ಮ ಪಾದಧೂಳಿ ಹೊಲೆತನವನ್ನೂ ಪಾಪವನ್ನೂ ಓಡಿಸಬಲ್ಲುದು. ಸೂರ್ಯನ ಮುಂದೆ ಕತ್ತಲೆಯ ಆಟವೆ ? ಸಂಜೀವಿನಿ ಇರುವವನಿಗೆ ಮರಣದ ಭಯವೆ ?

ಸ್ವಾಮಿಗಳು :– ಶೆಟ್ಟರೆ, ಕಸ್ತೂರಿಯನ್ನು ಹಾಕಿದ ಭರಣಿಯಲ್ಲಿ ಸುಗಂಧ ಇರುವಂತೆ, ಕಲ್ಯಾಣದ ನಿವಾಸಿಗಳಾದ ನಿಮ್ಮ ಮನಸ್ಸಿನಲ್ಲಿ ಅನುಭವದ ಕಿಡಿಗಳಿರುವುದು ಸಹಜ. ಈಗ ನಮ್ಮ ಸಂಶಯ ನಿವಾರಣೆಯಾಯಿತು. ನಮ್ಮ ಇಂದಿನ ಪರಿಸ್ಥಿತಿ 'ದಶಮಪುರುಷ ನ್ಯಾಯ'ದಂತೆ

ಆಗಿದ್ದಿತು. "ಮರೆದೊಡೆ ಎಚ್ಚರಿಸುವವರ ನೆರೆಯಾಗಲಿ," ಎಂದು ಶರಣರು ಇದಕ್ಕಾಗಿಯೇ ಹೇಳಿದ್ದಾರೆ. ನಿಮ್ಮ ಸಮಯೋಚಿತವಾದ ವಾಕ್ಯಗಳಿಗೆ ನಾವು ಕೃತಜ್ಞರಾಗಿರುವೆವು. ನೀವು ಅನುಭಾವಿಗಳೆಂಬುದು ನಿಶ್ಚಯ !! ನೀವಿನ್ನು ಹೊರಡಬಹುದು. "ಶೆಟ್ಟಿಯ ಸಹಸವಾಸ ಸೇರು, ಲಿಂಗದ ಅಡಿಯನ್ನು ಸೇರು" ಎಂಬ ಗಾದೆಯ ಮಾತು ಇಂದು ನಿಜವಾಯಿತು.

ಸ್ವಾಮಿಗಳಿಗೆ ಸಾಷ್ಟಾಂಗನಮಸ್ಕಾರಮಾಡಿ ಕಲ್ಯಾಣದ ಶರಣರ ತಂಡ ಹಂಪೆಗೆ ಹೊರಟಿತು.

ಇತ್ತ ಸ್ವಾಮಿಗಳು ಪ್ರಶಾಂತವಾಗಿ ಶಿವಪೂಜೆ ಮಾಡಿದರು. ಮುಂದೆ ಪ್ರಯಾಣಕ್ಕೆ ಸಿದ್ಧರಾದರು.

ವರ್ತಕ;-ಪೂಜ್ಯಸಾಮಿಗಳೆ, ತಮ್ಮ ಮಹಿಮೆಯನ್ನು ತಿಳಿಯದೆ ಮಾತನಾಡಿದೆನು. ಕಲ್ಯಾಣದ ಶರಣರ ಮಾತು ಕೇಳಿ ನನಗೆ ಜ್ಞಾನೋದಯವಾಗಿದೆ. ಇನ್ನು ಮುಂದೆ ನಾನು ತಮ್ಮ ಸಂಚಾರ ಕಾಲದಲ್ಲಿ ತಮಗೆ ಕೆಲಕಾಲ ಸೇವೆ ಸಲ್ಲಿಸುತ್ತೇನೆ. ಅಪ್ಪಣೆಯಾಗಬೇಕು.

ಸರ್ಪಭೂಷಣರು;- ಅಗತ್ಯವಾಗಿ ಆಗಬಹುದು. ಇಲ್ಲಿಂದ ಮುಂದೆ, ಜೇವರಗಿ, ಕಲ್ಬುರ್ಗಿ ನೋಡಿಕೊಂಡು ಕಾಲ್ಯಾಣಕ್ಕೆ ಹೊರಡೋಣ. ಪ್ರಮಥರ ಪವಿತ್ರ ಕ್ಷೇತ್ರವನ್ನು ಸಂದರ್ಶಿಸೋಣ. ಜನ್ಮ ಸಾಫಲ್ಯಮಾಡಿಕೊಳ್ಳೋಣ.

ವರ್ತಕ;-ಆಗಬಹುದು, ಎಂದು ಹೇಳಿ ಸ್ವಾಮಿಗಳ ಶಿವಪೂಜೆಯ ಗಂಟು ಹೊತ್ತುಕೊಂಡು ಅವರ ಹಿಂದೆ ಹೊರಟನು. ಇತ್ತ ಈ ವಾರ್ತೆ ಊರಿನವರಿಗೆ ತಿಳಿದು ಜನರು ತಂಡ ತಂಡವಾಗಿ ಬಂದು ಆ ಬಾವಿಯಲ್ಲಿ ಸ್ನಾನಮಾಡಿದರು. ಇದಕ್ಕೆ "ಸರ್ಪಭೂಷಣರ

ಬಾವಿ" ಎಂದು ಹೆಸರಾಯಿತು. A ಈ ಕಥೆಯು ಸರ್ಪಭೂಷರ ಜೀವನಕ್ಕೆ ಸಂಬಂಧಪಟ್ಟುದು. ಕರ್ಣಾಟಕದಲ್ಲಿ ಕಂಗೊಳಿಸುತ್ತಿರುವ ಲಕ್ಷಗಟ್ಟಲೆ ಸರ್ಪಭೂಷಣ ಸ್ವಾಮಿಗಳ ಭಕ್ತರಿಗೆ ತಿಳಿದಿರಲೆಂದು ಈ ಲೇಖನ ಬೆಳಕು ಕಂಡಿದೆ. ಜಂಗಮರ ಪಾದದ ಮಹಿಮೆ ತಿಳಿಯಲು ಇದು ಸಹಾಯವಾಗಿದೆ.

ಸರ್ಪಭೂಷಣ ಶಿವಯೋಗಿಗಳ ಚರಿತ್ರೆಯು ನಮ್ಮ ಗ್ರಂಥ ಮಾಲೆಯಲ್ಲಿ ಪ್ರಕಟವಾಗಿರುವ 'ವೀರಶೈವ ಮಹಾ ಪುರುಷರು" ಎಂಬ ಗ್ರಂಥದಲ್ಲಿದೆ. ಅಲ್ಲಿ ಇವರ ಚರಿತ್ರೆಯನ್ನು ವಿಸ್ತಾರವಾಗಿ ಓದಬಹುದು. ಇವರ ಕೃತಿ 'ವೇದಾಂತ ಶಿಖಾರತ್ನ ಪ್ರಕಾಶಿಕೆಯು' ಶರಣಸಾಹಿತ್ಯ ಗ್ರಂಥಮಾಲೆಯಲ್ಲಿ ಪ್ರಕಟವಾಗಿದೆ.

ಶ್ರೀಸರ್ಪಭೂಷಣ ಶಿವಯೋಗಿಗಳು ಸ್ನಾನ ಮಾಡಿದ ಬಾವಿಯು ಸುರಪುರದ ಅಗಸೆಯ ಬಳಿಯಲ್ಲಿದೆ. ಹರಿಜನಕೇರಿಗೆ ಸಮೀಪದಲ್ಲಿದೆ. ಅದನ್ನು ಜನರು 'ಸಪ್ಪಣ್ಣಪ್ಪನವರ ಬಾವಿ' ಎಂದು ಕರೆಯುತ್ತಾರೆ. ಶ್ರೀ ಸ ರ್ಪ ಭೂ ಷ ಣ ರು ಈಗ ಎಲ್ಲರಿಗೂ ತಿಳಿದಿರುವಂತೆ ಕನ್ನಡದಲ್ಲಿ 'ಕೈವಲ್ಯಕಲ್ಪವಲ್ಲರಿ'ಯನ್ನೂ, ಸಂಸ್ಕೃತದಲ್ಲಿ 'ಜ್ಞಾನಶತಕ'ವನ್ನೂ ಬರೆದಿರುವರಲ್ಲದೆ, ಅವರು ಕೂಡಲ ಸಂಗಮದಲ್ಲಿದ್ದ ಸಮಯದಲ್ಲಿ ರಚಿಸಿದ "ವೇದಾಂತ ಶಿಖಾರತ್ನ ಪ್ರಕಾಶಿಕೆ" ಎಂಬೊಂದು ವಚನ ಗ್ರಂಥವು ಕೂಡ ಈಗ ಸಿಕ್ಕಿ ಬೆಳಕಿಗೆ ಬಂದಿದೆ.

A. ಅಲ್ಲಿ ಸ್ನಾನ ಮಾಡಿದವರಿಗೆ ಹಲವು ರೋಗಗಳು ವಾಸಿಯಾಗುವುವೆಂಬ ನಂಬಿಕೆಯು ಆ ಜನರಿಗಿದೆ. (ಸಂ)

ನಿಜಗುಣ ಶಿವಯೋಗಿಯು ಸಂಸಾರವನ್ನು ಬಿಟ್ಟಿದು

ಕನ್ನಡ ಸಾಹಿತ್ಯದಲ್ಲಿ ಹಾಗೂ ಕನ್ನಡ ನಾಡಿನಲ್ಲಿ ಶ್ರೀ ನಿಜಗುಣ ಶಿವಯೋಗಿಗಳ ಹೆಸರನ್ನು ಕೇಳದೆ ಇರುವವರಿಲ್ಲ. ತಮಿಳುನಾಡಿನಲ್ಲಿ **ತಿರುವಳ್ಳುವರ್**, ಆಂಧ್ರದೇಶದಲ್ಲಿ **ವೇಮನಯೋಗಿ** ಮಹಾರಾಷ್ಟ್ರದಲ್ಲಿ **ಭಕ್ತ ತುಕಾರಾಂ**, ಭಾರತದಲ್ಲಿ **ಭಕ್ತ ಕಬೀರ್** ಜನಪ್ರಿಯರಾಗಿ ರುವಂತೆ, ಕನ್ನಡ ನಾಡಿನಲ್ಲಿ **ಶಿವಯೋಗಿ ನಿಜಗುಣರು** ಹೆಚ್ಚು ಜನಪ್ರಿಯ ರಾಗಿದ್ದಾರೆ. ದಿವ್ಯಜ್ಞಾನಿಗಳಾದ ಇವರು, ಕನ್ನಡದಲ್ಲಿ 'ಕೈವಲ್ಯಪದ್ಧತಿ' ಎಂಬ ಹಾಡುಗಬ್ಬವನ್ನೂ 'ವಿವೇಕಚಿಂತಾಮಣಿ' ಎಂಬ ವಸ್ತುಕೋಶವನ್ನೂ 'ಅರುವತ್ತು ಮೂವರ ತ್ರಿಪದಿ' ಎಂಬ ಭಕ್ತಿಗೀತೆಯನ್ನೂ "ಪರಮಾರ್ಥ ಪ್ರಕಾಶಿಕೆ" ಎಂಬ ಯೋಗಶಾಸ್ತ್ರವನ್ನೂ, 'ಅನುಭವಸಾರ,' 'ಅನುಭವ ಬೋಧೆ,' 'ಪರಮಾರ್ಥ ಗೀತೆ' ಎಂಬ ಮಹತ್ತ್ವದ ವೇದಾಂತ ಗ್ರಂಥಗಳನ್ನೂ ಬರೆದು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಸಕಲ ಶಾಸ್ತ್ರ ಸಾರಭೂತವಾದ '**ವಿವೇಕ ಚಿಂತಾಮಣಿ**'ಯು ಮಹಾಕವಿ ಶಿವಪ್ರಕಾಶರಿಂದ ತಮಿಳಿಗೂ, ನಾಸಿಕದ ಶಾಂತಲಿಂಗ ದೇಶಿಕರಿಂದ ಮರಾಠಿಗೂ ಕೊಡಗಿನ ಲಿಂಗರಾಜರಿಂದ ಸಂಸ್ಕೃತಕ್ಕೂ ಭಾಷಾಂತರವಾಗಿದೆ ಎಂಬ ಮಾತು ಅವರ ಮಿಗಿಲಾದ ಪಾಂಡಿತ್ಯಕ್ಕೆ ಸುಸ್ಪಷ್ಟ ನಿದರ್ಶನವಾಗಿದೆ.'ಕೈವಲ್ಯ ಪದ್ಧತಿ'ಯು ಕನ್ನಡದಲ್ಲಿ ಮೊಟ್ಟಮೊದಲನೆಯ 'ಹಾಡುಗಬ್ಬ' ಎಂದು ಸಂಶೋಧನೆಯಿಂದ ತೀರ್ಮಾನವಾಗಿದೆ. 'ಪುರಾತನರ ತ್ರಿವಿಧಿ'ಗೆ ಶೇಕ್ಕಿರಾರ್ ಕವಿಯ ಪೆರಿಯಪುರಾಣವೂ, 'ಪರಮಾರ್ಥ ಪ್ರಕಾಶಿಕೆ'ಗೆ ಚೆನ್ನ ಸದಾಶಿವ ಯೋಗಿಯ ಶಿವಯೋಗ ಪ್ರದೀಪಿಕೆಯೂ ಆಧಾರ ಗ್ರಂಥಗಳು. ಅವರ 'ಅನುಭವಸಾರ' 'ಪರಮಾರ್ಥ ಗೀತೆ' 'ಪರಮಾನುಭವ ಬೋಧೆ' ಎಂಬ ಗ್ರಂಥಗಳು ಉಪನಿಷತ್ತು ಮತ್ತು ಜ್ಞಾನವಾಶಿಷ್ಠಗಳ ಆಧಾರದ ಮೇಲೆ ಬರೆದವುಗಳು. 'ಕೈವಲ್ಯ ಪದ್ಧತಿ'ಯು ಹಲವು ರಾಗ–ತಾಳಗಳಿಂದ ಕೂಡಿದ ಹಾಡುಗಳ ಗ್ರಂಥ. ಇದು ಅವರ ಸ್ವತಂತ್ರ ಕೃತಿ. ಪ್ರಕಾಶಿಕೆ, ವಿವೇಕ ಚಿಂತಾಮಣಿ ಗದ್ಯದಲ್ಲಿವೆ. 'ಅನುಭವಸಾರ' ಮತ್ತು ಪುರಾತನರತ್ರಿವಿಧಿ

ಗಳು ತ್ರಿಪದಿಯ ಛಂದಸ್ಸಿನಿಂದ ಕೂಡಿವೆ. ಪರಮಾರ್ಥ ಗೀತೆಯು ರಗಳೆಯ ಛಂದಸ್ಸಿನಲ್ಲಿದೆ. 'ಪ್ರಕಾಶಿಕೆ' ಮತ್ತು 'ಚಿಂತಾಮಣಿ'ಗಳು ಕನ್ನಡ ಗದ್ಯಶೈಲಿಯಲ್ಲಿವೆ. 'ಪರಮಾನುಭವ ಬೋಧೆಯು' ಸಾಂಗತ್ಯದಲ್ಲಿದೆ. ಶಿವಯೋಗಿಗಳು ಆರಿಸಿ ಕೊಂಡಿರುವ 'ಛಂದಸ್ಸು' ಅವರು ಕನ್ನಡಿಗರ ಮನಸ್ಸಿನ ಗುಟ್ಟುಗುರಿಗಳನ್ನು ಚೆನ್ನಾಗಿ ತಿಳಿದಿರುವರು ಎಂಬುದಕ್ಕೆ ನಿದರ್ಶನವಾಗಿದೆ. ಈ ಎಲ್ಲ ಗ್ರಂಥಗಳೂ ಕನ್ನಡ ನಾಡಿನಲ್ಲಿ 'ನಿಜಗುಣರ ಷಟ್-ಶಾಸ್ತ್ರ'ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರೂ, ಅವರ ಶಿಷ್ಯರಾದವರೂ ನಿಜಗುಣರಕೃತಿಗಳ ಪ್ರಸಾರಕ್ಕಾಗಿ ಮಾಡಿದ ಪ್ರಯತ್ನಗಳು ಅಪಾರವಾಗಿವೆ.

ಶ್ರೀ ನಿಜಗುಣ ಶಿವಯೋಗಿಗಳ ಸ್ಥಳ ಕೊಳ್ಳೇಗಾಲದ ಪಕ್ಕದ **ಶಂಭುಲಿಂಗನ ಬೆಟ್ಟ.** ಅಲ್ಲಿ ಇವರು ತಪಸ್ಸು ಮಾಡಿದ **ಗವಿ,** ಇವರ ಇಷ್ಟದೇವತೆಯಾದ **ಶಂಭುಲಿಂನ ಗುಡಿ** ಇವನ್ನು ಈಗಲೂ ನಾವು ನೋಡಬಹುದು. ಇವರು ಆ ಬೆಟ್ಟದ ಪಕ್ಕದ ಗ್ರಾಮವಾದ **ಚಿಲಕವಾಡಿ**ಯಲ್ಲಿ ಹಲವು ಗ್ರಾಮಗಳಿಗೆ ಅಧಿಪತಿಗಳಾಗಿ ತುಂಡರಸರಾಗಿದ್ದಂತೆ ಐತಿಹ್ಯವಿದೆ. ಇವರನ್ನು ಕುರಿತು ೧೬೫೫ ರಲ್ಲಿ ಎಳಂದೂರಿನಲ್ಲಿದ್ದ ಷಡಕ್ಷರ ದೇವ ಮಹಾಕವಿಯೂ, ೧೫೬೦ ರಲ್ಲಿ ಬಿಜ್ಜಾವರದಲ್ಲಿದ್ದ ವಿರಕ್ತತೋಂಟದಾರ್ಯ ಮಹಾಕವಿಯೂ, ರಾಜಶೇಖರ ವಿಳಾಸ ಮತ್ತು ನಿರಂಜನ ಶತಕಗಳಲ್ಲಿ ಸ್ಮರಿಸಿದ್ದಾರೆ. ಅರುವತ್ತು ಮೂವರ ಪುರಾಣವನ್ನು ಬರೆದ ವೀರಭದ್ರ ಕವಿಯೂ (ಸುಮಾರು ೧೭ ನೆಯ ಶತಮಾನ) ೧೯ ನೆಯ ಶತಮಾನದಲ್ಲಿದ್ದ ವೇದಾಂತದ ಶಿವರಾಮಶಾಸ್ತ್ರಿಗಳೂ (ಬ್ರಹ್ಮಾನಂದ ಬೋಧೆ) ಚೆನ್ನಾಗಿ ಇವರ ಗುಣಕಥನ ಮಾಡಿದ್ದಾರೆ. ಇದರಿಂದ ನಿಜಗುಣರು ಕ್ರಿ. ಶ. ೧೫೬೦ ಕ್ಕಿಂತ ಹಿಂತೆ ಇದ್ದವರೆಂದು ಸಿದ್ಧವಾಗುತ್ತದೆ. ಕನ್ನಡ ಕವಿಚರಿತೆಕಾರರು ಇವರ ಕಾಲ "ಸುಮಾರು ಕ್ರಿ.ಶ.೧೫೦೦" ಎಂದು ನಿರ್ಣಯಿಸಿದ್ದಾರೆ. (ಭಾಗ ೨, ಪುಟ೧೫೩) ಇದು ತಪ್ಪು ಎಂಬುದನ್ನು ನಾವು ನಮ್ಮ ಗ್ರಂಥಮಾಲೆಯ 'ಪುರಾತನರ ತ್ರಿವಿಧಿ'ಯ ಪೀಠಿಕೆಯಲ್ಲಿ ಸಿದ್ಧಪಡಿಸಿದ್ದೇವೆ.

ನಮ್ಮ ಅಭಿಪ್ರಾಯದಲ್ಲಿ ಶ್ರೀ ನಿಜಗುಣರು ೧೩ ನೆಯ ಶತಮಾನದಲ್ಲಿ ಇದ್ದವರು-ಎಂಬದು ನಿಚ್ಚಳವಾಗಿದೆ.

ಶ್ರೀ ನಿಜಗುಣರು ವೀರಶೈವ ಮತಧರ್ಮದಲ್ಲಿ ಹುಟ್ಟಿ ಬಳೆದವರು. 'ವೀರಶೈವಮೇ ಸರ್ವೋತ್ಕೃಷ್ಟಮಕ್ಕುಂ' ಎಂದು ವಿವೇಕ ಚಿಂತಾಮಣಿಯಲ್ಲಿ ಹೇಳಿದ್ದಾರೆ. ಇವರ ಅಂಕಿತ **ಶಂಭುಲಿಂಗ** ಎಂಬುದು. ಇವರ ಗುರು ಯಾರೆಂಬುದು ಸ್ಪಷ್ಟವಾಗಿಲ್ಲ. ಇದು ಸಂಶೋಧನೆಗೆ ಅರ್ಹವಾಗಿದೆ.

ಶ್ರೀ ನಿಜಗುಣರು ಇಷ್ಟು ದೊಡ್ಡ ವಿದ್ವಾಂಸರಾಗಿದ್ದರೂ ಅವರು ತಮ್ಮ ಸ್ವಂತ ವಿಷಯವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಇದಕ್ಕೆ ಅವರ ವಿರತಿಭಾವ ಕಾರಣವಾಗಿರಬೇಕು- ಆದರೆ ಅವರ 'ಪರಮಾನುಭವ ಬೋಧೆ' ಯಲ್ಲಿ "ಆಸಿಮಿತ್ತ ಬಾಂಧವನ್, ಅನುಪಮಾನಂದಾಬ್ಧಿ, ವಿನಯಾವಿ ಗುಣಗುಣ ಮಂಡನ, ಜನನ ವಿದೂರನ್ ಅಧಿಕ ವಿದ್ಯಾಸಂಪನ್ನನ್ ಎನಿಸಿ ರಾಜಿಪ ನಿಜಗುಣಯೋಗಿ" ಎಂದು ಹೇಳಿಕೊಂಡಿದ್ದಾರೆ. ಈ ಸಾಂಗತ್ಯವು ಅವರು ಆತ್ಮಾನಂದದಿಂದ ರಸಾವೇಶಕ್ಕೆ ಈಡಾಗಿ ತಮ್ಮನ್ನು ಕುರಿತು ತಾವು ಹೇಳಿಕೊಂಡ ಮಾತುಗಳು ಎಂದು ನಾವು ನಂಬುತ್ತೇವೆ. ಈ ಪದ್ಯವು ವಿದ್ವಾಂಸರು ನಿಜಗುಣರ ಗ್ರಂಥಗಳನ್ನು ಓದಿ ಅವರಿಗೆ ಕೊಟ್ಟ ಪ್ರಶಸ್ತಿಪತ್ರವೆಂಬಂತಿದೆ. ೧೯೦೮ ರಲ್ಲಿದ್ದ **ನನ್ನಯ್ಯ** ಎಂಬ ಕರ್ನಾಟಕದ ಕವಿಯು 'ಪ್ರಾಕ್ತನ ಗಣ ಕಥಾವಳಿ' ಎಂಬ ಒಂದು ಚಿಕ್ಕ ಹೊತ್ತಗೆಯನ್ನು ಬರೆದಿದ್ದಾನೆ. ಅದನ್ನು ಶ್ರೀ ನಿಜಗುಣ ಶಿವಯೋಗಿಗಳ ಅರುವತ್ತುಮೂವರ ತ್ರಿಪದಿಯನ್ನವಲಂಬಿಸಿ ಬರೆದಂತೆ ಕವಿಯು ಹೇಳಿದ್ದಾನೆ. ಇದೊಂದು ನಿಜಗುಣರ ಪ್ರಭಾವ ಮುದ್ರೆಗೆ ಸುಸ್ಪಷ್ಟ ನಿದರ್ಶನವಾಗಿದೆ. ಕರ್ನಾಟಕದಲ್ಲಿ ವಿದ್ವಾಂಸರ ಸಂಗೀತ ಸಭೆಗಳಲ್ಲಿಯೂ, ಆಕಾಶವಾಣಿಯ ಕೇಂದ್ರಗಳಲ್ಲಿಯೂ ನಿಜಗುಣರ ವಚನಗಳ ಹಾಡುಗಾರಿಕೆಯನ್ನು ಮೇಲಿಂದಮೇಲೆ ನಾವು ಕೇಳಬಹುದಾಗಿದೆ. ಕರ್ನಾಟಕದ ಕೈವಲ್ಯಕಾರರಾದ, ಶಾಳ್ಯದ ಕೃಷ್ಣಪ್ರಭುಗಳು, ಶಿವಯೋಗಿ ಸರ್ಪಭೂಷಣರು, ಸೋಮೆಕಟ್ಟಿ ಕರಿಬಸವಸ್ವಾಮಿಗಳು, ಮುಳಗುಂದದ

ಮಹಾಂತರು, ಘನಮಠಾರ್ಯರು, ಅನುಭವಾಮೃತದ ಮಹಲಿಂಗರಂಗ, ಷರೀಫ್ ಸಾಹೇಬರು ಮೊದಲಾದವರ ಪರಂಪರೆಗೆ ಶ್ರೀ ನಿಜಗುಣ ಶಿವಯೋಗಿಗಳು ಮೂಲ ಪುರುಷರಾಗಿದ್ದಾರೆ ಎಂಬುದು ಗಮನಾರ್ಹ. ಪ್ರಕೃತ ನಿಜಗುಣ ಶಿವಯೋಗಿಗಳ ಯೋಗಭೂಮಿಯಾದ ಶಂಭುಲಿಂಗನ ಬೆಟ್ಟದಲ್ಲಿ ಇರುವ **ನಿಜಗುಣರ ಗವಿ** ಮತ್ತು ಇಷ್ಟದೇವತೆ **ಶಂಭು ಲಿಂಗೇಶ್ವರ ದೇವಾಲಯ** ಇವುಗಳು ಈಗ ಜೀರ್ಣವಾಗಿವೆ. ಅವನ್ನು ಸರ್ಕಾರದವರೂ ಸಾರ್ವಜನಿಕರೂ ಗಮನಿಸಿ ಉದ್ಧಾರ ಮಾಡಿ ಆ ಮಹಾತ್ಮರ ಹೆಸರನ್ನು ಸಾರ್ಥಕ ಪಡಿಸುವರೆಂದು ನಂಬುತ್ತೇವೆ. ಪ್ರಕೃತ ಬರೆಹವು ನಿಜಗುಣರ ವೈರಾಗ್ಯವನ್ನು ಮಾತ್ರ ಕುರಿತಾದುದು.

ಶ್ರೀ ನಿಜಗುಣ ಶಿವಯೋಗಿಗಳು ಕೊಳ್ಳೇಗಾಲ ಪ್ರಾಂತದ ಒಬ್ಬ ಚಿಕ್ಕ ಅರಸರಾಗಿದ್ದರು. ಹಾಗೂ ಇವರು ಸಂಸಾರಿಗಳಾಗಿದ್ದರು. ಆದರೆ ಇವರು ಬಸವಾದಿ ಪ್ರಮಥರ ಜಂಗಮ ದಾಸೋಹ ಮಾರ್ಗದಲ್ಲಿ ನಿರತರಾಗಿದ್ದರು. ಮನೆಗೆ ಬಂದ ಗುರು ಜಂಗಮರಿಗೆ ಯಾವ ಸಮಯದಲ್ಲಿಯೇ ಆಗಲಿ ಪ್ರಸಾದ ಮತ್ತು ಸತ್ಕಾರ ಮಾಡ ಬೇಕೆಂಬುದು ಇವರ ಆಣತಿಯಾಗಿತ್ತು. ಇವರ ಧರ್ಮ ಪತ್ನಿಯು ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದಳು. ಒಂದು ದಿನ ಅಕಸ್ಮಾತ್ ಮನೆಗೆ ಬಂದ ಅತಿಥಿಗಳು ಹೊತ್ತುಮೀರಿ ಬಂದುದರಿಂದ, ನಿಜಗುಣರ ಪತ್ನಿ ಅವರಿಗೆ ಮನೆಯಲ್ಲಿದ್ದ ತಂಗಳೂಟವನ್ನು ಬಡಿಸಿದಳೆಂದೂ, ಅದು ನಿಜಗುಣರ ಗಮನಕ್ಕೆ ಬಂದು ಆ ಪತ್ನಿಯ ಅವಿವೇಕದಿಂದ ಆಗಿಹೋದ ಅತಿಥಿ ದ್ರೋಹಕ್ಕಾಗಿ ಅವರು ಸಂಸಾರವನ್ನು ತ್ಯಜಿಸಿದರೆಂದೂ ದಂತಕಥೆ ಹೇಳುತ್ತದೆ. ಸಂಸಾರ ಜೀವಿಗಳಾದ ಅವರಿಗೆ ಪತ್ನಿ ಮಾಡಿದ ಈ ಚಿಕ್ಕ ಅಪರಾಧವು ಸಂಸಾರದಿಂದ ಸಂನ್ಯಾಸಕ್ಕೆ ತಿರುಗಲು ಕಾರಣವಾಯಿತೆಂಬದು ಇಲ್ಲಿ ಗಮನಾರ್ಹವಾದ ಸಂಗತಿಯಾಗಿದೆ.

ಶ್ರೀ ನಿಜಗುಣರು ಗೃಹಸ್ಥಾಶ್ರಮವನ್ನು ತ್ಯಜಿಸಿ ಸಂನ್ಯಾಸಾಶ್ರಮಕ್ಕೆ ಕಾಲಿಡುವ ಈ ಸಂದರ್ಭದಲ್ಲಿ ಅವರು ಪತ್ನಿಯೊಡನೆ ನಡೆಸಿದ ಸಂಭಾಷಣೆಯು ಗಮನಾರ್ಹವಾಗಿದೆ.

ನಿಜಗುಣ :– ಸಹಧರ್ಮಿಣಿ, ನೀನು ಈ ಮಧ್ಯಾಹ್ನ ಮನೆಗೆ ಬಂದ ಜಂಗಮರಿಗೆ ತಂಗಳು ಊಟವನ್ನು ಬಡಿಸಿದೆ ಎಂಬುದು ನಿಜವೆ ?

ಸಹಧರ್ಮಿಣಿ:–ಅದು ನಿಜ. ಅತಿಥಿಗಳು ಹೊತ್ತುಮೀರಿ ಬಂದುದೂ, ಮನೆಯಲ್ಲಿ ಮಾಡಿದ್ದ ಪ್ರಸಾದ ಉಳಿದಿದ್ದುದೂ ಇದಕ್ಕೆ ಕಾರಣ.

ನಿಜಗುಣ :– ಜಗತ್ತಿನಲ್ಲೇ ಅತಿಪ್ರಾಚೀನವಾದ ವೇದವು "ಅತಿಥಿ ದೇವೋಭವ" ಎಂದು ಹೇಳಿರುವುದು ನಿನಗೆ ತಿಳಿಯದೆ ? ಮನೆಗೆ ಬಂದ ಜಂಗಮವು 'ಕೂಡಲ ಸಂಗಮನಾಥನು' ಎಂದು ಅಣ್ಣ ಬಸವಣ್ಣನವರು ಹೇಳಿರುವುದನ್ನು ಕೇಳರಿಯೆಯಾ ?

ಸಹಧರ್ಮಿಣಿ:– ಕೇಳಿದ್ದೇನೆ ಪ್ರಭು. ಮಾನವ ಸಹಜವಾದ ಮರವೆಯು ನನ್ನಿಂದ ಈ ಕಾರ್ಯ ಮಾಡಿಸಿತು. ಅದಕ್ಕಾಗಿ ತಾವು ಕ್ಷಮಿಸಬೇಕು.

ನಿಜಗುಣ :– ಸಹಧರ್ಮಿಣಿ, ಇದು ಕ್ಷಮೆಯ ಪ್ರಶ್ನೆಯಲ್ಲ. ಧರ್ಮದ ಪ್ರಶ್ನೆ. ನಮ್ಮ ಲಗ್ನ ಕಾಲದಲ್ಲಿ ನೀನು ಅಗ್ನಿ ಸಾಕ್ಷಿಯಾಗಿ, ವೇದ ಸಾಕ್ಷಿಯಾಗಿ ನನಗೆ 'ಧರ್ಮೇಚ, ಅರ್ಥೇಚ, ಕಾಮೇಚ, ನಾತಿಚರಾಮಿ' ಎಂದು ಪ್ರಮಾಣಮಾಡಿಕೊಟ್ಟಿರುವೆ. ಇಂದು ಅದನ್ನು ಮೀರಿದೆ. ಇಂದಿನ ನಿನ್ನ ವ್ಯವಹಾರವು ಗೃಹಸ್ಥಾಶ್ರಮಧರ್ಮಕ್ಕೆ ವಿರೋಧವಾಗಿಲ್ಲವೆ ?

ಸಹಧರ್ಮಿಣಿ :– ಸ್ವಾಮಿ, ಇಷ್ಟೊಂದು ಧರ್ಮಸೂಕ್ಷ್ಮ ನನಗೆ ತಿಳಿಯದು, ನಾನು ತಿಳಿಯದೆ ತಪ್ಪುಮಾಡಿತ್ತೇನೆ, ಕ್ಷಮಿಸಬೇಕು.

ನಿಜಗುಣ :– ಗೃಹಿಣಿ, ? 'ಸಂಸಾರವೆಂಬ ಸಾಗರವನ್ನು ದಾಟಲು ಗೃಹಸ್ಥನಿಗೆ ಮನೆಯ ಗೃಹಿಣಿಯೇ ನಾವೆ. ಅಂಥ ನಾವೆ ಪ್ರಯಾಣಕ್ಕೆ ಅಪಾತ್ರವಾದಾಗ ಜಾಣನಾದ ಗೃಹಸ್ಥನು ಅದರಿಂದ ಬಿಡುಗಡೆಯನ್ನು ಹೊಂದುವುದೇ ಒಳ್ಳೆಯದಾರಿ. ಈಗ ನಾನು ಸಂಸಾರದ ಮಾರ್ಗದಲ್ಲಿ ವಿಫಲನಾಗಿದ್ದೇನೆ. ಕಾರಣ ನಿನ್ನನ್ನು ತ್ಯಜಿಸಿದ್ದೇನೆ. ಇಂದು ನಾನು ಮನಸ್ಸಿನಲ್ಲಿ ಸಂನ್ಯಾಸ ದೀಕ್ಷೆಯನ್ನು ಕೈಗೊಂಡಿದ್ದೇನೆ. 'ನನ್ನ ಆತ್ಮೋ

ದ್ಧಾರ ಹಾಗೂ ಕರ್ನಾಟಕದ ಜನಗಳ ಕಲ್ಯಾಣ' ಇವು ಈಗ ನನ್ನ ಮನಸ್ಸನ್ನು ಆವರಿಸಿವೆ· ಈಗ ನಾನು ಸಮಗ್ರ ಭಾರತದ ತೀರ್ಥಕ್ಷೇತ್ರ ಸಂಚಾರ ಹೊರಡುತ್ತೇನೆ. ಆನಂತರ ಶ್ರೀ ಶಂಭುಲಿಂಗನ ಬೆಟ್ಟಕ್ಕೆ ಬಂದು ಗ್ರಂಥಲೇಖನದಲ್ಲಿ, ತಪಸ್ಸಿನಲ್ಲಿ ಕಾಲ ಕಳೆಯುತ್ತೇನೆ.

ಸಹಧರ್ಮಿಣಿ :– ಸ್ವಾಮಿ, ಕೈಹಿಡಿದ ಧರ್ಮಪತ್ನಿಯಾದ ನನ್ನನ್ನು ತಿಳಿಯದೆ ಮಾಡಿದ ಒಂದು ಚಿಕ್ಕ ತಪ್ಪಿಗಾಗಿ ತಾವು ಪರಿತ್ಯಜಿಸುವುದೆ ? ಮುಂದೆ ನಮ್ಮಗಳ ಗತಿ ಏನು ?

ನಿಜಗುಣ :– ಧರ್ಮಚ್ಯುತಿಯಲ್ಲಿ ಚಿಕ್ಕದು ದೊಡ್ಡದು ಎಂಬ ಭೇದ ವಿಲ್ಲ. ಅತಿಥಿದ್ರೋಹ ಅಸಮಾನವಾದುದು. ಆದುದರಿಂದ ನನ್ನ ತೀರ್ಮಾನ ಅಚಲ. ನನ್ನಗೃಹಸಂಪತ್ತು' ರಾಜ್ಯಸಂಪತ್ತು ಎಲ್ಲವೂ ನಿನ್ನದು, ನಿನ್ನ ಬಂಧುಗಳದು. ಇದನ್ನೆಲ್ಲಾ ತೆಗೆದು ಕೊಂಡು ನೀನು ಸುಖವಾಗಿ ಶಿವ ಪೂಜೆಯಲ್ಲಿ ನಿರತಳಾಗಿಬಾಳು. ಜೀವನವು ಅಶಾಶ್ವತವೆಂಬುದನ್ನು ನೆನ ಪಿನಲ್ಲಿಡು.

ಸಹಧರ್ಮಿಣಿ :– ಸ್ವಾಮಿ, ಹೊಟ್ಟೆಯಲ್ಲಿ ಮಕ್ಕಳಿಲ್ಲದ ನಾನು ಬಂಜೆಯಾಗಿ, ನೀರಸಳಾಗಿ ಇರಬೇಕಾಗಿದೆ. ನಂಬಿದ ನಚ್ಚಿದ ಪತಿ–ನೀವು ನನ್ನನ್ನು ಕೈಬಿಟ್ಟಿರಿ. ಈಗ ನಾನು ಶಾಂತಿಯಿಂದ ಬಾಳುವುದಾದರೂ ಹೇಗೆ ?

ನಿಜಗುಣ :– ಲೋಕದಲ್ಲಿ ಯಾರಿಗೆ ಯಾರು ಹೊಣೆಗಾರರು ? ಪತ್ನಿ, ಪುತ್ರ ಇವರೆಲ್ಲರೂ ಕೇವಲ ಭ್ರಾಂತಿ ವಿಲಾಸ. ನಾಡಿನಲ್ಲಿ ಬಡವರ ಮತ್ತು ಅನಾಥರ ಮಕ್ಕಳು ಬಹಳ ಇದ್ದಾರೆ. ಅವರನ್ನು ಸಾಕಿ ಸಲಹು. ಅದರಿಂದ ನಿನ್ನ ಮನಸ್ಸಿಗೆ ಶಾಂತಿಯೂ ಶಂಭುಲಿಂಗನಿಗೆ ತೃಪ್ತಿಯೂ ಉಂಟಾಗುತ್ತದೆ. ಇನ್ನು ನಾನು ದೇಶಾಟನೆಗೆ ಹೊರಡುತ್ತೇನೆ.

ಸಹಧರ್ಮಿಣಿ;- ನಿಜಗುಣರ ಪಾದಕ್ಕೆ ನಮಸ್ಕರಿಸಿ ಕಣ್ಣೀರು ಸುರಿಸುವಳು. ನಿಜಗುಣರು ಸ್ಥೈರ್ಯದಿಂದ ದೇಶಾಟನಕ್ಕೆ ಹೊರಟು ಹೋಗುವರು. ಕುಟುಂಬದ ಜನರು ಅಚ್ಚರಿಪಡುವರು.

ಶ್ರೀ ನಿಜಗುಣರು ತಮ್ಮ ಗ್ರಂಥಗಳಲ್ಲಿ ಸುದತಿಯರನ್ನು ಬಣ್ಣಿಸು
ವೈಖರಿಯನ್ನು ನೋಡಿದರೆ, ಅವರು ಕೆಲ ಕಾಲ ಸಂಸಾರದಲ್ಲಿದ್ದರೆಂದ
ನಾವು ನಂಬ ಬಹುದು. ಅಲ್ಲಮ, ವೇಮನ ಮೊದಲಾದ ವಿರತರ ಚರಿತ್ರೆ
ಯಲ್ಲಿಯೂ ಇಂತಹ ಅಪೂರ್ವ ಘಟನೆಗಳು ಆಗಿವೆ.

ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಸಮಕಾಲೀನರು ಅಥವ
ಹಿಂದಿನವರಾದ ಒಬ್ಬ ವಚನಕಾರರು **ನಿಜಗುಣದೇವ** ಎಂಬುವವರಿದ್ದಾರೆ
ಪ್ರಾಚೀನ ವಚನಗಳಲ್ಲಿ **ನಿಜಗುಣನ ನಿಬ್ಬೆರಗು, ನಿಜಗುಣನ ಯೋ**
ಎಂಬ ಮಾತುಗಳು ಬರುತ್ತವೆ. ಈ **ನಿಜಗುಣ ದೇವನು** ಸುಮಾರ
೧೧೬೦ ರಲ್ಲಿದ್ದವನೆಂದು ಕವಿ ಚರಿತ್ರೆಕಾರರು ಊಹಿಸುತ್ತಾರೆ. ಕನ್ನ
ದಲ್ಲಿ **ಅಧ್ಯಾತ್ಮ ರಾಮಾಯಣವನ್ನು** ಬರೆದ **ನಿಜಗುಣಯೋಗಿ** ಎಂ
ಮತ್ತೊಬ್ಬನುಂಟು (೧೬೦೦). ಪ್ರಕೃತ ನಾವು ನಿರೂಪಿಸುವ ನಿಜಗು
ಶಿವಯೋಗಿಯು ಈ ಇಬ್ಬರು ನಿಜಗುಣರಿಗಿಂತ ಭಿನ್ನ ನಾಗಿದ್ದು ೧
ನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಬಾಳಿ ಬದುಕಿದವನು ಎಂದು ಅಷ್ಟ
ಮಾತ್ರ ನಾವು ಈಗ ನಂಬಬಹುದು. ಕನ್ನಡ ಸಾಹಿತ್ಯದಲ್ಲಿ ನಿಜಗು
ಹೆಸರು ಧ್ರುವನಕ್ಷತ್ರದಂತೆ ಸದಾ ಪ್ರಕಾಶಿಸುತ್ತದೆ.

ಹಂಪೆಯ ಹರೀಶ್ವರನು ಒಲಿದು ಬಂದವಳನ್ನು ಒಲ್ಲೆನೆಂದುದು - ಶರಣಸತಿಯೊದುದು

ಹಂಪೆಯ ಹರೀಶ್ವರ ಕವಿಯು, ಹಲವಾರು ಕಾರಣಗಳಿಂದ ಕನ್ನಡ ನಾಡಿನಲ್ಲಿ ಪ್ರಖ್ಯಾತನು. ಈತನು ನೈಷ್ಠಿಕ ಬ್ರಹ್ಮಚಾರಿಯು. ಪವಾಡ ಪುರುಷನು ಮತ್ತು ಮಹಾಕವಿಯು. ಈತನ ಸ್ಥಳ ಪೆಂಪಿನ ಸೊಂಪಿನ ಪಂಪಾ ಕ್ಷೇತ್ರ. ಈತನು ಶಿವಶರಣರ ನೂರೆಂಟು ರಗಳೆಗಳು' 'ಗಿರಿಜಾ ಕಲ್ಯಾಣ,' 'ಪಂಪಾಶತಕ, "ರಕ್ಷಾಶತಕ," ಮತ್ತು "ಮುಡಿಗೆಯ ಅಷ್ಟಕ" ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಈತನಿಗೆ, ಹರಿದೇವ, ಹರೀಶ್ವರ, ಹರಿಯಣ್ಣ ಪಂಡಿತ, ರಸಿಕಚಕ್ರಿ, ಶಿವಕವೀಶ್ವರ ಮೊದಲಾದ ಹೆಸರುಗಳಿವೆ. ಈತನು ತನ್ನ ಗ್ರಂಥದಲ್ಲಿ, ಮಲ್ಹಣ, ಉದ್ಭಟ, ಹಲಾಯುಧ, ಭಲ್ಲಟ, ಕಾಳಿದಾಸ, ಮತ್ತು ಕೊಂಡಗುಳಿ ಕೇಶಿರಾಜ ಇವರನ್ನು ಸ್ಮರಿಸಿದ್ದಾನೆ. ಈತನು ಉನ್ನತವಾದ ಹಂಪೆಯ ಗುರುಪರಂಪರೆಗೆ ಸೇರಿದ್ದಾನೆ. ಈತನ ಪೂರ್ವಾಚಾರ್ಯರು ಶೈವಾಗಮಪ್ರಸಿದ್ಧರು. ಕೀರ್ತಿಭರಿತರು. ಶಂಕರಾಚಾರ್ಯ, ಮಾದಿರಾಜ, ಮಾಯಿದೇವ ಇವರು ಈತನ ಗುರು ವಂಶದವರು. ಹರಿಹರನ ಶಿಷ್ಯ ರಾಘವಾಂಕ ಪಂಡಿತ. ಈತನು ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ವೀರೇಶ ಚರಿತೆ, ಆದಿಶೆಟ್ಟಿ ಪುರಾಣ, ಶರಭ ಚರಿತೆ, ಹರಿಹರ ಮಹತ್ತ್ವ ಎಂಬ ಆರು ಗ್ರಂಥಗಳನ್ನು ಬರೆದಿದ್ದಾನೆ. ಈ ಗ್ರಂಥಗಳಲ್ಲಿ: ಕಡೆಯ ಎರಡು ಗ್ರಂಥಗಳು ಕಣ್ಮರೆಯಾಗಿವೆ. ಹರಿಹರನ ಮತ್ತು ಅವನಶಿಷ್ಯ ರಾಘವಾಂಕನ ಕಾಲ ಕ್ರಿ. ಶ. ೧೨೨೦ ಎಂದು ವಿದ್ವಾಂಸರು ತೀರ್ಮಾನಕ್ಕೆ ಬಂದಿದ್ದಾರೆ. ಆಗ ಬೇಲೂರಿನಲ್ಲಿ ಇಮ್ಮಡಿ ನರಸಿಂಹ ಬಲ್ಲಾಳನು ರಾಜ್ಯಭಾರ ಮಾಡುತ್ತಿದ್ದನು (೧೨೨೦-೧೨೩೫)

ಮಹಾಕವಿ ಹರಿಹರನು ರಗಳೆಯ ಛಂದಸ್ಸಿನಿಂದ ೧೦೮ ಶಿವಶರಣರ ಕಥೆಗಳನ್ನು ಬರೆದು ಕನ್ನಡ ಸಾಹಿತ್ಯಕ್ಕೆ ಉಪಕಾರ ಮಾಡಿದ್ದಾನೆ. ಇವನ ಗಿರಿಜಾ ಕಲ್ಯಾಣ ಕಾವ್ಯವು ಅತ್ಯಂತ ಮಧುರವಾದುದು. ಮತ್ತು

ಸರಳವಾದುದು. ಇವನ 'ಗಿರಿಜಾ ಕಲ್ಯಾಣ'ದ ಕೆಲವು ಸಂದರ್ಭಗಳು ಕಾಳಿದಾಸನ ಕುಮಾರಸಂಭವಕ್ಕಿಂತ ಉನ್ನತವಾದ ಭಾವಗಳನ್ನು ಹೊಂದಿವೆ ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಇವನ ಶತಕಗಳು-ಪಂಪಾಶತಕ – ರಕ್ಷಾಶತಕಗಳು, ಗಂಗೆ-ಯಮುನೆಯರಂತೆ, ಕೃಷ್ಣಾ-ಕಾವೇರಿಯರಂತೆ ಭಕ್ತಿರಸದ ತರಂಗಿಣಿಯೆನಿಸಿವೆ. ಇವನು ಱಟಿ, ಕುಳ, ಕ್ಷಳಗಳ ಪ್ರಾಸನಿಯಮವನ್ನು ಮೀರಿದ್ದಾನೆ. ಇವನ ಶೈಲಿಯು "ಲಲಿತವಾಗಿಯೂ, ಮೃದುಮಧುರ ಗಂಭೀರವಾಗಿಯೂ ಇದೆ" ಇಂದು ಕವಿಚರಿತೆಕಾರರು ಹೇಳಿದ್ದಾರೆ. ಹರೀಶ್ವರ ಮಹಾಕವಿಯ ಸಾಹಿತ್ಯ ವೈಭವವನ್ನು ಕುರಿತು ಬಣ್ಣಿಸುವುದು ಈ ಬರೆಹದ ಹೆಗ್ಗುರಿಯಲ್ಲ. ಅವನ ದೈವಭಕ್ತಿ, ವೈರಾಗ್ಯ ಸಂಪನ್ನತೆ, ನಿರ್ಮಲಚಾರಿತ್ರ್ಯ ಮೊದಲಾದುವುಗಳನ್ನು ಬಣ್ಣಿಸುವುದು ಈ ಲೇಖನದ ಗುರಿ. ಉದ್ದಾಮ ಕವಿಯಾದ ರಾಘವಾಂಕನ "ಹರಿಹರ ಮಹತ್ವ" ಎಂಬ ಗ್ರಂಥವು ಸಿಕ್ಕಿದ್ದರೆ ಹೆಚ್ಚು ಲಾಭವಾಗುತ್ತಿತ್ತು. ಈಗ ಉಪಾಯವಿಲ್ಲದೆ ಇತರ ವೀರಶೈವ ಪುರಾಣಗಳನ್ನು ಮಾತ್ರ ಆಶ್ರಯಿಸ ಬೇಕಾಗಿದೆ.

ಈ ಸಂದರ್ಭದಲ್ಲಿ ೧೩ನೆಯ ಶತಮಾನದಲ್ಲಿ ಉದ್ದಾಮಕೃತಿಗಳನ್ನು ರಚಿಸಿದ, ಕೆರೆಯ ಪದ್ಮರಸ, ಕುಮಾರ ಪದ್ಮರಸ, ಮತ್ತು ಸೋಮರಾಜ ಇವರುಗಳು ಹರಿಹರ–ರಾಘವಾಂಕರ ಸಮಕಾಲೀನರಾಗಿರುವರೆಂಬುದನ್ನು ಇಲ್ಲಿ ನೆನಪಿನಲ್ಲಿಟ್ಟುಕೊಳ್ಳಬಹುದು. ಈ ನಾಲ್ವರ ಕೃತಿಗಳಲ್ಲಿ ಬಸವೇಶ್ವರನ ಕ್ರಾಂತಿಯ ಪರಿಣಾಮವನ್ನು ನಾವು ಮನಗಾಣಬಹುದು. ಇವರ ನೂತನ ಸಾಹಿತ್ಯ ದೃಷ್ಟಿಯನ್ನು ನಾವು ಕಾಣಬಹುದು.

"ಹರೀಶ್ವರನು ಪಂಪಾವಿರೂಪಾಕ್ಷನ ಗುಡಿಯಲ್ಲಿ–ಗರ್ಭಗುಡಿಯ ಮುಂಭಾಗದಲ್ಲಿದ್ದ ತೆರೆಗೆ ಬೆಂಕಿ ಬಿದ್ದಾಗ-ಅದನ್ನು ತಾನು ಬಲ್ಲಾಳನ ಆಸ್ಥಾನದಲ್ಲಿ ಕುಳಿತುಕೊಂಡಿದ್ದ ಹಾಗೆಯೇ ತನ್ನ ಯೋಗಶಕ್ತಿಯಿಂದ ಆರಿಸಿದನು" ಎಂಬ ಪವಾಡ ನಡೆದಮೇಲೆ, ಆತನು ಪಂಪಾಕ್ಷೇತ್ರಕ್ಕೆ ರಾಜನ ಅಪೇಕ್ಷೆಯಂತೆ ಬಂದು ನಿಂತು ಸಾಹಿತ್ಯ ರಚನೆಯಲ್ಲಿ ತನ್ನ ಜೀವನವನ್ನು ಕಳೆದನು. ಆಕಾಲದಲ್ಲಿ ಅವನು ರಚಿಸಿದ "ಗಿರಿಜಾ ಕಲ್ಯಾಣ" ಆದಿ

ಕಾವ್ಯಗಳ ಕೀರ್ತಿಯು, ಕರ್ಣಾಟಕ, ಆಂಧ್ರ, ದ್ರಾವಿಡ ದೇಶಗಳಲ್ಲಿ ಹಬ್ಬಿತು. ಸಾಹಿತ್ಯಪ್ರಿಯರಾದ ರಸಿಕರು ಹಲವರು ಅವನ ದರ್ಶನಕ್ಕೆ ಪಂಪಾಕ್ಷೇತ್ರಕ್ಕೆ ಬರಹತ್ತಿರು. ಈ ಪ್ರಸಂಗದಲ್ಲಿ ಆಂಧ್ರದ ಓರ್ವ ಸಂಗೀತ-ಸಾಹಿತ್ಯ ವಿಶಾರದೆ ಸೌಂದರ್ಯ ನಿಧಿ ಎನಿಸಿದ ಗಣಿಕೆಯೊಬ್ಬಳು, ರಸಿಕಚಕ್ರಿ ಹರಿಹರನನ್ನು ನೋಡುವ ಮತ್ತು ಕೂಡುವ ಮನದಾಸೆಯಿಂದ ಹಂಪೆಗೆ ಪರಿವಾರ ಸಮೇತ ಬಂದಳು. ತನ್ನ ಇಷ್ಟಪೂರ್ತಿಗಾಗಿ ಪಂಪಾವಿರೂಪಾಕ್ಷನನ್ನು ಭಕ್ತಿಯಿಂದ ಅರ್ಚಿಸಿದಳು. ಪಂಪಾಕ್ಷೇತ್ರದ ಪ್ರಕೃತಿಸೌಂದರ್ಯ, ಕ್ಷೇತ್ರ ಮಾಹಾತ್ಮ್ಯ, ಪ್ರಶಾಂತ ವಾತಾವರಣ, ಪ್ರಸನ್ನತೆ ಇವುಗಳನ್ನು ಕಂಡು ಹರ್ಷಿಸಿದಳು. ಮಹಾಕವಿ ಹರೀಶ್ವರನು, ವಿರೂಪಾಕ್ಷದೇಗುಲದ ಹಿಂಭಾಗದ ಒಂದು ಆಶ್ರಮದಲ್ಲಿ ವಾಙ್ಮಯ ತಪಸ್ಸಿನಲ್ಲಿ ನಿರತನಾಗಿರುವನೆಂಬುದನ್ನು ದೇವಾಲಯದ ಪರಿಚಾರಕರಿಂದ ತಿಳಿದಳು. ಕತ್ತಲೆಯು ಲೋಕವನ್ನು ಮುತ್ತಿದ ರಾತ್ರಿಯ ಸಮಯದಲ್ಲಿ ತನ್ನ ಪ್ರಾಣಸಖಿಯೊಬ್ಬಳೊಡನೆ-ಶಿಥಿಲಕರ್ಮನು ಆಚಾರ್ಯನನ್ನು ಅರಸಿಕೊಂಡು ಬರುವಂತೆ-ಹರಿಹರನ ಆಶ್ರಮದ ಬಾಗಿಲಿಗೆ ಬಂದಳು. ಆಗ, ವಿಭೂತಿ, ರುದ್ರಾಕ್ಷಿ, ಕಾವಿಯಬಟ್ಟೆ ಇವುಗಳಿಂದ ಅಲಂಕೃತನಾಗಿ ಶಾಂತಿರಸದಮೂರ್ತಿಯಂತಿದ್ದ ಆ ಶಿವ ಕವೀಶ್ವರನನ್ನು ಸಂದರ್ಶಿಸಿದಳು. ಆತನ ಸಂದರ್ಶನ ಮಾತ್ರದಿಂದಲೇ ಅವಳಿಗೆ ಹರಿಹರನಲ್ಲಿ ಅಂಕುರವಾಗಿದ್ದ ಅನುರಕ್ತಿಯು ಭಕ್ತಿಯಾಯಿತು. ರತಿಯು ವಿರತಿಯಾಯಿತು. ಆಗ ವಸಂತನು ಭ್ರಾಂತನಾದನು. ಶಶಿಯು ಮಸಿಯಾದನು, ಮಲೆಯಮಾರುತನು ವನಪ್ರವೇಶ ಮಾಡಿದನು. ಇಂತಹ ಸನ್ನಿವೇಶದಲ್ಲಿ ಆ ಸುಂದರ ತರುಣಿಯು ಶಿವಯೋಗಿ ಹರೀಶ್ವರನಿಗೆ ಸಾಷ್ಟಾಂಗ ಮಾಡಿ, ತನ್ನ ಸುಮಧುರಕಂಠದಿಂದ ಆ ಕಬ್ಬಿಗರೆರೆಯನನ್ನು ಬಣ್ಣಿಸ ತೊಡಗಿದಳು. ಆಗ ಅಂತರ್ಮುಖನಾಗಿದ್ದ ಹರಿಹರನು ಬಹಿರ್ಮುಖನಾದನು. ಅನಿರೀಕ್ಷಿತ ಆಗುಂತುಕ ತರುಣಿಯಾದ ಅವಳನ್ನು ಕುರಿತು ಅಚ್ಚರಿಗೊಂಡು ಪ್ರಶ್ನಿಸಿದನು.

ಹರೀಶ್ವರ :- ಎಲೌ, ಕಲಾಸುಂದರಿ, ನೀನಾರು ? ನೀನು ಈ ಅರ್ಧ ರಾತ್ರಿಯ ಸಮಯದಲ್ಲಿ ನನ್ನ ಆಶ್ರಮಕ್ಕೆ ಬರಲು ಕಾರಣವೇನು ? ನಿನ್ನ ಮನದ ಬಯಕೆಯಾದರೂ ಏನು ? ನಿಚ್ಚಳವಾಗಿ ತಿಳಿಸು.

ಆಂಧ್ರದ ತರುಣಿ :- ಎಲೈ ಮಹಾಕವಿಯೆ, ನಿನ್ನ ಗಿರಿಜಾ ಕಲ್ಯಾಣ, ನಂಬಿಯಣ್ಣನ ರಗಳೆ ಮೊದಲಾದ ಮಹಾಕಾವ್ಯಗಳನ್ನು ಓದಿ, ಮನಸೋತು ನಿನ್ನನ್ನು ಕಣ್ಣಾರೆ ನೋಡಿ ಕೂಡಬೇಕೆಂದು ಇಲ್ಲಿಗೆ ಬಂದೆನು. ಆದರೆ ನಿನ್ನ ಸಂದರ್ಶನ ಮಾತ್ರದಿಂದ ನನ್ನ ಮನೋಧರ್ಮವು ಬದಲಾಯಿತು.

ಹರೀಶ್ವರ :- (ಹರ, ಹರಾ, ಎಂದು ಕಿವಿಗಳನ್ನು ಮುಚ್ಚಿ ಕೊಂಡು) ಎಲಗೆ ಆಂಧ್ರ ಸೋದರಿ ? "ಹೆಣ್ಣಿಗೆ ಹೆಣ್ಣು ಮೆಚ್ಚಿಗೊಂಡುದುಂಟೆ ? ನಾನು ಶರಣಪೆಣ್ಣಾಗಿ, ನೊಸಲಗಣ್ಣನಾದ ಶಿವನಿಗೆ ಗಂಡುದೊತ್ತಾಗಿರು ವೆನು. ನೀನಿಂತು ನಿಲುಕದ ವಸ್ತುವಿಗೆ ಬಯಸಿ ಬರುವುದೇ ತಾಯಿ ? ಮರಳಿ ನಿನ್ನೆಡೆಗೆ ಹೋಗು, ನಿನ್ನುಳಿದ ಆಯುಷ್ಯವನ್ನೂ ಸಂಪತ್ತಿಯನ್ನೂ ಪರಶಿವನ ಸೇವೆಗೆ ವೆಚ್ಚಮಾಡು. ಬಡವರ ಸೇವೆಮಾಡು. ಅದರಿಂದ ನಿನಗೆ ಜೀವನ ಸಾಫಲ್ಯವಾಗುವುದು.

ಆಂಧ್ರದ ತರುಣಿ :- ಎಲೈ ಶಿವಯೋಗಿಯೆ, ನಿನ್ನ ಸಂದರ್ಶನ ಮಾತ್ರ ದಿಂದ ನಾನು ವಿರತಿಮಾರ್ಗಕ್ಕೆ ಶರಣಾಗಿದ್ದೇನೆ. ಪಶುಪತಿಗೆ ನೀನು ಗಂಡುತೊತ್ತಾಗಿದ್ದರೆ, ಶರಣಪೆಣ್ಣಾದ ನಿನಗೆ ನಾನು ಸೇವಕಳಾಗಿರು ವೆನು. ನೀವು ನನಗೆ ದೀಕ್ಷಾಗುರುವಾಗಿ ನನ್ನನ್ನು ಲಿಂಗಸಂಗಿಯನ್ನಾಗಿ ಮಾಡಿರಿ. ಮತ್ತೆ ನಾನು ತೆಲುಗುನಾಡಿಗೆ ಹಿಂತಿರುಗುವುದಿಲ್ಲ. ಕರು ನಾಡಿನ ಸ್ನೆಹಿನ ಬೀಡಾದ ಪಂಪಿನ ಹಂಪೆಯಲ್ಲಿಯೇ ಇದ್ದು, ನನ್ನ ಉಳಿದ ಆಯುಷ್ಯವನ್ನು ಹರ ವಿರೂಪಾಕ್ಷನ, ಗುರು ಹರೀಶ್ವರನ ಸೇವೆ ಯಲ್ಲಿಯೇ ಕಳೆಯುವೆನು ಎಂದಳು. ಸತ್ಪುರುಷರ ಸಂದರ್ಶನವು ಮೋಕ್ಷ ಪ್ರದಾಯಕ ಎಂಬುದಕ್ಕೆ ಈ ಘಟನೆ ಒಂದು ಸುಂದರ ಸಾಕ್ಷಿಯಾಗಿದೆ. ಕರುಣಾಳು ಹರೀಶ್ವರನು ಆಕೆಯನ್ನು ಶಿಷ್ಯಳನ್ನಾಗಿ ಸ್ವೀಕರಿಸಿ ಅವಳಿಗೆ ಶಿವದೀಕ್ಷೆಯನ್ನು ಕೊಟ್ಟು ಲಿಂಗವಂತಳನ್ನು ಮಾಡಿ ಅನುಗ್ರಹಿಸಿದನು.

"ಕಾಮಾತುರಾಣಾಂ ನಭಯಂ ನಲಜ್ಜಾ" "ಕಾಮಿ ತನ್ನ ಕೇಡಂ ನೋಡಂ" "ಕಾಮಿಗಳ್ ಕಣ್‌ಕಾಣರೆಂಬುವೇನಾಶ್ಚರ್ಯಮೆ" ಇತ್ಯಾದಿ

ಪ್ರಾಚೀನ ಕವಿವಾಕ್ಯಗಳನ್ನು, ಕಾಮಾಂಧಳಾಗಿ ಹಂಪೆಗೆ ಬಂದ ಆಂಧ್ರ ಸುಂದರಿಯ ಕಥೆಯು ನಮ್ಮ ನೆನಪಿಗೆ ತರುತ್ತದೆಯಲ್ಲವೆ ?

ಸ್ವಾಮಿ ವಿವೇಕಾನಂದರು ಅಮೆರಿಕಾಕ್ಕೆ ಹೋಗಿದ್ದ ಕಾಲದಲ್ಲಿ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ, ಅವರ ಪಾಂಡಿತ್ಯ, ಪ್ರತಿಭೆಗಳನ್ನೂ ಪೂಜ್ಯರಾದ ಅವರ ದಿವ್ಯ ಭವ್ಯ ವ್ಯಕ್ತಿತ್ವವನ್ನೂ, ಅವರ ಸೌಂದರ್ಯ ಗಾಂಭೀರ್ಯಗಳನ್ನೂ ಕಂಡು ಅಮೆರಿಕಾದ ತರುಣಿಯೋರ್ವಳು ಮೆಚ್ಚಿ, ಒಂದು ದಿನ ಅವರಿದ್ದ ಹೋಟಲಿನ ಕೋಣೆಯೊಳಕ್ಕೆ ಬಂದು ಅವರನ್ನು ಸಂದರ್ಶಿಸಿ "ಸ್ವಾಮಿಗಳೆ, ನೀವು ಒಪ್ಪುವುದಾದರೆ, ನಾನು ನಿಮ್ಮನ್ನು ಲಗ್ನ ಮಾಡಿಕೊಳ್ಳಲು ಬಂದಿದ್ದೇನೆ" ಎಂದು ಕೇಳಿದಳಂತೆ. ಆಗ ಸ್ವಾಮಿಗಳು ಅವಳ ಬೇಡಿಕೆಯನ್ನು ಕೇಳಿ ನಸುನಕ್ಕರಂತೆ. "ತಂಗಿ ಈ ನಿನ್ನ ವಿವಾಹದ ಸಾಹಸದಲ್ಲಿ ನಿನ್ನ ಉನ್ನತವಾದ ಮನದಾಶೆಯೇನು"? ಎಂದು ಕೇಳಿದರಂತೆ. ಆಗ ಆ ಅಮೆರಿಕೆಯ ತರುಣಿ, "ನಿಮ್ಮನ್ನು ಲಗ್ನವಾದರೆ ನನ್ನ ಹೊಟ್ಟೆಯಲ್ಲಿ ನಿಮ್ಮಂತೆಯೇ ಸುಂದರನೂ ಪ್ರತಿಭಾನ್ವಿತನೂ ಆದ ಮಗನು ಹುಟ್ಟುವನು. ಅವನಿಂದ ಪ್ರಪಂಚಕ್ಕೆ ಒಳ್ಳಿತಾಗುವುದು. ನನಗೆ ಮಿಗಿಲಾದ ಕೀರ್ತಿಗೌರವಗಳು ಪ್ರಾಪ್ತವಾಗುವುವು'' ಎಂದಳಂತೆ, ಆಗ ಸ್ವಾಮಿಗಳು, "ಹಾಗಾದರೆ, ನನ್ನನ್ನೇ ನಿನ್ನ ಮಗನನ್ನಾಗಿ ಸ್ವೀಕರಿಸು. ನಾನು ನಿನ್ನ ಮಗನೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇನೆ. ನನ್ನ ದೃಷ್ಟಿಯಲ್ಲಿ ನೀನು ಮಹಾಮಾತೆ ಶಾರದಾದೇವಿ. ಇದರಿಂದ ನಿನಗೆ ವಿವಾಹದ ಶ್ರಮ ತಪ್ಪುತ್ತದೆ. ಪುತ್ರ ಪ್ರಾಪ್ತಿಯ ಸಂತೋಷ ಲಭಿಸುತ್ತದೆ. ನನಗೂ ನಿನ್ನಂತಹ ಒಬ್ಬ ಒಳ್ಳೆಯ ತಾಯಿ ಸಿಕ್ಕಿದಳೆಂದು ಸಂತೋಷವಾಗುತ್ತದೆ" ಎಂದರಂತೆ, ಆಗ ಸ್ವಾಮಿಗಳ ಈ ಧೀರೋದಾತ್ತ ವಾಕ್ಯಗಳನ್ನು ಕೇಳಿ ಅಮೆರಿಕದ ತರುಣಿ ಅಚ್ಚರಿಗೊಂಡು, ಸ್ವಾಮಿಗಳಿಗೆ ನಮಸ್ಕರಿಸಿ ಹೊರಟು ಹೋದಳಂತೆ. ಭಾರತದ ಸಂನ್ಯಾಸಿಗಳ ದಿಟ್ಟ ಮನೋಭಾವಕ್ಕೆ, ವಿಶ್ವಪ್ರೇಮಕ್ಕೆ ಅಚ್ಚರಿಪಟ್ಟಳಂತೆ.

ಒಮ್ಮೆ ಶಿವಾಜಿ ಮಹಾರಾಜನಿಗೆ ಅವನ ದಂಡನಾಯಕನೊಬ್ಬನು ತನ್ನ ದಿಗ್ವಿಜಯಕಾಲದಲ್ಲಿ ಲಭಿಸಿದ ಸುಂದರ ತರುಣಿ

ಯೊಬ್ಬಳನ್ನು ಕಾಣಿಕೆಯಾಗಿ ತಂದು ಒಪ್ಪಿಸಿದನಂತೆ. ಆಗ ಸತ್ಪುರುಷನಾದ ಶಿವಾಜಿಯು ಬಂದಿಯಾದ ಆ ಹೆಂಗುಸನ್ನು ನೋಡಿ, "ಅಮ್ಮಾ, ನನ್ನ ಸೈನಿಕರು ಮಾಡಿದ ತಪ್ಪನ್ನು ಕ್ಷಮಿಸು, ನಿನ್ನನ್ನು ಸುರಕ್ಷಿತವಾಗಿ ನಿನ್ನ ಮನೆಗೆ ಕಳಿಸುತ್ತೇನೆ. ನೀನು ಭಯಪಡಬೇಡ. ಕಣ್ಣೀರು ಸುರಿಸಬೇಡ, ನಾನು ಮಹಾಸಾಧ್ವಿ ಜೀಜೀಬಾಯಿಯ ಮಗನು. ಪರನಾರೀಸಹೋದರನು, ಹಾಗೂ ಭವಾನಿಯ ಭಕ್ತನು. ಮುಂದಿನ ಜನ್ಮದಲ್ಲಿ ನಾನು ನಿನ್ನ ಮಗನಾಗಿ ಹುಟ್ಟಲು ಬಯಸುತ್ತೇನೆ" ಎಂದು ಹೇಳಿ ಆಕೆಯನ್ನು ಅವಳ ಗಂಡನ ಮನೆಗೆ ಸುರಕ್ಷಿತವಾಗಿ ಹಿಂತಿರುಗಿಸಿದನಂತೆ. ಈ ಮೇಲಿನ ವಿವೇಕಾನಂದ ಮತ್ತು ಶಿವಾಜಿಯ – ಕಥೆಗಳು ಹೇಗೆ ಉತ್ತಮರಾದವರ ನಡತೆಗೆ ನಿದರ್ಶನವಾಗಿವೆಯೋ ಹಾಗೆಯೇ ನಮ್ಮ ಕರ್ನಾಟಕದ ಮಹಾಪುರುಷನಾದ ಕವಿ ಚಕ್ರವರ್ತಿ ಹರಿಹರನ ಪೂರ್ವೋಕ್ತಕಥೆಯೂ ಕೂಡ –ಇತಿಹಾಸಕಾರರು ಹೇಳಬಹುದಾದ ಒಳ್ಳೆಯ ಆದರ್ಶಕ್ಕೆ ಸಾಕ್ಷಿಯಾಗಿದೆ. ಹೆಣ್ಣು, ಹೊನ್ನು, ಮಣ್ಣುಗಳ ಆಸೆಯನ್ನು ತೊರೆದವನೇ ನಿಜವಾದ ಸಂನ್ಯಾಸಿಯು, ಅದಲ್ಲದವನು ಬಿಕನಾಸಿಯು ಎಂಬುದು ಲೋಕವಾಣಿ.

ಶಿವಶರಣರು ಸ್ತ್ರೀಯರ ಬಗೆಗೆ ಒಳ್ಳೆಯ ಗೌರವವಿತ್ತಿದ್ದಾರೆ. 'ಪರವನಿತೆಯನು ಮಹಾದೇವಿ' ಎಂದು ಕರೆದಿದ್ದಾರೆ. ಶರಣರ ಅನುಯಾಯಿಗಳಾದ ಹರೀಶ್ವರಾದಿ ಕವಿಗಳು ಆ ದಿವ್ಯಮಾರ್ಗವನ್ನೇ ಅನುಸರಿಸಿದ್ದಾರೆ. ಹರಿಹರ–ರಾಘವಾಂಕ, ಮಗ್ಗೆಯ ಮಾಯಿದೇವ, ಚಾಮರಸ, ಷಡಕ್ಷರದೇವ ಮೊದಲಾದ ವೀರಶೈವಕವಿಗಳು ಹಾಗೂ ಶಿವಯೋಗಿಗಳು ಬ್ರಹ್ಮಚಾರಿಗಳಾಗಿದ್ದರೆಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

ಹರಿಹರನ ಗಿರಿಜಾ ಕಲ್ಯಾಣದ ಕೆಲವು ಪದ್ಯಗಳನ್ನು ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ'ದಲ್ಲಿಯೂ (ಕ್ರಿ. ಶ. ೧೨೪೫) ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೂ ಕಾಣಬಹುದು (೧೨೬೦) (ಸಂ)

ಷಡಕ್ಷರ ದೇವರು ಕಾವ್ಯಬರೆದುದು

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ಪ್ರಸಿದ್ಧರಾದ ಕವಿಗಳಲ್ಲಿ, ಎಳಂದೂರಿನ ಷಡಕ್ಷರದೇವನೊಬ್ಬನು. ಇವನು, ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲಿಯೂ ಉದ್ದಾಮ ಪಂಡಿತನು. ಈತನ ಕಾಲ ಸುಮಾರು ಕ್ರಿ. ಶ. ೧೬೫೫. ಇವನು ಹುಟ್ಟಿ ಬಳೆದುದು, ಮಂಡ್ಯಜಿಲ್ಲಾ ಮಳವಳ್ಳಿ ತಾಲೂಕು ಧನುಗೂರು. ಅಲ್ಲಿನ ವೀರಶೈವ ಮಠಕ್ಕೆ ಅಧ್ಯಕ್ಷನಾಗಿದ್ದನು. ಇವನ ಗುರು ಚಿಕ್ಕವೀರದೇಶಿಕ. ಇವರು ಶ್ರೀ ರೇಣುಕಾಚಾರ್ಯರ ಹಿರಿಯ ಗುರುಪರಂಪರೆಗೆ ಸೇರಿದವರು.

ಷಡಕ್ಷರ ದೇವನು ಪ್ರಬುದ್ಧನಾದಮೇಲೆ ಮೈಸೂರು ಜಿಲ್ಲಾ ಎಳಂದೂರು ಮುದ್ದುರಾಜನ ಗುರುವಾಗಿದ್ದನು. ಎಳಂದೂರಿನಲ್ಲಿ ಈತನ ಮಠವಿರುವ ಸ್ಥಳವನ್ನೂ, ಈ ಕವಿಯ ಸಮಾಧಿಯನ್ನೂ ನಾವು ಈಗಲೂ ನೋಡಬಹುದು. ಅದನ್ನು **'ಧನುಗೂರುದೇವರ ಮಠ'** ಎಂದು ಕರೆಯುತ್ತಾರೆ. ಪವಿತ್ರವಾದ ಈ ಮಠದ ಪ್ರದೇಶವು ಈಗ ವಿಶಿಷ್ಟವರ್ಗದವರ ಸ್ಮಶಾನಭೂಮಿಯಾಗಿದೆ ಎಂಬ ವಿಷಯವು ಕಣ್ಣೀರಿಡುವ ಸಂಗತಿ. ಇಂತಹ ಮಹಾಪುಣ್ಯ ಪ್ರದೇಶಗಳನ್ನು ರಾಷ್ಟ್ರೀಯ ಸ್ಮಾರಕವಾಗಿ ಪರಿರಕ್ಷಿಸಬೇಕಾದುದು ಸರ್ಕಾರ ಮತ್ತು ಸಾರ್ವಜನಿಕರ ಕರ್ತವ್ಯವಾಗಿದೆ. ಈ ಕವಿಯು ಕನ್ನಡದಲ್ಲಿ ರಾಜಶೇಖರ ವಿಳಾಸ (೧೬೬೫) ಬಸವರಾಜ ವಿಜಯ (೧೬೭೭) ಮತ್ತು ಶಬರಶಂಕರ ವಿಳಾಸ ಎಂಬ ಮೂರು ಮಹಾ ಕಾವ್ಯಗಳನ್ನು ಬರೆದಿದ್ದಾನೆ. ಈ ಮೂರೂ ಗ್ರಂಥಗಳು ಸುಪ್ರೌಢವೂ, ಸುಮನೋಹರವೂ ಆದ ಚಂಪೂಶೈಲಿಯಲ್ಲಿ ರಚನೆಯಾಗಿವೆ. ಷಡಕ್ಷರನು ರಾಜಶೇಖರ ವಿಳಾಸ, ಬಸವರಾಜ ವಿಜಯ, ಕವಿಕರ್ಣ ರಸಾಯನಮ್, ಶಬರ ಶಂಕರ ವಿಳಾಸಂ, ಶಿವಾಧಿಕ್ಯ, ಭಕ್ತಾಧಿಕ್ಯ, ಸಂಸ್ಕೃತಸ್ತೋತ್ರಗಳನ್ನು ಕ್ರಮವಾಗಿ ಬರೆದನು. ಷಡಕ್ಷರದೇವನು ಕವಿವರ್ಯರಾದ, ಮಲ್ಹಣ, ಭೋಜ, ಹರೀಶ್ವರ, ರಾಘವಾಂಕ, ಪದ್ಮರಸ, ಕೊಂಡಗುಳಿ ಕೇಶಿರಾಜ, ಪಾಲ್ಕುರಿಕೆ ಸೋಮನಾಥ, ಮಗ್ಗೆಯ ಮಾಯಿದೇವ, ಜಕ್ಕಣಾರ್ಯ, ನಿಜಗುಣಾರ್ಯ, ತೋಂಟ

ದಾರ್ಯ, ಮಲ್ಲಣಾರ್ಯ ಮೊದಲಾದ ಪ್ರಾಚೀನಕವಿಗಳನ್ನು ತನ್ನಕಾವ್ಯ ದಲ್ಲಿ ಸ್ಮರಿಸಿದ್ದಾನೆ. ಇವನಿಗೆ ೧೨ ನೆಯ ವರ್ಷದಲ್ಲಿಯೇ ಕವಿತಾಶಕ್ತಿ ಬಂದಿತೆಂದು ತಿಳಿದುಬಂದಿದೆ. ಇವನಿಗೆ ಸರಸಜನ ಮಾನಿತ, ಉಭಯ ವಿತಾ ವಿಶಾರದ, ಕವಿ ಶಾರ್ದೂಲ ಮೊದಲಾದ ಬಿರುದುಗಳಿವೆ.

ಷಡಕ್ಷರ ದೇವನು ಬದುಕಿದ್ದ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಪ್ರಬಲ ನಾದ ಚಿಕ್ಕದೇವರಾಜನು ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದನು. ಅವನ ಆಸ್ಥಾನದಲ್ಲಿ ತಿರುಮಲಾರ್ಯ, ಸಂಚಿ ಹೊನ್ನಮ್ಮ, ಸಿಂಗಳಾರ್ಯ, ಚಿಕ್ಕು ಪಾಧ್ಯಾಯ ಕವಿಗಳಿದ್ದರು. ಕೆಳದಿಯ ರಾಜ್ಯದಲ್ಲಿ ಹಿರಿಯ ಸೋಮ ಶೇಖರರಾಜ, ಅನಂತರ ರಾಣಿ ಚೆನ್ನಮ್ಮಾಜಿ ಬಿದನೂರಿನಲ್ಲಿ ಆಳುತ್ತಿದ್ದರು. ಈ ಕೆಳದಿಯ ರಾಜರ ಕಾಲದಲ್ಲಿ ಕವಿ ಷಡಕ್ಷರದೇವನು, ಒಮ್ಮೆ ಕೆಳದಿಗೆ ಹೋಗಿಬಂದಿರಬೇಕೆಂದು 'ವೀರಭದ್ರೋದಾಹರಣಗದ್ಯ' ಎಂಬ ಗ್ರಂಥದಿಂದ ತಿಳಿಯಬಹುದಾಗಿದೆ. ಷಡಕ್ಷರ ದೇವನು ವೀರಭದ್ರನ ಭಕ್ತನು. ಪರ ಶಿವನ ಅಪರಾವತಾರಿಯು ಈ ವೀರಭದ್ರನು.

ಷಡಕ್ಷರ ದೇವನು ಸಂಸ್ಕೃತದಲ್ಲಿ "ಕವಿಕರ್ಣ ರಸಾಯನಂ" ಎಂಬ ಮಹಾ ಕಾವ್ಯವನ್ನೂ, 'ಶಿವಸ್ತವ ಮಂಜರಿ' ಎಂಬ ಶತಕವನ್ನೂ, ವೀರಭದ್ರೋದಾಹ ರಣಗದ್ಯಂ, ವೀರಭದ್ರದಂಡಕಂ, ಸಿದ್ಧಲಿಂಗಸ್ತವನಂ, ನಮಃಶಿವಾಯಾ ಷ್ಟಕಂ, ಶಿವಸ್ತೋತ್ರಸುಮಂಗಲಿ, ಇಂದುಧರ ಸ್ತೋತ್ರಂ, ಇಷ್ಟಲಿಂಗಾಷ್ಟಕಂ, ನೀಲಾಂಬಿಕಾಸ್ತೋತ್ರಂ, ತತ್ತ್ವತ್ರಯ ಸ್ತೋತ್ರಂ, ನೀಲಾಂಬಿಕಾಸ್ತವಂ, ಮಂಗಲಾಷ್ಟಕಂ, ಷಡಕ್ಷರ ಮಂಗಲಾಷ್ಟಕಂ, ಭಕ್ತಾಧಿಕ್ಯ, ಶಿವಾಧಿಕ್ಯ ಗ್ರಂಥಗಳನ್ನೂ ರಚಿಸಿರುತ್ತಾನೆ. ಇವನ ಸಂಸ್ಕೃತಗ್ರಂಥಗಳನ್ನು ಓದಿನೋಡಿ ದರೆ, ಈತನಿಗೆ ಕನ್ನಡದಂತೆಯೇ ಸಂಸ್ಕೃತದಲ್ಲಿಯೂ ಉದ್ದಾಮ ಪಾಂಡಿತ್ಯ ವಿತ್ತೆಂಬುದು ಸ್ಪಷ್ಟವಾಗುತ್ತದೆ.

ಈತನ ಕಾವ್ಯಗಳಲ್ಲಿ 'ಶಿವಲಿಂಗ' ಎಂಬ ಅಂಕಿತವಿದೆ. ಕವಿಯ ಜನ್ಮ ಸ್ಥಳವಾದ ಧನುಗೂರಿನಲ್ಲಿ, ಇವನ ಮಠದ ಆವರಣದಲ್ಲಿ 'ಶಿವ ಲಿಂಗೇಶ್ವರ' ಎಂಬ ಒಂದು ದೇವಾಲಯವಿತ್ತೆಂದು ಹೇಳುತ್ತಾರೆ. ಈಗಲೂ ಅಲ್ಲಿ ಆ ಹೆಸರಿನ ಒಂದು ಶಿವಲಿಂಗವನ್ನು ನಾವು ನೋಡಬಹುದು. ಷಡ

ಕ್ಷರದೇವನ ಗ್ರಂಥಗಳನ್ನು ಪರಾಂಬರಿಸಿದರೆ, ಇವನು, ಕಾಶಿ, ರಾಮೇಶ್ವರ, ಕೇದಾರ, ಶ್ರೀಶೈಲ, ಪಂಪಾ, ಮತ್ತು ಗೋಕರ್ಣ ಮುಂತಾದ ಸ್ಥಳಗಳನ್ನು ಸಂದರ್ಶಿಸಿರಬೇಕೆಂದೂ, ದಕ್ಷಿಣ ಮತ್ತು ಪಶ್ಚಿಮ ಸಮುದ್ರಗಳನ್ನು ನೋಡಿರಬಹುದೆಂದೂ ತರ್ಕಿಸಬಹು.

ಷಡಕ್ಷರದೇವನ ರಾಜಶೇಖರ ವಿಳಾಸ, ಶಬರ ಶಂಕರ ವಿಳಾಸ ಮತ್ತು ಬಸವರಾಜ ವಿಜಯ ಗ್ರಂಥಗಳಿಗೂ, "ಕವಿಕರ್ಣ ರಸಾಯನಮ್" ಎಂಬ ಸಂಸ್ಕೃತ ಗ್ರಂಥಕ್ಕೂ ಹಲವುಮಂದಿ ವಿದ್ವಾಂಸರು ಟೀಕೆ-ಟಿಪ್ಪಣಿ ಬರೆದಿರುವಂತೆ ತಿಳಿದು ಬಂದಿದೆ. ಸುಮಾರು ೨೦ ಮಂದಿ ಟೀಕಾಕಾರರು ಈಗ ನಮ್ಮ ಗಮನಕ್ಕೆ ಬಂದಿರುತ್ತಾರೆ. ಈತನನ್ನು ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರೀ, ಕೊಟ್ಟೂರು ಬಸವಲಿಂಗ, ಕವಿ ಮುದ್ದಣ, ಕವಿ ಶಿವಲಿಂಗ ತನಯ, ಕವಿ ಸಂಗಮವಿಭು ಮೊದಲಾದ ಆಧುನಿಕ ಕವಿಗಳು ತಮ್ಮ ಕಾವ್ಯಗಳಲ್ಲಿ ಸ್ಮರಿಸಿದ್ದಾರೆ. ಇವನ ಕಾಲದಿಂದೀಚೆಗೆ ಕನ್ನಡದಲ್ಲಿ ಕಾವ್ಯಗಳನ್ನು ರಚಿಸಿದವರೆಲ್ಲರೂ ಇವನ ಪ್ರಭಾವಮುದ್ರೆಗೆ ಒಳಗಾಗಿದ್ದಾರೆಂದು ಹೇಳಬಹುದು. ಎಳಂದೂರು ಗೌರೀಶ್ವರ ದೇವಾಲಯದಲ್ಲಿರುವ ಶಿಲಾಶಾಸನವು ಈ ಕವಿಯಿಂದಲೇ ರಚಿಸಲ್ಪಟ್ಟಿರಬೇಕು ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಪ್ರಕೃತ ನಾವು ಬರೆಯುತ್ತಿರುವ ಲೇಖನವು ಇವನ ಕವಿಕಾವ್ಯ ವಿಮರ್ಶೆಯನ್ನು ಕುರಿತಾದುದಲ್ಲ. ಇವನ ಪ್ರಸಂಗೋಚಿತ ಬುದ್ಧಿ, ಶಕ್ತಿ, ಸಾಮರ್ಥ್ಯವನ್ನು ಕುರಿತಾದುದು. ಹಾಗೂ ಇವನ ಕವಿತಾವೇಶ, ಸ್ಥಾನ ಮಾನಗಳನ್ನು ಕುರಿತಾದುದು.

ಒಂದುದಿನ ಎಳಂದೂರಿನ ರಾಜಬೀದಿಗಳಲ್ಲಿ ಆನೆಯಮೇಲೆ ಅಂಬಾರಿಯಲ್ಲಿ ನೇಮಿಚಂದ್ರನ 'ಲೀಲಾವತಿ'ಯನ್ನಿಟ್ಟು - ಆನೆಯ ಹೊಟ್ಟೆಯ ಕೆಳಗೆ ಒಂದು ಬೆಳ್ಳಿಯ ತೊಟ್ಟಿಲನ್ನು ಕಟ್ಟಿ-ಪ್ರತಿವಾದಿಗಳು-ಆ ಕಾವ್ಯದ ಉತ್ಸವ ನಡೆಸಿದರು. ಮೆರೆವಣಿಗೆಯು ಕವಿಯ ಮಠದಮುಂದೆ ಬಂದಾಗ, ಶಿಷ್ಯರಮುಖದಿಂದ ಪರಿಸ್ಥಿತಿಯನ್ನು ತಿಳಿದ ಷಡಕ್ಷರ ದೇವನು, ಮೆರೆವಣಿಗೆಯು ತನ್ನ ಮಠದ ಮುಂದೆ ಬರಕೂಡದೆಂದು ತಡೆಸಿದನು. ಆಗ ಎರಡೂ ಪಕ್ಷದ ಜನಗಳು ದೊಡ್ಡಗುಂಪಾಗಿ ಸೇರಿದರು. ಈ ಗಡಿಬಿಡಿಯ

ದೂರು ಅರಸ ಮುದ್ದುರಾಜನವರೆಗೂ ಹೋಯಿತು. ಮುದ್ದುರಾಜನು ಷಡಕ್ಷರದೇವನನ್ನು ಅರಮನೆಗೆ ಕರೆಸಿ ಉತ್ಸವ ತಡೆಯಲು ಕಾರಣಕೇಳಿದನು. "ಈ ಲೀಲಾವತಿಗಿಂತಲೂ ಮಿಗಿಲಾದ ಕಾವ್ಯವು ನಮ್ಮ ಕಾಶಿಯ ಜಂಗಮವಾಡಿ ಮಠದಲ್ಲಿದೆ. ಪ್ರಭುಗಳು ನನಗೆ ಒಂದು ವರ್ಷ ಕಾಲಾವಕಾಶ ಕೊಟ್ಟರೆ ಆ ರಸವತ್ಕಾವ್ಯವನ್ನು ಇಲ್ಲಿಗೆ ತರಿಸುತ್ತೇನೆ. ವಿದ್ವಾಂಸರ ಮುಂದೆ ಇಡುತ್ತೇನೆ. ಆಗ ಪಂಡಿತರು ಎರಡೂ ಗ್ರಂಥಗಳನ್ನು ಪರೀಕ್ಷಿಸಿ ತೀರ್ಮಾನವೀಯಲಿ, ನಮ್ಮ ಗ್ರಂಥಕ್ಕಿಂತ ಲೀಲಾವತಿ ಮಿಗಿಲಾದರೆ ನಾವೇ ಈ ಉತ್ಸವವನ್ನು ಮುಂದುವರಿಸುತ್ತೇವೆ. ಇಲ್ಲವಾದರೆ ಉತ್ಸವವು ತಡೆಯಲಿ. ಶ್ರೇಷ್ಠಕಾವ್ಯಕ್ಕೆ ಮನ್ನಣೆಯಾಗುವುದು ನ್ಯಾಯ" ಎಂದು ಹೇಳಿದನು. ಆಗ ರಾಜನು ಈ ಕರಾರನ್ನು ನೀವು ಒಪ್ಪಿಕೊಳ್ಳಬೇಕು. ಉತ್ಕೃಷ್ಟವಾದ ಕೃತಿ ಮಾತ್ರ ಮೆರೆವಣಿಗೆಗೆ ಅರ್ಹವಾದುದು ಎಂಬ ಕವಿಯ ಮಾತು ನ್ಯಾಯವಾಗಿದೆ ಎಂದು ಹೇಳಿದನು.

ಆಗ ಷಡಕ್ಷರದೇವನು ಮಹಾರಾಜರನ್ನು ಕುರಿತು, ಪ್ರಭುವರ್ಯರೆ, ಇದು ಕಾವ್ಯಕ್ಕೆ ಗೌರವಕೊಡಲು ಮಾಡಿದ ಮೆರೆವಣಿಗೆ ಮಾತ್ರವಲ್ಲ. ಆನೆಯ ಹೊಟ್ಟೆಗೆ ತೊಟ್ಟಿಲನ್ನು ಕಟ್ಟಿರುವುದು-'ಲೀಲಾವತಿಯಲ್ಲಿರುವ ಕಾವ್ಯರಸವು ನೆಲಕ್ಕೆ ಸೋರದಂತೆ ಇರಲಿ' ಎಂಬ ಕುತ್ಸಿತವಾಗಿದೆ. ಇದು ಮಹಾಕಾವ್ಯ ಕರ್ತೃಗಳಾದ ನಮಗೆ ಪ್ರತ್ಯಕ್ಷ ಅಪಮಾನ. ನಮ್ಮ ಕಾವ್ಯವು ಕಾಶಿಯಿಂದ ಬಂದ ಮೇಲೆ ಪ್ರಭುಗಳೇ ವಿದ್ವತ್‌ಸಭೆಯನ್ನು ಕರೆಸಿ, ಇದರ ತೀರ್ಮಾನಮಾಡಬೇಕೆಂದು ಬಿನ್ನವಿಸುವೆನು ಎಂದನು. ಆಗ ರಾಜನು ಕವಿಯ ವಾದವನ್ನು ಒಪ್ಪಿಕೊಂಡು ಮೆರೆವಣಿಗೆಯು ಹಿಂತಿರುಗುವಂತೆ ಅಪ್ಪಣೆ ಮಾಡಿದನು. ಪ್ರತಿವಾದಿಗಳು ರಾಜಾಜ್ಞೆಗೆ ವಿಧಿಯಿಲ್ಲದೆ ತಲೆಬಾಗಿದರು. ಷಡಕ್ಷರ ದೇವನ ಶಕ್ತಿಗೆ ಬೆರಗಾದರು.

ಅಂದಿನಿಂದ ಒಂದು ವರ್ಷದೊಳಗಾಗಿ ಕವಿ ಷಡಕ್ಷರನು 'ರಾಜಶೇಖರ ವಿಳಾಸ'ವನ್ನು ಬರೆದು ಮುಗಿಸಿದನು. ರಾಜಶೇಖರ ವಿಳಾಸದಲ್ಲಿ ೧೪ ಆಶ್ವಾಸಗಳೂ ೧೪೮೯ ಪದ್ಯಗಳೂ ಇವೆ ಅಲ್ಲದೆ, ರಗಳೆ, ತ್ರಿವಿಧಿ, ವಚನ ಸಾಹಿತ್ಯ ಪ್ರಭೇದಗಳು ತುಂಬಿವೆ. ಇದು ಕನ್ನಡ ಕಾವ್ಯಗಳಲ್ಲಿ 'ಸರಸ್ವತಿಯ

ಸೀಮಂತರತ್ನ' ಎಂಬಂತಿದೆ ಎಂದು ಕವಿ ಕರೆದಿದ್ದಾನೆ. ಕನ್ನಡ ಸಾಹಿತ್ಯ ವನ್ನು ಚೆನ್ನಾಗಿ ಅವಲೋಕನ ಮಾಡಿದ ವಿದ್ವಾಂಸರು ಕವಿಯ ಈ ಮಾತನ್ನು ಸಂತೋಷವಾಗಿ ಒಪ್ಪಿಕೊಂಡಿದ್ದಾರೆ. ಈ ರಾಜಶೇಖರ ವಿಳಾಸವನ್ನು ಕುರಿತು ಕರ್ಣಾಟಕ ಭಾಷಾರತ್ನಂ ಕೈ|| ಪಿ. ಆರ್. ಕರಿಬಸವ ಶಾಸ್ತ್ರಿಗಳು "ರಾಜಶೇಖರ ವಿಳಾಸದಲ್ಲಿನ ಕೆಲವು ಪದ್ಯಗಳು ಪ್ರಾಚೀನಗಳಾದ ಉದ್ಧಾಮ ಗ್ರಂಥಗಳ ಪದ್ಯಗಳಿಗೆ ಸಮಾನವಾದ ಶೈಲಿಯುಳ್ಳವು ಗಳಾಗಿಯೂ, ಕೆಲವು ಪದ್ಯಗಳು ಪೂರ್ವಗ್ರಂಥಗಳ ಶೈಲಿಗಿಂತ ರಮಣೀಯವಾದ ಶೈಲಿಯುಳ್ಳವು ಗಳಾಗಿಯೂ, ಲಲಿತವಾದ ಪದಬಂಧವುಳ್ಳವುಗಳಾಗಿಯೂ ಇವೆ. ಗದ್ಯಗಳು ಪುರಾತನ ಗ್ರಂಥಗಳ ಗದ್ಯಗಳಿಗಿಂತ ಶ್ರಾವ್ಯವಾಗಿಯೂ, ಓದುವುದಕ್ಕೆ ಸರಳವಾಗಿಯೂ ಇವೆ. ಈ ಗ್ರಂಥದಲ್ಲಿ ಸಂಸ್ಕೃತ ಮತ್ತು ಕರ್ಣಾಟಕ ಶಬ್ದಗಳು ಪ್ರಾಯಃ ಸಮಸಮವಾಗಿಯೇ ಪ್ರಯೋಗಿಸಲ್ಪಟ್ಟಿವೆ. ಕವಿತಾ ಪಾಕದಲ್ಲಿ ಇದನ್ನು ಕದಲೀಪಾಕವೆಂದು ಹೇಳಬಹುದು" ಎಂದು ಹೇಳಿರು ತ್ತಾರೆ.

ಈ ಸಂದರ್ಭದಲ್ಲಿ ನೇಮಿಚಂದ್ರನ ಲೀಲಾವತಿ ಕುರಿತು ನಾಲ್ಕು ಮಾತು ಹೇಳುವುದು ಅಗತ್ಯ. ಕನ್ನಡ ಕಾವ್ಯಕರ್ತೃಗಳಲ್ಲಿ ನೇಮಿಚಂದ್ರನ ಹೆಸರು ಮಿಗಿಲಾದುದು. ಕಾಲ ಕ್ರಿ. ಶ. ೧೧೩೦. ಇವನ ಕೃತಿಗಳು ಲೀಲಾ ವತಿ, ನೇಮಿನಾಥ ಪುರಾಣಗಳು, ಲೀಲಾವತಿಯಲ್ಲಿ ೧೪ ಆಶ್ವಾಸಗಳಿವೆ. ೧೬೨೩ ಪದ್ಯಗಳೂ ಕೆಲವು ಶ್ಲೋಕಗಳೂ ಇವೆ. ತಕ್ಕಷ್ಟು ಗದ್ಯಪದ್ಯಗಳಿವೆ. ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ನಾಗವರ್ಮನ ಕಾದಂಬರಿ ಮತ್ತು ನೇಮಿ ಚಂದ್ರನ ಲೀಲಾವತಿ ಎಂಬ ಎರಡು ಗ್ರಂಥಗಳು ಶೃಂಗಾಗ ರಸಪ್ರಧಾನ ವಾದುವು. ನೇಮಿಚಂದ್ರನು ಲೀಲಾವತಿಯನ್ನು ಒಂದು ವರ್ಷದಲ್ಲಿ ಬರೆದಂತೆ ತಿಳಿದು ಬಂದಿದೆ. ಈ ಗ್ರಂಥವು ಸುಬಂಧುವಿನ ಸಂಸ್ಕೃತ ವಾಸವದತ್ತೆಯನ್ನು ಅವಲಂಬಿಸಿದೆ. ಒಮ್ಮೆ ನೇಮಿಚಂದ್ರನು ನಾಗವರ್ಮನ ಕಾದಂಬರೀ ಕಾವ್ಯ ವನ್ನು ಸುಡಿಸಿ, ಲೀಲಾವತೀ ಗ್ರಂಥಕ್ಕೆ ಕಪ್ಪನಿಡಿಸಿದನೆಂಬ ಇತಿಹಾಸವಿದೆ. (ಕನ್ನಡ ಕವಿಚರಿತ್ರೆ, ಭಾಗ ೧- ಪುಟ ೨೪೫) ಲೀಲಾವತಿಯು ಕನ್ನಡದಲ್ಲಿ ಸುಪ್ರಸಿದ್ಧ ಚಂಪೂಗ್ರಂಥ. ಲೀಲಾವತಿ ಮತ್ತು ರಾಜಶೇಖರ ಎರಡರಲ್ಲಿಯೂ ಕಥಾವಸ್ತು ಕೊಂಚ, ವರ್ಣನೆ ಬಹಳ. ಎರಡೂ ಶೃಂಗಾರರಸಪ್ರಧಾ

ನವಾದ ಮಹಾಕಾವ್ಯಗಳು. ಆದುದರಿಂದ ಷಡಕ್ಷರನು ಲೀಲಾವತಿಯನ
ಸ್ಪರ್ಧಿಸಿ ತನ್ನಕಾವ್ಯವನ್ನು ರಚಿಸಿದನೆಂದು ನಾವು ತರ್ಕಿಸಬಹುದು.

ರಾಜಶೇಖರ ವಿಳಾಸದಲ್ಲಿದ್ದಂತೆಯೇ ಲೀಲಾವತಿಯಲ್ಲಿಯೂ ಕೆಲ
ಸಂಸ್ಕೃತ ಶ್ಲೋಕಗಳು ಹಾಗೂ ಪ್ರಾಕೃತ ಪದ್ಯಗಳಿವೆ ಎಂಬುದು ಗ
ನಾರ್ಹವಾಗಿದೆ.

ಕವಿ ಷಡಕ್ಷರ ದೇವನು ಒಂದು ವರ್ಷದ ಅವಧಿಯಲ್ಲಿ ರಾ
ಶೇಖರ ವಿಳಾಸವನ್ನು ಬರೆದು ಮುಗಿಸಿದನು. ಪ್ರತಿವಾದಿಗಳು ರಾಜನನ
ಒತ್ತಾಯಪಡಿಸಿ ವಿದ್ವತ್ಸಭೆಯನ್ನು ಕರೆಸಿದರು. ಆಗ ಕಾವ್ಯ ಕಲಾ
ದರಾದ ಪಂಡಿತರು ಲೀಲಾವತಿ ಮತ್ತು ರಾಜಶೇಖರಗಳ ರಸಪ್ರಕರ
ಗಳನ್ನು ಓದಿಸಿ ಕೇಳಿದರು. 'ಪ್ರಾಚೀನ ಲೀಲಾವತಿಗಿಂತ ನವೀ
ರಾಜಶೇಖರವು ಹೆಚ್ಚು ರಸಭರಿವಾಗಿದೆ' ಎಂದು ತೀರ್ಮಾನವಿತ್ತರು
ಆಗ ರಾಜಸಭೆಯಲ್ಲಿ ಮಹಾಕವಿ ಷಡಕ್ಷರದೇವನಿಗೆ "ಉಭಯ ಕ
ತಾವಿಶಾರದ," "ಸರಸಜನ ಮಾನಿತ" "ಕವಿಶೇಖರ" ಎಂಬ ಬಿರು
ಗಳನ್ನು ಕೊಟ್ಟರು. ರಸವತ್ಕವಿಯಾದ ಷಡಕ್ಷರ ದೇವನಿಗೆ ಮುದ್ದುರಾಜ
ಸನ್ಮಾನಗಳನ್ನು ಕೊಟ್ಟನು. ಕವಿಕುಲ ಗುರುವಾದ ಈತನು,
ಮನೆಯ ಹಿತಚಿಂತಕನಾಗಿರುವುದು ತಮ್ಮ ಪುಣ್ಯವೆಂದು ಭಾವಿಸಿದನ
ಆಸ್ಥಾನದ ಪಂಡಿತರು ಷಡಕ್ಷರಕವಿಗೆ ಮುಂದೆ ಹೇಳುವ ಪ್ರಶಸ್ತಿಪತ್ರವನ
ಸಂಸ್ಕೃತ ಭಾಷೆಯಲ್ಲಿ ಬರೆದಿತ್ತರು.

ವೃತ್ತ॥ ಜಿಹ್ವಾಂತರ್ನಟದಂಬುಜಾಸನವಧೂ ಪಾದಪ್ರವಾಳಸ್ಫುರನ್ ।
ಮಂಜೀರದ್ವಯ ಮಂಜುನಾದವಿಭವಃ ಶ್ರೀಗರ್ವಸರ್ವಂ ಕಷಾಃ ॥
ಜೀಯಾಸುರ್ಭವತಃ ಷಡಕ್ಷರವಿಭೋ ಕುಂದಾರವಿಂದಾವಳೀ ।
ಮಂದಾರದ್ರುಮಮಂಜರೀ ಮಧುರಝರೀ ಮಾಧುರ್ಯಧುರ್ಯಾಗಿರಃ ॥

ಎಳಂದೂರು ಗೌರೀಶ್ವರ ದೇವಾಲಯದಲ್ಲಿರುವ ಈ ಶಾಸನ
ಷಡಕ್ಷರ ದೇವನು ಬರೆದುದಿರಬೇಕೆಂದು ತರ್ಕಿಸಲಾಗಿದೆ. (ಸ

ತೋಂಟದಾರ್ಯರು ತುಂಬೆ ಹೂ ಮಳೆ ಗರೆಸಿದುದು

ಕರ್ನಾಟಕದಲ್ಲಿ ಆಗಿ ಹೋದ ಮಹಾಪುರುಷರಲ್ಲಿ ತೋಂಟದ ಸಿದ್ಧ ಲಿಂಗೇಶ್ವರರು ಒಬ್ಬರು. ಇವರು ಹರದನಹಳ್ಳಿಯ ಗೋಸಲ ಚೆನ್ನಬಸವೇಶ್ವರನ ಶಿಷ್ಯರು. ಇವರ ಕಾಲ ೧೪೦೦-೧೪೭೦. ಈತನು 'ನಿರಂಜನ ಗಣೇಶ್ವರನ ಅವತಾರ ಎಂಬ ಪ್ರತೀತಿ ಇದೆ. ಕ್ರಿ. ಶ. ೧೬೮೦ರಲ್ಲಿ ಬರೆದ ಎಡೆಯೂರಿನ ಶಾಸನ ಮತ್ತು ಕ್ರಿ. ಶ. ೧೬೬೪ರಲ್ಲಿ ಬರೆದ ಕಗ್ಗೆರೆಯ ಶಾಸನ ಇವುಗಳಲ್ಲಿ ಈತನ ಮಹಿಮಾವಳಿ ಹಾಗೂ ಶಿಷ್ಯಪರಂಪರೆಯನ್ನು ಹೇಳಿದೆ. ೧೫೫೦ರಲ್ಲಿ ತುಮಕೂರು ಜಿಲ್ಲಾ ಬಿಜ್ಜಾವರದಲ್ಲಿದ್ದ ವಿರಕ್ತ ತೋಂಟದಾರ್ಯರು ಬರೆದಿರುವ ಸಿದ್ಧೇಶ್ವರ ಪುರಾಣ, ಸುಮಾರು ಅದೇ ಕಾಲದಲ್ಲಿ ಗುಬ್ಬಿಯಲ್ಲಿದ್ದ ಕವಿ ಶಾಂತೇಶನು ಬರೆದಿರುವ ಸಿದ್ಧಲಿಂಗೇಶ್ವರ ಪುರಾಣ, ಸುಮಾರು ಕ್ರಿ. ಶ. ೧೭೦೦ರಲ್ಲಿದ್ದ ಯಲಹಂಕದ ಹೇರಂಬಕವಿ ಬರೆದ ಸಾಂಗತ್ಯ ಇವುಗಳಲ್ಲಿ ಇವನ ವಿಷಯವನ್ನು ಬಣ್ಣಿಸಲಾಗಿದೆ. ಇವರು ಸ್ವತಂತ್ರವಾಗಿ 'ಷಟ್ ಸ್ಥಲಜ್ಞಾನ ಸಾರಾಮೃತ' ಎಂಬ ವಚನಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥಕ್ಕೆ ಸುಮಾರು ಕ್ರಿ. ಶ. ೧೭೦೦ ರಲ್ಲಿದ್ದ ಸೋಮಶೇಖರ ಶಿವಯೋಗಿ ಎಂಬಾತನು ಸುಲಭವಾದ ಟೀಕೆಯನ್ನು ಬರೆದಿದ್ದಾನೆ. ಪ್ರಸಿದ್ಧವಚನಕಾರರಾದ, ಘನಲಿಂಗಿ ದೇವರು, ಸ್ವತಂತ್ರ ಸಿದ್ಧಲಿಂಗೇಶ್ವರ, ಗುಮ್ಮಳಾಪುರದ ಸಿದ್ಧಲಿಂಗಯತಿ, ಗುಬ್ಬಿ ಮಲ್ಲಣಾಚಾರ್ಯ ಮೊದಲಾದವರು ಈತನ ಶಿಷ್ಯ ಪರಂಪರೆಗೆ ಸೇರಿದ್ದಾರೆ. ಈತನು ೭೦೦ ಗಣೇಶ್ವರರನ್ನು ಕಟ್ಟಿಕೊಂಡು ದೇಶಸಂಚಾರ ಮಾಡಿದನೆಂದೂ, ವೀರಶೈವ ಧರ್ಮವನ್ನು ಉದ್ಧರಿಸಿದನೆಂದೂ ಚೆನ್ನಬಸವಪುರಾಣ, ಸಿದ್ಧೇಶ್ವರಪುರಾಣ ಮೊದಲಾದುವುಗಳಲ್ಲಿ ಹೇಳಿದೆ. ಈತನು ವಿಜಯನಗರದ ಚಕ್ರವರ್ತಿ ವಿರೂಪಾಕ್ಷನ ಕಾಲದಲ್ಲಿ ಇದ್ದಂತೆ (೧೪೬೭-೧೪೭೮) ಹೇಳಲಾಗಿದೆ. ಇವನನ್ನು ಕುರಿತು ಸಂಸ್ಕೃತದಲ್ಲಿ ಮಹಾಕವಿ ಷಡಕ್ಷರ ಮತ್ತು ಕೈ|| ಮಾಗಡಿ ವೀರಪ್ಪಶಾಸ್ತ್ರಿಗಳು ಸ್ತೋತ್ರಗಳನ್ನು ಬರೆದಿದ್ದಾರೆ. ಈತನ ವಚನಗ್ರಂಥದಲ್ಲಿ ೭೦೧ ವಚನಗಳೂ, ೭ ವೃತ್ತಗಳೂ ಇವೆ. ಈತನು ಕಲ್ಯಾಣದ ಶೂನ್ಯ ಸಿಂಹಾಸನದ ೧೯ನೆಯ ಗುರು

ವೆಂದು ತಿಳಿದುಬಂದಿದೆ. ಗುಬ್ಬಿಯಲ್ಲಿ ಸಮಾಧಿಸ್ಥನಾಗಿರುವ ಗೋಸಲ ಚೆನ್ನಬಸವೇಶ್ವರ, ಸಿದ್ಧಗಂಗೆಯಲ್ಲಿ ಸಮಾಧಿಸ್ಥನಾಗಿರುವ ಗೋಸಲ ಸಿದ್ಧೇಶ್ವರ, ತುಮಕೂರು ಜಿಲ್ಲಾ ಸಿದ್ಧರಬೆಟ್ಟದಲ್ಲಿ ಸಮಾಧಿಸ್ಥರಾಗಿರುವ ಗೋಸಲ ಶಂಕರಾಚಾರ್ಯರು, ಹರದನಹಳ್ಳಿಯಲ್ಲಿ ಸಮಾಧಿಸ್ಥನಾಗಿರುವ ಗೋಸಲ ದಿವ್ಯಲಿಂಗೇಶ್ವರ, ಮಾದೇಶ್ವರ ಬೆಟ್ಟದಲ್ಲಿ ಸಮಾಧಿಸ್ಥನಾಗಿರುವ ನಿರ್ವಾಣಯಗಣೇಶ್ವರ (ಮಾದೇಶ್ವರ), ಸೊಲ್ಲಾಪುರದಲ್ಲಿ ಸಮಾಧಿಸ್ಥನಾಗಿರುವ ಸಿದ್ಧರಾಮೇಶ್ವರ, ಉಳವಿಯಲ್ಲಿ ಸಮಾಧಿಸ್ಥನಾಗಿರುವ ಚೆನ್ನಬಸವೇಶ್ವರ ಇವರೆಲ್ಲರೂ ಈತನ ಗುರುಪರಂಪರೆಗೆ ಸೇರಿದವರೆಂದು ತಿಳಿದುಬಂದಿದೆ (ನಿರಂಜನ ವಂಶರತ್ನಾಕರ)

ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು ಅಯೋನಿಜರೆಂದು ಸಿದ್ಧೇಶ್ವರ ಪುರಾಣದಲ್ಲಿ ಹೇಳಿದೆ. ಆದರೆ ಹೇರಂಬಕವಿಯ ಸಿದ್ಧಲಿಂಗ ಸಾಂಗತ್ಯದಲ್ಲಿ ಈತನ ತಂದೆ ತಾಯಿಗಳು ಹರದಹಳ್ಳಿಯ 'ಜ್ಞಾನಾಂಬೆ ಮತ್ತು 'ಮಲ್ಲಿಕಾರ್ಜುನ' ಎಂದು ಹೇಳಲಾಗಿದೆ. ಸಿದ್ಧಲಿಂಗೇಶ್ವರರು ಧರ್ಮ ಪ್ರಸಾರಕ್ಕಾಗಿ, ಕರ್ನಾಟಕ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ಉತ್ತರಭಾರತ, ಕಾಶಿ, ಪ್ರಯಾಗ, ಶ್ರೀಶೈಲ, ರಾಮೇಶ್ವರ, ಕೇದಾರ, ಹಿಮಾಚಲ ಮೊದಲಾದ ಕಡೆ ಸಂಚರಿಸಿದರೆಂದು ಪುರಾಣಗಳಲ್ಲಿ ಹೇಳಿದೆ. ಈತನು ಸಂಚಾರ ಮಾಡುವಾಗ, ಹುಲಿಯೂರು ದುರ್ಗದಲ್ಲಿ ಪಾದವನ್ನು ಒತ್ತಿ ಗಂಗೆಯನ್ನು ಬರಿಸಿದುದು, ಕಗ್ಗೆರೆಯಲ್ಲಿ ಹಲವು ಕಾಲ ತಪಸ್ಸಿಗೆ ಕುಳಿತಿದ್ದುದು, ತುಮಕೂರಿನಲ್ಲಿ ಪ್ರಭುಶೆಟ್ಟಿಯ ಪ್ರಾರ್ಥನೆಯಂತೆ ತುಂಬೆಹೂ ಮಳೆ ಕರೆಸಿದುದು ಇವು ಪ್ರಮುಖ್ಯಪಾದುವುಗಳೆಂದು ಹೇಳಬಹುದು.

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ದೇಶಗಳ ಸಂಚಾರದಲ್ಲಿ ತಮ್ಮ ಗುರುಗಳಾದ ಗೋಸಲ ಸಿದ್ಧೇಶ್ವರರ ಸಮಾಧಿ ಸ್ಥಳವಾದ ಸಿದ್ಧಗಂಗೆಯ ಬೆಟ್ಟದಲ್ಲಿ ಕೆಲಕಾಲ ನೆಲಸಿದ್ದರು. ಆಗ ಅಲ್ಲಿಗೆ ಅತಿ ಸಮೀಪದಲ್ಲಿರುವ ತುಮಕೂರಿನ ಪ್ರಭುಶೆಟ್ಟಿ ಎಂಬ ಭಕ್ತನು ಆಸಕ್ತಿಯಿಂದ ಆಗಮಿಸಿ 'ಗುರುಗಳು ನಮ್ಮ ಊರಿಗೆ ಬಂದು ಜನರ ಭಕ್ತಿ ಕೈಂಕರ್ಯವನ್ನು ಕೈಗೊಳ್ಳ ಬೇಕು ಎಂದು' ಅರಿಕೆ ಮಾಡಿದನು. ಆತನ ಭಕ್ತಿಗೆ ಮೆಚ್ಚಿ ಸಿದ್ಧಲಿಂಗಸ್ವಾಮಿಗಳು ಗಣಂಗಳು ಸಮೇತ ಸಿದ್ಧಗಂಗೆಯಿಂದ ತುಮಕೂರಿಗೆ

ಆಗಮಿಸಿದರು. ತುಮಕೂರಿನ ಭಕ್ತಜನರು ಶಿವಯೋಗಿ ಸಿದ್ಧಲಿಂಗನನ್ನು ಅತ್ಯಂತ ಭಕ್ತಿ ಗೌರವಗಳಿಂದ ಮಂಗಳವಾದ್ಯಗಳು ಸಮೇತ ಬರಮಾಡಿದರು. ಸಿದ್ಧಲಿಂಗಸ್ವಾಮಿಗಳು ಪ್ರಭುಶೆಟ್ಟಿಯು ಮನೆಯಲ್ಲಿ ಬಿಡಾರ ಮಾಡಿದರು. ಆಗ ಸ್ವಾಮಿಗಳ ಸನ್ನಿಧಿಯಲ್ಲಿ 'ಸಪ್ಪೆಯ ಯತೀಶ, ಗುರು ಬೋಳಬಸವ, ಉಪ್ಪಿನ ಹಳ್ಳಿಯ ಅಯ್ಯ, ಗುರು ರಾಚೋಟಿದೇವ, ಗುಮ್ಮಳಾಪುರದ ಸಿದ್ಧಲಿಂಗಯತಿ, ಪಟ್ಟಣದ ದೇವ, ಗುರು ಚಂದ್ರಶೇಖರ, ದೊಡ್ಡ ಸಿದ್ಧೇಶ, ಶೀಲವಂತೇಶ್ವರ, ಘಟ್ಟಸಿದ್ದಯ್ಯ, ಸುತ್ತೂರು ಸಿದ್ಧಮಲ್ಲೇಶ, ಘನಲಿಂಗಿ ದೇವ, ಬತ್ತಲೆಯ ದೇಶಿಕ, ಹುಚ್ಚುಪರ್ವತದೇವ, ಚಿಟ್ಟಗದೇವ, ಕಟ್ಟಿಯ ಪುರದ ನಂಜೇಶ, ತಿಪ್ಪೂರು ಕಂಕಣದೇವ ಮೊದಲಾದ ಯತಿಪುಂಗವರು ಇದ್ದರು. ಭಕ್ತ ಪ್ರಭುಶೆಟ್ಟಿಯು ನವರತ್ನಖಚಿತ ಸಿಂಹಾಸನದಲ್ಲಿ ಗುರು ಸಿದ್ಧಲಿಂಗನನ್ನು ಕುಳ್ಳಿರಿಸಿ, ಮಲ್ಲೆ, ಮಲ್ಲಿಗೆ, ಸೇವಂತಿಗೆ, ಸಂಪಿಗೆ ಮೊದಲಾದ ಸುಗಂಧಮಯ ಪುಷ್ಪಗಳಿಂದ, ಬನ್ನಿ, ಬಿಲ್ವಾದಿ ಪತ್ರೆಗಳಿಂದ ಗುರುವಿನ ಪಾದವನ್ನು ಪೂಜಿಸಿದನು. ಗುರುವು ತನ್ನ ಮನೆಯಲ್ಲಿ ಶಿವಲಿಂಗಪೂಜೆಯನ್ನು ಮಾಡಬೇಕೆಂದು ಬಿನ್ನೈಸಿದನು. ಆಗ ಸಿದ್ಧಲಿಂಗ ಯತೀಶ್ವರನು ಶಿವಪೂಜೆಯಲ್ಲಿ ನಿರತನಾದನು. ಆ ಪೂಜಾ ವೈಭವದ ಸಮಯದಲ್ಲಿ ಓರ್ವ ಭಕ್ತನು "ಎನಗೆ ತುಂಬೆ ಪೂವರ್ಚಿಸುವ ನೇಮವು, ಈಗಳ್ ಈಶಂಗೆ ತುಂಬೆಯ ಪೂಗಳಿಲ್ಲದೊಡೆ ಏಗೆಯ್ವೊಡಂ ಆಂ ಭೋಜ ನಂಗೆಯ್ಯಲು ಆಗದು"–ಎಂದು ತನ್ನ ಅಭೀಷ್ಟವನ್ನು ತಿಳಿಸಿದನು. ಆಗ ಪ್ರಭುಶೆಟ್ಟಿಯು ತತ್-ಕ್ಷಣದಲ್ಲಿ ತುಂಬೆಯ ಹೂವನ್ನು ತರುವುದು ಎಲ್ಲಿಂದ ಎಂದು ಚಿಂತಿಸುತ್ತಿದ್ದನು. ಈ ಸಂದರ್ಭವನ್ನು ಅರಿತ ಭಕ್ತ ಪರಾಧೀನ, ಶರಣರ ಕಾಮಧೇನು, ಆಶ್ರಿತರ ಚಿಂತಾಮಣಿ ಎನಿಸಿದ ಸಿದ್ಧಲಿಂಗೇಶ್ವರನು 'ಸತ್ಕರುಣದಿಂದೆ ಬೇಗದಿಂ ದ್ರೋಣಪುಷ್ಪ ವೃಷ್ಟಿಯಂ ಕರೆಸಿದಂ.' ಪ್ರಭುಶೆಟ್ಟಿಯ ಮನೆಯ ಮೇಲೆ, ಅಕ್ಕ ಪಕ್ಕದಲ್ಲಿ ತುಂಬೆಯ ಹೂ ಮಳೆ ಸುರಿಯಿತು. ಆ ಹೂವನ್ನು ಆರಿಸಿ ಭಕ್ತನು ಅನುರಾಗದಿಂದ ಲಿಂಗಾರ್ಚನೆಯಂ ಮಾಡಿದನು. ಅನಂತರ ಎಲ್ಲ ನಿರಕ್ತರೂ ಬೆರೆತು ಸುಪ್ರಸಾದವಂ ಭುಂಜಿಸಿದರು.

ಈ ಸನ್ನಿವೇಶದಲ್ಲಿ ಸಿದ್ಧಲಿಂಗೇಶ್ವರನ ಭಕ್ತ ವೃಂದದವರು ಕುಣಿ ದಾಡುತ್ತ, "ಸಿದ್ಧಗುರು ಬಂದನು, ತುಂಬೆ ಪೂಗಳ ಮಳೆಯಂ ಕರೆಯಿಸಿ ದನು" ಎಂದು ಅಚ್ಚರಿ ಗೊಳುತ್ತೆ ನಲಿದಾಡಿದರು. ಈ ಸಂದರ್ಭದಲ್ಲಿ ಶಿವಶರಣರು–'ಪರಮೇಶ್ವರನು ಕೋಟೆಯ ಶಿವಯ್ಯಂಗೆ ಧಾನ್ಯದ ಮಳೆಯಂ ಕರೆಸಿದುದು' 'ಕರಿಕಾಲಚೋಳನಿಗೆ ಪರಶಿವನು ಹೊನ್ನಿನ ಮಳೆಯನ್ನು ಸುರಿಸಿದುದು' ಮೊದಲಾದ ಹಿಂದಿನ ಕಥೆಗಳನ್ನು ಸ್ಮರಿಸಿಕೊಂಡರು ಹಾಗೂ ಶಿವಶರಣರ ಮಹಿಮೆಯು ಅಸದಳವೆಂದರು.

ತುಮಕೂರಿನ ಪ್ರಭುಶೆಟ್ಟಿಯ ಭಕ್ತಿಯನ್ನು ಕೈಗೊಂಡು ಸಿದ್ಧ ಲಿಂಗೇಶನು ಅಲ್ಲಿಂದ ತೆಂಕಣ ಮುಖವಾಗಿ ಶಿಷ್ಯಗಣಾನ್ವಿತನಾಗಿ ಪ್ರಯಾಣ ಮಾಡಿದನು. ಗೂಳೂರು, ನಾಗವಲ್ಲಿ, ಹೆಬ್ಬೂರು, ಹೇರೂರು ಮೊದ ಲಾದ ಗ್ರಾಮಗಳ ಭಕ್ತರ ಅಭೀಷ್ಟಗಳನ್ನು ನೆರವೇರಿಸಿ, ಕಗ್ಗೆರೆಯ ನಾಗಿಣೀನದೀತೀರದ ಹೂವಿನ ತೋಟದಲ್ಲಿ ತಪಸ್ಸಿಗೆ ಕುಳಿತನು. ಮೈಮೇಲೆ ಹುತ್ತ ಬಳೆದರೂ ಎಚ್ಚರವಿಲ್ಲದಿದ್ದನು. ಅಲ್ಲಿಂದ ಎಡೆಯೂರಿಗೆ ಹೋಗಿ ಶಿವಯೋಗಸಮಾಧಿಯಲ್ಲಿ ಕುಳಿತನು.

ಈಗ ತುಮಕೂರು ಕೋಟೆ ದಿವಾನರ ಬೀದಿಯಲ್ಲಿ ಪ್ರಾಚೀನ ಸಿದ್ಧ ಲಿಂಗೇಶ್ವರ ದೇವಾಲಯವಿದೆ. ಪ್ರಾಯೇಣ ಅದು ತೋಂಟದಾರ್ಯರ ಶಿವಪೂಜೆಗೆ ಕುಳಿತ ಪ್ರಭುಶೆಟ್ಟಿಯ ಮನೆಯಾಗಿರಬೇಕೆಂದು ತರ್ಕಿಸಲಾ ಗಿದೆ. ತುಂಬೆಹೂ ಮಳೆಸುರಿದ ಪವಿತ್ರಸ್ಥಳವೇ ಇದಾಗಿರಬೇಕು. ಸಿದ್ಧ ಲಿಂಗೇಶ್ವರನ ಪವಾಡದ ನಿಮಿತ್ತ ತುಂಬೆ ಹೂವಿನ ಮಳೆ ಇಲ್ಲಿ ಸುರಿಸಿದ ದರಿಂದ ಈ ನಗರಕ್ಕೆ '**ತುಂಬೆಯೂರು**' ಎಂದು ಹೆಸರಾಯಿತೆಂದೂ ಅದು ಜನರ ಬಾಯಿನಲ್ಲಿ ಬಿದ್ದು ಈಗ 'ತುಮಕೂರು' ಆಯಿತೆಂದ ಕೆಲವರು ಹೇಳುತ್ತಿದ್ದಾರೆ. ಈಗ 'ತುಮಕೂರು' ಕರ್ನಾಟಕದ ಒಂದ ಪ್ರಮುಖ ಜಿಲ್ಲಾ ಕೇಂದ್ರವೂ, ಸಂಸ್ಕೃತಿ ಕೇಂದ್ರವೂ ಎನಿಸಿದೆ. ಸಿ

ಲಿಂಗೇಶ್ವರ ಮತ್ತು ಅವರ ನಾಲ್ವರು ಗುರು-ಶಿಷ್ಯರ ಸಮಾಧಿಗಳು ತುಮಕೂರು ಜಿಲ್ಲೆಯಲ್ಲಿವೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ. ಎಡೆಯೂರು ಸಿದ್ಧಲಿಂಗೇಶ್ವರ, ಗುಬ್ಬಿ ಚೆನ್ನಬಸವೇಶ್ವರ, ಸಿದ್ಧಗಂಗೆಯ ಸಿದ್ಧೇಶ್ವರ ಇಲ್ಲೆಲ್ಲಾ ದೊಡ್ಡ ಜಾತ್ರೆಗಳಾಗುತ್ತಿವೆ. ಸಿದ್ಧರ ಬೆಟ್ಟದ ಶಂಕರ ಪ್ರಭುವಿನ ಗದ್ದುಗೆ ಕೂಡ ಪ್ರಭಾವಪೂರ್ಣವೆನಿಸಿದೆ ಎಡೆಯೂರು-ಸಿದ್ಧಲಿಂಗೇಶ್ವರನ ಯೋಗಸಮಾಧಿಯು ಪವಿತ್ರ ಸ್ಥಳವಾಗಿದೆ. A ಬೋಳ ಬಸವೇಶ್ವರ ಗದ್ದುಗೆ ಮಧುಗಿರಿಯಲ್ಲಿದೆ.

A. ಈ ಕಥೆಗೆ ಸಿದ್ಧೇಶ್ವರ ಪುರಾಣ, ನಿರಂಜನವಂಶ ರತ್ನಾಕರ, ಸಿದ್ಧಲಿಂಗ ಸಾಂಗತ್ಯ, ಕನ್ನಡ ಕವಿಚರಿತೆ ಈ ಗ್ರಂಥಗಳು ಮುಖ್ಯ ಆಧಾರ ಗ್ರಂಥಗಳೆನಿಸಿವೆ.

B. 'ಚೆನ್ನವೀರೇಶ' ಎಂಬ ಕವಿ ವಿರಚಿತವಾದ 'ಷಟ್‌ಸ್ಥಲ ವಲ್ಲಭ' ಎಂಬ ಚಂಪು ಗ್ರಂಥವೊಂದು ಇತ್ತೀಚೆಗೆ ಮೈಸೂರು ಮಾನಸಗಂಗೋತ್ರಿ -ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಾಣಿಸಿಕೊಂಡಿದೆ. ಇದು ಎಡೆಯೂರು ಸಿದ್ಧಲಿಂಗೇಶ್ವರನನ್ನು ಕುರಿತು ಬರೆದುದು. (ಸಂ)

★ ★ ★ ★ ★

ಆಚಾರ್ಯ ಪದ್ಮರಸನು ಕೆರೆಯನ್ನು ಕಟ್ಟಿಸಿದುದು

ವೀರಶೈವ ಗುರುಪರಂಪರೆಯಲ್ಲಿ ಕೆರೆಯ ಪದ್ಮರಸನ ಸ್ಥಾನ ಬಹು ದೊಡ್ಡದು. ಇವನ ಮುತ್ತಜ್ಜ **ಶಿವಯೋಗಿ ಮಲ್ಲರಸ.** ಇವನ ಅಜ್ಜ **ಸಕಲೇಶ ಮಾದರಸ,** ಇವನ ತಂದೆ **ಮಾಯಿದೇವ,** ಇವರ ಮಗನೇ **ಕೆರೆಯ ಪದ್ಮರಸ.** ಈತನ ಹೆಂಡತಿ ಗೌರಪ ದಂಡನಾಯಕನ ಮಗಳು **ಮಹಾದೇವಿ.** ಈತನ ಮಗ ಕುಮಾರ ಪದ್ಮರಸ. ಸಕಲೇಶ ಮಾದರಸನು ಪ್ರಸಿದ್ಧ ವಚನಕಾರನು. ಪದ್ಮರಸನು ಕನ್ನಡ 'ದೀಕ್ಷಾಬೋಧೆ' ಸಂಸ್ಕೃತ 'ಸಾನಂದ ಚರಿತೆ' ಬರೆದಿದ್ದಾನೆ. ಇವನ ಮಗ ಕುಮಾರ ಪದ್ಮರಸನು 'ಸಾನಂದ ಚರಿತೆ'ಯನ್ನು ಕನ್ನಡಿಸಿದ್ದಾನೆ. ಇದೇವಂಶದಲ್ಲಿ ಹುಟ್ಟಿದ ಕವಿ ಪದ್ಮಣಾಂಕನು (೧೩೮೫) ಕೆರೆಯ ಪದ್ಮರಸನನ್ನು ಕುರಿತು **ಪದ್ಮರಾಜ ಪುರಾಣ** ಎಂಬ ಒಂದು ಕಾವ್ಯವನ್ನು ಬರೆದಿದ್ದಾನೆ. ಕೆರೆಯ ಪದ್ಮರಸನು ಕೂಡ ತ್ರಿಭುವನ ತಾತ ಎಂಬ ವೈಷ್ಣವನನ್ನು ವಾದದಲ್ಲಿ ಗೆದ್ದು ಅವನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟನು. ಮಹಾ ಕವಿಗಳಾದ, ಹರಿಹರ, ರಾಘವಾಂಕರಿಗೆ ಮಾರ್ಗದರ್ಶಕನಾಗಿದ್ದನು. ಹೊಯ್ಸಳ ರಾಜರಲ್ಲಿ ಕರಣಿಕನಾಗಿದ್ದ **ಹಂಪೆಯ ಹರೀಶ್ವರನನ್ನು** ಎಚ್ಚರಿಸಿ ಅವನು, ಹಂಪೆಯಲ್ಲಿದ್ದುಕೊಂಡು ಸಾಹಿತ್ಯ ಸೇವೆಮಾಡುವಂತೆ ವ್ಯವಸ್ಥೆಗೊಳಿಸಿದನು. (ರಾಘವಾಂಕನ ಸಮಾಧಿಯು-ಬೇಲೂರು ವಿಜಯನಗರದ ದಿಬ್ಬದ ಬುಡದಲ್ಲಿದೆ.) ಕಡೆಗೆ ಇವನು ಕಾಶಿಯಲ್ಲಿ ವಿಶ್ವನಾಥನಲ್ಲಿ ಐಕ್ಯನಾದನು. ಈತನು ಕನ್ನಡದಲ್ಲಿ ಬರೆದಿರುವ 'ದೀಕ್ಷಾಬೋಧೆಯು' ತೆಲುಗು ಭಾಷೆಗೆ **'ವೀರಶೈವ ದೀಕ್ಷಾಬೋಧಮು'** ಎಂಬ ಹೆಸರಿನಿಂದ ಅನುವಾದವಾಗಿದೆ. ಅದನ್ನು 'ಪಿಡುಪರ್ತಿಬಸವ' ಎಂಬ ಕವಿಯು ತೆಲುಗು ಭಾಷೆಗೆ ಭಾಷಾಂತರಿಸಿದ್ದಾನೆ. ಇವನ ಕಾಲ ಕ್ರಿ. ಶ. ೧೫೭೫ ಎಂದು ನಿರ್ಣಯಿಸಲಾಗಿದೆ. (ವೀರಶೈವಾಂಧ್ರ ವಾಙ್ಮಯಮು, ಪುಟ ೨೦೫) ಇವನು ಬರೆದ ಸಂಸ್ಕೃತ ಸಾನಂದಚರಿತೆ ಸಿಕ್ಕಿಲ್ಲ. ಆದರೆ ಅವರ ಅನುವಾದ ಕುಮಾರ ಪದ್ಮರಸನ 'ಸಾನಂದ ಚರಿತೆ' ಸಿಕ್ಕಿದೆ. ಇದು ಅಚ್ಚಾ

ಗಿಲ್ಲ. ತ್ರಿಭುವನ ತಾತನ ಕೂಡೆ ಪದ್ಮರಸನು ವಾದಮಾಡಿದಾಗ, ಪದ್ಮರಸನ ಪಕ್ಷವನ್ನು ವಹಿಸಿ, ದೋರಾಂಬುಧಿಯ ರಾಮಣ್ಣ, ಉಭಯಕವಿ ರಾಘವಾಂಕ, ಹುಲಿಗೆರೆಯ ಮಾಯಿದೇವ, ಪುರಾಣ ಭಟ್ಟ, ಅತಿರಸಿಕ ಕರ್ಣಾಭರಣ ಬುಧವರ, ಹಂಪೆಯ ರಾಮಿತಂದೆ, ಪದವಾಕ್ಯಪ್ರಮಾಣಜ್ಞದೇವರಸಪಂಡಿತ, ಜಗದಾರಾಧ್ಯ ನಾಗಿದೇವ, ಅಷ್ಟಭಾಷಾಕವಿ ಶಿವದಾಸ, ದಾವರಸ ಮೊದಲಾದವರು ಇದ್ದಂತೆ ಹೇಳಲಾಗಿದೆ. (ಕರ್ನಾಟಕ ಕವಿಚರಿತೆ, ಭಾ. ೧-ಪುಟ ೨೦೧) ವೀರಶೈವ ಸಾಹಿತ್ಯದಲ್ಲಿ ಪ್ರಸಿದ್ಧರಾಗಿರುವ ವಿಶ್ವಾರಾಧ್ಯ, ದೇವಾರಾಧ್ಯ, ಪದ್ಮಣಾಂಕ ಮೊದಲಾದವರು ಈ ಕೆರೆಯ ಪದ್ಮರಸನ ವಂಶದವರೆಂದು ಹೇಳಲಾಗಿದೆ. (ಕರ್ನಾಟಕ ಕವಿಚರಿತೆ, ಭಾ. ೧-ಪುಟ ೪೩೩).

ವೀರಶೈವ ಮತಚರಿತ್ರೆಯಲ್ಲಿ ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಏಕಾಂತದ ರಾಮಯ್ಯ, ಶರಣ ಆದಿಶೆಟ್ಟಿ, ಆಚಾರ್ಯ ರೇವಣಸಿದ್ಧ, ಗುರು ಮರುಳಸಿದ್ಧ, ಶರಣ ಏಕೋರಾಮ, ಪಂಡಿತಾರಾಧ್ಯ, ಅಲ್ಲಮ ಪ್ರಭು, ಬಸವೇಶ್ವರ, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಳ ಮಾಚಯ್ಯ, ರುದ್ರಮುನಿ ತಂದೆ, ವರದಾನಿ ಗುಡ್ಡಮ್ಮ, ಕುಮಾರ ಪದ್ಮರಸ, ಹಂಪೆಯ ಹರೀಶ್ವರ, ಪಾಲ್ಕುರಿಕೆ ಸೋಮನಾಥ, ಪ್ರೌಢದೇವರಾಯ, ಚಾಮರಸ, ಮಗ್ಗೆಯ ಮಾಯಿದೇವ, ಷಡಕ್ಷರದೇವ, ಪ್ರತಾಪರುದ್ರ, ಕೆಳದಿಯ ಬಸವರಾಜ, ಮನ್ಮಥಸ್ವಾಮಿ, ಶಿವಪ್ರಕಾಶರು ಇವರುಗಳ ಹೆಸರುಗಳನ್ನು ಪ್ರಮುಖವಾಗಿ ಎಣಿಸಬಹುದು. ಈ ವೀರಪುರುಷರ ಮಾಲಿಕೆಯಲ್ಲಿ **ಕೆರೆಯ ಪದ್ಮರಸನು** ಒಂದು ವೀರ ರತ್ನವಾಗಿ ಕಂಗೊಳಿಸುತ್ತಿದ್ದಾನೆ.

ಪದ್ಮರಸನ ಮಾವನಾದ ಗೌರಪ ದಣಾಯಕನು ಕೈಲಾಸಕ್ಕೆ ಹೋದ ಮೇಲೆ, ನರಸಿಂಹ ಬಲ್ಲಾಳನು, ಮಂತ್ರಿಪದವಿಯನ್ನು ಕೆರೆಯ ಪದ್ಮರಸನಿಗೆ ವಹಿಸಿದನು. (೧೨೨೦-೧೨೩೫) ಪದ್ಮರಸನು ಧರ್ಮದಿಂದ ರಾಜ್ಯ ಭಾರವನ್ನು ನಡೆಸುತ್ತಿದ್ದನು. ಶಿವಾದ್ವೈತಶಾಸ್ತ್ರಕೋವಿದನಾದ ಇವನ ಸಂದರ್ಶನಕ್ಕೆ ದೇಶ ದೇಶದಿಂದ, ಜಂಗಮರು, ಶರಣರು ಬರುತ್ತಿದ್ದರು.

ದಾನಚಿಂತಾಮಣಿಯಾದ ಈತನು ತನ್ನ ಮನೆಯ ದಾಸೋಹದಿಂದ ತೃಪ್ತಿಪಡಿಸಿ, ಅವರಿಗೆ ಕೇಳಿದಷ್ಟು ಹಣವನ್ನು ಕೊಟ್ಟು ಕಳಿಸುತ್ತಿದ್ದನು. ಅವನ ಈ ಔದಾರ್ಯವೂ, ಧರ್ಮಶ್ರದ್ಧೆಯೂ ಪರಮತದವರಿಗೆ ಅಸೂಯೆಯನ್ನು ಉಂಟುಮಾಡಿದುವು. ಒಮ್ಮೆ ನರಸಿಂಹ ಬಲ್ಲಾಳನು ಪದ್ಮರಸನಿಗೆ ೧೨ ಸಹಸ್ರ ಹೊನ್ನನ್ನು ಕೊಟ್ಟು ಬೇಲೂರಿನಲ್ಲಿ ಕೆರೆಯೊಂದನ್ನು ಕಟ್ಟಿಸೆಂದು ಅಣತಿಯನ್ನಿತ್ತನು. ಪದ್ಮರಸನು ಆದಿನ ತನ್ನಲ್ಲಿಗೆ ಬಂದು ಬೇಡಿದ ಓರ್ವ ಜಂಗಮನಿಗೆ ಆ ಹನ್ನೆರಡುಸಾವಿರ ಹೊನ್ನನ್ನು ಉದಾರವಾಗಿ ಕೊಟ್ಟುಬಿಟ್ಟನು. ಈ ವಿಷಯ ಹೇಗೋ ಪ್ರತಿವಾದಿಗಳಿಗೆ ತಿಳಿಯಿತು. ಅವರು ಈ ಸುದ್ದಿಯನ್ನು ರಾಜನಲ್ಲಿಗೆ ಬಂದು ದೂರಿದರು. ಆ ಮಾತನ್ನು ಕೇಳಿದ ಬಲ್ಲಾಳನು ಕುಪಿತನಾದನು. ಓರ್ವ ಸೇವಕನನ್ನು ನೋಡಿ, ರಾಜನು "ನೀಂ ಬೇಗದಿಂದೆ ಪದ್ಮರಸನಂ ಕರೆದು ತಾರ" ಎಂದನು. ಆಗ ಚರನು ಅತಿವೇಗದಿಂದ ಪದ್ಮರಸನಡೆಗೆ ಸಾರಿ, ಅರಸನ ಆಣತಿಯನ್ನು ಅರುಹಿದನು. ಆ ಕಾಲದಲ್ಲಿ ಪದ್ಮರಸನು ಶಿವಶರಣರ ಅನುಭವಗೋಷ್ಠಿಯಲ್ಲಿ ನಿರತನಾಗಿದ್ದನು. ಶರಣರನ್ನು ಬಿಟ್ಟು ರಾಜಾಸ್ಥಾನಕ್ಕೆ ಹೋಗಲು ಅವನ ಮನ ಒಪ್ಪಲಿಲ್ಲ. 'ಹರಹರಾ, ಶಿವಶಿವಾ' ಎಂದು ಆ ವಿಶ್ವನಾಥನನ್ನು ಕುರಿತು ಹಂಬಲಿಸಿದನು. "ಎಲೈ ಪರಮೇಶ್ವರನೆ, ಈ ಪರಾಧೀನದ ಮಣಿಹಕ್ಕೆ ಆಂ ಆರ್ಪೆನೆ ? ಇದಂ ತೊಲಗಿಸಯ್ಯಾ ಕರುಣಾಬ್ಧಿ" ಎಂದು ಹಲುಬಿದನು. ವಿಧಿಯಿಲ್ಲದೆ ಮೆಲ್ಲಮೆಲ್ಲನೆ ರಾಜಭವನಕ್ಕೆ ನಡೆತಂದು ರಾಜನನ್ನು ಕಂಡನು. ಆಗ ರಾಜನು, ಪದ್ಮರಸನನ್ನು ಕುರಿತು "ನಿನ್ನಂ ಈಶ್ವರ ಭಕ್ತನ್, ಅತಿ ಶುದ್ಧನ್, ಎಂದು ನಂಬಿ ಎನ್ನ ಸರ್ವಸ್ವಮುಂ ನಿನಗೆ ಒಪ್ಪುಗೊಟ್ಟೆನು.' ಎನಗೆ ಚೆನ್ನಾಗಿ ಕಾಣಿಸಿದೆ." ಎಂದನು. ಆಗ ಪದ್ಮರಸನು 'ಅರಸಾ, ದುರ್ಜನರ, ಧರ್ಮವರ್ಜಿತರ ಮಾತು ಗೇಳ್ದು, ಇಂತು ದೂಷಿಸಿದಿರಿ, ನೀವು ಉಪಾರ್ಜಿಸಿದ ಪುಣ್ಯಮಂ ಕೆಡಿಸಿಕೊಳ್ವರೆ ? ಶರಣರ್ ಇಂದ್ರಾದಿ ಭೋಗಂಗಳಂ ತೃಣಕೆ ಸರಿ ಎಸಿಸುವರ್, ನಿನ್ನೊಡವೆಗೆ ಎಳಸುವರೆ ? ಬಾವನ್ನಮಂ ಪೊರೆದು ರಂಜಿಸುವ ರಸಿಕನ್, ಓಪೋ ಕಿಸುಕುಳವನೇಂ ಪೊರೆವನೆ ? ದಿವ್ಯಕಾಂತಾ ವಿನುತ ಸುರತಾನುಭವಿ ಅಡಿಕೆದೊಳ್ತಿಂಗೆ ರಮಿಸುವನೆ ? ಪರಮಾನ್ನವಂ

ಸೇವಿಸುವ ಭೋಗಿ, ಕಲಗರ್ಚಿಂಗೆ ಮೋಹಿಸುವನೆ ? ವಿಮಲ ಸಿಂಹಶಿಶು ನಾಯಮೊಲೆಯುಂ ಉಂಬುದೆ ? ಭೂವರಾ, ? ಸಂದೇಹವುಂ ಬಿಡುಬಿಡಾ, ಶರಣರ್ ಅನ್ಯರಧನಕ್ಕೆ ಇಚ್ಛೈಸುವರೆ ? ಪೊಡವಿ ಬಾಯ್ಬಿಟ್ಟುನರರಂ ತಿಂಬೊಡಂ, ಮೇಲಣ ಅಜಾಂಡಂಗಳ್ ಒಂದಾಗಿ ನಡುನೆತ್ತಿಯೊಳ್ ಬೀಳ್ವೊಡಂ, ಮಾತೃಕಾಸ್ತನದ ಕ್ಷೀರಂ ಗರಳಮಾಪೊಡಂ, ಅಲ್ಲದೆ ಮುಡಿದ ಪೂಮಾಲೆ ಉಗ್ರವ್ಯಾಲನಾದೊಡಂ, ಕಡೆಗೆ ಸಸಿ ಮಸಿಯಾದೊಡಂ, ಮಲಯ ಸ್ಥಿತ ಮಾರುತಂ ಸುಳಿವ ಕಿಚ್ಚಾದೊಡಂ, ಶಿವಭಕ್ತರ್ ಇತರ ಧನಕ್ಕೆ ಎಳಸುವರೆ ? ಶಿವನ ಅಂಘ್ರಿಭೃತ್ಯ ನಾನೇಂ ನಿನ್ನ ವಿತ್ತದೊಳ್ ತಿಳದನಿತುಮುಂ ಮುಟ್ಟುವೆನೆ ? ಅದಂ ಮುಟ್ಟಿದೊಡೆ ಮಲಹರನ ಭಕ್ತರ್ ಒಲ್ವರೆ ? ಅದಂ ಕೊಳ್ವರೆ ? " ಎಂದು ರಾಜನಿಗೆ ಧೀರೋದಾತ್ತವಾದ ಉತ್ತರವನ್ನು ಕೊಟ್ಟನು. ಆಗ ಬಲ್ಲಾಳನು ಪದ್ಮರಸನ ಮಾತುಗಳನ್ನು ಲಾಲಿಸುತ್ತ, "ಅಕ್ಕಕ್ಕ, ಇಂತಪ್ಪ ಪಾಪಭೀತರ್, ಸಜ್ಜನರ್, ಸತ್ಯರ್, ಈ ಧರೆಯೊಳ್ ಒಳರೆ ? ನೀವು ಅಳಿಪುವವರೆ, ? ಈ ಕಾಪುರುಷರ ನುಡಿಗಳ್ ದಿಟಮೆ ? ನಿನ್ನಸಲ್ಲಾಪಮೇ ದಿಟಂ-ಅಂತಾದೊಡೆ ಎಮ್ಮಕೆರೆ ಏಪರಿಯೊಳ್ ಇರ್ಪುದು ಉಸಿರ್ ? " ಎಂದು ಕಟಕಿಯಾಡಿದನು. ಆಗ ಆಸ್ಥಾನದ ಪಿಸುಣರು ಮಹಾರಾಜಾ, "ಕೆರೆಯ ಮಾತೇಕೆ ? ಆ ಕೆರೆಯ ಹಿಂದೆ, ಗದ್ದೆ, ತೋಟ ಎಲ್ಲವೂ ನಲಿದಾಡುತ್ತಿವೆ. ಶಿವನ ತಲೆಯಲ್ಲಿದ್ದ ಗಂಗೆಯು ಈಗ ಆ ಕೆರೆಯಲ್ಲಿ ನೆಲೆಸಿದ್ದಾಳೆ. ದಯಮಾಡಿ ನೀವು ಪ್ರತ್ಯಕ್ಷವಾಗಿ ಬಂದು ನಿಮ್ಮಮಂತ್ರಿ ಪದ್ಮರಸರು ಕಟ್ಟಿಸಿರುವ ಕೆರೆಯನ್ನು ನೋಡಿ" ಎಂದು ಕುಹಕವಾಡಿದರು.

ಆಗ ಪದ್ಮರಸನು "ಈ ತೊಗಲ ಬೊಂಬೆಗಳ್ ತಾಮೆ ಮಾಡಲ್ ಸ್ವತಂತ್ರಮೆ ? ವಿಶ್ವಪತಿಯಾಡಿಸಿದೊಡೆ ಆಡಿದರಲ್ಲದೆ" ಎಂದು ತನ್ನ ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು, "ತೋಂಟ, ಗರ್ದೆ, ಅಪರಿಮಿತ ವಿಭವದಿಂ ಎಸೆವುತಿವೆ. ಏಳಿ ತೋರ್ಪೆನ್, ಉಪಮಾನವೇಕೆ ?" ಎಂದನು. ಆಗ ಬಲ್ಲಾಳನು ಇದನ್ನು ಪರೀಕ್ಷಿಸಲು ದ್ವಾರಸಮುದ್ರದಿಂದ ಬೇಲೂರಿಗೆ ಪದ್ಮರಸನನ್ನು ಒಡಗೊಂಡು ರಥಾರೂಢನಾಗಿ ಬಂದನು. ಅವರ ಜತೆಯಲ್ಲಿ

ಈ ಮಹತ್ವದ ಘಟನಾವಳಿಗಳನ್ನು ಕಣ್ಣಾರೆ ಕಾಣಲು, ದಂಡನಾಯಕರು, ಮಂಡಲಾಧಿಪರು, ಸಚಿವರು, ಮಕುಟವರ್ಧನರು, ರಾಜಪುತ್ರರು, ನಿಯೋಗಿಗಳು, ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು, ಶಾಸ್ತ್ರ ಪಂಡಿತರು, ಷಡುದರ್ಶನಕಲಾವಿದರು ಮೊದಲಾದವರೆಲ್ಲರೂ ರಾಜನ ಜತೆಯಲ್ಲಿ ಬರುತ್ತಿದ್ದರು. ಬೇಲೂರಿನ ಜನರು ಈ ಸಂದರ್ಭದಲ್ಲಿ ಗೆಲ್ಲುವವರು ಪಿಸುಣರೊ? ಪದ್ಮರಸರೊ? ಎಂದು ಕುತೂಹಲದಿಂದ ನೋಡುತ್ತಿದ್ದರು. ಆಗ ರಾಜ, ಮಂತ್ರಿ ಎಲ್ಲರೂ ಈಗ ಬೇಲೂರಿನಲ್ಲಿ 'ಬಿಟ್ಟಿಸಮುದ್ರ' ಎಂಬ ಕೆರೆಯಿರುವ ಸ್ಥಳದಲ್ಲಿ ಬಂದು ನಿಂತರು. ಆಗ ಪದ್ಮರಸನು ಶಿವಶರಣರ ಸಮೂಹವನ್ನು ಈಗ ಕೆರೆಯಿರುವ ಪ್ರದೇಶದಲ್ಲಿ ನಿಲ್ಲಿಸಿ, ಸುತ್ತಲೂ 'ಓಂನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ಜಪಿಸಿ "ನಾನು ವೀರಶೈವ ದೀಕ್ಷಾನಿಷ್ಠನಾಗಿದ್ದರೆ, ಪರನಾರೀ ಸಹೋದರನಾಗಿದ್ದರೆ, ಈ ಸ್ಥಳದಲ್ಲಿ ಒಂದು ಸುಂದರವಾದ ತಟಾಕವು ಕಂಗೊಳಿಸಲಿ, ಅದರ ಹಿಂದೆ, ಗದ್ದೆ, ತೋಟ ಮೊದಲಾದ ಪ್ರಕೃತಿ ವೈಭವವು ಮೆರೆಯಲಿ" ಎಂದು ಪ್ರಾರ್ಥಿಸಿದನು. ಶರಣರು, ಉಘೇ, ಉಘೇ ಎಂದು ಜಯ ಘೋಷಮಾಡಿದರು. ಆಗ ಅಲ್ಲಿ ಒಂದು ಸುಂದರವಾದ ಕೆರೆಯು ಕಂಗೊಳಿಸಿತು. ಶಿವನ ಜಡೆಯಲ್ಲಿದ್ದ ಗಂಗೆಯು ಜುಳುಜುಳು ಎಂದು ಬಂದು ತುಂಬಿಕೊಂಡಳು. ಹಿಂದೆ, ಗದ್ದೆ, ತೋಟ ಕಂಗೊಳಿಸಿದುವು. ಶಿವಶರಣರು ಜಯಘೋಷಮಾಡಿದರು. ಈ ಅಚ್ಚರಿಯನ್ನು ಅರಸ ಬಲ್ಲಾಳನು ಕಣ್ಣಾರೆ ನೋಡುತ್ತಿದ್ದನು. ಪದ್ಮರಸನ ಕ್ರಿಯಾಸಿದ್ಧಿಗೆ ತಲೆದೂಗಿದನು. ಪ್ರತಿವಾದಿಗಳ ಮುಖಗಳು ಅರುಣೋದಯದ ಸಮಯದಲ್ಲಿ ಕುಂದುವ ಕನ್ನೈದಿಲೆಯಂತೆ ಕಪ್ಪಾಗಿ ಹೋದುವು. ಬಲ್ಲಾಳರಾಯನು ಪದ್ಮರಸನನ್ನು ಅಭಿನಂದಿಸಿ ಗೌರವಿಸಿದನು. ಆಗ ಜನರು, –'ಮಹತ್ತ್ವದಿಂದ ಹನ್ನೆರಡುಸಾವಿರ ನರಿಗಳನ್ನು ಕುದುರೆಯನ್ನಾಗಿಮಾಡಿದ ಚೊಕ್ಕನಾಯನಾರು ಕಥೆಯನ್ನೂ, ಇಳಿಹಾಳ ಬೊಮ್ಮಯ್ಯನು ತನ್ನ ಭೂಮಿಯಲ್ಲಿ ಬಿತ್ತದೆ ಬೆಳೆದ ಕಥೆಯನ್ನೂ' ಸ್ಮರಿಸಿಕೊಂಡರು. ಶರಣರ ಮಹಿಮೆಯು ನಿಜಕ್ಕೂ ಆಗಾಧ ಎಂದು ಕೊಂಡರು.

ಪದ್ಮರಸನು ಶಿವನಿಂದ ಬಿಟ್ಟಿಯಾಗಿ ಕಟ್ಟಿಸಿದ ಕೆರೆಯಾದುದರಿಂದ ಅದಕ್ಕೆ **ಬಿಟ್ಟಿ ಸಮುದ್ರ** ಎಂಬ ಹೆಸರುಂಟಾಗಿದೆ. ಪದ್ಮರಸನು ಕೆರೆಯ ಪವಾಡವನ್ನು ಮೆರೆದುದರಿಂದ ಅವನಿಗೆ **ಕೆರೆಯ ಪದ್ಮರಸ** ಎಂಬ ಹೆಸರುಂಟಾಯಿತೆಂದು ಪುರಾಣಗಳು ಹೇಳುತ್ತಿವೆ. ಕೆರೆಯ ಪದ್ಮರಸನು ಮಂತ್ರಿಯಾಗಿದ್ದುದು ೧೨೨೦ ರಿಂದ ೧೨೩೫ರ ವರೆಗೆ ಆಳಿದ ಇಮ್ಮಡಿ ನರಸಿಂಹ ಬಲ್ಲಾಳನಲ್ಲಿ ಎಂದು ಹೇಳಲಾಗಿದೆ. ಹರಿಹರ, ರಾಘವಾಂಕ, ಕೆರೆಯ ಪದ್ಮರಸ ಹಾಗೂ ಕುಮಾರ ಪದ್ಮರಸರು ಸಮಕಾಲೀನರು. ಈ ಪವಾಡವನ್ನು ಮೆರೆದಮೇಲೆ ಪದ್ಮರಸನು ಮಂತ್ರಿಪದವಿಯನ್ನು ತ್ಯಜಿಸಿ ಶರಣಮಾರ್ಗದಲ್ಲಿ ನಿರತನಾದನು. ಕಡೆಗೆ ಕಾಶಿಗೆಹೋಗಿ ಅಲ್ಲಿ ವಿಶ್ವನಾಥನಲ್ಲಿ ಬಯಲಾದನು.

ಪದ್ಮರಸನ 'ದೀಕ್ಷಾಬೋಧೆ' ಅಚ್ಚಾಗಿಲ್ಲ. ಅದು ರಗಳೆಯ ಛಂದಸ್ಸಿನಲ್ಲಿದೆ.: ಈತನ ಸಂಸ್ಕೃತ 'ಸಾನಂದ ಚರಿತೆ' ಸಿಕ್ಕಿಲ್ಲ. ಆದರೆ ಇದರ ಅನುವಾದ ಕುಮಾರ ಪದ್ಮರಸನ 'ಸಾನಂದ ಚರಿತೆ' ಸಿಕ್ಕಿದೆ. ಇದು ಅಚ್ಚಾಗಿಲ್ಲ. ಇದು ವಿವಿಧ ಷಟ್ಪದಿಯಲ್ಲಿದೆ.'ಸಕಲೇಶ ಮಾದರಸನ' ವಚನ ಗ್ರಂಥ ಪ್ರಕಟವಾಗಿದೆ.

-(ಸಂ)

ಶಿವಶರಣರ ಕ್ಷೇತ್ರಗಳು

ಹನ್ನೆರಡನೆಯ ಶತಮಾನದಲ್ಲಿ, ಕರ್ಣಾಟಕದ ಇಂಗಳೇಶ್ವರ-ಬಾಗೆವಾಡಿಯಲ್ಲಿ ಹುಟ್ಟಿಬಳೆದು, ಕೂಡಲ ಸಂಗಮದಲ್ಲಿ ಮಹರ್ಷಿ ಜಾತವೇದರಲ್ಲಿ ವಿದ್ಯಾಭ್ಯಾಸಮಾಡಿ, ಮೊದಲು ಮಂಗಳವಾಡದಲ್ಲಿ, ಅನಂತರ ಕಲ್ಯಾಣದಲ್ಲಿ ಬಿಜ್ಜಳರಾಜನ ಓಲಗದಲ್ಲಿ ಸುಮಾರು ೧೦ ವರ್ಷಗಳಕಾಲ (ಕ್ರಿ. ಶ. ೧೧೫೭ ರಿಂದ ೧೧೬೭) ಕರಣಿಕನಾಗಿ., ಮಂತ್ರಿಯಾಗಿ, ಮಹಾ ಮಂತ್ರಿಯಾಗಿ ರಾಜಕಾರ್ಯವನ್ನು ನಿರ್ವಹಿಸಿ, ಹಿಂದೂಸಮಾಜದಲ್ಲಿನ ತರ-ತಮ ಭಾವಗಳನ್ನು, ಹಿಂಸಾತ್ಮಕ ಕರ್ಮಗಳನ್ನು, ಮಾನವಜಾತಿಗೆ ಅಪಮಾನಕರವಾದ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಅತ್ಯದ್ಭುತವಾದ ಕ್ರಾಂತಿಯನ್ನು ಮಾಡಿ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳಲ್ಲಿ ಸಮಾಜಕ್ಕೆ ಪ್ರಗತಿದಾಯಕವಾದ, ನಿರ್ಮಲವಾದ ಮಾರ್ಗವನ್ನು ತೋರಿಸಿ, ಹಿಂದಿನ ಬುದ್ಧದೇವನಂತೆ, ಇಂದಿನ ಮಹಾತ್ಮ ಗಾಂಧಿಯಂತೆ, ವಿಶ್ವದ ವಿಭೂತಿಗಳಾದ, ಸಾಕ್ರೆಟೀಸ್, ಕನ್‌ಫ್ಯೂಷಿಯಸ್, ಏಸುಕ್ರಿಸ್ತ, ಟಾಲ್‌ಸ್ಟಾಯ್ ಮೊದಲಾದವರಂತೆ, ವಿಶ್ವಮಾನವರೆನಿಸಿದ ಭಕ್ತಿಭಂಡಾರ ಬಸವಣ್ಣನವರ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ, ಅವರು ಹುಟ್ಟಿದ, ಬಳೆದ, ಅಭ್ಯಾಸಮಾಡಿದ, ಮತ್ತು ಅಭ್ಯುದಯವನ್ನು ಹೊಂದಿದ, ಕಡೆಗೆ ಐಕ್ಯವಾದ ಕ್ಷೇತ್ರಗಳ ಪರಿಚಯವನ್ನು ಮಾಡಿಕೊಡುವುದು ಅಗತ್ಯವಾದ ಕಾರ್ಯ. ಅಂತಹ ಬಸವಣ್ಣನವರ ಕ್ಷೇತ್ರಗಳ ಪರಿಚಯವನ್ನು ಸಂಗ್ರಹವಾಗಿ ಇಲ್ಲಿ ಮಾಡಿಕೊಡುವುದೇ ಈ ಬರೆಹದ ಮುಖ್ಯೋದ್ದೇಶ.

೧. **ಇಂಗಳೇಶ್ವರ-ಬಾಗೆವಾಡಿ:** ಕರ್ಣಾಟಕದಲ್ಲಿ "ಬಾಗೆವಾಡಿ" ಎಂಬ ಹೆಸರಿನ ಹಲವು ಗ್ರಾಮಗಳಿವೆ. ಹಿರೇಬಾಗೆವಾಡಿ, ಕಿರೇಬಾಗೆವಾಡಿ, ಬೆಲ್ಲದ ಬಾಗೆವಾಡಿ ಎಂಬ ಹೆಸರುಗಳ ಜತೆಯಲ್ಲಿಯೇ 'ಇಂಗಳೇಶ್ವರ-ಬಾಗೆವಾಡಿಯು' ಪ್ರಸಿದ್ಧವಾಗಿದೆ. ಬಸವಣ್ಣನವರು ಇಲ್ಲಿ ಜನಿಸಿದ ನಿಮಿತ್ತ (ಸು. ಕ್ರಿ. ಶ. ೧೧೩೧) ಈಗ ಇಂಗಳೇಶ್ವರ-ಬಾಗೆವಾಡಿಯನ್ನು **'ಬಸವನ ಬಾಗೆವಾಡಿ'** ಎಂದು ಜನರು ಕರೆಯುತ್ತಾರೆ.

ಹತ್ತು-ಹನ್ನೊಂದು-ಹನ್ನೆರಡನೆಯ ಶತಮಾನಗಳಲ್ಲಿ ಬಿಜಾಪುರ ಜಿಲ್ಲೆಯ ಇಂಗಳೇಶ್ವರವು ಒಂದು ಪ್ರಮುಖ ರಾಜಕೀಯ ಸ್ಥಳವಾಗಿತ್ತು. ಇದು ತರ್ದವಾಡಿ ನಾಡಿನ(೧೦೦೦) ಪ್ರಮುಖ ಪಟ್ಟಣವಾಗಿತ್ತು. ಮೊದಲು ಈ ಗ್ರಾಮವು ಜೈನರ ಕೇಂದ್ರವೆನಿಸಿತ್ತು. ಇಲ್ಲಿ ಸುಪ್ರಸಿದ್ಧವಾದ ಚಂದ್ರ ಪ್ರಭನ ಬಸದಿ ಇತ್ತು. ಕನ್ನಡದಲ್ಲಿ ವಿಖ್ಯಾತವಾದ 'ಚಂದ್ರಪ್ರಭ ಪುರಾಣ' ವನ್ನು ಬರೆದ 'ಅಗ್ಗಳಕವಿ' (ಕ್ರಿ. ಶ. ೧೧೮೯) ಈ ಊರಿನವನು. ಇವನು ತನ್ನ ಗ್ರಂಥದ ಪೀಠಿಕೆಯಲ್ಲಿ "ಸುರರಾಜಾರ್ಚಿತನಿಂಗಳೇಶ್ವರಪುರ ಶ್ರೀ ತೀರ್ಥ ಚಂದ್ರಪ್ರಭಂ ಪರಮೇಶಂ" ಎಂದು ಹೇಳಿ, ಇಂಗಳೇಶ್ವರ ಚಂದ್ರಪ್ರಭನು ತನ್ನ ಕಾವ್ಯದ ಕಥಾನಾಯಕನೆಂದು ಹೇಳಿದ್ದಾನೆ. "ಈತನು ಈ ಊರಿ ನವನೆಂದು ಊಹಿಸಬಹುದಾಗಿದೆ." ಎಂದು ಕವಿಚರಿತ್ರೆಯಲ್ಲಿ ಹೇಳಿದ್ದಾರೆ. (ಕನ್ನಡ ಕವಿಚರಿತೆ, ಭಾಗ-೧, ಪುಟ-೨೮೪) ಕಲಚುರಿ ಅರಸರ ಪ್ರಮುಖ ಸ್ಥಲವಾದ ಈ ಇಂಗಳೇಶ್ವರವು ಹಿಂದಿನ ಶತಮಾನಗಳಲ್ಲಿ ತರ್ದವಾಡಿ ನಾಡಿನ ಗಣ್ಯಪಟ್ಟಣವಾಗಿದ್ದಂತೆ ತೋರುತ್ತದೆ. ಇಲ್ಲಿ ಅನೇಕ ಶೈವ, ವೈಷ್ಣವ ದೇವಾಲಯಗಳೂ, ಶಿಲಾಶಾಸನಗಳೂ ಇವೆ. ಬಿಜ್ಜಳನ ಮಗನಾದ ರಾಯಮುರಾರಿಯು ಹಾಕಿದ ಒಂದು ಪ್ರಸಿದ್ಧ ಶಿಲಾಶಾಸನವು ಇಲ್ಲಿನ ಶಿವ ದೇವಸ್ಥಾನದಲ್ಲಿವೆ.

ಈಗ ಇಂಗಳೇಶ್ವರದಲ್ಲಿ ಜೈನರಾಗಲಿ, ಜಿನನ ಸ್ಮಾರಕಗಳಾಗಲಿ ಇಲ್ಲದಿರುವುದು ಆಶ್ಚರ್ಯಕರ. ಈಗಿನ ಇಂಗಳೇಶ್ವರದ ಹೊರಗಡೆ "ತಿಂಗ ಳೇಶ್ವರ" ಎಂಬ ಒಂದು ಊರಿತ್ತೆಂದೂ, ಅಲ್ಲಿ ಚಂದ್ರಪ್ರಭನ ಬಸದಿಯು ಸಹ ಇತ್ತೆಂದೂ ಜನರು ಹೇಳುತ್ತಾರೆ. ಈಗ ಅಲ್ಲಿ ಅಪೆಲ್ಲಾ ನೆಲಸಮ ವಾದ ನಿದರ್ಶನಗಳಿವೆ. ಅದು ಚಂದ್ರಪ್ರಭನ ಬಸದಿ ಆಗಿರಬಹುದು. ಇಂಗಳೇಶ್ವರದಲ್ಲಿ ಲಿಂಗವಂತರು ಬಹಳವಾಗಿ ವಾಸಿಸುತ್ತಿದ್ದಾರೆ. ಹನ್ನೆರ ಡನೆಯ ಶತಮಾನದಲ್ಲಿ ಆಚಾರ್ಯ ರೇವಣಸಿದ್ಧನು ಮಾಡಿದ ವೀರಶೈವ ಧರ್ಮಪ್ರಸಾರ ಕಾರ್ಯದಲ್ಲಿ, ಇಂಗಳೇಶ್ವರದ ಜೈನರೆಲ್ಲರೂ ಲಿಂಗವಂತ ದೀಕ್ಷೆ ಯನ್ನು ಕೈಗೊಂಡಂತೆ ತರ್ಕಿಸಬಹುದಾಗಿದೆ. ಇದಕ್ಕೆ ನಿದರ್ಶನವಾಗಿ ಇಂಗಳೇಶ್ವರದ ಗುಡ್ಡದಲ್ಲಿ ಶ್ರೀ ರೇವಣಸಿದ್ಧೇಶ್ವರ ಗವಿ ಮತ್ತು ಅಕ್ಕ

ನಾಗಮ್ಮನ ಗವಿ ಪ್ರಸಿದ್ಧವಾಗಿವೆ. ರೇವಣಸಿದ್ಧನ ಗವಿಯಲ್ಲಿ ರೇವಣ ಸಿದ್ಧನ ಸುಂದರ ವಿಗ್ರಹವಿದೆ. ಇದು ಆತನು ಶಿವಪೂಜೆಯಲ್ಲಿ ಕುಳಿತ ಭಂಗಿಯಲ್ಲಿದೆ. ವಿಭೂತಿ, ರುದ್ರಾಕ್ಷಿ, ಲಿಂಗಧಾರಣಗಳನ್ನು ಅದರಲ್ಲಿ ನೋಡಬಹುದು. ಇದೇ ಗವಿಯಲ್ಲಿ ಚಂದ್ರಪ್ರಭನ ವಿಗ್ರಹವನ್ನು ಒಂದು ಮೂಲೆಯಲ್ಲಿ ನಿಲ್ಲಿಸಲಾಗಿದೆ. ಇದರ ರಹಸ್ಯವನ್ನು ರೇವಣಸಿದ್ಧನ ಧರ್ಮ ಪ್ರಚಾರದ ಪ್ರಭಾವವೆಂದು ಊಹಿಸಬಹುದು. ಇಂಗಳೇಶ್ವರದಲ್ಲಿರುವ **ಅಕ್ಕ ನಾಗಮ್ಮ ಗವಿ** ಜೀರ್ಣವಾಗಿದೆ. ರೇವಣಸಿದ್ಧನ ಗವಿಯಲ್ಲಿ ಪೂಜೆ ಪುರಸ್ಕಾರಗಳು ಕ್ರಮವಾಗಿ ನಡೆಯುತ್ತಿವೆ. ಶಿವಶರಣೆ ಅಕ್ಕನಾಗಮ್ಮ ಇಂಗಳೇಶ್ವರದಲ್ಲಿದ್ದಳೆಂದು ನಾವು ತರ್ಕಿಸಬಹುದು. ಬಸವ ಕಲ್ಯಾಣ ದಲ್ಲಿಯೂ ಅಕ್ಕನಾಗಮ್ಮನ ಗವಿ ಪ್ರಮುಖವಾಗಿರುವುದನ್ನು ನೋಡಿದರೆ ಬಾಲ್ಯದಿಂದಲೂ ಈಕೆ ವಿರತಿಯ ಮಾರ್ಗದಲ್ಲಿದ್ದಳೆಂದು ಊಹಿಸಬಹುದು.

ಬಾಗೆವಾಡಿಯು ಇಂಗಳೇಶ್ವರದ ವಿಸ್ತರಣ. ಅದನ್ನು 'ಅಗ್ರಹಾರ' ಎಂದು ಬಸವಪುರಾಣಗಳಲ್ಲಿ ಹೇಳಲಾಗಿದೆ. (ಬ. ರಾ. ದೇ. ರಗಳೆ, ಸ್ಥಲ-೧, ಪುಟ-೫) 'ಅಗ್ರಹಾರ' ಎಂದರೆ "ಬ್ರಾಹ್ಮಣರ ನಿವಾಸಸ್ಥಳ" ಎಂಬುದು ಸುಪ್ರಸಿದ್ಧ. ಈಗ ಬಾಗೆವಾಡಿಯು ತಾಲೂಕು ಮುಖ್ಯಸ್ಥಳ. ಇದು ಬಿಜಾಪುರದ ಆಗ್ನೇಯದಿಕ್ಕಿಗೆ ೨೫ ಮೈಲಿದೂರದಲ್ಲಿದೆ. ಇಲ್ಲಿ ಸಂಗ ಮೇಶ್ವರ, ಮಲ್ಲಿಕಾರ್ಜುನ, ಬಸವೇಶ್ವರ, ಅನಂತಶಯನ ಮುಂತಾದ ದೇವಾ ಲಯಗಳಿವೆ. ಬಾಗೆವಾಡಿಯಲ್ಲಿರುವ ಪ್ರಾಚೀನ ಸಂಗಮೇಶ್ವರ ದೇವಾಲ ಯವನ್ನು ಈಗ 'ಬಸವೇಶ್ವರ ದೇವಾಲಯ' ಎಂದು ಕರೆಯುತ್ತಾರೆ. ಬಸವೇಶ್ವರನ ತಂದೆ ತಾಯಿಗಳಾದ, ಮಾದರಸ – ಮಾದಲಾಂಬಿಕೆಯರು ಈ ದೇವಾಲಯದಲ್ಲಿ ಮೂರುವರ್ಷಕಾಲ ನಂದಿವ್ರತವನ್ನು–ಗುರುಗಳ ಅಪ್ಪ ಣೆಯಂತೆ ನಡೆಸಿದರೆಂದೂ, ಅದರ ಫಲವಾಗಿ ಬಸವೇಶ್ವರನು ಜನಿಸಿದನೆಂದೂ ಬಸವಪುರಾಣದಲ್ಲಿ ಹೇಳಿವೆ. ಇವರು ನಂದಿವ್ರತ ಆಚರಿಸಿದ ಒಂದು ಸ್ಥಳವನ್ನು ಅಲ್ಲಿ ಜನರು ತೋರಿಸುತ್ತಾರೆ. ಸ್ಥಳಪುರಾಣಗಳಲ್ಲಿ ಈ ದೇವಾ ಲಯಕ್ಕೆ 'ಸಂಗಮೇಶ್ವರ ದೇವಾಲಯ' ಎಂದು ಹೇಳಿದೆ. ಈ ದೇವಾ ಲಯದ ಪಕ್ಕದಲ್ಲಿರುವ ವಿಶಾಲವಾದ ಪುಷ್ಕರಣಿಯಲ್ಲಿ ಕಾಲುಜಾರಿಬಿದ್ದ

ಕೃಷ್ಣನನ್ನು ಬಾಲಬಸವಣ್ಣ ಬದುಕಿಸಿದನೆಂಬ ಕಥೆ ಬಸವಪುರಾಣದಲ್ಲಿದೆ. (ಶರಣ ಲೀಲಾಮೃತ, ಪುಟ-೧೧೬, ಮೈಸೂರುಪ್ರತಿ) ಬಿಜಾಪುರ ಜಿಲ್ಲೆಯಲ್ಲಿ ಸಂಗಮೇಶ್ವರ ದೇವಾಲಯಗಳು ಬಹಳ ಕಡೆ ಇವೆ. ಇವೆಲ್ಲಾ ಕೂಡಲ ಸಂಗಮದ ಪ್ರಭಾವವೆಂದು ಕಾಣುತ್ತದೆ. ಈ ಸಂಗಮೇಶ್ವರ ದೇವಾಲಯವು ಹನ್ನೆರಡನೆಯ ಶತಮಾನದಷ್ಟು ಪ್ರಾಚೀನ ವಾದುದು ಎಂಬುದನ್ನು ಶಿಲ್ಪಶಾಸ್ತ್ರದ ಪರಿಚಯವುಳ್ಳವರು ತಿಳಿಯಬಹುದು. ಈ ಬಾಗೆವಾಡಿಯಲ್ಲಿ ಬಸವೇಶ್ವರನ ಮನೆತನದವರೆಂದು ಹೇಳಿಕೊಳ್ಳುವ ಸ್ಮಾರ್ತ ಬ್ರಾಹ್ಮಣ ಜನರಿದ್ದಾರೆ. ಇವರು ಪ್ರತಿವರ್ಷ ಶಿವರಾತ್ರಿಯ ಕಾಲದಲ್ಲಿ ಜಂಗಮರಿಂದ ಕಂಬಿಯನ್ನು ಶ್ರೀಶೈಲಕ್ಕೆ ಕಳುಹಿಸುತ್ತಾರೆ. ಶ್ರೀಶೈಲದಲ್ಲಿ ಬರುವ ಸಾವಿರಾರು ಕಂಬಿಗಳಲ್ಲಿ ಬಾಗೆವಾಡಿಯಿಂದ ಬರುವ ಬಸವೇಶ್ವರರ ಕಂಬಿಗೆ ಅಗ್ರಪೂಜೆ ಸಲ್ಲುತ್ತದೆ. ಇದರಿಂದ ಬಸವಣ್ಣನವರು ಬಾಗೆವಾಡಿಯಲ್ಲಿ ಹುಟ್ಟಿದರು ಎಂಬ ಪುರಾಣದ ಮಾತುಗಳಿಗೆ ಆಚರಣೆಯ ನಿದರ್ಶನ ಸಿಕ್ಕಂತಾಗಿದೆ. ಬಸವಪುರಾಣದಲ್ಲಿ ಬಸವಣ್ಣನವರು ಹುಟ್ಟಿದ ಸ್ಥಳವನ್ನು 'ಇಂಗಳೇಶ್ವರ-ಬಾಗೆವಾಡಿ' ಎಂದು ಹೇಳಿದೆ. (ಕಾಂಡ ೧, ಸಂಧಿ ೨. ಪ ೪೫) ಗಣಪತಿಗುಡಿ ಮತ್ತು ಸಾರಂಗಬಾವಿಯ ಬಸದಿಗಳಲ್ಲಿ ಶಿಲಾಶಾಸನಗಳಿವೆ. ಈಚೆಗೆ ಸಂಗಮೇಶ್ವರ ಅಥವಾ ಬಸವೇಶ್ವರಗುಡಿ ಕಂಬದಲ್ಲಿ ಎರಡು ಶಿಲಾಲಿಪಿಗಳು ಬೆಳಕಿಗೆ ಬಂದಿವೆ. ಬಾಗೆವಾಡಿಗೆ ಪೂರ್ವದಲ್ಲಿ 'ಭೋಗವತಿ' ಎಂಬ ಹೆಸರಿತ್ತೆಂದು ಹೇಳಲಾಗಿದೆ. (ಕರ್ನಾಟಕ ಗೆಜಟಿಯರ್, ಪುಟ-೨೫೨)

ಈಗ ಬಾಗೆವಾಡಿಗೂ ಇಂಗಳೇಶ್ವರಕ್ಕೂ ಮಧ್ಯೆ ಆರುಮೈಲಿ ಅಂತರವಿದೆ. ಈ ಇಂಗಳೇಶ್ವರದಲ್ಲಿ, ಸೋಮೇಶ್ವರ, ನಾರಾಯಣ, ಕಲಮೇಶ್ವರ, ಶೋಭನದೇವ ಎಂಬ ಗುಡಿಗಳಿವೆ. ಈ ಗುಡಿಯಲ್ಲಿ ಒಂದು ಶಿಲಾಲಿಪಿ ಇದೆ. ಹಾಗೆಯೇ ಸೋಮೇಶ್ವರ ಹಾಗೂ ನಾರಾಯಣ ಗುಡಿಯಲ್ಲಿಯೂ ಲಿಪಿಗಳಿವೆ. (ಕರ್ನಾಟಕ ಗೆಜಿಟಿಯರ್, ಪುಟ-೫೬೪)

೨. ಕೂಡಲ ಸಂಗಮ :- ಇದು ಬಿಜಾಪುರ ಜಿಲ್ಲೆಯಲ್ಲಿ ಪ್ರಸಿದ್ಧವಾದ ಕ್ಷೇತ್ರ. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಕೂಡುವ

ಸ್ಥಳ. ಇಲ್ಲಿ ಸುಪ್ರಸಿದ್ಧ ಸಂಗಮೇಶ್ವರ ದೇವಾಲಯವಿದೆ. ಈ ಕ್ಷೇತ್ರವು ಪ್ರಕೃತಿಸೌಂದರ್ಯದ ಮಡಲಿನಲ್ಲಿದೆ. ಇಲ್ಲಿನ ಗುಡಿಯನ್ನು ಸುಮಾರು ೮೦೦ ವರ್ಷಗಳ ಹಿಂದೆ ದ್ಯಾವನಾಯಕ ಎಂಬ ಭಕ್ತನು ಕಟ್ಟಿಸಿದನೆಂದು ಹೇಳಲಾಗಿದೆ. (ಕರ್ನಾಟಕ ಗೆಜಿಟಿಯರ್, ಪುಟ-೫೬೪) ಈ ಗುಡಿಯ ಬಲಭಾಗದಲ್ಲಿ ಇರುವ ಕಲ್ಲುಮಂಟಪವನ್ನು **'ಸಾರಂಗದೇಪ ಮಠ'** ಎಂಬು ಕರೆಯುತ್ತಾರೆ. ಪ್ರಾಯೇಣ ಬಸವೇಶ್ವರನ ಗುರುವಾದ ಜಾತವೇದ ಮುನಿ ಅಥವಾ ಈಶಾನ್ಯಗುರುವು ಈ ಮಠದ ಕುಲಪತಿ ಎಂದು ತೋರುತ್ತದೆ. ಜಾತವೇದನ ಸಮಾಧಿಯು ಸಾರಂಗಪಾಣಿ ಮಠದಲ್ಲಿದೆ.

ಬಸವೇಶ್ವರನೂ, ಅಕ್ಕನಾಗಮ್ಮನೂ, ತಮ್ಮ ಪೋಷಕರು ಕಣ್ಮರೆಯಾದಮೇಲೆ, ಬಾಗೆವಾಡಿಯನ್ನು ಬಿಟ್ಟು ಸಂಗಮಕ್ಕೆ ಬಂದು ಈ ಗುರುವಿನಾಶ್ರಯದಲ್ಲಿ ಸುಮಾರು ಹನ್ನೆರಡು ವರ್ಷಕಾಲ ಇದ್ದಂತೆಯೂ, ಅಕ್ಕನಾಗಮ್ಮನಿಗೂ ಶಿವಸ್ವಾಮಿ ಎಂಬ ಶರಣನಿಗೂ ಇಲ್ಲಿಯೇ ಲಗ್ನವಾದಂತೆಯೂ ಸಿಂಗಿರಾಜ ಪುರಾಣ ಮೊದಲಾದುವುಗಳಲ್ಲಿ ಹೇಳಿದೆ (ಸಿಂಗಿರಾಜ ಪುರಾಣ, ಪೀಠಿಕೆ. ಪುಟ ೬೦) ಸಂಗಮೇಶ್ವರದಲ್ಲಿ ಮಾಘಮಾಸದಲ್ಲಿ ಬಹಳ ದೊಡ್ಡ ಜಾತ್ರೆ ಸೇರುತ್ತದೆ. ಆಗ ಲಕ್ಷಗಟ್ಟಲೆ ಜನ ಬಂದು ತೀರ್ಥದಲ್ಲಿ ಸ್ನಾನಮಾಡಿ ಕೂಡಲ ಸಂಗಮನನ್ನು ಅರ್ಚಿಸಿ ಕೃತಾರ್ಥರಾಗುತ್ತಾರೆ. ಈ ಸಂಗಮೇಶ್ವರಕ್ಕೆ ಸ್ವಲ್ಪದೂರದಲ್ಲಿ ಕೃಷ್ಣಾತೀರದಲ್ಲಿ ರಕ್ಕಸ ತಂಗಡಿಯ ರಣಭೂಮಿ ಇದೆ. ದಾರಿಯಲ್ಲಿ ಬಸವೇಶ್ವರನ ಧರ್ಮಪತ್ನಿಯರಾದ ನೀಲಮ್ಮ ಮತ್ತು ಗಂಗಮ್ಮಗಳ ಗುಡಿಗಳನ್ನು ಅಲ್ಲಿ ಜನ ತೋರಿಸುತ್ತಾರೆ. ಆದರೆ ನೀಲಾಂಬಿಕೆ- ಗಂಗಾಂಬಿಕೆಯರು ಇಲ್ಲಿ ಲಿಂಗೈಕ್ಯರಾದಂತೆ ತೋರುವುದಿಲ್ಲ. ಈ ಸಂಗಮ ಕ್ಷೇತ್ರದಲ್ಲಿ ಬಸವಣ್ಣನವರು ಐಕ್ಯರಾದಂತೆ ಎಲ್ಲ ಗ್ರಂಥಕಾರರೂ ಹೇಳಿದ್ದಾರೆ. ಬಸವಣ್ಣನರ ಸಮಾಧಿ ಅಲ್ಲಿ ಕಾಣಿಸದಿರುವುದು ಆಶ್ಚರ್ಯಕರವಾಗಿದೆ. A

A. ಸೊಲ್ಲಾಪುರದಲ್ಲಿ ಸಿದ್ಧರಾಮ, ಹಿಪ್ಪರಗಿಯಲ್ಲಿ ಮಾಚಯ್ಯ, ಉಳವಿಯಲ್ಲಿ ಚೆನ್ನಬಸವ, ಬೇಲೂರಿನಲ್ಲಿ ರಾಘವಾಂಕ, ಕಳ್ಳಿಯದಲ್ಲಿ ಪಾಲ್ಕುರಿಕೆ ಸೋಮನಾಥ, ಎಳಂದೂರಿನಲ್ಲಿ ಷಡಕ್ಷರ ದೇವ ಇವರ ಸಮಾಧಿಗಳಿವೆ. ಆದರೆ ಸಂಗಮದಲ್ಲಿ ಬಸವಣ್ಣ, ಹಂಪೆಯಲ್ಲಿ ಹರೀಶ್ವರ, ಗುಬ್ಬಿಯಲ್ಲಿ ಮಲ್ಲಣಾರ್ಯ, ಕದಳಿಯಲ್ಲಿ ಪ್ರಭುದೇವ ಮತ್ತು ಅಕ್ಕ ಮಹಾದೇವಿ ಇವರ ಸಮಾಧಿಗಳು ಕಾಣುವುದಿಲ್ಲವೇಕೆ ಎಂಬುದು ವಿಚಾರಾರ್ಹವಾಗಿದೆ. (ಸಂ)

೩. ಬಸವ ಕಲ್ಯಾಣ :- ಇದು ವಿಶಾಲ ಮೈಸೂರು ರಾಜ್ಯದ ಬೀದರ ಜಿಲ್ಲೆಯಲ್ಲಿದೆ. ಹಿಂದೆ ಇದು ಚಾಲುಕ್ಯರ ಮತ್ತು ಕಾಲಚುರ್ಯರ ರಾಜಧಾನಿಯಾಗಿತ್ತು. (ಕ್ರಿ. ಶ. ೯೭೩ ರಿಂದ ೧೧೮೩) ಈ ಕಲ್ಯಾಣ ಪಟ್ಟಣವು, ತೈಲಪ, ವಿಕ್ರಮಾದಿತ್ಯ, ಸೋಮೇಶ್ವರ, ಚಾಲುಕ್ಯ ವಿಕ್ರಮ, ಜಗದೇಕಮಲ್ಲ, ಬಿಜ್ಜಳರಾಜ ಮೊದಲಾದ ಪರಾಕ್ರಮಶಾಲಿಗಳಾದ ರಾಜರುಗಳಿಂದ ಆಳಲ್ಪಟ್ಟಿದೆ. 'ಆಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪಂಪುರಂ' ಎಂದು ವಿಜ್ಞಾನೇಶ್ವರ ಕವಿಯು ಹೇಳಿದ್ದಾನೆ. ಕಲ್ಯಾಣ ಪಟ್ಟಣವು ಚಾಲುಕ್ಯರ ರಾಜಕೀಯ ಪರಾಕ್ರಮದಿಂದಲೂ, ಶಿವಶರಣರ ಧಾರ್ಮಿಕ ತೇಜಸ್ಸಿನಿಂದಲೂ, ಬಿಲ್ಹಣ-ವಿಜ್ಞಾನೇಶ್ವರ ಕವಿಗಳ ಪ್ರತಿಭೆಯಿಂದಲೂ ವಿಖ್ಯಾತವಾಗಿದೆ. ಇದನ್ನು ಶಿವಶರಣರು ತಮ್ಮ ವಚನಗಳಲ್ಲಿ 'ಅವಿಮುಕ್ತ ಕ್ಷೇತ್ರ' ಎಂದು ಕೊಂಡಾಡಿದ್ದಾರೆ. ಕಲ್ಬುರ್ಗಿಯಿಂದ ಅರುವತ್ತು ಮೈಲಿ ದೂರದಲ್ಲಿ ಈ ಪಟ್ಟಣವಿದೆ. ಸೊಲ್ಲಾಪುರದಿಂದಲೂ ಹೈದರಾಬಾದಿನಿಂದಲೂ ಇಲ್ಲಿಗೆ ಬರಲು ನೇರವಾದ ಮಾರ್ಗವಿದೆ. ಈಗ ಮೈಸೂರು ಸರ್ಕಾರದವರು ಇದನ್ನು ತಾಲೂಕು ಸ್ಥಳವನ್ನಾಗಿ ಮಾಡಿ ಉಪಕಾರ ಮಾಡಿದ್ದಾರೆ. ಈಗ ಕಲ್ಯಾಣವು ಸುಮಾರು ಇಪ್ಪತ್ತುಸಾವಿರ ಜನಸಂಖ್ಯೆಯುಳ್ಳ ಪಟ್ಟಣವಾಗಿದೆ. ಚಾಲುಕ್ಯರ ಕಾಲದಲ್ಲಿ ಸುಮಾರು ೧೦ ಲಕ್ಷ ಜನಸಂಖ್ಯೆಯು ಈ ನಗರದಲ್ಲಿ ಇತ್ತೆಂದು ಚರಿತ್ರೆಕಾರರು ಹೇಳುತ್ತಾರೆ. ಚಾಲುಕ್ಯರ ತೈಲಪನು ಕ್ರಿ. ಶ. ೯೭೩ ರಲ್ಲಿ ಈ ಪಟ್ಟಣವನ್ನು ಕಟ್ಟಿಸಿದಂತೆ ತಿಳಿದು ಬಂದಿದೆ. ೧೧ ಮತ್ತು ೧೨ ನೆಯ ಶತಮಾನಗಳಲ್ಲಿ ಈ ಪಟ್ಟಣದ ಕೀರ್ತಿ ಸಮಗ್ರ ಭಾರತವನ್ನು ವ್ಯಾಪಿಸಿತ್ತೆಂದು ಹೇಳಬಹುದು. ಚಾಲುಕ್ಯ ವಿಕ್ರಮನ ಆಸ್ಥಾನಕ್ಕೆ ಕಾಶ್ಮೀರದಿಂದ ಬಿಲ್ಹಣ ಕವಿ ಬಂದು ಆ ಮಹಾರಾಜನನ್ನು ಕುರಿತು 'ವಿಕ್ರಮಾಂಕ ದೇವ ಚರಿತಂ' ಎಂಬ ಮಹಾಕಾವ್ಯವನ್ನು ಬರೆದಿದ್ದಾನೆ. (ಕ್ರಿ. ಶ. ೧೦೭೭-೧೧೨೭) ಅದೇ ಕಾಲದಲ್ಲಿ ವಿಜ್ಞಾನೇಶ್ವರನೆಂಬ ಪಂಡಿತನು 'ಮಿತಾಕ್ಷರಂ' ಎಂಬ ಸ್ಮೃತಿಗ್ರಂಥವನ್ನು ರಚಿಸಿದ್ದಾನೆ. ಸುಮಾರು ಕ್ರಿ.ಶ. ೧೧೬೨ ರಲ್ಲಿ ಚಾಲುಕ್ಯರ ಮಾಂಡಲಿಕನಾಗಿದ್ದ ಮಂಗಳವಾಡದ ಕಲಚುರಿ ಬಿಜ್ಜಳರಾಜನು, ಅರಸ ತೈಲಪನನ್ನು ಓಡಿಸಿ ಕಲ್ಯಾಣದ ಸಿಂಹಾಸನ

ವನ್ನು ಆಕ್ರಮಿಸಿಕೊಂಡನು. ಆದರೆ ಕಾಲಚುರ್ಯರ ರಾಜ್ಯಭಾರವು ಸುಮಾರು ೨೨ ವರ್ಷಕ್ಕಿಂತ ಹೆಚ್ಚುಕಾಲ ಕಲ್ಯಾಣದಲ್ಲಿ ನಡೆದಂತೆ ತೋರುವುದಿಲ್ಲ. ಬಸವಣ್ಣನವರ ಕಾಲದಲ್ಲಿ ಇಲ್ಲಿ 'ಅನುಭವ ಮಂಟಪವು' ಸ್ಥಾಪನೆ ಯಾಗಿ ಈ ಕಲ್ಯಾಣದ ಕೀರ್ತಿಯು ಸಮಗ್ರ ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ವ್ಯಾಪಿಸುವಂತೆ ಮಾಡಿತು. ಈ ಅನುಭವ ಮಂಟಪವು ಈಗಿನ ತ್ರಿಪುರಾಂತಕನ ಗುಡಿಯ ಮುಂಭಾಗದಲ್ಲಿತ್ತು. (ಕ್ರಿ.ಶ. ೧೧೬೨-೧೧೬೭)

ಅಲ್ಲಾವುದ್ದೀನನ ಸೇನಾಪತಿಯಾದ ಮಲ್ಲಿಕಾಫರನು ಸುಮಾರು ಕ್ರಿ.ಶ. ೧೩೧೦ ರಲ್ಲಿ ಉತ್ತರದಿಂದ ದಕ್ಷಿಣಕ್ಕೆ ದಂಡೆತ್ತಿ ಬರುವಾಗ ಕಲ್ಯಾಣ ಪಟ್ಟಣವನ್ನು ಮೊದಲು ಕೊಳ್ಳೆಹೊಡೆದು ಅನೇಕ ಕಟ್ಟಡಗಳನ್ನು ಕೆಡವಿಸಿದನು. ಇವನ ದಾಳಿಯ ಅನಂತರ ಕಲ್ಯಾಣವು ಬಹಮನಿರಾಜ್ಯಕ್ಕೆ ಸೇರಿತು. ಕಡೆಗೆ ನೈಜಾಮನ ಅಧೀನದಲ್ಲಿದ್ದ ಒಬ್ಬಮಹಮದೀಯನಿಗೆ ಜಹಗೀರಾಗಿ ಕೊಡಲ್ಪಟ್ಟಿತು. ಆ ಕಾಲದಲ್ಲಿ ಕಲ್ಯಾಣದ ಅವನತಿ ಬಹಳವಾಗಿ ನಡೆಯಿತು. ೧೯೪೮ ರಲ್ಲಿ ಕೇಂದ್ರ ಸರ್ಕಾರವು ಹೈದರಾಬಾದು ರಾಜ್ಯದ ಮೇಲೆ ಕೈಕೊಂಡ ಪೋಲೀಸು ಕಾರ್ಯಕ್ರಮದ ಪರಿಣಾಮವಾಗಿ ಕಲ್ಯಾಣವು ಆ ದುಷ್ಟಶಕ್ತಿಗಳಿಂದ ದೂರವಾಯಿತು. ೧೯೫೬ ರಲ್ಲಿ ರಾಜ್ಯ ಪುನರ್ವಿಂಗಡನಾಸಮಿತಿಯ ಶಿಫಾರಸಿನಂತೆ ಬೀದರ ಜಿಲ್ಲೆಯು ಮೈಸೂರು ಸರ್ಕಾರದ ಅಧೀನಕ್ಕೆ ಬಂದಿತು. ಅಲ್ಲಿಂದ ಕಲ್ಯಾಣದ ಭಾಗ್ಯ ತೆರೆಯಿತು. ಕಲ್ಯಾಣದಲ್ಲಿ ಈ ಮುಂದೆ ಹೇಳುವ ಸ್ಥಳಗಳು ದರ್ಶನಾರ್ಹವೆನಿಸಿವೆ.

೧. **ತ್ರಿಪುರಾಂತಕನ ಕೆರೆ** ;– ಕಲ್ಯಾಣಕ್ಕೆ ಪ್ರವೇಶ ಮಾಡಿದ ಕೂಡಲೇ ಅಲ್ಲಿ ನಾವು ಮೊದಲು ನೋಡಬೇಕಾದುದು ಈ ಪುರಾತನ ಕೆರೆ. ಶಿವಶರಣರ ಧಾರ್ಮಿಕ ಚಟುವಟಿಕೆಗಳು ಈ ಕೆರೆಯ ಸುತ್ತಲೂ ಆವರಿಸಿದ್ದಂತೆ ಕಾಣುತ್ತದೆ. ಅಕ್ಕನಾಗಮ್ಮನಗವಿ, ನುಲಿಯ ಚಂದಯ್ಯನ ಗವಿ, ಬಿಲ್ವವನ, ರುದ್ರಮುನಿಗವಿ, ಪಂಚಸೂತ್ರಗವಿ, ರೇವಣಸಿದ್ಧನ ಚಂಗಲ್ಲುಮಂಟಪ ಇವೆಲ್ಲವೂ ಈ ಕೆರೆಯ ಸುತ್ತಲೂ ಇವೆ. ಈ ಕೆರೆಯ ದಡದಲ್ಲಿ ನಿಂತು ಕ್ಷಣಕಾಲ ಶಾಂತಚಿತ್ತದಿಂದ ವಿಚಾರ ಮಾಡಿದರೆ, ೮೦೦ ವರ್ಷಗಳ ಹಿಂದೆ ನಡೆದ ಬಸವಣ್ಣನವರ ಕ್ರಾಂತಿಯ ಚಿತ್ರಗಳು ನಮ್ಮ

ಕಣ್ಣಮುಂದೆ ಕಟ್ಟಿದಂತಾಗುತ್ತವೆ. ತ್ರಿಪುರಾಂತಕನ ಕೆರೆಯ-ಬಿಲ್ವವನವು ನೂರಾರು ಬಿಲ್ವಪತ್ರೆಯ ಮರಗಳಿಂದ ಕೂಡಿದೆ. ಘನಲಿಂಗಿ ರುದ್ರಮುನಿಯ ವಿಶಾಲವಾದ ಗವಿಯು ಅಲ್ಲಿಯೇ ವಿರಾಜಮಾನವಾಗಿದೆ. ಶಿವಶರಣರು ನಡೆಸುತ್ತಿದ್ದ, ಲಿಂಗಧಾರಣ, ಶಿವದೀಕ್ಷೆ ಮೊದಲಾದ ಧಾರ್ಮಿಕ ಕಾರ್ಯಗಳಿಗೆ ಇದು ಕೇಂದ್ರ ಸ್ಥಳವಾಗಿತ್ತೆಂದು ನಾವು ತರ್ಕಿಸಬಹುದು. ಈ ಕೆರೆಯ ಮತ್ತೊಂದು ಭಾಗದಲ್ಲಿ ಅಕ್ಕನಾಗಮ್ಮನ ವಿಶಾಲವಾದ ಗವಿ ಇದೆ. ಅನುಭವ ಮಂಟಪದ ಪೂರ್ವಭಾವೀ ಆಲೋಚನೆಯು ಈ ಗವಿಯಲ್ಲಿ ನಡೆಯುತ್ತಿತ್ತೆಂದು ಊಹಿಸಬಹುದು. ಚೆನ್ನಬಸವಣ್ಣನಿಗೂ ನಿವಾಸವಾಗಿದ್ದಿರಬಹುದು. ಈಗ ಅಲ್ಲಿ ನೂತನ ಅನುಭವ ಮಂಟಪ ರಚನೆಯಾಗಿದೆ.

೨. **ಪ್ರಭುದೇವರ ಮಠ** :- ಇದು ಅಲ್ಲಮ ಪ್ರಭುದೇವರ ನಿವಾಸ, ಮತ್ತು ಶೂನ್ಯಸಿಂಹಾಸನದ ಮೂಲಸ್ಥಾನ ಎಂದು ಕರೆಯುತ್ತಾರೆ. ಇದು ಕಲ್ಯಾಣದಲ್ಲಿ ಪ್ರಶಾಂತವಾದ ಸ್ಥಳವಾಗಿದೆ. ಆ ಮಠದಲ್ಲಿ ಪ್ರಭುದೇವರ ಗದ್ದುಗೆ ಇದೆ. ಆ ಗದ್ದುಗೆಯ ಮೇಲೆ ಸಕ್ಕರೆ-ಜೇನುತುಪ್ಪ ಸುರಿದರೆ, ನೊಣ, ಇರುವೆ ಮೊದಲಾದುವು ಇಂದಿಗೂ ಬರುವುದಿಲ್ಲ ಎಂಬುದನ್ನು ಕಾಣಬಹುದು. ಇದು ಪ್ರಭುವಿನ ಪ್ರಭಾವವೆಂದು ಜನರು ಹೇಳುತ್ತಾರೆ. 'ಶ್ರೀಶೈಲದ ಶಿಖರದ ಮೇಲೆ ಕಾಗೆಗಳು ಹಾರಾಡುವುದಿಲ್ಲ' ಎಂಬುದನ್ನು ನಾವು ನೋಡಿದ್ದೇವೆ. ಇದೆಲ್ಲವೂ ಕ್ಷೇತ್ರ ಮಹಿಮೆ. "ನಿಂದ ನೆಲದ ಗುಣ" ಎಂದು ನಾವು ತಿಳಿಯಬಹುದು.

೩. **ಘನಲಿಂಗಿ ರುದ್ರಮುನಿ ಗವಿ** :- ಆಚಾರ್ಯ ರೇವಣಸಿದ್ಧನ ಸುಪುತ್ರನಾದ ಘನಲಿಂಗಿ ರುದ್ರಮುನಿಯು ಬಸವಣ್ಣನವರ ಧರ್ಮಕ್ರಾಂತಿಗೆ ಬಲಭುಜವಾಗಿದ್ದನು. ಚೆನ್ನಬಸವಣ್ಣ, ಮಡಿವಳ ಮಾಚಯ್ಯ ಮತ್ತು ರುದ್ರಮುನಿ ಇವರು ಬಸವಣ್ಣನವರ ಕ್ರಾಂತಿಯನ್ನು ಮುಂದುವರಿಸಿದ ತ್ರಿಮೂರ್ತಿಗಳು. ಇಂದಿಗೂ ಈತನ ಗವಿಯು ವಿಶಾಲವಾಗಿಯೂ ಸುಂದರವಾಗಿಯೂ ಗತವೈಭವದ ಸ್ಫೂರ್ತಿಯನ್ನು ಕೊಡತಕ್ಕುದಾಗಿಯೂ ಇದೆ.

೪. **ಬಸವೇಶ್ವರ ದೇವಾಲಯ** :- ಇದು ಕಲ್ಯಾಣದ ಊರು ಮಧ್ಯದಲ್ಲಿದೆ. ಸುಮಾರು ೧೫೦ × ೧೦೦ ಅಡಿಗಳ ವಿಸ್ತಾರದಲ್ಲಿ ಈ

ದೇವಾಲಯವಿದೆ. ಬಸವಣ್ಣನವರ ಹೆಸರಿನಲ್ಲಿ ಶಿವಭಕ್ತರು ಇತ್ತೀಚೆಗೆ ಇದನ್ನು ಕಟ್ಟಿಸಿದಂತೆ ಕಾಣುತ್ತದೆ. ಬಸವಣ್ಣನವರ ಹೆಸರಿನಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಈ ದೇವಾಲಯವೇ ಆಶ್ರಯವಾಗಿದೆ. ಪ್ರತಿವರ್ಷ ವೈಶಾಖಮಾಸ ಅಕ್ಷಯ ತೃತೀಯೆಯ ದಿನ ಇಲ್ಲಿ ಬಸವೇಶ್ವರ ಜಯಂತಿ–ಜಾತ್ರೆ ವೈಭವದಿಂದ ನಡೆಯುತ್ತದೆ.

೫. **ಪರುಷಗಟ್ಟೆ** :– ಇದು ಕಲ್ಯಾಣದಲ್ಲಿ ಬಸವೇಶ್ವರ ದೇವಾಲಯದ ಉತ್ತರ ಭಾಗದಲ್ಲಿದೆ. ಇದರ ಉದ್ದಳತೆ ೨೬ × ೧೫ ಚದರ ಗಜದಷ್ಟಿದೆ. ಬಸವಣ್ಣನವರು ಇಲ್ಲಿ ಕುಳಿತು ದಿನವೂ ಜಂಗಮರಿಗೆ ದಾನ ಧರ್ಮಗಳನ್ನು ಕೊಡುತ್ತಿದ್ದರೆಂದು ಹೇಳುತ್ತಾರೆ. ಈಗ ಅದರ ಪಕ್ಕದಲ್ಲಿ ಒಂದು ಮಸೀದಿ ಕಾಣಿಸುತ್ತಿದೆ. ಈ ಪರುಷಗಟ್ಟೆಯನ್ನು ಕೆಲಕಾಲ ಮಹಮದೀಯರು ಆಕ್ರಮಿಸಿದ್ದರು. ಪೋಲೀಸ್ ಕಾರ್ಯಕ್ರಮದ ಅನಂತರ ಇದು ಬಂಧನದಿಂದ ಬಿಡಲ್ಪಟ್ಟಿತು. ಊರಿನ ಲಿಂಗವಂತರ ಅಧೀನಕ್ಕೆ ಬಂದಿತು. ಬಸವಣ್ಣನವರು ಪಂಚಪರುಷ ಶಕ್ತಿಯುಳ್ಳವರಾಗಿದ್ದರೆಂಬ ಮಾತು ಪುರಾಣದಲ್ಲಿದೆ. ಅದಕ್ಕೆ ಈ ಪರುಷಗಟ್ಟೆ ನಿದರ್ಶನವಾಗಿದೆ.

೬. **ಮಡಿವಾಳ ಮಾಚಯ್ಯನ ಹೊಂಡ** :– ಕಲ್ಯಾಣದಲ್ಲಿ ಇದು ಒಂದು ಪವಿತ್ರವಾದ ಸ್ಥಳ. ಇಲ್ಲಿ ಒಂದು ಗುಡಿಯಿದೆ. ಇದು ಮಾಚಯ್ಯನ ನಿವಾಸ. ಮಾಚಯ್ಯನು ಶರಣರ ಬಟ್ಟೆಗಳನ್ನು ಒಗೆಯುತ್ತಿದ್ದ ಸ್ಥಳವಿದು. ಕಲ್ಯಾಣಕ್ಕೆ ಹೋದವರು ಇದನ್ನು ಅಗತ್ಯವಾಗಿ ನೋಡಿಕೊಂಡು ಬರುತ್ತಾರೆ. ಹೊಂಡದಲ್ಲಿ ಸ್ನಾನಮಾಡಿ ಗುಡಿದರ್ಶನ ಮಾಡುತ್ತಾರೆ ಭಾವುಕರಾದವರು. ಮಾಚಯ್ಯನು ಶರಣರ ಬಟ್ಟೆ ಒಗೆದುದೇ ಅಲ್ಲದೆ, ಶರಣ ಹೊಟ್ಟೆಯಲ್ಲಿದ್ದ ಕಾಮ – ಕ್ರೋಧವೆಂಬ ಕೊಳೆಯನ್ನು ಕೂಡ ತೊಳೆದನೆಂಬುದನ್ನು ಪುರಾಣಗಳಲ್ಲಿ ನಾವು ಓದಬಹುದು.

೭. **ಬಸವಣ್ಣನವರ ಮಹಾಮನೆ** :– ಇದು ಪುರಾಣಗಳಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಲಕ್ಷಗಟ್ಟಲೆ ಶಿವಶರಣರಿಗೆ ಆಶ್ರಯವಾಗಿದ್ದ ಸ್ಥಳ. ಈಗ ಮಹಾಮನೆಯ ನೆಲಗಟ್ಟು ಮಾತ್ರ ಇದೆ. ಈ ಮಹಾ

ಮನೆಯಲ್ಲಿ ಒಂದು ಗವಿಯಿದೆ. ಇದು ಬಸವಣ್ಣನವರು ಶಿವಪೂಜೆ ಮಾಡುತ್ತಿದ್ದ ಸ್ಥಳವೆಂದು ಹೇಳುತ್ತಾರೆ.

೮. **ಬಿಜ್ಜಳರಾಜನ ಅರಮನೆ :-** ಕಲ್ಯಾಣವನ್ನು ಪ್ರವೇಶ ಮಾಡುತ್ತಲೇ ಎಡಗಡೆ ಬಿಜ್ಜಳನ ಅರಮನೆಯ ಎತ್ತರವಾದ ನೆಲಗಟ್ಟನ್ನು ನಾವು ಕಾಣಬಹುದು. ಇತ್ತೀಚಿಗೆ ಜಾಗೀರುದಾರರು ಅಲ್ಲಿ ಒಂದು ಕಟ್ಟಡವನ್ನು ಕಟ್ಟಿದ್ದಾರೆ. ಈಗ ಆ ಸ್ಥಳವನ್ನು ಬಸವೇಶ್ವರ ಸಮಿತಿಯ ವರು ತಮ್ಮವಶಕ್ಕೆ ಕೊಂಡಿದ್ದಾರೆ. ಅದು ಈಗ ಬಸವಸಮಿತಿಗೆ ಕಾರ್ಯಾ ಲಯ ವೆನಿಸಿದೆ.

೯. **ಕಲ್ಯಾಣದ ಕೋಟೆ:-** ಕಲ್ಯಾಣದ ಗುಡ್ಡಗಳಲ್ಲಿರುವ ಕೋಟೆ ಸುಭದ್ರವಾಗಿದೆ. ಇದು ಇತ್ತೀಚಿನ ಮಹಮದೀಯರ ಕಾಲದಲ್ಲಿ ಕಟ್ಟಿದ ಕೆಲವು ಕಟ್ಟಡಗಳಿಂದ ಕೂಡಿದೆ. ಆದರೆ ಪೂರ್ವದಲ್ಲಿ ಇಲ್ಲಿ ಒಂದು ಕೋಟೆ ಇದ್ದಿರಬಹುದೆಂದು ಕಾಣುತ್ತದೆ. ಈ ಕೋಟೆಯು ಅವಲೋಕ ನಾರ್ಹವಾಗಿದೆ.

೧೦. **ಮತ್ತೆ ಕೆಲವು ಗವಿಗಳು:-** ಕಲ್ಯಾಣದಲ್ಲಿ ತ್ರಿಪುರಾಂತ ಕೇಶ್ವರ ಗುಡಿಯಿದೆ. ಕೆರೆಯ ದಕ್ಷಿಣದಲ್ಲಿ ಅಂಬಿಗರ ಚೌಡಯ್ಯನಗವಿ ಇದೆ. ರುದ್ರಮುನಿಯ ಗವಿಗೆ ಅನತಿದೂರದಲ್ಲಿ ವಿಜ್ಞಾನೇಶ್ವರ ಗವಿ ಇದೆ. ಕಲ್ಯಾಣದ ದರ್ಗದ ಪಶ್ಚಿಮ ಭಾಗದಲ್ಲಿ ಉರಿಲಿಂಗಪೆದ್ದಿಯ ಗವಿ ಇದೆ. ಅಕ್ಕನ ಗವಿ ಪಕ್ಕದಲ್ಲಿ ಬಸವಣ್ಣನ ಅರಿವಿನ ಗವಿಯಿದೆ. ಇವೆಲ್ಲವೂ ದರ್ಶನಾರ್ಹವಾಗಿವೆ.

೧೧. **ರೇವಣಸಿದ್ಧೇಶ್ವರ ದೇವಾಲಯ;-** ಆಚಾರ್ಯ ರೇವಣ ಸಿದ್ಧನು ಕಲ್ಯಾಣಕ್ಕೆ ಬಸವಣ್ಣನಿಗಿಂತ ಮೊದಲೇ ಆಗಮಿಸಿ, ಅಲ್ಲಿದ್ದ ಕಲ್ಲಿಶೆಟ್ಟಿಯ ಭಕ್ತಿಯನ್ನು ಕೈಗೊಂಡನೆಂಬುದಕ್ಕೆ ರೇವಣಸಿದ್ಧೇಶ್ವರ ಸಾಂಗತ್ಯದಲ್ಲಿ ಆಧಾರವಿದೆ. (ರೇವಣ ಸಾಂಗತ್ಯ, ಪುಟ-೪೩) ಇಂತಹ ಮಹಾತ್ಮರ ಹೆಸರಿನಲ್ಲಿರುವ ದೇವಾಲಯವು ಈಗ ಜೀರ್ಣವಾಗಿದೆ. ಅಲ್ಲಿ ಪ್ರಾಚೀನ ಗದ್ದಿಗೆಗಳಿವೆ. ಶರಣ ವೇಮನಾರಾಧ್ಯನು ಇಲ್ಲಿದ್ದಂತೆ ಹೇಳು ತ್ತಾರೆ. ಇವನ ಕಥೆ ಬಸವಪುರಾಣದಲ್ಲಿದೆ.

೧೨. **ಸಿದ್ಧರಾಮೇಶ್ವರ ದೇವಾಲಯ:-** ಬಸವ ಕಲ್ಯಾಣದಿಂದ

ಒಂದು ಮೈಲಿ ದೂರದಲ್ಲಿ **ಶಿವಪುರ** ಎಂಬ ಗ್ರಾಮವಿದೆ. ಅಲ್ಲಿ ಸಿದ್ಧ ರಾಮೇಶ್ವರ ದೇವಾಲಯವಿದೆ. ಈ ದೇವಾಲಯದ ಮುಂದೆ ವಿಶಾಲ ವಾದ ಕೆರೆಯಿದೆ. ಸಿದ್ಧರಾಮೇಶ್ವರನು ಅಲ್ಲಮಪ್ರಭುವಿನ ಜತೆಯಲ್ಲಿ ಕಲ್ಯಾ ಣಕ್ಕೆ ಬಂದು, ಚೆನ್ನಬಸವೇಶ್ವರನಲ್ಲಿ ಲಿಂಗದೀಕ್ಷೆ ಪಡೆದ ವಿಚಾರ ಶೂನ್ಯಸಂಪಾದನೆಯಲ್ಲಿ ಸುಪ್ರಸಿದ್ಧವಾಗಿದೆ. (ಶೂನ್ಯಸಂಪಾದನೆ, **ಪುಟ**-೨೦೯ ಪ್ರೊ|| ಭೂಸನೂರುಮಠ, ಸಂಪಾದಿತ) ಈಗ ಅದನ್ನು ಸಿದ್ಧೇಶ್ವರನ ಗುಡಿ ಎನ್ನುತ್ತಾರೆ.

೧೩. ನಾರಾಯಣಪುರದ ಶಿವಾಲಯ:- ಕಲ್ಯಾಣದಿಂದ ಎರಡು ಮೈಲಿ ಅಂತರದ ಮೇಲೆ ನಾರಾಯಣಪುರ ಎಂಬಲ್ಲಿ ಒಂದು ಶಿವಾಲ ಯವಿದೆ. ಅಲ್ಲಿ ಶಿವಪುರ, ನಾರಾಯಣಪುರ ಎಂಬ ಗ್ರಾಮಗಳಿವೆ. ಈ ದೇವಾಲಯವು ಚಾಲುಕ್ಯರ ಕಾಲದ ಪ್ರಾಚೀನ ಸುಂದರ ಗುಡಿ ಎನಿಸಿದೆ.

೧೪. **ಸೋಮೇಶ್ವರ ದೇವಾಲಯ:**- ಇದು ಬಸವ ಕಲ್ಯಾಣ ದಲ್ಲಿ ಒಂದು ಪ್ರಾಚೀನವೂ ಪವಿತ್ರವೂ ಆದ ದೇವಾಲಯವಾಗಿದೆ. ಭೂಮಿಯ ಕೆಳಭಾದಲ್ಲಿ ಶಿವಲಿಂಗವಿದೆ. ಶತ್ರುಗಳ ಭೀತಿಗಾಗಿ ಈ ರೀತಿ ನಿರ್ಮಿಸಿದಂತೆ ಕಾಣುತ್ತದೆ. ಸೊಲ್ಲಾಪುರದ ರೇವಣಸಿದ್ಧೇಶ್ವರ ದೇವಾ ಲಯದಲ್ಲಿಯೂ ಇಂತಹ ನೆಲಮಾಳಿಗೆಯಲ್ಲಿ ಶಿವಲಿಂಗವಿರುವ ದೃಶ್ಯವನ್ನು ನಾವು ಕಾಣಬಹುದು.

೧೫. **ಮೋಳಿಗೆ ಮಾರಯ್ಯ ಗವಿ** :- ಹುಮನಾಬಾದದಿಂದ ಕಲ್ಯಾಣಕ್ಕೆ ಹೋಗುವ ದಾರಿಯ ಬಲಭಾಗದಲ್ಲಿ ಈ ಗವಿ ಇದೆ. ಮಹಾ ಮಹಿಮನಾದ ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಮ್ಮ ಈ ಗವಿಯಲ್ಲಿ ವಾಸಮಾಡಿದಂತೆ ತಿಳಿಯುತ್ತದೆ. ಇದರ ಪಕ್ಕದಲ್ಲಿ ಶರಣರಾದ ಅವರು ನೆಟ್ಟ ಆಲದ ಮರವಿದೆ. ಅಲ್ಲದೆ ಸಮೀಪದಲ್ಲಿಯೇ **ಮೋಳಿಗೆ ಕೇರಿ** ಎಂಬ ಗ್ರಾಮವಿದೆ. ಆ ಗವಿಯಲ್ಲಿಯೇ ಒಂದು ಶಿವಲಿಂಗ ಸ್ಥಾಪ ನೆಯಾಗಿದೆ. ಅಲ್ಲಿ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ. ಲಿಂಗವಂತರು ಮೇಲಿಂದ ಮೇಲೆ ಆ ಗವಿಯಲ್ಲಿ ಪರ್ವಗಳನ್ನು ನಡೆಸುತ್ತಾರೆ.

೧೬. ಅಮೃತಕುಂಡ :- ಬಸವ ಕಲ್ಯಾಣದಿಂದ ೧೨ ಮೈಲಿ ದೂರದಲ್ಲಿ ಚಂಡಿಕಾಪುರ ಗ್ರಾಮದ ಹತ್ತಿರ ಒಂದು ಗುಡ್ಡದೊಳಗಿಂದ

ನಿರ್ಮಲ ಜಲಪ್ರವಾಹ ಹರಿದುಬರುತ್ತದೆ. ಇಲ್ಲಿಯೇ ರಾಮಲಿಂಗೇಶ್ವರನ ಪುರಾತನ ದೇವಾಲಯವಿದೆ. ಈ ಜಲಪ್ರವಾಹವನ್ನು 'ಅಮೃತಕುಂಡ' ಎಂದು ಕರೆಯುತ್ತಾರೆ. ಇದು ಅಮೃತಮಯ ಪ್ರಕೃತಿಸೌಂದರ್ಯದಿಂದ ಕೂಡಿದೆ. ಪ್ರವಾಸಿಗಳಿಗೆ ಹರ್ಷದಾಯಕವೆನಿಸುತ್ತದೆ.

೧೭. **ಮುಗ್ಧಸಂಗಯ್ಯನ ಗವಿ** :- ಬಸವ ಕಲ್ಯಾಣಕ್ಕೆ ಸಮೀಪದಲ್ಲಿ 'ಹಳ್ಳಳ್ಳಿ' ಎಂಬಲ್ಲಿ ಈ ಗವಿ ಇದೆ. ಈತನ ಚರಿತ್ರೆ ಬಸವಪುರಾಣಗಳಲ್ಲಿ ಪ್ರಖ್ಯಾತವಾಗಿದೆ. ಮುಗ್ಧಭಕ್ತಿಯಿಂದ ಶಿವನ ಕೃಪೆಗೆ ಪಾತ್ರನಾದವನಿವನು.

೧೮. **ಕೆಲವು ಮಠಗಳು** :- ಈ ಕಲ್ಯಾಣದಲ್ಲಿ ಕೆಲವು ಮಠಮಾನ್ಯಗಳಿವೆ. ಪುರಾತನ ವಿಷ್ಣುಮಂದಿರ, ಕಂಬಳಿ ಮಠ, ಸದಾನಂದ ಮಠ, ಗಣೇಶ ಮಂದಿರ ಮೊದಲಾದವುಗಳಿವೆ.

೧೯. **ತ್ರಿಪುರಾಂತಕನ ಗುಡಿ – ಅನುಭವ ಮಂಟಪ** :- ಬಸವ ಕಲ್ಯಾಣದಲ್ಲಿ ತ್ರಿಪುರಾಂತಕನ ಗುಡಿ ಮುಂದೆ ತ್ರಿಪುರಾಂತಕ ಪುರದಲ್ಲಿ ಅನುಭವಮಂಟಪ ಇತ್ತೆಂದು ತರ್ಕಿಸಲಾಗಿದೆ. ಅಲ್ಲಿದ್ದ ಕಲ್ಲುಕಂಭಗಳನ್ನು ಇತರ ಕೆಲವು ಸ್ಮಾರಕಗಳನ್ನು ಮುಸಲ್ಮಾನರ ದರ್ಗದಲ್ಲಿ ಇಂದಿಗೂ ನಾವು ನೋಡಬಹುದು. ಮಲ್ಲಿಕಾಫರನ ದಂಡಯಾತ್ರೆಯಲ್ಲಿ ಈ ಗೊಂದಲ ನಡೆದಿರಬೇಕು.

ಮಹಮದೀಯರ ದಾಳಿಯಾದ ಕಾಲದಲ್ಲಿ ಈ ಅನುಭವಮಂಟಪವು ವಿಧರ್ಮಿಗಳಿಂದ ನಾಶವಾಗಿರಬೇಕೆಂದೂ, ಅದರ ಸ್ಮಾರಕಗಳಿಂದಲೇ ಮುಸಲರ ದರ್ಗದ ಕಟ್ಟಡ ಆಗಿರಬೇಕೆಂದೂ ತಿಳಿಯಲು ಅವಕಾಶವಿದೆ. ಅನುಭವ ಮಂಟಪದ ಬಗೆಗೆ ಇನ್ನೂ ಸಂಶೋಧಿಸಬೇಕಾದ ಸಂಗತಿಗಳಿವೆ. ಈ ತ್ರಿಪುರಾಂತಕಪುರದಲ್ಲಿ ಪ್ರಶಸ್ತವಾದ ತ್ರಿಪುರಾಂತಕನ ಗುಡಿ ಇತ್ತೆಂದು ತೋರುತ್ತದೆ. ಅದರ ಉಲ್ಲೇಖನ ಬಸವ ಪುರಾಣಗಳಲ್ಲಿ ಬಂದಿದೆ.

೪. **ಮಂಗಳವಾಡ**:- ಬಾಗೆವಾಡಿ, ಕೂಡಲ ಸಂಗಮ ಮತ್ತು ಕಲ್ಯಾಣ ಪಟ್ಟಣಗಳು ಬಸವೇಶ್ವರ ಕ್ಷೇತ್ರಗಳೆಂದು ಜನರು ಸಾಮಾನ್ಯವಾಗಿ ತಿಳಿದಿ

ದ್ದಾರೆ. ಆದರೆ ಮಂಗಳವಾಡವು ಬಸವಕ್ಷೇತ್ರವೆಂಬುದು ಹಲವರಿಗೆ ಹೊಸ ವಿಚಾರವೆನಿಸುತ್ತದೆ.

ಹರೀಶ್ವರನ ಬಸವರಾಜದೇವರ ರಗಳೆಯಲ್ಲಿ "ಎಲೆ ಮಗನೆ ಬಸವಣ್ಣ, ನಿನ್ನಂ ಮಹೀತಳದೊಳು ಮೆರೆಸಿದಪೆಂ, ನೀಂ ಬಿಜ್ಜಳರಾಯನಿರ್ಪ ಮಂಗಳ ವಾಡಕ್ಕೆ ಪೋಗು" (ಸ್ಥಲ ೪, ಪುಟ ೨೧) ಎಂದು ಹೇಳಿದೆ. ಬಸವಣ್ಣನವರು ಸಂಗಮದಿಂದ ಹೊರಟು ಮೊದಲು ಹೋದುದು ಮಂಗಳ ವಾಡಕ್ಕೆ. ಅನಂತರ ಬಿಜ್ಜಳನು ಚಕ್ರವರ್ತಿಯಾದ ಮೇಲೆ ಬಂದುದು ಕಲ್ಯಾಣಕ್ಕೆ ಎಂಬುದು ಈಗ ಸಂಶೋಧನೆಯಿಂದ ಸಿದ್ಧವಾಗಿದೆ. ಕೆಲವರು ಮಂಗಳವಾಡ-ಕಲ್ಯಾಣಗಳು ನಾಮಸಾದೃಶ್ಯದಿಂದ ಒಂದೇ ಎಂದು ಹೇಳುವುದು ಲೋಕಮೌಢ್ಯವೆನ್ನಬಹುದು. ಬಸವಣ್ಣನವರು ಸಿದ್ಧದಂಡಾಧೀಶನ ಆಶ್ರಯದಲ್ಲಿದ್ದು, ಗಂಗಾದೇವಿ-ಮಾಯಾದೇವಿಯರನ್ನು ಅಲ್ಲಿಯೇ ಮದುವೆಯಾದರೆಂದು ಬಸವರಾಜದೇವರ ರಗಳೆಯಲ್ಲಿ ಹೇಳಿದೆ (ಬ.ರಾ. ರಗಳೆ, ಸ್ಥಳ ೯, ಪುಟ ೩೪) ಬಸವಣ್ಣನವರ ಜಂಗಮದಾಸೋಹವು ಮೊದಲು ನಡೆದುದು ಮಂಗಳವಾಡದಲ್ಲಿ. ಆಗ ಅವರು ಅರಮನೆಯಲ್ಲಿ, ಕರಣಿಕರಾಗಿ, ಅನಂತರ ಭಂಡಾರಿಗಳಾಗಿ ಇದ್ದಂತೆ ತೋರುತ್ತದೆ. ಆಗ ಬಿಜ್ಜಳರಾಜನು ಚಕ್ರವರ್ತಿಯಾಗುವ ಸನ್ನಾಹದಲ್ಲಿದ್ದಂತೆ ಚರಿತ್ರೆಯು ಹೇಳುತ್ತದೆ. ಆದುದರಿಂದ ಬಸವಣ್ಣನವರ ಕ್ಷೇತ್ರಗಳಲ್ಲಿ ಮಂಗಳವಾಡವನ್ನು ಸೇರಿಸುವುದು ಸಮಂಜಸವಾಗಿದೆ.

ಮಂಗಳವಾಡವು ಸೊಲ್ಲಾಪುರ ಜಿಲ್ಲೆಯಲ್ಲಿದೆ. ಈಗ ಮಂಗಳವೇಡೆ ಎನ್ನುತ್ತಾರೆ. ಮಂಗಳವಾಡವು ಈಗ ಸೊಲ್ಲಾಪುರದಿಂದ – ಪಂಡರಪುರಕ್ಕೆ ಹೋಗುವ ದಾರಿಯಲ್ಲಿದೆ. ಆದು ೧೦, ೧೧, ಮತ್ತು ೧೨ ನೆಯ ಶತಕಗಳಲ್ಲಿ ಕಾಲಚೂರ್ಯರ ರಾಜಧಾನಿಯಾಗಿತ್ತು. ಈ ಅರಸರು ಪರಮ ಶಿವಭಕ್ತರೆಂದೂ ಸುವರ್ಣವೃಷಭಧ್ವಜರೆಂದೂ ವೀರಮಾಹೇಶ್ವರರೆಂದೂ ಶಾಸನಗಳಲ್ಲಿ ಹೇಳಿದೆ. ಶಾಸನಗಳಲ್ಲಿ ಈ ಮಂಗಳವಾಡಕ್ಕೆ 'ಮಂಗಳವೇಡೆ' (ಕರ್ನಾಟಕದ ಕಲಚುರಿಗಳು. ಪುಟ ೧೪) ಎಂದು ಹೇಳಿದೆ.

ಈಗ ಮಂಗಳವಾಡವು ಒಂದು ತಾಲೂಕು ಸ್ಥಳ. ಅಲ್ಲಿ ರೇವಣಸಿದ್ಧನ ದೇವಾಲಯ, ಅರಮನೆ, ಕೋಟೆ, ಕೇದಾರಸ್ವಾಮಿಮಠ ಮೊದ

ಲಾದುವಿವೆ. ಆದರೆ ಬಸವೇಶ್ವರನು ಆಗ ಅಷ್ಟು ಪ್ರಸಿದ್ಧನಾಗಿರಲಿಲ್ಲವೆಂದು ಊಹಿಸಬಹುದಾಗಿದೆ. ಮಂಗಳವಾಡವು ಆಚಾರ್ಯ ರೇವಣಸಿದ್ಧರ ಒಂದು ಕೇಂದ್ರ. ಇಲ್ಲಿ ಅವನು ಹಲವು ಮಹತ್ಕಾರ್ಯಗಳನ್ನು ಮಾಡಿರುವನು ಎಂಬುದಕ್ಕೆ ರೇವಣಸಿದ್ಧಪುರಾಣದಲ್ಲಿ ನಿದರ್ಶನವಿದೆ. ಅಲ್ಲದೆ ಆತನು ಪವಾಡಗಳನ್ನು ಮೆರೆದ, ಮಾಸನೂರು, ಸೊನ್ನಲಿಗೆ (ಸೊಲ್ಲಾಪುರ) ಸಿದ್ಧನಕೆರೆ ಇವೆಲ್ಲವೂ ಮಂಗಳವಾಡದ ಸುತ್ತಲೂ ಮಾಲಾಕಾರವಾಗಿವೆ. ಕಲ್ಯಾಣಕ್ಕೆ ಹೋಗುವುದಕ್ಕೆ ಮೊದಲು ಬಸವಣ್ಣನು ಈ ಮಂಗಳವಾಡದಲ್ಲಿ ರಾಜ ಬಿಜ್ಜಳ-ಸಿದ್ಧಣ್ಣ ಮಂತ್ರಿಗಳ ಆಶ್ರಯದಲ್ಲಿ ಅಭಿವೃದ್ಧಿಗೆ ಬಂದುದರಿಂದ ಇದನ್ನು ಒಂದು ಬಸವಕ್ಷೇತ್ರವೆಂದು ತಿಳಿಯಬಹುದು. ಮಂಗಳವಾಡದಲ್ಲಿ ಬಸವಣ್ಣನವರಿದ್ದ ಸ್ಥಳವನ್ನು ನಾವು ಸಂಶೋಧಿಸಬೇಕಾಗಿದೆ. ಒಂದು ಕಾಲದಲ್ಲಿ, ಅಂದರೆ ಕಳಚುರಿಗಳ ಕಾಲದಲ್ಲಿ ಮಂಗಳವಾಡವು ಶೈವ-ವೀರಶೈವ ಧರ್ಮಗಳ ಕೇಂದ್ರವೆನಿಸಿತ್ತು. ಕ್ರಿ. ಶ. ೧೧೪೫ರ ಸುಮಾರಿನಲ್ಲಿ ರೇವಣಸಿದ್ಧನು ಬಿಜ್ಜಳನ ಮಗಳನ್ನು ಲಗ್ನವಾದ ವಿಚಾರ ಆತನ ಚರಿತ್ರೆಯಲ್ಲಿದೆ. ಈ ಬಿಜ್ಜಳ-ರೇವಣಸಿದ್ಧರ ಬಾಂಧವ್ಯವೂ, ಸಿದ್ಧಣ್ಣ ಮಂತ್ರಿಯು ಬಿಜ್ಜಳನಲ್ಲಿ ಮಂತ್ರಿಯಾಗಿದ್ದ ಕಾರಣವೂ, ಸಿದ್ಧಣ್ಣನ ಸಕಲಸಂಪತ್ತಿಗೂ ಬಸವಣ್ಣನು ಯಜಮಾನನಾದ ನಿಮಿತ್ತವೂ, ಬಸವ-ಬಿಜ್ಜಳರ ಬಾಂಧವ್ಯ ಹೆಚ್ಚಿತು. ಮುಂದೆ ಬಿಜ್ಜಳನು ಕಲ್ಯಾಣದಲ್ಲಿ ಚಕ್ರವರ್ತಿಯಾದಾಗ ಬಸವೇಶ್ವರನು ಮಂತ್ರಿಯಾಗಲು ಕಾರಣವಾಯಿತು ಎಂದು ನಾವು ತರ್ಕಿಸಬಹುದು. ರೇವಣಸಿದ್ಧನ ಮಗನಾದ ರುದ್ರಮುನಿಯು ಕಲ್ಯಾಣದಲ್ಲಿ ಬಸವನಿಗೆ ಬೆಂಬಲವಾಗಿ ನಿಂತುದಕ್ಕೆ, ರೇವಣಸಿದ್ಧ-ಬಿಜ್ಜಳರ ಬಾಂಧವ್ಯವು ಒಂದು ಕಾರಣವಾಗಿರಬೇಕು. ರುದ್ರಮುನಿಯು ಮಂಗಳವಾಡದಲ್ಲಿಯೇ ಹುಟ್ಟಿ ಬಳೆದವನೆಂದು ಆತನ ಚರಿತ್ರೆಯಿಂದ ತಿಳಿದು ಬರುತ್ತದೆ. ಮಂಗಳವಾಡಕ್ಕೆ ಸಮೀಪದಲ್ಲಿರುವ 'ಸಿದ್ಧನ ಕೆರೆ' ರುದ್ರಮುನಿ ಹುಟ್ಟಿದ ಸ್ಥಳವೆಂದು ಹೇಳಲಾಗಿದೆ. ಅಲ್ಲಿ ಅದರ ಸ್ಮಾರಕಗಳನ್ನು ಜನರು ತೋರಿಸುತ್ತಾರೆ. ಅಲ್ಲಿ ರೇವಣಸಿದ್ಧನು ಕಟ್ಟಿದ ಕೆರೆಯೂ (ಸಿದ್ಧನ ಕೆರೆ) ಆವನ ಹೆಸರಿನ ವೀರಸಿಂಹಾಸನ ಮಠವೂ ಇವೆ.

ಕಾಲಜ್ಞಾನ ವಚನಗಳಲ್ಲಿ 'ಕಲ್ಯಾಣ ಪಟ್ಟಣ'

ಬಸವಣ್ಣನವರ ಕ್ಷೇತ್ರಗಳಲ್ಲಿ ಕಲ್ಯಾಣವು ಬಹುಮುಖ್ಯವಾದುದು. ಬಾಗೆವಾಡಿಯಲ್ಲಿ ಜನಿಸಿ, ಇಂಗಳೇಶ್ವರದಲ್ಲಿ ಇಂಬಾಗಿ ಬಳೆದು, ಕೂಡಲ ಸಂಗಮದಲ್ಲಿ ವಿದ್ವತ್ತನ್ನೂ ಸಿದ್ಧಿಯನ್ನೂ ಪಡೆದು, ಮಂಗಳವಾಡದಲ್ಲಿ ಮುಂದುವರಿದು, ಕಲ್ಯಾಣದಲ್ಲಿ ಬಸವಣ್ಣನವರು ಪರಿಪೂರ್ಣರೆನಿಸಿದರು.

ಕಲ್ಯಾಣದಲ್ಲಿ 'ಅನುಭವ ಮಂಟಪ' ಎಲ್ಲಿತ್ತು? ಎಂಬುದು ಗಮನಾರ್ಹ. ಕೆಲವರು ಬಸವಣ್ಣನ ಮಹಾಮನೆಯಲ್ಲಿ 'ಅನುಭವ ಮಂಟಪ' ಇತ್ತು ಎಂದು ಭ್ರಮಿಸಿರುವುದೂ ಉಂಟು. ಇದು ನಿಜವಲ್ಲವೆಂಬುದಕ್ಕೆ ಕಾಲಜ್ಞಾನ ವಚನಗಳಲ್ಲಿ ಸಾಕ್ಷಿಗಳಿವೆ. "ಕೈಲಾಸವಪ್ಪ ಕಲ್ಯಾಣದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ದೇವಾಲಯ, ಅವಕ್ಕೆ ಮುಖ್ಯವಾದ ತ್ರಿಪುರಾಂತಕ ದೇವಾಲಯ. **ಅದರ ಮುಂದಣ ಅನುಭವ ಮಂಟಪದಲ್ಲಿ,** ಪ್ರಭುದೇವರು, ಸಿದ್ಧರಾಮಯ್ಯ ದೇವರು, ಮೋಳಿಗೆ ಮಾರಯ್ಯಗಳು, ಮಸುಡಿಯ ಚೌಡಯ್ಯಗಳು, ವೀರಮಡಿವಾಳ ಮಾಚಯ್ಯಗಳು, ಏಳ್ನೂರೆಪ್ಪತ್ತು ಅಮರ ಗಣಂಗಳು, ಎಲ್ಲ ಅಸಂಖ್ಯಾತ ಮಹಾಗಣಂಗಳು ಸಹ ಕೂಡಿದಲ್ಲಿ" ಎಂಬ ಈ ವಚನದಲ್ಲಿ '**ಅನುಭವ ಮಂಟಪವು** ತ್ರಿಪುರಾಂತಕ ದೇವಾಲಯದ ಮುಂಭಾಗದಲ್ಲಿತ್ತು' ಎಂದು ಸ್ಪಷ್ಟವಾಗಿದೆ. ಆಚಾರ ಸಂಪನ್ನರು **ಅನುಭವ ಮಂಟಪಕ್ಕೆ** ಬಂದು, 'ಲಕ್ಷದ ಮೇಲೆ ತ್ತೊಂಭತ್ತಾರು ಸಾವಿರ ಮಹೇಶ್ವರರಿಪ್ಪ ವಿಚಾರ **ಮಂಟಪಕ್ಕೆ** ಬಂದು, ಅಕ್ಕನಾಗಮ್ಮನ ನೆಲ ಮಾಳಿಗೆಯ **ಪ್ರಸನ್ನ ಮಂಟಪಕ್ಕೆ** ಬಂದು, ಗಂಗೆವಾಳು ಕಸನು ರುದ್ರರಿಪ್ಪ **ವಿಶಾಲ ಮಂಟಪಕ್ಕೆ** ಬಂದು, ಪ್ರಭುದೇವರ **ಪರಮಾನಂದ ಪ್ರಕಾಶ ಮಂಟಪಕ್ಕೆ** ಬಂದು, ಬಸವರಾಜ ದೇವರ ನೆಲಮಾಳಿಗೆಯಲ್ಲಿರ್ಪ **ಜ್ಞಾನಾನಂದ** ಮಂಟಪಕ್ಕೆ ಬಂದು' ರೇವಣ ಸಿದ್ಧೇಶ್ವರ ದೇವರು ಕಟ್ಟಿಸಿದ **ಚಂಗಣಗಿಲ ಮಂಟಪಕ್ಕೆ** ಬಂದು (ಕಾಲಜ್ಞಾನ ವಚನಗಳು,: ಚನ್ನಬಸವ ರಾಜದೇವರ ಬಿನ್ನಹ-ಶಿವಾನುಭವ ಗ್ರಂಥ ಮಾಲಾ ನಂ. ೩೯) ಈ ಮೇಲೆಕಂಡ ವಚನಗಳಿಂದ ಕಲ್ಯಾಣದಲ್ಲಿ ಅನು

ಭವ ಮಂಟಪ, **ವಿಚಾರ ಮಂಟಪ**, **ವಿಶಾಲ ಮಂಟಪ**, **ಪ್ರಕಾಶ ಮಂಟಪ**, **ಚಂಗಣಗಲ ಮಂಟಪ**, **ಜ್ಞಾನಪ್ರಕಾಶ ಮಂಟಪ**, **ಪ್ರಸನ್ನ ಮಂಟಪ** ಎಂಬಿವುಗಳಿದ್ದಂತೆ ತಿಳಿದು ಬಂದಿದೆ.

'ಗವಿಯ ಸಿಂಹಾಸನಕ್ಕೆ ಬಂದು ದೀರ್ಘದಂಡ ನಮಸ್ಕಾರಂಗಳಂ ಮಾಡಿ'ಎಂಬಲ್ಲಿ, ಈ ಗವಿಯ ಸಿಂಹಾಸನವು ಯಾವುದು? ಎಂಬುದು ಗಮನಾರ್ಹವಾಗಿದೆ. ಇದು ಘನಲಿಂಗಿ ರುದ್ರಮುನಿಯ ಗವಿಯಿಃರಬಹುದೆ ಎಂಬುದು ನಮ್ಮ ಒಂದು ಊಹೆ. ಕಾಲಜ್ಞಾನ ವಚನಗಳಲ್ಲಿ ಮುಖ್ಯವಾಗಿ ಈ ಮುಂದೆ ಹೇಳುವ ಹೆಸರುಗಳು ಪ್ರಧಾನವಾಗಿವೆ. ಬಸವರಾಜ ದೇವರು, ಪ್ರಭು ದೇವರು, ಮಡಿವಾಳ ಮಾಚಯ್ಯಗಳು, ರುದ್ರಮುನಿ ದೇವರು, ವೀರ ಬಿಜ್ಜಳ, ಜಗದೇವ-ಮಲ್ಲಿ ಬೊಮ್ಮ, ಸೊಡ್ಡಳ ಬಾಚರಸರು, ಮೋಳಿಗೆ ಮಾರಯ್ಯಗಳು, ನಾಗಲಾಂಬಿಕೆ, ಪ್ರಸಾದಿ ಸೋಮೇಶ್ವರ, ಪಂಡಿತಾರಾಧ್ಯರು, ನೀಲಲೋಚನೆ ಅಮ್ಮ, ಪಡಿಹಾರಿ ಉತ್ತಣ್ಣ, ರೇವಣಸಿದ್ಧೇಶ್ವರ, ಶಾಂತಮಲ್ಲಿಕಾರ್ಜುನ ದೇವರು, ಅಳಿಯ ಬಿಜ್ಜಳ, ಸಿದ್ಧರಾಮ ಶಿವಯೋಗಿ, ಮರುಳ ಶಂಕರ ದೇವರು, ಗಂಗಾಂಬಿಕೆ, ಅಜಗಣ್ಣ, ಹಡಪ ದಪ್ಪಣ್ಣ, ಕಿನ್ನರಯ್ಯ, ಮುಕ್ತಾಯಕ್ಕ, ಚಂದಿಮರಸ, ಬಿಬ್ಬಿಬಾಚಯ್ಯ, ತಂಗಟೂರು ಮಾರಯ್ಯ, ಕಕ್ಕಯ್ಯ, ಸೋಮಾಂಬೆ, ತಳವಾರ ನಾಗರಾಜ, ಹರಳಯ್ಯ, ಮಧುವಯ್ಯಗಳು, ಶೂಲದ ಬ್ರಹ್ಮತಂದೆ, ಹಡಪದ ರೇಚಣ್ಣ" ಇತ್ಯಾದಿ.

ಈ ಮೇಲೆ ಕಂಡ ಹೆಸರುಗಳವರು ಕಲ್ಯಾಣದ ಕ್ರಾಂತಿಯಲ್ಲಿ ಭಾಗ ವಹಿಸಿದ್ಧರೆಂದು ಉಹಿಸಬಹುದು. ಬಿಜ್ಜಳರಾಜ, ಅಳಿಯ ಬಿಜ್ಜಳರು ಶರಣರಿಗೆ ಎದುರಾಗಿದ್ದರು ಎಂಬುದು ಕಂಡಂತೆಯೇ ಇದೆ.

ಕಾಲಜ್ಞಾನ ವಚನಗಳಲ್ಲಿ ೭೭೦ ಅಮರಗಣಂಗಳು, ೧೨,೦೦೦ ಷಟ್‌ಸ್ಥಲ ಬ್ರಹ್ಮಿಗಳು, ೧,೯೬,೦೦೦ ಮಹೇಶ್ವರರು(ಚರಲಿಂಗಗಳು)೩,೬೩,೦೦೦ ಋಷಿಗಳು ಎಂಬ ನಿರೂಪಣೆಯಿದೆ.

ಈ ಮಹಾ ಮಂಗಳವಾಡ ಪಟ್ಟಣದಲ್ಲಿ (ಕಾಲಜ್ಞಾನ ವಚನಗಳು, ಪುಟ ೧೨) ಎಂಬಲ್ಲಿ ಕಲ್ಯಾಣವನ್ನೇ ಮಂಗಳವಾಡ ಎಂದು ಹೇಳಲಾಗಿದೆ.

ಹರೀಶ್ವರನು ಮಂಗಳವಾಡ-ಕಲ್ಯಾಣಗಳ ಭೇದ ತಿಳಿಯದೆ ಬಸವಣ್ಣನವ
ಜೀವನವೆಲ್ಲವೂ ಮಂಗಳವಾಡದಲ್ಲಿಯೇ ಎಂದೂ, ಸೋಮನಾಥನೂ
ಭೀಮಕವಿಯೂ ಬಸವಣ್ಣನವರ ಪವಾಡಗಳೆಲ್ಲ ಕಲ್ಯಾಣದಲ್ಲಿಯೇ ಎಂದೂ
ಹೇಳಿದ್ದಾರೆ. ಆದರೆ ಮಂಗಳವಾಡವು ಕಾಲಚೂರ್ಯರಿಗೂ, ಕಲ್ಯಾಣವ
ಚಾಲುಕ್ಯರಿಗೂ ರಾಜಧಾನಿಯೆಂಬುದು ಅವರಿಗೆ ತಿಳಿದಂತೆ ಇಲ್ಲ. ಬಿಜ್ಜ
-ಬಸವರು ಮೊದಲು ಮಂಗಳವಾಡದಲ್ಲಿ, ಅನಂತರ ಕಲ್ಯಾಣದಲ್ಲಿ ಜತೆಯ
ಲ್ಲಿಯೇ ಇದ್ದರು. ಕೈಲಾಸಕ್ಕೂ-ಕಲ್ಯಾಣಕ್ಕೂ ಎಡೆತೆರಹಿಲ್ಲವಾಗಿ (ಕಾ.ವ
ಪುಟ ೨೧) ಎಂಬಲ್ಲಿ ಶರಣರು ಕೈಲಾಸಕ್ಕೂ ಕಲ್ಯಾಣಕ್ಕೂ ವ್ಯತ್ಯಾ
ತಿಳಿದಿರಲಿಲ್ಲವೆಂದು ಭಾಸವಾಗುತ್ತದೆ.

ಕಲ್ಯಾಣವು ನಲವತ್ತೆಂಟುಗಾವುದ ವಿಸ್ತೀರ್ಣ (ಕಾ. ವ. ಪುಟ. ೨೩
ಇದರಿಂದ ಬಸವಣ್ಣನವರ ಕಾಲದಲ್ಲಿ ಕಲ್ಯಾಣ ಪಟ್ಟಣವು ವಿಶಾಲವಾ
ತ್ತೆಂದು ಅರ್ಥವಾಗುತ್ತದೆ.

ಕಲ್ಯಾಣದಿಂದ ಹೊರಟ ಶರಣರು, ಕಾದರವಳ್ಳಿ, ಮುರಗೋಡು
ಬಯಲು ಬಸವಣ್ಣ ಈ ಮಾರ್ಗವಾಗಿ ಉಳವೆಯ ಮಹಾ ಮನೆಗೆ ಬಂದರು
ಚೆನ್ನಬಸವಣ್ಣನವರ ಸಮಾಧಿ ಉಳವಿಯಲ್ಲಾಗಿದೆ. ವರ್ಷಕ್ಕೊಮ್ಮೆ ಜಾತ್ರೆ
ಯಾಗುತ್ತದೆ. ಅದು ಕಾರವಾರ ಜಿಲ್ಲೆಯಲ್ಲಿದೆ.

ಬಸವೇಶ್ವರನು ಕೂಡಲ ಸಂಗಮದಲ್ಲಿ, ಸಿದ್ಧರಾಮನು ಸೊನ್ನಲ
ಯಲ್ಲಿ, ರುದ್ರಮುನಿ ಶ್ರೀಶೈಲದಲ್ಲಿ, ರೇವಣಸಿದ್ಧರು ಕೊಲ್ಲಿಪಾಕಿಯಲ್ಲಿ
ಅಲ್ಲಮ ಪ್ರಭು,-ಅಕ್ಕಮಹಾದೇವಿ ಶ್ರೀಶೈಲದ ಕದಳಿಯಲ್ಲಿ, ಮಾಚಯ್ಯನ
ಹಿಪ್ಪರಿಗೆಯಲ್ಲಿ ಸಮಾಧಿಸ್ಥರಾದರು ಎಂದು ತೋರುತ್ತದೆ.

ಶಿವಶರಣರ ಕಾಲಜ್ಞಾನ ವಚನಗಳು, ಗ್ರೀಕರ ದುರಂತ ನಾಟಕಗಳಂ
ಆಕರ್ಷಕವಾಗಿವೆ. ಅಲ್ಲಿ ಶಿವಶರಣರ ಚರಿತ್ರೆಗೆ ಸಂಬಂಧಪಟ್ಟ ಮಹತ್ವ
ಸಂಗತಿಗಳಿವೆ ಎಂಬುದನ್ನು ಓದಿ ನಾವು ಅವನ್ನು ಮನಗಾಣಬಹುದು.

ವೀರಶೈವ ಸಂಸ್ಕೃತಿ

ವೀರಶೈವವು ವಿಶಾಲ ಭಾರತದಲ್ಲಿ, ಅದರಲ್ಲಿಯೂ ದಕ್ಷಿಣ ದೇಶದಲ್ಲಿ, ಒಂದು ಸ್ವತಂತ್ರವಾದ ಆಚಾರ ವಿಚಾರವುಳ್ಳ ಸಮಾಜ. ಈ ಸಮಾಜಕ್ಕೆ ತನ್ನದೇ ಆದ ತತ್ವ_ತಜ್ಞಾನ, ಸಾಹಿತ್ಯ, ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳಿವೆ. ವೀರಶೈವ ಧರ್ಮಸ್ವರೂಪವನ್ನೂ, ವೀರಶೈವ ಸಮಾಜ ಲಕ್ಷಣವನ್ನೂ ತಿಳಿಯ ಬಯಸುವವರು, ಆ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ. 'ಸಂಸ್ಕೃತಿ' ಎಂಬ ಶಬ್ದಕ್ಕೆ 'ಹುಟ್ಟು ಗುಣ' ಎಂದು ಅರ್ಥ. ಇಂಗ್ಲಿಷ್‌ನಲ್ಲಿ 'ಕಲ್ಚರ್' ಎಂದು ಕರೆಯುತ್ತಾರೆ.

'ಹಿಂದೂ ಧರ್ಮ' ಎಂಬುದು ಒಂದು ವಿಶಾಲವಾದ ಸಾಗರವಿದ್ದಂತೆ ಇದೆ. ಅದರಲ್ಲಿ, ವೈದಿಕ, ಆಗಮಿಕ' ಜೈನ, ಬೌದ್ಧ ಸಿಕ್, ವೀರಶೈವ, ಭಾಗವತ ಇವೆಲ್ಲವೂ ಅಡಕವಾಗಿವೆ. ದೇವರನ್ನು ಒಪ್ಪಿಕೊಳ್ಳುವ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಸಿಕ್ ಮೊದಲಾದ ಮತಗಳೇ ಅಲ್ಲದೆ, ದೇವರನ್ನು ಒಪ್ಪಿಕೊಳ್ಳದಿರುವ, ಜೈನ, ಬೌದ್ಧ, ಚಾರ್ವಾಕ, ನಿರೀಶ್ವರಸಾಂಖ್ಯ ಮೊದಲಾದ ಮತಗಳವರೆಲ್ಲರೂ ಹಿಂದೂಧರ್ಮದಲ್ಲಿ ಸೇರಿಹೋಗಿದ್ದಾರೆ. ಮೂರ್ತಿಪೂಜೆಮಾಡುವವರು, ಅದನ್ನು ಮಾಡದವರು, ಮಾಂಸಾಹಾರ ಮಾಡುವವರು, ಅದನ್ನು ಮಾಡದವರು, ದೇವರನ್ನು, ಶಿವ, ವಿಷ್ಣು, ಶಕ್ತಿ, ಸೂರ್ಯ ಮೊದಲಾದ ಹೆಸರುಗಳಲ್ಲಿ ಪೂಜಿಸತಕ್ಕವರು, ದೇವರು ನಿರಾಕಾರ ನೆಂದು ನಂಬಿದವರು, ವೇದಗಳನ್ನೂ ಆಗಮಗಳನ್ನೂ ಒಪ್ಪುವವರು, ಒಪ್ಪದವರು ಇವರೆಲ್ಲರೂ ಹಿಂದುಗಳೆಂದು ಭಾವಿಲ್ಪಟ್ಟಿದ್ದಾರೆ. 'ಭರತಖಂಡವನ್ನು ಯಾರು ಪಿತೃಭೂಮಿ ಮತ್ತು ಪುಣ್ಯಭೂಮಿ'ಎಂದು ತಿಳಿಯುತ್ತಾರೋ ಅವರೆಲ್ಲರೂ ಹಿಂದುಗಳೆಂದು'ಬ್ಯಾರಿಸ್ಟರ್ ಸಾವರ್ಕರ್' ಹೇಳಿದ್ದಾರೆ. ಇದು ಒಳ್ಳೆಯ ಅರ್ಥವೆಂದು ತೋರುತ್ತದೆ. ಲಿಂಗವಂತರು ಭರತಖಂಡವನ್ನು ಪಿತೃಭೂಮಿ ಮತ್ತು ಪುಣ್ಯಭೂಮಿ ಎಂದು ತಿಳಿದಿರುವುದರಿಂದ ಅವರನ್ನು ಹಿಂದುಗಳೆಂದೇ ಭಾವಿಸಬಹುದು.

ವೀರಶೈವರು ವೇದಗಳ ಜ್ಞಾನಕಾಂಡವನ್ನು ಮಾತ್ರ ಒಪ್ಪುತ್ತಾರೆ.

ಲಿಂಗವಂತರು ಅಹಿಂಸಾವಾದಿಗಳಾದುದರಿಂದ, ಅವರು ಯಜ್ಞಯಾಗಗಳನ್ನು ಮಾಡುವುದಿಲ್ಲ. 'ದಯೆಯೇ ಧರ್ಮದ ಮೂಲವು'ಎಂಬುದು ಅವರ ನಂಬಿಕೆ. ವೀರಶೈವರು ದೇವರು ಉಂಟೆಂದೂ, ಅವನನ್ನು ಸಾಕಾರ ಮತ್ತು ನಿರಾಕಾರ ಎರಡೂ ರೂಪಗಳಲ್ಲಿ ಪೂಜಿಸಬಹುದೆಂದೂ ತಿಳಿಯುತ್ತಾರೆ. 'ದೇವನೊಬ್ಬ ನಾಮ ಹಲವು' ಎಂದು ಬಸವಣ್ಣನವರು ಹೇಳಿದ್ದಾರೆ. ಲಿಂಗವಂತರು ಶಿವಾಗಮಗಳ ದೀಕ್ಷಾ ಸಂಪ್ರದಾಯವನ್ನು ಅಂಗೀಕರಿಸಿದ್ದಾರೆ. 'ಮನುಷ್ಯರೆಲ್ಲರೂ ಸಮಾನರು' ಎಂಬ ಉದಾರ ಸಿದ್ಧಾಂತವನ್ನು ಅಂಗೀಕರಿಸಿದ್ದಾರೆ. ತರತಮಭಾವದಿಂದ ಕೂಡಿದ ವರ್ಣಾಶ್ರಮಗಳನ್ನು ಒಪ್ಪುವುದಿಲ್ಲ. 'ವರ್ಣಾನಾಂಕಿಂ ಪ್ರಯೋಜನಂ' ಎಂದು ಬಸವಣ್ಣನವರು ಸಾರಿ ಹೇಳಿದ್ದಾರೆ. ಜೀವನೋಪಾಯಕ್ಕಾಗಿ ಜನರು ಕೈಗೊಳ್ಳುವ ಕಸಬು ಅಥವಾ ಕಾಯಕವು, ವರ್ಣ-ಜಾತಿ ಎನಿಸಿಕೊಳ್ಳುವುದಿಲ್ಲ ಎಂಬುದು ಶಿವಶರಣರ ವಾದ. ವೀರಶೈವ ಧರ್ಮದಲ್ಲಿ ಉಪನಿಷತ್ತಿನ ಜ್ಞಾನ, ಜೈನರ ಅಹಿಂಸೆ, ಬೌದ್ಧರ ಅನುಕಂಪ, ಭಾಗವತರ ಭಕ್ತಿಪಂಥ, ಭಗವದ್ಗೀತೆಯ ಸಮನ್ವಯ ದೃಷ್ಟಿ, ಕ್ರೈಸ್ತರ ಆತ್ಮಾರ್ಪಣ ಭಾವ ಮೊದಲಾದುವುಗಳನ್ನೆಲ್ಲಾ ಏಕತ್ರ ಕಾಣಬಹುದು. ಸಮುದ್ರದಲ್ಲಿ ಎಲ್ಲ ನೀರೂ ಇರುವಂತೆ, ಜೇನುತುಪ್ಪದಲ್ಲಿ ಎಲ್ಲ ಹೂವಿನರಸವೂ ಇರುವಂತೆ ವೀರಶೈವ ಧರ್ಮದಲ್ಲಿ ಎಲ್ಲ ಮತ ತತ್ತ್ವಗಳೂ ಅಡಕವಾಗಿದೆ. ಅದು ಕಾರಣ ಇದು ವಿಶ್ವಧರ್ಮ ವೆನಿಸಿದೆ.

ವೀರಶೈವ ಸಮಾಜವು, ಕರ್ಣಾಟಕ, ಆಂಧ್ರ, ಮಹಾರಾಷ್ಟ್ರ, ಮತ್ತು ತಮಿಳುನಾಡಿನಲ್ಲಿ ತಕ್ಕಮಟ್ಟಿಗೆ ಪಸರಿಸಿದೆ. ಉತ್ತರ ಭಾರತದ, ವಾರಣಾಸಿ (ಕಾಶಿ), ಪ್ರಯಾಗ (ಅಲಹಾಬಾದ್,)ಕೇದಾರ(ಹಿಮಾಲಯ), ನೇಪಾಳ, ಜಾಫ್ನ (ಸಿಲೋನ್) ಮೊದಲಾದ ಕಡೆಗಳಲ್ಲೆಲ್ಲಾ ವೀರಶೈವ ಮಠ ಮಾನ್ಯಗಳು ಇಂದಿಗೂ ಕಂಗೊಳಿಸುತ್ತಿವೆ. ಕೇರಳದ ಕೆಲವು ಭಾಗದಲ್ಲಿ ಕೂಡ ಲಿಂಗವಂತರ ಅಸ್ತಿತ್ವವು ಕಂಡು ಬಂದಿದೆ

ವೀರಶೈವರು ಕೇವಲ ಸಸ್ಯಾಹಾರಿಗಳು. ಆದ ಕಾರಣವೇ ಹಿಂಸಾ ಪ್ರಧಾನವಾದ ಯಜ್ಞಯಾಗಾದಿಗಳನ್ನು ಅವರು ಆಚರಿಸುವುದಿಲ್ಲ. ಲಿಂಗವಂತರು ಇಷ್ಟಲಿಂಗ ಪೂಜಕರು. ಕಾರಣ ಸ್ಥಾವರಲಿಂಗಗಳನ್ನು ಅವರು

ಅಪೇಕ್ಷಿಸುವುದಿಲ್ಲ. ಶಿವಯೋಗಿಗಳ ಹಾಗೂ ಶಿವಶರಣರ ತಪೋಭೂಮಿ ಹಾಗೂ ಸಮಾಧಿ ಸ್ಥಳಗಳನ್ನು ಅವರು ಗೌರವಿಸುತ್ತಾರೆ. ಲಿಂಗವಂತರು ಶಿವನಿಗಿಂತ ಶಿವಶರಣರು ಅಧಿಕವೆಂದು ಭಾವಿಸುತ್ತಾರೆ. ೬೩ ಮಂದಿ ಪುರಾತನರು, ೭೭೦ ಮಂದಿ ಅಮರಗಣಂಗಳು, ರೇಣುಕಾದಿ ಪಂಚ ಆಚಾರ್ಯರು, ಬಸವೇಶ್ವರಾದಿ ಪ್ರಮಥ ಪುಂಗವರು ವೀರಶೈವ ಮತಕ್ಕೆ ಪೂಜ್ಯರಾಗಿದ್ದಾರೆ. ವೀರಶೈವರಲ್ಲಿ ಪೂರ್ವಜನ್ಮವುಂಟು, ಪುನರ್ಜನ್ಮವಿಲ್ಲ. ಲಿಂಗವಂತ ಸಮಾಜದಲ್ಲಿ ಸ್ಥಾವರಕ್ಕಿಂತ ಜಂಗಮಕ್ಕೆ ಮಹತ್ವ ಹೆಚ್ಚು. ಒಂದು:ದೃಷ್ಟಿಯಿಂದ ಲಿಂಗವಂತರ:ಧರ್ಮವನ್ನು 'ಷಟ್‌ಸ್ಥಲ ಧರ್ಮ'ಎಂದು ಕರೆಯಬಹುದು. ಲಿಂಗಪೂಜೆಗೆ ಇರುವ ಮಹತ್ವವೇ ಜಂಗಮ ದಾಸೋಹಕ್ಕೂ ಇದೆ. ಭಗವಂತನ ಚೈತನ್ಯವು ಎಲ್ಲ ಕಡೆಗೂ ಇದೆ. ಸ್ಥಾವರಕ್ಕಿಂತ ಜಂಗಮ ತತ್ತ್ವಗಳಲ್ಲಿ ಈಶ್ವರತತ್ತ್ವವು ಅಧಿಕ ಎಂಬದು ಲಿಂಗವಂತರ ನಂಬಿಕೆ. 'ಸ್ಥಾವರ ಕ್ಕಳಿವುಂಟು, ಜಂಗಮಕ್ಕಳಿವಿಲ್ಲ'ಎಂದು ಬಸವಣ್ಣನವರು ಹೇಳಿದ್ದಾರೆ.

ವೀರಶೈವ ಧರ್ಮದಲ್ಲಿ ದ್ವೈತಾದ್ವೈತ ಎರಡಕ್ಕೂ ಮಹತ್ವವಿದೆ. ಸಾಧಕಾವಸ್ಥೆಯಲ್ಲಿ ದ್ವೈತವೂ, ಸಿದ್ಧಾವಸ್ಥೆಯಲ್ಲಿ ಅದ್ವೈತವೂ, ಮೋಕ್ಷಸಾಧನೆಗೆ ನೆರವಾಗುತ್ತವೆ. ಕರ್ಮ ಮತ್ತು ಜ್ಞಾನ ಎರಡೂ ಮೋಕ್ಷಕ್ಕೆ ಸಾಧನ ಎಂಬುದು ವೀರಶೈವರ ನಂಬಿಕೆ. 'ಜ್ಞಾನ' ಎಂದರೆ ತಿಳಿವಳಿಕೆ. 'ಕರ್ಮ' ಎಂದರೆ ನಡೆವಳಿಕೆ 'ಪರಸ್ತ್ರೀಯರನು ನೋಡಬಾರದು ಎಂಬುದು ಜ್ಞಾನ ಅದರಂತೆ ನಡೆಯುದು ಕ್ರಿಯಾ ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ. "ಕ್ರಿಯಾ ಜ್ಞಾನ ಸಮಾಯುಕ್ತಂ ವೀರಶೈವಸ್ಯಲಕ್ಷಣಂ" ಎಂದು ಕ್ರಿಯಾಸಾರದಲ್ಲಿ ಹೇಳಿದೆ. ಲಿಂಗವಂತರಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಮೋಕ್ಷಾಧಿಕಾರವಿದೆ. ಆದರೆ 'ಸ್ತ್ರೀಯರಿಗೆ ಗುರುತ್ವಾಧಿಕಾರವಿಲ್ಲ' ಎಂದು ಹೇಳಲಾಗಿದೆ. ವೀರಶೈವ ಸಿದ್ಧಾಂತವು ಮೋಕ್ಷಕ್ಕೆ ಸಮೀಪದ ಹಾದಿ ಎಂದು;ಅವರ ತಿಳಿವಳಿಕೆ. "ಏಕೇನ ಜನ್ಮನಾ ಮುಕ್ತಿಃ ವೀರಾಣಾಂತು ಮಹೇಶ್ವರೀ" ಎಂದು ಶಿವಾಗಮಗಳಲ್ಲಿ ಹೇಳಿದೆ. ಈ ಧರ್ಮದಲ್ಲಿ, ಭಕ್ತಿ, ಜ್ಞಾನ, ಕ್ರಿಯೆ ಈ ಮೂರರ ಸಮನ್ವಯವಿದೆ. ದ್ರಾವಿಡರ ಭಕ್ತಿ, ಆರ್ಯರ ಜ್ಞಾನ, ಜೈನರ ಅಹಿಂಸೆ, ಬೌದ್ಧರ ಅನು

ಕಂಪ ಇವು ನಾಲ್ಕೂ ವೀರಶೈವ ತತ್ತ್ವದಲ್ಲಿ ಓತ ಪ್ರೋತವಾಗಿ ಸೇರಿವೆ. ದ್ವೈತ ಮತ್ತು ಅದ್ವೈತ, ಕ್ರಿಯಾ ಮತ್ತು ಜ್ಞಾನ ಇವನ್ನೆಲ್ಲಾ ಒಪ್ಪಿಕೊಂಡಿರುವ ವೀರಶೈವರ ಧರ್ಮಕ್ಕೆ ,ಸರ್ವಶ್ರುತಿ ಸಮನ್ವಯತ್ವ ಪ್ರಾಪ್ತವಾಗಿದೆ ಎಂದು ಪ್ರಾಜ್ಞರು ಹೇಳಿದ್ದಾರೆ. ಈ ಮೇಲೆಕಂಡ ವೀರಶೈವ ಸಂಸ್ಕೃತಿ ಲಕ್ಷಣಗಳನ್ನು, ಕನ್ನಡ, ಸಂಸ್ಕೃತ, ತೆಲುಗು, ತಮಿಳು ಮತ್ತು ಮರಾಠಿ ಮೊದಲಾದ ಭಾಷೆಗಳಲ್ಲಿರುವ ವೀರಶೈವ ಗ್ರಂಥಗಳಲ್ಲಿ ನಾವು ಮನಗಾಣಬಹುದು. ಒಟ್ಟಿನಲ್ಲಿ ವೀರಶೈವ ಸಂಸ್ಕೃತಿಯು ಭಾರತೀಯರ ಸಾರ ಸರ್ವಸ್ವ ಸಂಸ್ಕೃತಿ ಎನಿಸಿದೆ.

ಸತ್ತುಹೋದವರನ್ನು ಹೊತ್ತುಕೊಂಡು ಹೋಗುವಾಗ ಎಲ್ಲರೂ ಅತ್ತುಕೊಂಡು ಹೋಗುವುದು ಲೋಕದ ರೂಢಿ. ಆದರೆ ಲಿಂಗವಂತರು ಸತ್ತರೆ ಶಿವೈಕ್ಯರಾದರು, ಕೈಲಾಸಕ್ಕೆ ಹೋದರು ಎಂದು ಹೇಳುತ್ತಾರೆ. ಅವರನ್ನು ಹೊತ್ತು ಕೊಂಡು ಹೋಗುವ ಚಟ್ಟಕ್ಕೆ 'ಕೈವಲ್ಯ' ಎಂದು ಹೇಳುತ್ತಾರೆ. ಶವವನ್ನು ಮಂಗಳವಾದ್ಯ ಸಮೇತ ಮೆರೆವಣಿಗೆ ಮಾಡಿಕೊಂಡು ಹೋಗುತ್ತಾರೆ. ಸತ್ತವರ ಸಮಾಧಿ ಮೇಲೆ ಲಿಂಗ ಸ್ಥಾಪನೆ ಮಾಡುತ್ತಾರೆ. ಅಂತಹ ಲಿಂಗಗಳನ್ನು ' ಲಿಂಗದೇವರೆಂದು ಕರೆಯುತ್ತಾರೆ. ವೀರಶೈವ ಧರ್ಮವು ಒಂದು ಕಾಲದಲ್ಲಿ ಒಂದು ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟುದಲ್ಲ. ಪ್ರಾಚೀನರಾದ ಆಚಾರ್ಯರು, ಶರಣರು, ಕವಿಗಳು, ಸಂತರು ಮೊದಲಾದವರೆಲ್ಲರ ಅನುಭವದ ಫಲವಾಗಿ ಅದು ಈಗಿನ ಸ್ವರೂಪವನ್ನು ಹೊಂದಿದೆ. ಹಿಂದೂ ಧರ್ಮವು ಹೇಗೆ ಒಂದು ವ್ಯಕ್ತಿಯಿಂದ ಒಂದು ಕಾಲದಲ್ಲಿ ಸ್ಥಾಪನೆಯಾಗಿಲ್ಲವೋ ಹಾಗೆಯೇ ವೀರಶೈವ ಧರ್ಮಕೂಡ ಎಂದು ಹೇಳಬಹುದು. ಈ ಸಂಸ್ಕೃತಿಯು ಶೈವಧರ್ಮದ ಅಂಗವಾಗಿ ತನ್ನದೇ ಆದ ಒಂದು ಪರಂಪರೆಯನ್ನು ಸುಮಾರು ೨ ೦೦೦ ವರ್ಷದಷ್ಟು ಪ್ರಾಚೀನವೆನಿಸಿ ಬಳೆದುಕೊಂಡು ಬಂದಿದೆ. ಈ ಸಮಾಜದಲ್ಲಿ ಮಹಾತ್ಮರಾದವರನ್ನು 'ಲಿಂಗೋದ್ಭವರು, ಲಿಂಗೈಕ್ಯರು' ಎಂದು ಕರೆಯುತ್ತಾರೆ. ಅದರ ತಾತ್ಪರ್ಯ 'ಲಿಂಗ ಭಾವನೆಯಿಂದ ಹುಟ್ಟಿದವರು, ಲಿಂಗತತ್ತ್ವದಲ್ಲಿಯೇ ಅಡಗಿದವರು' ಎಂಬುದು. ಶ್ರೀ ರೇಣುಕಾದಿಗಳು ಲಿಂಗೋದ್ಭವರು ಎಂದರೆ ಶ್ರೀ ಬಸವಾದಿಗಳು ಲಿಂಗೈಕ್ಯರು ಎಂದರೆ ಅದನ್ನು ಈ ಅರ್ಥದಲ್ಲಿ ತಿಳಿಯಬೇಕು.

ಜೀವನನ್ನು ದೇವನನ್ನು ಮಾಡುವುದು ಶಿವದೀಕ್ಷೆ. ಲಿಂಗವಂತರು ದಶ-ಸಂಸ್ಕಾರಗಳನ್ನು ಒಪ್ಪಿಕೊಂಡಿದ್ದಾರೆ. ಕ್ರಿಯಾ ಪ್ರಧಾನವಾದ ಅಷ್ಟಾವರಣ, ನೀತಿ ಪ್ರಧಾನವಾದ ಪಂಚಾಚಾರ, ಜ್ಞಾನ ಪ್ರಧಾನವಾದ ಷಟ್‌ಸ್ಥಲ ಇವು ವೀರಶೈವರ ಮೋಕ್ಷೋಪಾಯಗಳು. ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳಲ್ಲಿ ಇಷ್ಟ, ಪ್ರಾಣ, ಭಾವ ಎಂಬ ಮೂರು ಲಿಂಗಗಳನ್ನು ಪೂಜಿಸ ಬೇಕೆಂಬ ನಿಯಮವಿದೆ. ಇಷ್ಟಲಿಂಗ ಪೂಜೆಯು ಕ್ರಿಯಾ ಪ್ರಧಾನ, ಪ್ರಾಣಲಿಂಗ ಪೂಜೆಯು ಯೋಗ ಪ್ರಧಾನ, ಭಾವಲಿಂಗ ಪೂಜೆಯು ಆನಂದ ಪ್ರಧಾನ ಎಂಬುನ್ನು ನಾವಿಲ್ಲಿ ತಿಳಿಯ ಬೇಕು. ವೀರಶೈವದ ತಿರುಳು ಇರುವುದಿಲ್ಲಿಯೇ ಆಗಿದೆ.

ವೀರಶೈವರಲ್ಲಿ ಜಾತಿಭೇದಗಳಿಲ್ಲ, ವರ್ಣಾಶ್ರಮಗಳಿಲ್ಲ, "ಶೆಟ್ಟಿ ಎಂಬೆನೆ ಸಿರಿಯಾಳನ' ಮಡಿವಳನೆಂಬೆನೆ ಮಾಚಯ್ಯನ, ಡೋಹರ ನೆಂಬೆನೆ ಕಕ್ಕಯ್ಯನ, ಮಾದಾರನೆಂಬೆನೆ ಚನ್ನಯ್ಯನ" ಎಂಬ ವಚನದಲ್ಲಿ ಬಸವಣ್ಣನವರು ಜಾತಿ ಭೇದವನ್ನು ನಿರಾಕರಿಸಿದ್ದಾರೆ. "ಆನು ಹಾರುವ ನೆಂದೊಡೆ ಕೂಡಲ ಸಂಗಮದೇವ ನಗುವನಯ್ಯ" ಎಂದುಹೇಳಿ ಉತ್ತಮ ಜಾತಿಯಲ್ಲಿ ಹುಟ್ಟಿದ ತಮ್ಮ ಅಭಿಮಾನವನ್ನು ಖಂಡಿಸಿ ಕೊಂಡಿದ್ದಾರೆ. "ದಯೆಯಿಲ್ಲದ ಧರ್ಮವಾವುದು," "ಕಾಯಕವೇ ಕೈಲಾಸ," "ಎನಗಿಂತ ಕಿರಿಯರಿಲ್ಲ," "ಶಿವಶರಣರಿಗಿಂತ ಹಿರಿಯರಿಲ್ಲ" "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" "ಪರವನಿತೆಯನು ಮಹಾದೇವಿ ಎಂಬೆ" ಇತ್ಯಾದಿ ವಚನಗಳಲ್ಲಿ ಬಸವಣ್ಣನವರು ವೀರಶೈವದ ತಿರುಳನ್ನು ನಿರೂಪಿಸಿದ್ದಾರೆ.

ವೀರಶೈವ ಧರ್ಮವು ಅಸ್ಪೃಶ್ಯತೆಯನ್ನು ಒಪ್ಪಿಕೊಳ್ಳುವುದಿಲ್ಲ, ಜಾತಿ ಭೇದಗಳನ್ನು ವಿರೋಧಿಸುತ್ತದೆ. ವರ್ಣಾಶ್ರಮಗಳನ್ನು ಖಂಡಿಸುತ್ತದೆ. ಪ್ರಾಣಿಹಿಂಸೆಯನ್ನು ಧಿಕ್ಕರಿಸುತ್ತದೆ. ಕೇವಲ ಶಬ್ದಪ್ರಮಾಣವು ಆಚರಣೆಗೆ ಸಾಲದು. 'ಅನುಭವಿಯ ವೇದವೇವೇದ' ಎಂದು ಹೇಳುತ್ತದೆ. ಯಜ್ಞಯಾಗಗಳನ್ನು ನಾಶಮಾಡಿದ ವೀರಭದ್ರನು ವೀರಶೈವರ ಪರಮಾರಾಧ್ಯ ದೇವರು. ಹರಿಜನೋದ್ಧಾರವನ್ನು ನಾವು ಪ್ರೋತ್ಸಾಹಿಸುತ್ತೇವೆ ಎಂಬು ದಕ್ಕೆ ನಿದರ್ಶನವಾಗಿ ಈಗಲೂ ಲಿಂಗವಂತರ ಸಭೆ ಮೆರೆವಣಿಗೆಗಳಲ್ಲಿ

ಒಬ್ಬ ಹರಿಜನ ಮುಖಂಡನನ್ನು ಮುಂದೆ ಬಿಟ್ಟುಕೊಂಡು ಹೋಗುತ್ತಾರೆ. ವೀರಶೈವರು ಸತ್ತವರನ್ನು ಸಮಾಧಿ ಮಾಡುತ್ತಾರೆ. ಸುಡುವುದಿಲ್ಲ, ಮಠಾಧಿಪತಿಗಳು ಸಾಮಾನ್ಯವಾಗಿ ಬ್ರಹ್ಮಚಾರಿಯಾಗಿರುತ್ತಾರೆ. ತಮಿಳು ದೇಶದ ವೀರಶೈವರಲ್ಲಿ ಸಂಸಾರದಿಂದ ನಿವೃತ್ತರು ಮಠಾಧಿಪತಿಗಳಾಗುವ ನಿದರ್ಶನವು ಬೊಮ್ಮನಪಾಳೆಯಂ ಮೊದಲಾದ ಕಡೆ ಇದೆ. ಆದರೆ ಈ ಪದ್ಧತಿಯು ಕರ್ಣಾಟಕದಲ್ಲಿ ಕಾಣುವುದಿಲ್ಲ. ಒಟ್ಟಿನಲ್ಲಿ ವೀರಶೈವ ಸಂಸ್ಕೃತಿಯು ಹಿಂದೂ ಸಮಾಜದಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯದಿಂದ ಕಂಗೊಳಿಸುತ್ತಿದೆ. ಹಲವು ವೈಶಿಷ್ಟ್ಯಗಳಿಂದ ಕೂಡಿದ್ದರೂ ಅದು ಹಿಂದೂ ಧರ್ಮದ ಒಂದು ಅಂಗವಾಗಿಯೇ ಇದೆ.

ಅನುಬಂಧ-೧.

ಕಠಿಣ ಶಬ್ದಕೋಶ

ಅಧ್ವ–ಮಾರ್ಗ, ಪದ್ಧತಿ, ದಾರಿ
ಅರಿವು–ತಿಳಿವು, ಜ್ಞಾನ-
ಅಂಗತ್ರಯ–ತ್ಯಾಗಾಂಗ, ಭೋಗಾಂಗ, ಯೋಗಾಂಗ
ಅಡ್ಡಣಿಗೆ–ಊಟದ ತಟ್ಟೆಯನ್ನು ಇಟ್ಟು ಕೊಳ್ಳುವ ಸಾಧನ
ಅರ್ಪಣ-ಭೋಜನ, ತೃಪ್ತಿ, ಪ್ರಸಾದ,

ಅಕ್ಕಿಪಡಿ-ಶರಣರು ಭಕ್ತರ ಮನೆಯಿಂದ ಕಾಣಿಕೆಯಾಗಿ ತೆಗೆದುಕೊಳ್ಳುವ ಧನ ಧಾನ್ಯಗಳು
ಅಷ್ಟಾವರಣ-ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, (ಶೇಷ), ಭಸ್ಮ, ರುದ್ರಾಕ್ಷಿ, ಮಂತ್ರ
ಅಷ್ಟಾಂಗಯೋಗ - ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ. ಧ್ಯಾನ, ಧಾರಣ, ಸಮಾಧಿ.
ಅನುಭವ –ಜೀವ–ದೇವರ ಸಾಮರಸ್ಯದ ತಿಳಿವು. ನಿಜದಅರಿವು
ಅನುಭವ ಮಂಟಪ - ಕಲ್ಯಾಣದಲ್ಲಿ ಬಸವಣ್ಣನವರು ಸ್ಥಾಪಿಸಿದ ತತ್ತ್ವಾರ್ಥ ಜಿಜ್ಞಾಸೆಯ ಸ್ಥಳ.
ಅರುವತ್ತುಮೂವರು–ತಮಿಳಿನ ಪೆರಿಯ ಪುರಾಣದಲ್ಲಿ ಉಕ್ತವಾಗಿರುವ ಅರುವತ್ತುಮೂರು ಮಂದಿ ಶರಣರು.
ಅವಿಮುಕ್ತಕ್ಷೇತ್ರ – ಶರಣರ ಪುಣ್ಯಭೂಮಿ(ಕಲ್ಯಾಣ, ಉಳವಿ, ಅಬಲೂರು, ಕಳ್ಳಿಯ, ಎಡೆಯೂರು ಇತ್ಯಾದಿ)
ಅರುಹಿನ ಕುರುಹು–ಇಷ್ಟಲಿಂಗ(ಭಕ್ತರು ಅಂಗೈಲಿಟ್ಟು ಪೂಜಿಸುವ ಲಿಂಗ)
ಅಚ್ಚಪ್ರಸಾದಿ - ಪ್ರಸಾದಿಗಳಲ್ಲಿ ಒಬ್ಬನು
ಅಪ್ರಾಕೃತ - ಲಿಂಗವಂತ (ಶಿವ ದೀಕ್ಷೆಯಿಂದ ಶುದ್ಧನಾದವನು) ಜನನ–ಮರಣ ಗೆದ್ದವನು.

ಅನಿಮಿಷದೇವ - ಪ್ರಭುದೇವರ ಗುರು, (ಪಟ್ಟದಕಲ್ಲಿನ ರಾಜ)
ಅನಾದಿ - ಪರಶಿವಲಿಂಗ, ಶೂನ್ಯತತ್ತ್ವ, ನಿರ್ಬಯಲು
ಅನಾದಿಲಿಂಗ–ಪರಶಿವತತ್ತ್ವ, ಪರಬ್ರಹ್ಮತತ್ತ್ವ, ನಿಶ್ಶೂನ್ಯ,
ಅಂಗಸ್ಥಲ –ನೂರೊಂದುಸ್ಥಲಗಳಲ್ಲಿರುವ ಮೊದಲ ನಲವತ್ತುನಾಲ್ಕು ಸ್ಥಲಗಳು.
ಅರ್ಘ್ಯಮಣಿ–ಅರ್ಘ್ಯದ ನೀರು,(ಅಗ್ಗಣಿ-(ಪೂಜಾರ್ಹವಾದ,ಪರಿಶುದ್ಧವಾದ ನೀರು
ಆಗಮಗಳು – ಕಾಮಿಕಾದಿ - ವಾತುಲ ಪರಿಯಂತವಾದ ೨೮ ಶಿವಾಗಮಗಳು
ಆತ್ಮ – ಚೈತನ್ಯ, ಹೃದಯಪ್ರಕಾಶ, ಹೃದಯ ಕಮಲದಲ್ಲಿರುವ ಜ್ಯೋತಿ.
ಆರು ಶಕ್ತಿಗಳು - ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ, ಚಿತ್ ಶಕ್ತಿಗಳು
ಆದ್ಯರು – ತಮಿಳು ನಾಡಿನ ಶರಣರು. (ಕಣ್ಣಪ್ಪ,ಮಾಣಿಕ್ಯವಾಚಕರ್,ಸುಂದರ್, ಅಪ್ಪರ್, ತಿರುವಳ್ಳುವರ್ ಇತ್ಯಾದಿ)
ಆರು ವಿಧಭಕ್ತಿಗಳು – ಶ್ರದ್ಧೆ, ನಿಷ್ಠೆ, ಅವಧಾನ,ಅನುಭಾವ, ಸುಜ್ಞಾನ ಮತ್ತು ಸಮರಸ.
ಆರು ಹಸ್ತಗಳು - ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಮತ್ತು ಸದ್ಭಾವ.
ಅರು ಲಿಂಗಗಳು –ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದ ಲಿಂಗ ಮತ್ತುಮಹಾಲಿಂಗ
ಅರು ಕರ್ಮಗಳು - ಯಜನ, ಯಾಜನ, ಅಧ್ಯಯನ, ಅಧ್ಯಾಪನ. ದಾನ ಮತ್ತು ಪ್ರತಿಗ್ರಹ.
ಆಧಾರದ ಪೆಟ್ಟಿಗೆ - ಶಿವಪೂಜೆಯ ಸಾಮಾನುಗಳನ್ನು ಇಡುವ ಪೆಟ್ಟಿಗೆ, (ಭಸ್ಮ,

ಚಡಿಮರಿ – ಸಮಾಜ ಸೇವೆ ಮಾಡುವ ಓಲೆಕಾರ
ಚನ್ನಯ್ಯ - ವಚನಕಾರ, ಕಂಚಿಯಲ್ಲಿದ್ದ ಶರಣ. (ರಾಜೇಂದ್ರ ಚೋಳನಅರಮನೆಯ ಕುದುರೆಗಳಿಗೆ ಹುಲ್ಲುತರುತ್ತಿದ್ದ ಸೇವಕ)
ಚಿದ್ವಿಭೂತಿ – ಜ್ಯೋತಿರ್ಲಿಂಗದ ಮೈ ವೆಳಗು
ಚರಮೂರ್ತಿ-ಜಂಗಮ, ವಿರಕ್ತ, ಲೋಕ ಸಂಚರಿ
ಚಿತ್ - ಜ್ಞಾನ, ಅರಿವು, ತಿಳಿವು
ಚಿದಾನಂದ-ಜ್ಞಾನದಿಂದ ಲಭಿಸುವ ತೃಪ್ತಿ ಅನಿರ್ವಚನೀಯ ಸುಖ
ಚಲವಾದಿ - ಲಿಂಗವಂತರ ಸಭೆ-ಮೆರೆವಣಿಗೆಗಳಲ್ಲಿ ಗಂಟೆ,ಬಟ್ಟಲು ಹಿಡಿದು ಕೊಂಡು ಸಭೆಯ ಮುಂದೆ ಹೋಗುವ ಆದಿ ಕರ್ಣಾಟಕ(ಇದು ಶಿವಶರಣರ ಹರಿಜನೋದ್ಧಾರದ ಸಂಕೇತ)
ಜಂಗಮ-ಜ್ಞಾನಿ, ವಿರಕ್ತ, ಪೂಜ್ಯ, ಜನನ ಮರಣಗಳನ್ನು ಗೆದ್ದವನು
ಜಂಗಮ - ಅತಿಥಿ (ಊಟದ ವೇಳೆಗೆ ಮನೆಗೆ ಬಂದವನು)
ಜಂಗಮ ಪ್ರಾಣಿ –ಜಂಗಮ ಪೂಜೆಯಲ್ಲಿ ನಿಷ್ಠನಾದವನು (ಬಸವೇಶ್ವರ, ಪದ್ಮಸರು)
ಜಪಮಾಲೆ – ಪಂಚಾಕ್ಷರೀ ಮಂತ್ರವನ್ನು ಜಪಿಸುವಾಗ ಹಿಡಿಯುವ ರುದ್ರಾಕ್ಷಿಸರ
ಜಂಗಮವಾಡಿ – ಕಾಶಿ, ಪ್ರಯಾಗ, ರಾಮೇಶ್ವರ ಮೊದಲಾದ ಕಡೆ ಇರುವ ವೀರಶೈವರ ಮಠಗಳು
ಜವಳ - ಕ್ಷೌರ, ಕೂದಲು ತೆಗೆಸುವುದು
ಜವಳಮಾಡು - ಚೌಲಕರ್ಮ
ಜ್ಯೋತಿರ್ಲಿಂಗ –ಕಂಗಳ ಮಧ್ಯದಲ್ಲಿರುವ ಪ್ರಕಾಶ
ಜೀವ - ಚಿಚ್ಛಕ್ತಿಯ ಸಂಕೋಚರೂಪ
ಜೀವತ್ರಯ - ವಿಶ್ವ, ತೇಜಸ ಮತ್ತು ಪ್ರಾಜ್ಞ
ಜೋಳಿಗೆ - ಜಂಗಮರು ಭಿಕ್ಷೆಗಾಗಿ ಉಪಯೋಗಿಸುವ ಸಾಧನ.
ಡಮರುಗ–ಶಿವನ ಕೈವಾದ್ಯ. (ಬುಡುಬುಡಿಕೆ.)

ತವನಿಧಿ -ಅಕ್ಷಯ ಪಾತ್ರೆ, ದೇವರ ದಾಸಿಮಯ್ಯನಿಗೆ ಪರಶಿವನು ಇದನ್ನು ಕೊಟ್ಟಿದನು
ತನುತ್ರಯ - ಸ್ಥೂಲ, ಸೂಕ್ಷ್ಮ, ಕಾರಣ
ತ್ರಿವಿಧ:ದಾಸೋಹ, - ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ ಅರ್ಪಿಸುವುದು
ತ್ರಿವಿಧ ಪ್ರಸಾದ - ಶುದ್ಧ, ಸಿದ್ಧ ಪ್ರಸಿದ್ಧ ಪ್ರಸಾದಗಳು
ತ್ರಿವಿಧ ಭಕ್ತರು -ಗರು, ಲಿಂಗ, ಜಂಗಮ ಭಕ್ತರು.
ತ್ರಿವಿಧ ಶರಣರು –ಇಷ್ಟ, ಪ್ರಾಣ ಮತ್ತು ಭಾವಲಿಂಗಾರ್ಚಕರು
ತ್ರಿಪುಂಡ್ರ - ಮೂರೆಳೆಯ ವಿಭೂತಿ,
ತೋರಗದ್ದಿಗೆ –ಶಿವಯೋಗಿಗಳ ಸಮಾಧಿಯಿಂದ ಕೆಳಗಿಂಚ ಮೃತ್ತಿಕೆಯನ್ನು ಬೇರೆ ಕಡೆಗೆ ತೆಗೆದು ಕೊಂಡು ಹೋಗಿಅವರಹೆಸರಿನಲ್ಲಿ ಸ್ಥಾಪಿಸುವ ಗದ್ದುಗೆಗಳು
ತ್ರಿಪುಟಗಳು – ಜ್ಞಾನ, ಜ್ಞಾತೃಮತ್ತು ಜ್ಞೇಯ.
ತೂರ್ಯ - ಪಂಚ ಅವಸ್ಥೆಗಳಲ್ಲಿ ಒಂದು
ತ್ರಿಕೂಟ – ಶ್ರೀಶೈಲದ ಒಂದು ಬೆಟ್ಟ (ಕದಳಿಗೆ ಹೋಗುವ ದಾರಿಯಲ್ಲಿದೆ)
ದಶವಾಯುಗಳು . ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃತಕ, ದೇವದತ್ತ ಮತ್ತು ಧನಂಜಯ.
ದಶಾಂಗ-ಶಿವ ಪೂಜೆಯ ಕಾಲದಲ್ಲಿ ಉಪಯೋಗಿಸುವ ಸುಗಂಧ ದ್ರವ್ಯ
ದಶಕರ್ಮಗಳು-ಗರ್ಭಾದಾನ, ಸೀಮಂತ, ಜಾತಕರ್ಮ (ಲಿಂಗಧಾರಣ), ನಾಮಕರಣ, ಕರ್ಣಭೇಧ (ಕಿವಿಚುಚ್ಚುವುದು) ಚೌಲ (ಹುಟ್ಟು ಕೂದಲು ತೆಗೆಸುವುದು) ವಿದ್ಯಾರಂಭ, ಶಿವದೀಕ್ಷೆ. ವಿವಾಹ ಮತ್ತು ಅಂತ್ಯೇಷ್ಟಿ ಕರ್ಮಗಳು
ದಾಸೋಹ–ಮನೆಗೆ ಬಂದ ಅತಿಥಿಗಳನ್ನು ಆಹಾರಾದಿಗಳನ್ನು ಕೊಟ್ಟು ಸತ್ಕರಿಸುವುದು. ಚಿತ್ರದುರ್ಗ, ಸಿದ್ಧಗಂಗೆ, ನಿಡಸೋಸಿ, ಕಲ್ಬುರ್ಗಿ, ಧಾರವಾಡ, ಕನಕಪುರ, ಕಾನಾಮಡು ಸುತ್ತೂರು ಇತ್ಯಾದಿ ಮಠಗಳಲ್ಲಿ ದಾಸೋಹ ನಡೆಯುತ್ತಿದೆ.